# THE BOOK WAS DRENCHED

UNIVERSAL LIBRARY
OU_198671
UNIVERSAL LIBRARY

# ರಾಜಾ ರಾಮಮೋಹನ ರಾಯರ ಚರಿತ್ರೆ.

ಕೆ. ರಾಮಸ್ವಾಮಯ್ಯಂಗಾರ್

(ಬೆಂಗಳೂರು)

ಎರಡನೆಯ ಛಾಪೆ 600.

ಬೆಂಗಳೂರು ಸಿಟಿ

ಕ್ಯಾಕ್ಸ್ಟನ್ ಪ್ರೆಸ್ ಬ್ರಾಂಚ್‌ನಲ್ಲಿ ಮುದ್ರಿತವಾಗಿ ಪ್ರಕಟಪಡಿಸಲ್ಪಟ್ಟಿದೆ.

೧೯೧೮

ಬೆಲೆ ೧ ರೂಪಾಯಿ.

# ಪೀಠಿಕೆ

ಕನ್ನಡದಲ್ಲಿ ಮಹಾತ್ಮರ ಜೀವನ ಚರಿತ್ರೆಗಳು ಬಹಳ ಕಡಿಮೆ. ಇಂಡಿಯಾದ ಇತರ ದೇಶಗಳಲ್ಲಿ ಪಂಡಿತರು ಇಂತಹ ಗ್ರಂಥಗಳನ್ನು ದೇಶಭಾಷೆಯಲ್ಲಿ ಪ್ರಕಟಿಸಿ ಜನರ ಸಂಶಯಗಳನ್ನು ಪರಿಹರಿಸುತ್ತಿರುವರು. ನಾನು ಆಂಧ್ರಭಾಷೆಯಿಂದ ಕೆಲವರ ಮಹಾತ್ಮರ ಜೀವನ ಚರಿತ್ರೆಗಳನ್ನು ಕನ್ನಡಿಸಿ ಇದ್ದೇನೆ. ಅವುಗಳಲ್ಲಿ ಈ ರಾಜಾರಾಮಮೋಹನರಾಯರ ಜೀವನ ಚರಿತ್ರೆಯು ಒಂದಾಗಿದೆ. ಈತನು ಮಾಡಿದ ಸಾಹಸ ಪ್ರಯತ್ನಗಳಿಂದ ಸಂಘಕ್ಕೂ ದೇಶಕ್ಕೂ ಎಷ್ಟೆಷ್ಟು ಉಪಕಾರಗಳಾದುವೆಂಬುದನ್ನು ಈ ಪುಸ್ತಕದಿಂದ ತಿಳಿಯಬಹುದು. ಧಾರ್ವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರ ಬಹುಮತಿಯನ್ನು ಪಡೆದು ಈ ಗ್ರಂಥವು ಕರ್ನಾಟಕ ಗ್ರಂಥಮಾಲೆಯಲ್ಲಿ ಮುದ್ರಿಸಲ್ಪಟ್ಟಿತ್ತು. ಮೈಸೂರು ಯೂನಿವರ್ಸಿಟಿಯವರು ಪ್ರವೇಶಪರೀಕ್ಷೆಗೆ ಪಠನೀಯ ಗ್ರಂಥವನ್ನಾಗಿ ಇದನ್ನು ನಿಯಮಿಸಿದ್ದರಿಂದ ಎರಡನೆಯ ಸಾರಿ ಮುದ್ರಿಸಿದೆ. ಸಾಧ್ಯವಾದ ಮಟ್ಟಿಗೆ ಮೊದಲಿನ ಪ್ರತಿಯಲ್ಲಿದ್ದ ದೋಷಗಳನ್ನು ಪರಿಷ್ಕರಿಸಿ ಮತ ವಿಷಯದಲ್ಲಿ ಬರೆದಿದ್ದ ಉಪೋದ್ಘಾತವನ್ನು ಮಾತ್ರ ಬಿಟ್ಟುಬಿಟ್ಟಿದೆ. ಪ್ರಮಾದ ಜನಿತ ದೋಷಗಳನ್ನು ಕ್ಷಮಿಸಲು ಗುಣಜ್ಞರು ಪ್ರಾರ್ಥಿತರು.

Checked 1969

1ನೇ ಜುಲೈ 1918
ಬಸವನಗುಡಿ
ಬೆಂಗಳೂರು

ಕೆ. ರಾಮಸ್ವಾಮಯ್ಯಂಗಾರ್

ಶ್ರೀಃ.

# ರಾಜಾರಾಮ ಮೋಹನ

## ರಾಯರ ಜೀವಿತ ಚರಿತ್ರೆ.

ಸಕಲಲೋಕಂಗಳೊಳ್ನೆಗಳ್ದಿರ್ಪ ನಮ್ಮೀಶನಿಲ್ಲಿ ನಿರ್ಜೀವದಿಂ ನಿಲ್ಲಲೇಕೆ ?
ನಿಖಿಲಕಾಮಪ್ರದನೆನಿಸಿರ್ಪ ನಮ್ಮೀಶನೇಕೆ ನೈವೇದ್ಯದಿಂ ಪೊರೆವನೊಡಲಂ ?
ಜೀವರಕ್ಷಕನೆಂಬ ಬಿರುದಾಂತ ನಮ್ಮೀಶ ಭಕ್ತರ ರಕ್ಷಿತನಾಗಿ ಬದುಕಲೇಕೆ ?
ಪಲವು ಲೋಕಂಗಳೊಳ್ಚರಿಸುತಿಹ ದೇವ ನೀಚತನದ ಗುಡಿಗಳೊಡಗಲೇಕೆ ?
ಪ್ರಾಣಿಗಳಿಗೆಲ್ಲಮಾಧಾರನಾದಸ್ವಾಮಿ ಭಿಕ್ಷವೆತ್ತಲ್ಕೆ ಮನೆಮನೆ ತಿರುಗಲೇಕೆ ?
ಎಂದು ಸಿಂದಿಸುತ ಜ್ಞಾನಗೆಳನು ಕಳೆದುತೊಳೆದನಾ ರಾಮಮೋಹನರಾಯನಿಂದು||

## (ಮೊದಲನೆಯ ಪರಿಚ್ಛೇದ)

### [1774 ರಿಂದ 1800ರ ವರಿಗೆ]

ಕ್ರಿ. ಶ. 1774 ನೆಯ ಸಂವತ್ಸರವು ಹಲವು ಕಾರಣಗಳಿಂದ ನಮ್ಮ ಹಿಂದೂದೇಶದ ಚರಿತ್ರೆಯಲ್ಲಿ ಒಂದು ಪ್ರಸಿದ್ಧವಾದ ವರುಷವೆಂದು ಹೇಳಬಹುದು. ಇಂಗ್ಲಿಷರು ಈ ವರುಷದಲ್ಲಿಯೇ ಬಂಗಾಳದ ರಾಜ್ಯವನ್ನು ಸಂಪಾದಿಸಿ, ಅದರಲ್ಲಿ ಸ್ಥಿರಪ್ರಭುತ್ವವನ್ನು ಸ್ಥಾಪಿಸುವ ಪ್ರಯತ್ನ ಮಾಡಿದರು. ಅವರ ಹೊಸಕಾನೂನಿನಂತೆ ಮೊದಲನೆಯ ರಾಜಪ್ರತಿನಿಧಿಯೂ, ಆತನ ಮಂತ್ರಾಲೋಚನ ಸಮಾಜವೂ ಇದೇ ವರ್ಷದಲ್ಲಿ ಏರ್ಪಾಡಾಗಿ ಸುಪ್ರೀಂ ಕೋರ್ಟೆಂಬ ಪ್ರಧಾನನ್ಯಾಯಸ್ಥಾನವು ಕಲ್ಕತ್ತೆಯಲ್ಲಿ ಸ್ಥಾಪಿಸಲ್ಪಟ್ಟಿತು. ದೇಶಾಭಿವೃದ್ಧಿಯೇ ಮುಖ್ಯೋದ್ದೇಶವಾಗಿವುಳ್ಳ ಬುದ್ಧಿಶಾಲಿಗಳಿಗೆ ಮೇಲಿನ ಕಾರಣಗಳೇ ಅಷ್ಟು ಪ್ರಾಮುಖ್ಯವಲ್ಲದಿದ್ದರೂ ಅಜ್ಞಾನವೆಂಬ ಕಗ್ಗತ್ತಲೆಯಲ್ಲಿ ಮುಳುಗಿ, ನಾಗರಿಕ ಪ್ರಕಾಶವು ಸ್ವಲ್ಪವಾದರೂ ಇಲ್ಲದೆ, ಮಹಮ್ಮದೀಯರ ಬಾಹುಮೂಲದಲ್ಲಿ ಸಿಲುಕಿ, ಪರಿತಾಪಗೊಳ್ಳುತ್ತಿದ್ದಂತೆ ಇತಿಹಾಸ

ಮೂಲಕ ತಿಳಿಯುತ್ತಿದ್ದ ಆಗಿನ ನಮ್ಮ ಭರತಭೂಮಿಯೆಂಬ ರಮಣಿಯು—ಯಾವನು ತನ್ನ ಯೋಗ್ಯತಾವಿಶೇಷ, ವಾಕ್ಚಾತುರ್ಯ ಇವುಗಳ ಸಹಾಯದಿಂದ ಈ ಪ್ರಪಂಚದ ನಾಲ್ಕು ದಿಕ್ಕುಗಳಲ್ಲಿಯೂ ಇರುವ ದೇಶಗಳಿಗೆ ಹೋಗಿ, ತನ್ನ ಕೀರ್ತಿಯೆಂಬ ಬೆಳದಿಂಗಳನ್ನು ವ್ಯಾಪ್ತಿಗೊಳಿಸಿ, ಇನಿವಾತುಗಳೆಂಬ ರಸವನ್ನು ಚೆಲ್ಲಿ, ದೇಶದಲ್ಲಿ ನಾಗರಿಕತೆ ಬೆಳೆಯುತ್ತಾ ಬಂದಹಾಗೆಲ್ಲಾ ತನ್ನ ಉಪನ್ಯಾಸ ವಾಕ್ಯಸರಣಿಯನ್ನು ಬೆಳಗಿಸುವಂತೆ ವರ್ತಿಸಿದನೋ ಅಂತಹ ಮಹಾತ್ಮನಾದ ಶ್ರೀರಾಜಾರಾಮಮೋಹನ ರಾಯನನ್ನು ತನ್ನ ಅಪಾರವಾದ ಗರ್ಭದಿಂದ ಬಹಿಃಪ್ರಪಂಚಕ್ಕೆ ಇದೇ ವರುಷದಲ್ಲಿಯೇ ತಂದಳು ; ಆದುದರಿಂದ ಈ ಸಂವತ್ಸರವನ್ನು ಕುರಿತು ಎಷ್ಟು ಹೆಚ್ಚಾಗಿ ಹೇಳಿದರೂ ಸ್ವಭಾವೋಕ್ತಿಯೇ ಎನಿಸುವುದು.

ಕಥಾನಾಯಕನಾದ ನಮ್ಮ ರಾಜಾರಾಮಮೋಹನರಾಯನು ಬಂಗಾಳಾ ರಾಜಧಾನಿಯಾಗಿ ಹುಗ್ಲಿ ಮಂಡಲಕ್ಕೆ ಸೇರಿದ ಕೃಷ್ಣನಗರದ ಬಳಿಯ ರಾಧಾನಗರವೆಂಬ ಒಂದು ಹಳ್ಳಿಯಲ್ಲಿ ಹಿರಿಯರ ಕಾಲದಿಂದಲೂ ಹೆಸರುವಾಸಿಯನ್ನು ಪಡೆದು ಗೌರವ್ಯವಾಗಿ ಶ್ರೇಷ್ಠವಾದ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದನು. ಈ ಕುಟುಂಬದವರು ಅನೇಕ ತಲೆಮುರೆಗಳಿಂದ ಕೇವಲ ವೈದಿಕವೃತ್ತಿಯಿಂದಲೇ ಜೀವಿಸಿದರೂ, ಆಲಂಘೀರ್ ಚಕ್ರವರ್ತಿಯ ಪ್ರಭುತ್ವದ ಕಾಲದಿಂದ ಮಾತ್ರ ತಮ್ಮ ಪೂರ್ವದ ವೃತ್ತಿಯನ್ನು ಬಿಟ್ಟು, ಲೌಕಿಕವೃತ್ತಿಯನ್ನವಲಂಬಿಸಿ, ಮುರಷದಾಬಾದ್ ನವಾಬರ ಇಲಾಖೆಯಲ್ಲಿ ದೊಡ್ಡ ಅಧಿಕಾರಗಳನ್ನು ಮಾಡುತ್ತಾ ಬಂದರು. ಹಾಗೆ ಈ ವಂಶದಲ್ಲಿ ಲೌಕಿಕವೃತ್ತಿಯನ್ನು ಪ್ರಥಮದಲ್ಲಿ ಅವಲಂಬಿಸಿದವನು ಕೃಷ್ಣಚಂದ್ರಬೆನರ್ಜೀ. ಇವನು ವಿದ್ಯಾವಂತನಾಗಿಯೂ, ವಿವೇಕಿಯಾಗಿಯೂ ಇದ್ದುದರಿಂದ ಸ್ವಲ್ಪಕಾಲದಲ್ಲಿಯೇ ನವಾಬನ ಅನುಗ್ರಹಕ್ಕೆ ಪಾತ್ರನಾಗಿ 'ರಾಯ್' ಎಂಬ ಬಿರುದನ್ನು ಪಡೆದನು. ಆಗ ಈತನ ಜನ್ಮಸ್ಥಾನವು ಮುರಷದಾಬಾದ್ ಮಂಡಲಕ್ಕೆ ಸೇರಿದ ಪಾಂಕಾಸಾ ಎಂಬ ಹಳ್ಳಿಯಾಗಿದ್ದರೂ ಈತನೇ ತನ್ನ ವಾಸಸ್ಥಳವನ್ನು ಇಲ್ಲಿಂದ ರಾಮನಗರಕ್ಕೆ ಬದಲಾಯಿಸಿದನು. ನವಾಬನು ಈ ಬೆನರ್ಜಿಯನ್ನು ಭಾವಾಕೋಲ್, ಕೃಷ್ಣನಗರಪ್ರಾಂತ್ಯಪ್ರದೇಶಗಳ ಅಧಿಕಾರಿಯಾಗಿ ನಿಯಮಿಸಿ ಕಳುಹಿದನೆಂತಲೂ, ಆ ಪ್ರದೇಶವು ಬಹು ಸೌಖ್ಯಪ್ರದವಾಗಿ ಕಾಣಿಸಿದುದರಿಂದಲೇ ಈತನು ಕೃಷ್ಣನಗರದ ಹತ್ತಿರ ಇದ್ದ ರಾಧಾನಗರವನ್ನು ತನ್ನ ನಿವಾಸವಾಗಿ ಮಾಡಿಕೊಂಡನೆಂತಲೂ, ಹೇಳುವರು. ಆ ಕಾಲದಲ್ಲಿ ಈ ಬೆನರ್ಜೀಯವರನ್ನು 'ಸಿಕ್ಕೇದಾರ' ಎಂಬ ಮರ್ಯಾದೆಯಿಂದ ಕರೆಯುತ್ತಿದ್ದರು. ಆ ಗ್ರಾಮದಲ್ಲಿ 'ಸಿಕ್ಕೇದಾರರ ಕೆರೆ' ಎಂಬ ಹೆಸರಿನದೊಂದು ದೊಡ್ಡ ಕೆರೆಯು ಈಗಲೂ ಇದೆ.

ಕೃಷ್ಣಚಂದ್ರನಿಗೆ ಅಮರಚಂದ್, ಹರಿಪ್ರಸಾದ್, ಬಿರ್ಜಬನೂದ್ ಎಂಬ ಮೂವರು ಮಕ್ಕಳಿದ್ದರು. ಇವರಲ್ಲಿ ಕಿರಿಯವನಾದ ಬಿರ್ಜಬನೂದೆಂಬುವನು ಸತ್ಯ ಸಂಧನಾಗಿಯೂ, ಭಗವದ್ಭಕ್ತನಾಗಿಯೂ, ಪರೋಪಕಾರ ಶೀಲನಾಗಿಯೂ, ಇದ್ದನು. ಈತನೂ ತನ್ನ ಹಿರಿಯರಂತೆ ಆಗಿನ ನವಾಬನಾದ ಸುರಾಜಿದ್ದೌಲಾವಿನ ಅಧಿಕಾರದಲ್ಲಿ ಒಂದು ಉದ್ಯೋಗಕ್ಕೆ ಸೇರಿ

ಕೆಲವು ರಾಜಕಾರ್ಯಗಳಲ್ಲಿ ನವಾಬನ ಅಕ್ರಮಗಳನ್ನು ಸೈರಿಸದೆ, ತನ್ನ ಅಧಿಕಾರವನ್ನು ಬಿಟ್ಟು ಬಿಟ್ಟು, ಉಳಿದ ಜೀವಿತಕಾಲವನ್ನೆಲ್ಲ ಸ್ವತಂತ್ರವಾಗಿಯೇ ಕಳೆದನು.

ರಾಜಾರಾಮಮೋಹನರಾಯನ ಪಿತೃವ್ಯರು (ತಂದೆಯ ಸೋದರರು) ವೈಷ್ಣವ ಮತ ವನ್ನೂ, ಮಾತೃವ್ಯರು (ತಾಯಿಯ ಸೋದರರು) ಶಾಕ್ತೇಯ ಮತವನ್ನೂ ಅವಲಂಬಿಸಿದ್ದರು. ಹೀಗೆ ಪರಸ್ಪರವಿರುದ್ಧಗಳಾದ ಮತಗಳವರಿಗೆ ಬಾಂಧವ್ಯವು ಸೇರುವುದಕ್ಕೆ ಒಂದು ಕಾರಣ ಉಂಟಾಯಿತು. ಬಿಜೇಬನೂದನು ತನ್ನ ಜೀವಮಾನದ ಕೊನೆಯ ದಿನಗಳಲ್ಲಿ ಪ್ರಾಪಂಚಿಕ ಸಂಬಂಧಗಳನ್ನು ತ್ಯಜಿಸಿ, ಗಂಗಾತೀರದಲ್ಲಿ ತಪಸ್ಸುಮಾಡಿಕೊಂಡು ಕಾಲವನ್ನು ಕಳೆಯುತ್ತಿ ದ್ದನು. ಒಂದು ದಿನ ಭಾತಾ್ರ ಎಂಬ ಗ್ರಾಮವಾಸಿಯಾಗಿಯೂ, ಗೌರವಸ್ಥನಾಗಿಯೂ, ತನ್ನ ವಿದ್ಯಾಧಿಕ್ಯದಿಂದ 'ದೇಶಗುರು' ಎಂಬ ಬಿರುದು ಪಡೆದವನಾಗಿಯೂ ಇದ್ದ ಶ್ಯಾಮಭಟ್ಟಾ ಚಾರ್ಯನೆಂಬ ಒಬ್ಬ ಶಾಕ್ತೇಯ ಮತಾವಲಂಬಿಯು ಇವನ ತಪೋಸ್ಥಾನಕ್ಕೆ ಬಂದು ನಿಂತು ವಿನಯದಿಂದ ' ಅಯ್ಯಾ, ನನ್ನಪ್ರಾರ್ಥನೆಯೊಂದುಂಟು. ತಾವು ದಯಮಾಡಿ ಅದನ್ನು ಅಂ ಗೀಕರಿಸುವುದಾಗಿ ವಾಗ್ದಾನಮಾಡಬೇಕು ' ಎಂದು ಬೇಡಿದನು. ಬಿಜೇಬನೂದನು ಇವನ ಅಂತರಂಗವನ್ನು ತಿಳಿಯದೆ, ನನ್ನ ಮನೋವಾಕ್ಕಾಯಗಳಿಂದಲೂ ನಿಮ್ಮ ಇಷ್ಟವನ್ನು ಸಲಿಸು ವೆನೆಂದು ಉತ್ತರವಿತ್ತನು. ಒಡನೆಯೇ ಭಟ್ಟಾಚಾರ್ಯನು " ವಿವಾಹಕ್ಕೆ ಸಿದ್ಧಳಾಗಿರುವ ನನ್ನ ಕುವರಿಯನ್ನು ತಮ್ಮ ಮಕ್ಕಳಲ್ಲಿ ಒಬ್ಬನಿಗೆ ಕೊಟ್ಟು ಮದುವೆಮಾಡಲೆಳಸಿರುವೆನು " ಎಂದು ತಿಳಿಸಿದನು. ಬಿಜೇಬನೂದನಿಗೆ ಈ ಸಂಬಂಧವು ಅಪೂರ್ವವಾಗಿಯೂ, ಆಶ್ಚರ್ಯಜನಕವಾಗಿ ಯೂ ಇದ್ದರೂ ಸತ್ಯವಾಕ್ಯಪರಿಪಾಲನಾಧುರಂಧರನಾದುದರಿಂದ ' ಹಾಗೆಯೇ ಆಗಲಿ ' ಎಂ ದೊಪ್ಪಿ, ತನ್ನ ಮಕ್ಕಳೇಳುಮಂದಿಯನ್ನೂ ಕರೆಸಿ, ನಿಮ್ಮಲ್ಲಿ ಯಾರು ಈ ಕನ್ಯೆಯನ್ನು ಮದು ವೆಯಾಗುವಿರಿ ? ಎಂದು ಕೇಳಲು, ಪಿತೃವಾಕ್ಯಪಾಲನೆಯಲ್ಲಿ ಅತ್ಯಾಸಕ್ತನಾದ ರಾಮಕಾಂತ ರಾಯನೆಂಬ ಐದನೆಯ ಮಗನು ಮುಂದೆ ಬಂದು ನಿಂತು, ಆರ್ಯನೇ ಈ ಸಂಬಂಧವು ನನ್ನ ಅಂ ತರಾತ್ಮಕ್ಕೆ ಅಂಗೀಕಾರವಾಗಿದೆಯೆಂದು ನುಡಿದನು. ಹೀಗೆ ರಾಮಕಾಂತರಾಯನಿಂದ ಪರಿ ಣಯಗೊಂಡ ಶ್ಯಾಮಭಟ್ಟಾಚಾರ್ಯನ ಪುತ್ರಿಕಾರತ್ನವಾದ ' ಫೂಲ್‌ಠಾಕೂರಾಣೀ ' ಎಂಬ ನಾಮಾಂತರವುಳ್ಳ ತಾರಣೀದೇವಿಯ ಗರ್ಭಶುಕ್ತಿ ಮುಕ್ತಾಫಲವಾಗಿ ಜನಿಸಿದ ಪುತ್ರರತ್ನವೇ ರಾಜಾರಾಮಮೋಹನರಾಯರು. ಆಹಾ ! ಸುಪ್ರಸಿದ್ಧನಾಗಿ, ಆಚಂದ್ರಾರ್ಕವಾದ ಕೀ ರ್ತಿಯನ್ನು ಗಳಿಸಿ, ತನ್ನ ಜೀವಿತಕಾಲವನ್ನು ಪೂಜ್ಯವಾಗಿ ಕಳೆದ ರಾಮಮೋಹನನನ್ನು ಪಡೆದ ಆ ದಂಪತಿಗಳು ಎಷ್ಟರ ಸುಕೃತಶಾಲಿಗಳೋ ! ರಾಮಮೋಹನನ ಅಣ್ಣನ ಹೆಸರು ಜಗನ್ಮೋ ಹನ. ರಾಮಮೋಹನನಿಗೆ ಇವನಲ್ಲದೆ, ಬಲತಾಯಿಯ ಮಗನಾದ ರಾಮಲೋಚನನೆಂಬ ತಮ್ಮನೊಬ್ಬನಿದ್ದನು.

ಈ ಕಾಲದಲ್ಲಿ ಪ್ರಸಿದ್ಧಪುರುಷರ ಚರಿತ್ರೆಗಳನ್ನು ಬರಿಯುತಕ್ಕವರೆಲ್ಲರೂ ಅಂತಹ ಪ್ರಸಿದ್ಧಪುರುಷರ ಯೋಗ್ಯತೆಗಳಿಗೆಲ್ಲ ಅವರ ತಾಯಿಯರ ಬುದ್ಧಿ ಕೌಶಲ್ಯವೇ ಕಾರಣ ವೆಂಬ ಸಿದ್ಧಾಂತವನ್ನವಲಂಬಿಸಿ ಬರೆಯುತ್ತಿರುವರು. ಇದಕ್ಕೆ ದೃಷ್ಟಾಂತವಾಗಿ ತಮ್ಮ

ಸಚ್ಛೀಲಾದಿ ಮಹೌನ್ನತ್ಯಗಳೆಲ್ಲಕ್ಕೂ ತಮ್ಮ ತಾಯಿಯರೇ ಕಾರಣರೆಂದು ಹೇಳಿದ ನೆಪೋಲಿಯನ್, ಜೋಸೆಫ್, ಮೇಜಿನಿ, ಥಿಯೊಡೋರ್ ಮೊದಲಾದ ಪ್ರಸಿದ್ಧ ಪುರುಷರನೇಕರ ಚರಿತ್ರೆಗಳಿಂದ ಕಂಡು ಬರುವುವು. ಆದರೂ ಇದನ್ನೇ ಸಾಮಾನ್ಯ ನಿಯಮವಾಗಿ ಹೇಳುವುದು ಅಷ್ಟು ಯುಕ್ತಿಯುಕ್ತವಾದುದಲ್ಲ. ಸಕಲಸದ್ಗುಣಸಂಪನ್ನನಾಗಿ ಸುಪ್ರಸಿದ್ಧನಾದ ಪುತ್ರನನ್ನು ಹೆತ್ತತಾಯಿಯ ಗರ್ಭದಲ್ಲಿಯೇ ಅವನಿಗೆ ಸಮಾನರಲ್ಲದ ಗುಣಗಳನ್ನುಳ್ಳ ಇತರ ಕುಮಾರರೂ ಹುಟ್ಟುತ್ತಿರುವುದನ್ನು ನಾವು ನೋಡುತ್ತಲೇ ಇದ್ದೇವೆ. ಆದರೂ ಮಹಾತ್ಮರ ಅಭಿವೃದ್ಧಿಗೆ ತಾಯಿತಂದೆಗಳ ಯೋಗ್ಯತಾ ವಿಶೇಷವು ಸ್ವಲ್ಪಮಟ್ಟಿಗೆ ಸಾಧನವಾಗಿರುವುದೆಂದು ಒಪ್ಪಿಕೊಳ್ಳಬಹುದು. ಹೀಗೆಯೇ ಈ ರಾಮಮೋಹನರಾಯನು ಪ್ರಸಿದ್ಧನಾದ ಹೆಸರುವಾಸಿಯನ್ನು ಪಡೆಯತಕ್ಕವನಾದುದರಿಂದ ಆಗಿನ ಬುಧಸಮಾಜದಲ್ಲಿ ಹೆಸರುಗೊಂಡ ರಾಮಕಾಂತ ರಾಯರಿಗೇನೇ ಮಗನಾಗಿ ಜನಿಸಿದನು. ಮತವೈಪರೀತ್ಯವನ್ನು ತೊಲಗಿಸಿಬಿಟ್ಟು, ಮದುವೆಯ ವಿಷಯದಲ್ಲಿ ತನ್ನ ತಂದೆಯು ಮಾಡಿದ ವಾಗ್ದಾನವನ್ನು ನೆರವೇರಿಸುವುದರಲ್ಲಿ ಆತನು ತೋರಿಸಿದ ಧೈರ್ಯವೂ, ರಾಮಮೋಹನನಿಗೆ ವಿದ್ಯಾಬುದ್ಧಿಗಳನ್ನು ಕಲಿಸುವುದರಲ್ಲಿ ಆತನು ವಹಿಸಿದ ಶ್ರದ್ಧೆಯೂ, ಕಾರಣಾಂತರಗಳಿಂದ ರಾಮಮೋಹನನನ್ನು ಮನೆಯಿಂದ ಹೊರಡಿಸುವಾಗ ಆತನು ತೋರಿದ ಪ್ರೇಮಾನುಬಂಧವೂ, ಸಹಾಯವೂ, ರಾಮಕಾಂತರಾಯನ ಸಚ್ಛೀಲತೆಗೆ ಸಾಕ್ಷೀಭೂತಗಳಾಗಿವೆ. ರಾಮಮೋಹನನ ತಾಯಿ ಸುದಾ ಆಗಿನ ನಾರೀಮಣಿಗಳಲ್ಲಿ ಉತ್ತಮಳೆಂದು ಹೆಸರುಗೊಂಡಿದ್ದಳು. ಕೇವಲ ಪಾತಿವ್ರತ್ಯಸೌಂದರ್ಯಾದಿಗಳಲ್ಲಿ ಮಾತ್ರವಲ್ಲ. ಮತದೀಕ್ಷೆಯಲ್ಲಿಯೂ, ಭಗವದ್ಭಕ್ತಿಯಲ್ಲಿಯೂ ಕೂಡ ಆಕೆಯು ನಿರುಪಮಾನಶ್ರದ್ಧಾವಂತೆಯಾಗಿದ್ದಳು. ಆಕೆ ಸಾಯುವುದಕ್ಕೆ ಒಂದು ವರುಷದ ಮುಂಚೆ ಆ ಸತೀಮಣಿಯು ದೇವರ ದರ್ಶನಕ್ಕೆಂದು ಜಗನ್ನಾಥಕ್ಕೆ ಹೊರಟಳು. ಆ ಕಾಲದಲ್ಲಿ ಶ್ರಮವನ್ನು ಸಹಿಸಿಕೊಂಡು, ಪಾದಚಾರಿಗಳಾಗಿ, ತೀರ್ಥಯಾತ್ರೆಗೆ ಹೋಗಿಬರುವುದು ಸರ್ವೋತ್ಕೃಷ್ಟಕಾರ್ಯವೆಂದು ನಮ್ಮವರು ನಂಬುತ್ತಿದ್ದರು. ಆದುದರಿಂದ ಆಕೆಯು ಪ್ರಯಾಣಕಾಲದಲ್ಲಿ ತಕ್ಕಪರಿವಾರ ವಾಹನಗಳ ಸಹಾಯವನ್ನು ಪಡೆದಿದ್ದರೂ, ಒಬ್ಬ ಸೇವಕನನ್ನಾದರೂ ಸಂಗಡ ಕರೆದುಕೊಳ್ಳದೆ, ಮಾರ್ಗದಲ್ಲಿ ಸಂಭವಿಸಿದ ತೊಂದರೆಗಳನ್ನೆಲ್ಲ ಸೈರಿಸಿಕೊಂಡು ಜಗನ್ನಾಥಕ್ಕೆ ಹೋಗಿ, ತನ್ನ ಅವಸಾನ ಕಾಲದ ತನಕ ಅಲ್ಲಿಯೇ ದೇವಾಲಯದ ಪರಿಚಾರಿಣೀ ಕಾರ್ಯದಲ್ಲಿದ್ದು, ಕಾಲವನ್ನು ಕಳೆದಳು. ಮರಣಕ್ಕಿಂತ ಮುಂಚೆ ಒಂದಾನೊಂದುದಿನ ತನ್ನ ಮಗನೊಡನೆ ಹೀಗೆ ಹೇಳಿದಳಂತೆ;-“ ರಾಮಮೋಹನಾ ! ನೀನು ಹೇಳಿದ ಮತಬೋಧೆಯು ನನ್ನ ಅಂತರಾತ್ಮಕ್ಕೆ ಎಷ್ಟೋ ಸಂತೋಷಕರವಾಗಿಯೂ, ಅಂಗೀಕಾರವಾಗಿಯೂ ಇದೆ ಆದರೆ ನಾನು ಮುದುಕಿಯಾಗಿಯೂ, ಸ್ತ್ರೀಜಾತಿಗೆ ಸೇರಿದವಳಾಗಿಯೂ ಇರುವುದರಿಂದ ವಿಗ್ರಹಾರಾಧನೆಯ ಚಿರಕಾಲಾಭ್ಯಾಸದಿಂದ ಉಂಟಾದ ಆನಂದವನ್ನು ಬಿಡಲಾರದೆ ಇದ್ದೇನೆ.

ತಾರಿಣೀದೇವಿಯು ಶಾಕ್ತೇಯರ ಮನೆಯಲ್ಲಿ ಹುಟ್ಟಿದವಳಾದರೂ ತನ್ನ ಅತ್ತೆಯ ಮನೆಯವರ ಆಚಾರದಂತೆ ಅವರ ಮನೆಗೆ ಸೇರಿದ ತರುವಾಯ ವೈಷ್ಣವ ಮತವನ್ನೇ ಅವಲಂ

ಬಿಸಿದಳು. ಇವಳು ಒಂದಾನೊಂದುದಿನ ಸಣ್ಣ ಮಗುವಾದ ರಾಮಮೋಹನನೊಂದಿಗೆ ತೌರು ಮನೆಗೆ ಬಂದಿದ್ದಾಗ ಇವಳ ತಂದೆಯು ಪೂಜಾಸಂಬಂಧವಾದ ಪುಷ್ಪಗಳನ್ನು ಮೊಮ್ಮಗನ ಕೈಗೆ ಕೊಟ್ಟನೆಂತಲೂ, ಅವನು ಅವುಗಳನ್ನು ಅಲಂಕರಿಸಿಕೊಳ್ಳುವುದಕ್ಕೆ ಬದಲಾಗಿ, ಅಗಿದು ನುಂಗಿಬಿಟ್ಟನೆಂತಲೂ, ವಾಕ್ಛುದ್ಧಿಯುಳ್ಳ ಆ ಭಟ್ಟಾಚಾರ್ಯನು ಅದನ್ನು ನೋಡಿ “ಠಾಕೂರಾಣೀ ! ಹೀಗೆ ದೇವತಾ ತಿರಸ್ಕಾರಮಾಡಿದ ನಿನ್ನ ಮಗನಿಂದ ನಿನಗೆ ಸೌಖ್ಯವಿಲ್ಲದೇ ಹೋಗಲಿ, ಮತ್ತೂ ಈ ಬಾಲನು ಸನಾತನ ಧರ್ಮಕ್ಕೆ ಬಾಹ್ಯನಾಗಿರಲಿ” ಎಂದು ಶಪಿಸಿದನೆಂತಲೂ, ತನ್ನ ತಂದೆಯು ಹೀಗೆ ಶಪಿಸಿದಕೂಡಲೇ ಆ ಠಾಕೂರಾಣಿಯು ಚಿಂತಿಸಿ, ಗದ್ಗದ ಸ್ವರದಿಂದ ಈ ಶಾಪ ಪರಿಹಾರಮಾಡಬೇಕೆಂದು ಬೇಡಿಕೊಂಡಳೆಂತಲೂ, ಆದಕ್ಕಾತನು ನನ್ನ ವಾಕ್ಯವು ತಪ್ಪಲರಿಯದು, ಈತನು ಧರ್ಮಬಾಹ್ಯನಾದರೂ ಸಾಮಾನ್ಯಜನರಂತೆ ಅಲ್ಲದೆ ಸುಪ್ರಸಿದ್ಧನಾಗುವನು ಎಂದು ಅನುಗ್ರಹಿಸಿದನೆಂತಲೂ ಹೇಳಿಕೊಳ್ಳುವರು. ಈ ರಾಮಮೋಹನನ ಜೀವಿತಕಾಲದಲ್ಲಿದ್ದವರು ಇವನ ಕೆಲಸಗಳನ್ನು ನೋಡಿ, ಈ ರೀತಿಯ ಗಾಥೆಯನ್ನು ಕಲ್ಪಿಸಿರಬಹುದು. ಠಾಕೂರಾಣಿಯು ಸ್ವಸ್ಥಾನವನ್ನು ಸೇರಿದಮೇಲೆ ತನ್ನ ಪತಿಯೊಡನೆ ಈ ವೃತ್ತಾಂತವನ್ನು ತಿಳಿಸಿದಳೆಂತಲೂ, ಆಗಿನ ಕಾಲಕ್ಕೆ ತಕ್ಕಂತೆ ಶಾಪಗಳಲ್ಲಿ ನಂಬಿಕೆಯುಳ್ಳ ಆ ದಂಪತಿಗಳು ತಮ್ಮ ಮಗನನ್ನು ಹೇಗಾದರೂ ಸನಾತನಧರ್ಮಪರನಾಗಿರುವಂತೆ ಮಾಡಬೇಕೆಂದು ಯಾವಾಗಲೂ ಯೋಚಿಸುತ್ತಲಿದ್ದರೆಂತಲೂ ಹೇಳುವರು.

ರಾಮಕಾಂತರಾಯನು ತನ್ನ ಹಿರಿಯರ ವೃತ್ತಿಯನ್ನನುಸರಿಸಿ, ಮುರಷದಾಬಾದ್ ನವಾಬನ ಬಳಿಯ ಒಂದು ಉದ್ಯೋಗದಲ್ಲಿ ಸೇರಿದನು. ಆದರೂ ತಮ್ಮ ತಂದೆಯಂತೆಯೇ ತನಗೂ ಕೆಲವು ಆಕ್ಷೇಪಗಳು ಜರುಗಿದ್ದರಿಂದ ಆ ಉದ್ಯೋಗವನ್ನು ಬಿಟ್ಟುಬಿಟ್ಟು, ಮರಳಿ ರಾಧಾನಗರಕ್ಕೆ ಬಂದು, ಜೀವನಕ್ಕಾಗಿ ಬರದ್ವಾನ್ ಜಮೀನ್‌ದಾರಿಯಲ್ಲಿ ಕೆಲವು ಗ್ರಾಮಗಳನ್ನು ಗುತ್ತಿಗೆಗೆ ತೆಗೆದುಕೊಂಡನು. ಕೆಲವು ದಿನಗಳ ತರುವಾಯ ಆ ಜಮೀನ್‌ದಾರನೊಂದಿಗೆ ಅಂತಃಕಲಹಗಳು ಉಂಟಾಗಲು, ರಾಯರ ವಂಶಸ್ಥರೆಲ್ಲರೂ ಒಗ್ಗಟ್ಟಾಗಿ, ಆಗಿನ ರಾಜನಾದ ತೇಜಚಂದ್ರನೊಡನೆ ಕೆಲವು ಶಾಶ್ವತ ನಿಬಂಧನೆಗಳನ್ನು ಮಾಡಿಕೊಂಡು, ಗುತ್ತಿಗೆಯನ್ನು ಸ್ಥಿರಪಡಿಸಿಕೊಂಡರು. ಆಗ ರಾಮಮೋಹನನು ಸಣ್ಣಹುಡುಗನಾಗಿದ್ದನು. ರಾಯರ ವಂಶವು ತುಂಬ ವೃದ್ಧಿಯಾದ ತರುವಾಯ ರಾಮಕಾಂತರಾಯನು ತನ್ನ ಕಾಯುಂಗುತ್ತಾ ಗ್ರಾಮವಾದ ಲಾಂಗೋಲ್ಪಾಡಾ ಎಂಬ ಪ್ರದೇಶಕ್ಕೆ ತನ್ನ ನಿವಾಸವನ್ನು ಬದಲಾಯಿಸಿದನು.

ರಾಜಾರಾಮಮೋಹನರಾಯನ ಮನಸ್ಸಿನಲ್ಲಿ ಮತದ ಪ್ರೇಮವು ಬಾಲ್ಯದಿಂದಲೂ ಬೆಳೆಯುತ್ತಲೇ ಇದ್ದಿತು. ಮುಂದಿನಕಾಲದಲ್ಲಿ ಒಂದು ಅಖಂಡಮತ ಸಂಸ್ಕರಣಕರ್ತನಾಗತಕ್ಕ ಈಮಹಾತ್ಮನು ತನ್ನ ಚಿಕ್ಕಂದಿನಲ್ಲಿಯೇ ತಮ್ಮ ಮನೆಯಲ್ಲಿ ದೇವರ ಪೂಜೆಗಾಗಿ ಇಟ್ಟಿದ್ದ ರಾಧಾಗೋವಿಂದವಿಗ್ರಹದಲ್ಲಿ ತುಂಬ ಭಕ್ತಿಯುಳ್ಳವನಾಗಿದ್ದನು. ಮನೆಯಿಂದ ಎಲ್ಲಿಗಾದರೂ ಹೊರಡಬೇಕಾಗಿ ಬಂದಾಗ ಆ ವಿಗ್ರಹಕ್ಕೆ ನಮಸ್ಕರಿಸಿಯೇ ಹೊರಡುತ್ತಿದ್ದನು. ಪ್ರತಿದಿನವೂ ಭಾಗವತದಲ್ಲಿನ ಒಂದೊಂದು ಅಧ್ಯಾಯವನ್ನು ಪಾರಾಯಣಮಾಡುವ ವಾಡಿಕೆಯನ್ನಿಟ್ಟು

ಕೊಂಡಿದ್ದನು. ಇದು ಆತನಲ್ಲಿ ಕೆಲವು ದಿನಗಳ ತರುವಾಯ ನಡೆದ ಮಾರ್ಪಾಡಿಗೆ ಸಾದೃಶ್ಯವಾಗಿದೆ.

ಆ ಕಾಲದಲ್ಲಿ ದೊಡ್ಡ ದೊಡ್ಡ ಪಟ್ಟಣಗಳೊಳಗೆ ಪಂಡಿತ ಪಾಠಶಾಲೆಗಳೆಂತಲೂ, ಮೌಲ್ವಿಮಖ್ತುಬುಗಳೆಂತಲೂ, ಎರಡು ತೆರದ ವಿದ್ಯಾಶಾಲೆಗಳಿದ್ದುವು. ರಾಮಮೋಹನನು ಸ್ವಗ್ರಾಮದಲ್ಲಿದ್ದಾಗ ನಿತ್ಯವೂ ಬಂಗಾಳೀ ಭಾಷೆಯನ್ನು ಕಲಿಯುವದಕ್ಕೆ ಅಲ್ಲಿನ ಗಾವಟಿ ಸಾಲೆಗೆ ಹೋಗಿಬರುತ್ತಲೂ ಮನೆಯಲ್ಲಿದ್ದಾಗ ಫಾರಸಿ ಭಾಷೆಯನ್ನು ಅಭ್ಯಸಿಸುತ್ತಲೂ ಇದ್ದನು. ಆಕಾಲದಲ್ಲಿ ಫಾರಸಿಯೇ ರಾಜಭಾಷೆಯಾಗಿದ್ದಿತು. ಸರ್ಕಾರದ ಉದ್ಯೋಗವನ್ನಪೇಕ್ಷಿಸುವರಿಗೆ ಅದು ಆವಶ್ಯಕವಾಗಿದ್ದುದರಿಂದ ಅದನ್ನು ಚೆನ್ನಾಗಿ ಕಲ್ತುಕೊಳ್ಳಲಿಕ್ಕೂ, ಅರಬ್ಬೀಭಾಷೆಯನ್ನಭ್ಯಸಿಸತೊಡಗಲಿಕ್ಕೂ, ಅವನ ಒಂಭತ್ತನೆಯ ವರುಷದಲ್ಲಿ ಅವನ ತಂದೆಯು ಪಾಟ್ನಾಪಟ್ಟಣಕ್ಕೆ ಕಳುಹಿಸಿದನು. ಈ ಬಾಲನು ಅಲ್ಲಿ ಎರಡು ಸಂವತ್ಸರಗಳಿದ್ದು ಖಗೋಳಶಾಸ್ತ್ರ, ಗಣಿತಶಾಸ್ತ್ರ, ಮೊದಲಾದ ಗ್ರಂಥಗಳನ್ನೂ, ಮುಹಮ್ಮದೀಯರ ಮತ ಗ್ರಂಥಗಳನ್ನೂ ಕಲ್ತನು. ಇದರಿಂದ ಅವನ ಕುಶಾಗ್ರಬುದ್ಧಿಗೆ ಮತ್ತಷ್ಟು ಹದ ಕೊಟ್ಟಂತೆ ಆಯಿತು. ಇವನು ಆಗಾಗ್ಗೆ ಪಂಡಿತರಾದ ಮೌಲ್ವಿಗಳೊಡನೆ ಖುರಾನಿನ ವಿಷಯಗಳನ್ನು ಚರ್ಚಿಸುತ್ತಿದ್ದುದರಿಂದ ಈಶ್ವರನ ಅಸ್ತಿತ್ವವೂ, ನಿರ್ಗುಣೋಪಾಸನೆಯು ಬಲಪಟ್ಟು, ಅವನ ಜೀವವಿರುವ ತನಕ ಅದೇ ಅವನಿಗೆ ಆನಂದದಾಯಕವಾಗಿದ್ದಿತು. ತನಗೆ ವಿರಾಮ ದೊರೆತಾಗ ಹಾಫೀಜ್, ರೂಮಿ, ಸಾದಿ ಮೊದಲಾದ ಕವಿಗಳಿಂದ ರಚಿಸಲ್ಪಟ್ಟ ಗ್ರಂಥಗಳನ್ನೋದುತ್ತಾ, ಚರ್ಚೆಮಾಡುವಾಗ ಆ ಗ್ರಂಥಗಳ ಪ್ರಮಾಣಗಳನ್ನು ಉದಾಹರಿಸುತ್ತಾ ಇದ್ದನು. ಅವನ ಮತಸಂಬಂಧವಾದ ಬದಲಾವಣೆಗೆ ಇದೇ ಮುಖ್ಯಹೇತುವಾಗಿದ್ದಿತು.

ಆತನು ಅರಬ್ಬಿ, ಫಾರಸಿ ಭಾಷೆಗಳನ್ನು ಕಲ್ತು ತನ್ನ ಊರಿಗೆ ಹಿಂದಿರುಗಿ ಬಂದ ಮೇಲೆ ಹಿಂದೂ ಮತಾಂಶಗಳನ್ನು ಗ್ರಹಿಸಲಿಕ್ಕೂ ಸಂಸ್ಕೃತಭಾಷೆಯನ್ನು ಅಭಿವೃದ್ಧಿಪಡಿಸಿಕೊಳ್ಳಲಿಕ್ಕೂ, ಅವನ ಹನ್ನೆರಡನೆಯ ವಯಸ್ಸಿನಲ್ಲಿ ರಾಮಕಾಂತನು ಅವನನ್ನು ಕಾಶಿಗೆ ಕಳುಹಿದನು. ಅವನು ಬಹು ಸ್ವಲ್ಪಕಾಲದಲ್ಲಿಯೇ ಹಿಂದೂಶಾಸ್ತ್ರಗಳಲ್ಲಿ ಆಶ್ಚರ್ಯ ಜನಕವಾದ ಪ್ರಜ್ಞೆಯನ್ನು ಸಂಪಾದಿಸಿ, ಅನೇಕ ಮತಗ್ರಂಥಗಳನ್ನೋದಿದನು.

ಸಂಸ್ಕೃತಭಾಷೆಯನ್ನು ಕಲ್ತು ಸ್ವಸ್ಥಾನಕ್ಕೆ ಬಂದಮೇಲೆ ರಾಮಮೋಹನನು ಮತ ವ್ಯಾಸಂಗದಲ್ಲಿ ಪ್ರವರ್ತಿಸಿ, ಯೋಚಿಸಿದಹಾಗೆಲ್ಲ ಅಭಿವೃದ್ಧಿಹೊಂದುತ್ತಲಿರುವ ತನ್ನ ವಿಶಾಲ ಜ್ಞಾನವನ್ನುಪಯೋಗಪಡಿಸಿ, ಮೊದಲು ಮುಹಮ್ಮದೀಯ ಮತಗ್ರಂಥಗಳಲ್ಲಿಯ ಆಸ್ತಿಕ ವಿಷಯಗಳನ್ನೂ, ತರುವಾಯ ಹಿಂದೂಶಾಸ್ತ್ರಗಳಲ್ಲಿಯ ಬ್ರಹ್ಮಜ್ಞಾನವಿಷಯಗಳನ್ನೂ ಶೋಧಿಸಿ, ಕ್ರಮಕ್ರಮವಾಗಿ ಸನಾತನಪದ್ಧತಿಯನ್ನು ಸಂಸ್ಕರಿಸಬೇಕೆಂಬ ಕೋರಿಕೆಯನ್ನು ಬಲಪಡಿಸಿದನು. ಇವನು ತನ್ನ ತಂದೆಯೊಂದಿಗೆ ಆಗಾಗ್ಗೆ ಈವಿಷಯಗಳನ್ನು ಚರ್ಚಿಸುತ್ತಾ ಸಂದರ್ಭಾನುಸಾರ ತಕ್ಕ ಪ್ರಮಾಣಗಳಿಂದ ತನ್ನ ಅಭಿಪ್ರಾಯಗಳೇ ಯುಕ್ತಿಯುಕ್ತವಾದುವುಗಳೆಂದು ಸಾಧಿಸುತ್ತಾ ಇದ್ದನು. ರಾಮಕಾಂತರಾಯನು ತಾನು ಈ ಹುಡುಗನ ವಿದ್ಯಾ

ಭಿವೃದ್ಧಿಗಾಗಿ ಮಾಡಿದ ಪ್ರಯತ್ನಗಳೆಲ್ಲವೂ ಈಮೇರೆಗೆ ವಿಪರೀತವಾಗಿ ಪರಿಣಮಿಸಿದು ವೆಂದು ಬಹಳವಾಗಿ ಚಿಂತಿಸಿ, 'ನೀನು ಈ ನವೀನ ಮಾರ್ಗವನ್ನು ಬಿಡು' ಎಂದು ಹಲವು ಸಾರಿ ಕಠಿನೋಕ್ತಿಗಳಿಂದ ಹೇಳಿದನು. ಆದರೂ ರಾಮಮೋಹನನು ಅದನ್ನೊಪ್ಪದೆ ಅದೇ ಕಾಲದಲ್ಲಿ ಅಂದರೆ ತನ್ನ ಹದಿನಾರನೆಯ ವಯಸ್ಸಿನಲ್ಲಿ 'ಹಿಂದುಗಳ ವಿಗ್ರಹಾರಾಧನೆ' ಎಂಬ ಹೆಸರಿನಿಂದ ಆರಾಧಕ ಪಕ್ಷದವರಿಗೆ ವಿರೋಧವಾದ ಅಭಿಪ್ರಾಯವನ್ನು ಕೊಡುವ ಸಣ್ಣ ಪುಸ್ತಕವನ್ನು ಬರೆದನು. ಈ ಗ್ರಂಥವು ಆಗಲೇ ಮುದ್ರಿಸಲ್ಪಡದಿದ್ದರೂ, ಅವನ ತಂದೆ ತಾಯಿಗಳಿಗೆ ಅವನಮೇಲೆ ಇದ್ದ ಪ್ರೇಮವನ್ನು ಮಾತ್ರ ಪೂರ್ಣವಾಗಿ ತೊಲಗಿಸಿಬಿಟ್ಟಿತು. ರಾಮಕಾಂತನು ಸಂಪೂರ್ಣಾನುಗ್ರಹಚಿತ್ತದಿಂದ ಆ ಬಾಲಕನಿಗೆ ಎಷ್ಟು ವಿಧದಲ್ಲಿ ಹೇಳಿದರೂ ತನ್ನ ಅಭಿಪ್ರಾಯವನ್ನು ಅವನು ಬದಲಾಯಿಸಿಕೊಳ್ಳದೆ ಹೋದುದರಿಂದ ಒಂದು ದಿನ ಈ ರಾಮಮೋಹನರಾಯನನ್ನು ಮನೆಯಿಂದ ಹೊರಡಿಸಿಬಿಟ್ಟನು. ಇದೇ ಇವನು ಬರೆದ ಗ್ರಂಥದ ಫಲವು.

ಹಿರಿಯರಿಂದತಿರಸ್ಕೃತನಾಗಿ ಮನೆಯಿಂದ ಹೊರಡಿಸಲ್ಪಟ್ಟ ನಮ್ಮ ಕಥಾನಾಯಕನು ತನಗೆ ಹೀಗಾದುದಕ್ಕೆ ಸ್ವಲ್ಪವಾದರೂ ಚಿಂತಿಸದೆ, ದೇಶಾಟನ ಮಾಡಬೇಕೆಂಬ ಆಶೆಯುಳ್ಳವನಾಗಿ, ಮೊದಲು ಹಿಂದೂ ದೇಶದಲ್ಲಿ ಪ್ರಸಿದ್ಧವಾದ ಪಟ್ಟಣಗಳಿಗೆ ಹೋಗಿ ಅಲ್ಲಲ್ಲಿಯ ಮತರೀತಿಗಳನ್ನು ವಿಮರ್ಶಿಸುತ್ತಾ, ಆಯಾ ದೇಶಭಾಷೆಗಳನ್ನು ಸಾಧ್ಯವಾದಮಟ್ಟಿಗೆ ಗ್ರಹಿಸುತ್ತಾ, ನಾನಕ್, ಕಬೀರ್, ದಾವೂದ್ ಮೊದಲಾದ ಮಹಾತ್ಮರ ಇತಿಹಾಸ ಗ್ರಂಥಗಳನ್ನು ಸಂಪಾದಿಸಿ, ವಿರಾಮವಾದಾಗ ಅವುಗಳನ್ನೋದುತ್ತಾ, ಕ್ರಮಕ್ರಮವಾಗಿ ಉತ್ತರ ಹಿಂದುಸ್ಥಾನವನ್ನತಿಕ್ರಮಿಸಿ, ಹಿಮಾಲಯ ಪರ್ವತ ಪಂಕ್ತಿಗೆ ಆಚೆ ಇರುವ ಟಿಬೆಟ್ ದೇಶಕ್ಕೆ ಹೋಗಿ ಸೇರಿದನು. ತತ್ಪೂರ್ವದಲ್ಲಿಯೇ ಮತಸಂಪ್ರದಾಯಗಳನ್ನು ಸ್ವಲ್ಪಮಟ್ಟಿಗೆ ಓದಿದ್ದನಾದುದರಿಂದ ಆ ಜ್ಞಾನದಿಂದುಂಟಾದ ಬೌದ್ಧಮತ ವಿಮರ್ಶನಾಪೇಕ್ಷೆಯೇ ಇವನ ಪ್ರಯಾಣಕ್ಕೆ ಕಾರಣವೆಂದು ಹೇಳುವರು.

ಅಹಾ! ವಿದ್ಯೆಗಳು, ಸಭೆಗಳು, ವಾದಗಳು, ಉಪನ್ಯಾಸಗಳು, ಸಂಸ್ಕರಣಗಳು ಮುಂತಾದುವುಗಳ ಹೆಸರೇ ಇಲ್ಲದೆ, ನಾಲ್ಕು ದಿಕ್ಕುಗಳಲ್ಲಿಯೂ ಎತ್ತನೋಡಿದರೂ ಅತ್ತ ಜನರು ವಿಗ್ರಹಾರಾಧಕರಾಗಿ, ವಿಜ್ಞಾನ ತೇಜೋಹೀನರಾಗಿದ್ದ ಆಕಾಲದಲ್ಲಿ ಸಂಸ್ಕರಣ ಗ್ರಂಥವೊಂದನ್ನು ಬರೆದು ಅದೇ ನೆವಕ್ಕಾಗಿ ಮನೆಯಿಂದ ಹೊರಡಿಸಲ್ಪಟ್ಟು, ಲೋಹಮಾರ್ಗಗಳಾಗಲಿ, ಪ್ರಯಾಣಕ್ಕೆ ಅನುಕೂಲವಾದ ರಸ್ತೆಗಳಾಗಲಿ ಇಲ್ಲದೆ ರಾಜ್ಯಾಂಗಕಲ್ಲೋಲಗಳಿಂದ ಕಳಗುಂದಿ ಏಳುನೂರುವರ್ಷಗಳಿಂದಲೂ ದಾಸ್ಯಸ್ಥಿತಿಯನ್ನನುಭವಿಸುತ್ತ, ಸ್ವಾತಂತ್ರ್ಯ ವಿರಹಿತರಾದ ಜನಗಳಿಂದ ತುಂಬಿಯೂ, ಸುಲಿಗೆ, ಕಳ್ಳತನ, ದಂಗೆ ಮುಂತಾದುವುಗಳಿಂದ ಸದಾಕಾಲವೂ ಭಯಾವಹವಾಗಿ ಆ ಕಾಲದಲ್ಲಿ ಹದಿನಾರು ವರ್ಷದ ಹರೆಯದ ಈ ಹುಡುಗನು ಸ್ವರಾಷ್ಟ್ರವನ್ನು ತೊರೆದು, ಅಸಹಾಯನಾಗಿ ಟಿಬೆಟ್‌ದೇಶಕ್ಕೆ ಹೋಗುವಿಕೆಯು ಎಂತಹ ಸಾಹಸಬುದ್ಧಿಯನ್ನು ತೋರಿಸುವುದೋ ವಾಚಕರೇ ಅದನ್ನು ಯೋಚಿಸತಕ್ಕುದು.

ಟಿಬೆಟ್ಟಿಗೆ ಹೋಗಿ, ಅಲ್ಲಿಯ ಜನರ ಸ್ನೇಹವನ್ನು ಸಂಪಾದಿಸಿ, ಆ ಭಾಷೆಯನ್ನು ಮಾತನಾಡಲಿಕ್ಕೆ ಕಲ್ತು, ಅಲ್ಲಿ ಕೆಲವು ದಿನಗಳು ಇದ್ದಮೇಲೆ ಇವನಿಗೆ ಮತ್ತೊಂದು ಕಷ್ಟ ಸಂಭವಿಸಿತು. ಅಲ್ಲಿಯ ಜನರು 'ಲಾಮಾ' ಎಂಬ ಪರಂಪರೆಯ ಹೆಸರಿನ ಮತಗುರುವನ್ನೇ ತಮ್ಮ ಆತ್ಮಗಳಿಗೆ ಮುಕ್ತಿಯನ್ನು ಕೊಡತಕ್ಕವನೆಂದು ನಂಬಿ, ಅವನನ್ನು ಯಾವಾಗಲೂ ಎಡೆಬಿಡದೆ ಸೇವಿಸುತ್ತಿದ್ದರು. ವಿಗ್ರಹಾರಾಧನೆಯು ಕೂಡದೆಂಬ ಮಾತಿಗಾಗಿಯೇ ಮನೆಯಿಂದ ಹೊರಡಿಸಲ್ಪಟ್ಟ ರಾಮಮೋಹನನು ಈ ಮನುಷ್ಯಾರಾಧನೆಯನ್ನು ನೋಡಿ ನೋಡಿ ಸೈರಿಸಿಕೊಂಡು ಹೇಗೆ ಮೌನವಾಗಿರಬಲ್ಲನು ? ತನ್ನ ಮನಸ್ಸಾಕ್ಷಿಗೆ ಯುಕ್ತವಾದುದೆಂದು ತೋರಿದ ಅಭಿಪ್ರಾಯಗಳನ್ನು ಒಳೊಳಗೇನೇ ನುಂಗದೆ, ಇದು ಪರರಾಷ್ಟ್ರವೆಂಬ ಸಂಶಯವನ್ನು ಬಿಟ್ಟು, ನಿರ್ಭಯವಾಗಿ, "ನೀವು ಈ ಪದ್ಧತಿಯನ್ನು ಬಿಟ್ಟುಬಿಡಿರಿ, ಈಶ್ವರೋಪಾಸನೆಯೇ ಸರ್ವೋತ್ಕೃಷ್ಟವಾದುದು" ಎಂದು ಆತನು ಬೋಧಿಸತೊಡಗಿದನು. ಇದನ್ನು ಕೇಳಿ, ಅಲ್ಲಿ ಲಾಮನ ಪಕ್ಷದವರಾದ ಕಿರಾತಸ್ವಭಾವದ ಕೆಲವು ಜನರು ಇವನು ಒಂಟಿಗನಾಗಿದ್ದಾಗ ಇವನನ್ನು ಕೊಲ್ಲಬೇಕೆಂದು ಪ್ರಯತ್ನಿಸಿದರು. ಆದರೆ ಅದೃಷ್ಟವಶದಿಂದ ಆ ಕಿರಾತಸ್ತ್ರೀಯರೇ ದಯಾರ್ದ್ರಚಿತ್ತೆಯರಾಗಿ, ಈ ಘೋರವಾರ್ತೆಯನ್ನು ಮುಂಚಿತವಾಗಿಯೇ ರಾಮಮೋಹನನಿಗೆ ತಿಳಿಸಿ, ನೀನು ಎಲ್ಲಿಗಾದರೂ ಹೋಗಿ ಬದುಕಿಕೋ ಎಂದು ಹೇಳಿದರು. ಅವರಲ್ಲಿ ಕೆಲವರು ಇವನಲ್ಲಿ ಕರುಣಿಸಿ, ಆ ದುಷ್ಟರಿಗೆ ಕಾಣದಂತೆ ಈತನನ್ನು ಮರೆಯಲ್ಲಿ ಅಡಗಿಸಿ ಅಪಾಯದಿಂದ ರಕ್ಷಿಸಿದರು. ಆದುದರಿಂದ ಸ್ತ್ರೀಜಾತಿಯಲ್ಲಿ ಹೆಚ್ಚಾದ ಅಭಿಮಾನವೂ, ಮರ್ಯಾದೆಯೂ ಈತನಿಗೆ ಹುಟ್ಟುವುದಕ್ಕೆ ಇದೇ ಮುಖ್ಯಹೇತುವಾಯಿತು. ಡಾಕ್ಟರ್ ಕಾರ್ಪೆಂಟರಮಗಳು ಹೀಗೆ ಬರೆದಿರುವಳು. "ನಾಲ್ವತ್ತು ವರ್ಷಗಳು ಕಳೆದುಹೋದರೂ ರಾಮಮೋಹನನು ಇಂಗ್ಲೆಂಡಿನಲ್ಲಿ ಆಗಾಗ್ಗೆ ತಾನು ಸ್ತ್ರೀಜಾತಿಯಲ್ಲಿ ಅಭಿಮಾನವಿಡುವ ಮಾರ್ಗವನ್ನು ಟಿಬೆಟ್'ದೇಶದ ಸ್ತ್ರೀಯರಿಂದ ಕಲ್ತುಕೊಂಡೆನೆಂದು ಆಗಾಗ್ಗೆ ಬಹು ಸಂತೋಷದಿಂದ ಹೇಳಿಕೊಳ್ಳುತ್ತಿದ್ದನು. ಹಿಂದೂದೇಶದ ಸ್ತ್ರೀಯರ ವಿಷಯವಾಗಿ ಈತನು ಪಟ್ಟ ಶ್ರಮೆಗಳಿಗೆ ಪ್ರಬಲಕಾರಣವು ಇದೇ."

ಟಿಬೆಟ್ ದೇಶ ಒಂದಕ್ಕೆ ಮಾತ್ರವಲ್ಲ; ರಾಮಮೋಹನನು ಹಿಮಾಲಯಪರ್ವತದ ಉತ್ತರಭಾಗದಲ್ಲಿರುವ ಇನ್ನೂ ಕೆಲವು ದೇಶಗಳಿಗೆ ಸಹಾ ಹೋಗಿದ್ದನೆಂಬ ಪ್ರತೀತಿ ಯಿರುವುದು ; ಆದರೂ ನಂಬಿಕೆಗೆ ಅರ್ಹವಾದ ಸಾಧನಗಳು ದೊರೆಯದ್ದರಿಂದ ಆ ವಿಷಯವನ್ನು ಕುರಿತು ವಿವರಿಸಲು ಅವಕಾಶವಿಲ್ಲವೆಂದು ಚಿಂತಿಸುವೆವು. ಈತನು ತನ್ನ ಯಾತ್ರೆಗಳನ್ನು ವರ್ಣಿಸುವ ಗ್ರಂಥವನ್ನು ಬರೆದಿಟ್ಟಿದ್ದಲ್ಲಿ ಈಗ ಎಷ್ಟೋ ಉಪಯೋಗವಾಗಿರುತ್ತಿದ್ದಿತು. ಬ್ರಹ್ಮಸಮಾಜವನ್ನು ಸ್ಥಾಪಿಸಿದಮೇಲೆ "ಸಂವಾದಕೌಮುದಿ" ಎಂಬ ಹೆಸರಿನಿಂದ ಈತನು ಒಂದು ಪತ್ರಿಕೆಯನ್ನು ಹೊರಡಿಸಿ, ಅದರಲ್ಲಿ ತನ್ನ ಯಾತ್ರೆಗಳನ್ನು ಸಂಗ್ರಹವಾಗಿ ಬರೆದಿರುವನೆಂಬುದನ್ನು ಕೇಳಿ, ನಾವು ಆ ಪತ್ರಿಕೆಯನ್ನು ಸಂಪಾದಿಸಲು ಎಷ್ಟು ಪ್ರಯತ್ನಪಟ್ಟರೂ ಅದು ನಮಗೆ ದೊರೆಯದೆ ಹೋಯಿತು. ಮನೆಯಿಂದ ಹೊರಟಮೇಲೆ ರಾಮಮೋಹನನು

ಹೀಗೆ ನಾಲ್ಕು ವರ್ಷಗಳತನಕ ದೇಶಸಂಚಾರಮಾಡಿ, ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ಸ್ವದೇಶಕ್ಕೆ ಬಂದು ಸೇರಿದನು. ತನ್ನ ಅಭಿಪ್ರಾಯಕ್ಕೆ ವಿರೋಧವಾಗಿ ನಡೆದುದರಿಂದ ಮನೆ ಬಿಟ್ಟು ಹೊರಡಿಸಿದರೂ ಕ್ರಮೇಣ ರಾಮಕಾಂತನಿಗೂ ತಾರಣೀದೇವಿಗೂ ಪುತ್ರವಿಯೋಗ ದುಃಖವು ಹೆಚ್ಚುತ್ತ ಬಂದುದರಿಂದ ಅವರು ಅಹೋರಾತ್ರಿಗಳಲ್ಲಿಯೂ, ವಿಚಾರಗ್ರಸ್ತರಾಗಿ ತಮ್ಮ ಮಗನು ಎಲ್ಲಿರುವನು ? ಏನಾಗಿರುವನು ? ಎಂಬುದನ್ನು ತಿಳಿಯದೆ ದಿಕ್ಕು ದಿಕ್ಕಿಗೂ ಸೇವಕರನ್ನು ಕಳುಹಿ, ಹುಡುಕಿಸುತ್ತಿದ್ದರು. ಅವರಲ್ಲಿ ಪಶ್ಚಿಮದಕಡೆಗೆ ಹೋದವರು ಈತನನ್ನು ಕಂಡುಹಿಡಿದು, ಅವನ ತಂದೆಯ ಬಳಿಗೆ ಕರೆದು ತಂದರು. ಚಿರಕಾಲದಿಂದ ಅಗಲಿ ದುಃಖ ಸಮುದ್ರದಲ್ಲಿ ಮುಳುಗಿದ್ದ ತಾಯಿತಂದೆಗಳಿಗೆ ಈ ಪುತ್ರ ಸಂದರ್ಶನವು ಎಷ್ಟು ಸಂತೋಷವನ್ನಿತ್ತಿತೋ ಮತ್ತು ಆಗ ಅವರ ಮನಸ್ಸು ಹೇಗಿದ್ದಿತೋ ಅದು ಅನುಭವೈಕವೇದ್ಯವೇ ಹೊರತು ಬರೆದು ತಿಳಿಸಲಿಕ್ಕೆ ಬಾರದು. ಮಗನನ್ನು ನೋಡಿದಕೂಡಲೇ ಗಾಢಾಲಿಂಗನವನ್ನು ಮಾಡಿ, ಕಣ್ಣೀರು ಧಾರೆಯಾಗಿ ಹರಿಯಲು, "ಅಪ್ಪಾ! ರಾಮಚಂದ್ರನನ್ನಗಲಿದ ದಶರಥನು ಆ ದುಃಖದಿಂದಲೇ ಪ್ರಾಣಗಳನ್ನು ಬಿಟ್ಟನು, ನಾನು ಮಾತ್ರ ಮರಳಿ ನಿನ್ನನ್ನು ನೋಡುವ ಭಾಗ್ಯವು ಲಭಿಸುವುದೆಂಬ ಆಶೆಯಿಂದ ಪ್ರಾಣಗಳನ್ನು ನಿನ್ನಮೇಲೆಯೇ ಇಟ್ಟುಕೊಂಡು ಇದುವರಿವಿಗೂ ಜೀವಿಸಿರುವೆನು" ಎಂದು ರಾಮಕಾಂತನು ಹೇಳಿದನು.

ರಾಮಮೋಹನನಿಗೆ ಬಾಲ್ಯದಲ್ಲಿಯೇ ಮದುವೆಯಾಯಿತು ; ಆದರೂ ಕೆಲವು ದಿನಗಳಲ್ಲಿಯೇ ಆತನ ಪ್ರಾಣಕಾಂತೆಯು ಲೋಕಾಂತರವನೆಯ್ದಿದಳು. ಮರಳಿ ಮನೆಗೆ ಬಂದ ಮೇಲೆ ಇವನಿಗೆ ಹೇಗಾದರೂ ಸಂಸಾರಸುಖಗಳಲ್ಲಿ ಆಸೆಯನ್ನು ಹುಟ್ಟಿಸಿದಲ್ಲಿ ಸ್ವೇಚ್ಛಾಚಾರವನ್ನು ಬಿಟ್ಟು ನೆಟ್ಟಗಾಗುವನೆಂಬ ನಂಬಿಕೆಯಿಂದ ರಾಮಕಾಂತನು ತನ್ನ ಮಗನಿಗೆ ಎರಡು ವಿವಾಹಗಳನ್ನು ಮಾಡಿಸಿದನು. ಬಾಲ್ಯದಿಂದಲೂ ಸಂಘಸಂಸ್ಕರಣದಲ್ಲಿಯೇ ಆಸಕ್ತನಾಗಿದ್ದ ರಾಮಮೋಹನನು ಹೀಗೆ ಇಬ್ಬರು ಪತ್ನಿಯರನ್ನು ಹೇಗೆ ಪರಿಗ್ರಹಿಸಿದನೋ ತಿಳಿಯಬಾರದೆ ಇದೆ; ಆದರೂ ಮನಃಪೂರ್ವಕವಾಗಿ ಒಂದು ಸಂಸ್ಕರಣವನ್ನವಲಂಬಿಸಬೇಕೆಂಬ ದೃಢತರವಾದ ಉದ್ದೇಶವುಳ್ಳವರಾದರೂ ಪೂರ್ವಾಚಾರ ಪರಾಯಣರಾದ ತಮ್ಮ ಹಿರಿಯರ, ಬಂಧುಗಳ, ಮತ್ತು ವಿದ್ಯಾವಿಹೀನೆಯಾಗಿದ್ದರೆ ಅಂತಹ ಹೆಂಡತಿಯ ನಿರ್ಬಂಧಗಳಿಂದ ಆ ಕಾರ್ಯಗಳನ್ನು ಕೊನೆಮುಟ್ಟಿಸಲಾರದೆ, ಬರಿಯ ವಾಗಾಡಂಬರವನ್ನ ತೋರಿಸದೆ, ಈ ರಾಮಮೋಹನನು ಬಹುಕಾಲಕ್ಕೆ ತಮ್ಮ ತಂದೆಯ ಅನುಗ್ರಹಕ್ಕೆ ಪಾತ್ರನಾಗಿ, ಮನೆಯೊಳಕ್ಕೆ ಸೇರಿದವನಾದುದರಿಂದ ಆತನ ಮನಸ್ಸಿಗೆ ವಿರೋಧವಾಗಿ ನಡೆದುಕೊಳ್ಳಲಾರದೆ, ತನಗೆ ಇಷ್ಟವಾಗಿಲ್ಲದಿದ್ದರೂ ತತ್ಕಾಲದ ಸ್ಥಿತಿಗತಿಗಳನ್ನಾಲೋಚಿಸಿ, ತಂದೆಯ ಉದ್ದೇಶವನ್ನೇ ಅನುಸರಿಸಬೇಕಾಗಿಬಂತೆಂತಲೂ, ಮಹಾತ್ಮರ ಜೀವಿತಗಳು ಸುದಾ ಕಾಲಾನುಗುಣವಾದ ಕೆಲವು ದುರಾಚಾರಗಳಿಗೆ ಒಳಗಾಗದಿದ್ದರೆ ತೀರದೆಂತಲೂ, ನಾವು ಒಪ್ಪಿಕೊಳ್ಳಬೇಕಾಗಿದೆ.

ರಾಮಮೋಹನನು ಮನೆಗೆ ಬಂದು ಸೇರಿದ ಮೊದಲುಗೊಂಡು, ತನ್ನ ಕಾಲವನ್ನೆಲ್ಲ ಹಿಂದೂಶಾಸ್ತ್ರಗಳನ್ನೋದುವುದರಲ್ಲಿಯೇ ವಿನಿಯೋಗಿಸಿ, ವೇದಗಳು, ಸ್ಮೃತಿಗಳು, ಪುರಾಣ

ಗಳು ಮೊದಲಾದುವುಗಳಲ್ಲಿರುವ ವಿಷಯಗಳನ್ನೆಲ್ಲ ಗ್ರಹಿಸಿ, ಅವುಗಳಲ್ಲಿ ಅದ್ಭುತಪ್ರಜ್ಞೆಯನ್ನು ಸಂಪಾದಿಸಿದನು. ಆತನಿಗೆ ಗ್ರಂಥಗಳನ್ನೋದುವುದರಲ್ಲಿ ಇರುವ ಆಶೆಯನ್ನು ನೋಡಿ ಆ ಊರಿನವರೆಲ್ಲರೂ ಆಶ್ಚರ್ಯಪಡುತ್ತಿದ್ದರು. ಒಂದುದಿನ ಪ್ರಾತಃಕಾಲ ತನ್ನ ಕೊಠಡಿಯಲ್ಲಿ ಏಕಾಂತವಾಗಿ ಕುಳಿತು, ತಾನು ಅದುವರೆಗೆ ಎಂದೂ ಓದದೆ ಇದ್ದ ವಾಲ್ಮೀಕಿ ರಾಮಾಯಣ ವನ್ನು ತುಂಬ ಅಕ್ಕರೆಯಿಂದ ಓದುತ್ತ ಅಪರಾಹ್ಣವು ಅತಿಕ್ರಮಿಸಿದ್ದನ್ನು ಸುದಾ ತಿಳಿಯದೆ ಇದ್ದನು, ತಾಯಿಯು ಊಟಕ್ಕೆ ಬಾರೆಂದು ಒಂದೆರಡು ಸಲ ಕರೆದರೂ ಗ್ರಂಥವನ್ನು ಬಿಟ್ಟುಬರಲು ಇಷ್ಟವಿಲ್ಲದೆ ಸ್ವಲ್ಪತಾಳಿ ; ಬರುವೆನೆಂದು ಹೇಳಿ, ಮತ್ತೆ ಓದುತ್ತಲೇ ಇದ್ದನು. ಮನೆಯವರೆಲ್ಲರೂ ಭೋಜನಮಾಡಿದರು ; ಇವನ ತಾಯಿ ಮಾತ್ರ ಇವನಿಗಾಗಿ ಕಾದಿದ್ದು ಬೇಸತ್ತು "ರಾಮ ಮೋಹನಾ! ಆ ಗ್ರಂಥವನ್ನು ಅಮೂಲಾಗ್ರವಾಗಿ ಓದುವತನಕ ಆಹಾರ ವನ್ನೊಲ್ಲೆನೆಂದು ದೀಕ್ಷೆಯನ್ನು ವಹಿಸಿರುವೆಯಾ ? ನನ್ನ ಹಸಿವನ್ನಾದರೂ ತೀರಿಸು, ಏಳು" ಎಂದು ಹೇಳಿದಮೇಲೆ ಆತನು ಊಟಮಾಡಲಿಕ್ಕೆ ಹೊರಟನು, ಹೀಗೆ ಬಲು ಆಸಕ್ತಿಯಿಂದ ಗ್ರಂಥರೂಪದಲ್ಲಿರುವ ಪುರಾತನ ಸಂಪ್ರದಾಯ ಸ್ಥಿತಿಗಳನ್ನು ಕಡೆದು ಕಡೆದು ನೋಡಿದ್ದರಿಂದ "ದೇವಾಸುರರಿಗೆ ಸಮುದ್ರಮಥನದಿಂದ ಅಮೃತವು ಲಭಿಸಿದಂತೆ" ರಾಮಮೋಹನರಾಯನಿಗೆ ಬ್ರಹ್ಮಜ್ಞಾನವೆಂಬ ಅಮೃತವು ಸಿಕ್ಕುವಂತೆ ಮಾಡಿದ್ದಕ್ಕೂ, ಆ ಮೂಲಕವಾಗಿಯೇ ಈತನು ತನ್ನ ಮನಸ್ಸಿನ ಉದ್ದೇಶಗಳನ್ನು ದೃಢಪಡಿಸಿಕೊಳ್ಳುವುದಕ್ಕೂ ಅದೇ ಬಲವಾದ ಕಾರಣ ವಾಯಿತು.

ಈ ಮಧ್ಯಕಾಲದಲ್ಲಿ ತಂದೆ ಮಕ್ಕಳಿಗೆ ಆಗಾಗ್ಗೆ ವಾದವು ಜರುಗುತ್ತಲೇ ಇದ್ದಿತು, ರಾಮಕಾಂತರಾಯರು ಮಗನ ಮನಸ್ಸಿನ ಸಂಕಲ್ಪವನ್ನು ತಿಳಿದು, ತುಂಬ ವಿಚಾರಪಡುತ್ತ, ತನ್ನ ಚಿಂತೆಯನ್ನು ಹೊರಪಡಿಸದೆ, ತನ್ನ ಅಸಮ್ಮತಿಯನ್ನು ಸೂಚನೆಗಳಿಂದ ತೋರುತ್ತಾ, ತನ್ನ ಮಗನು ಪೂರ್ವಾಚಾರಬದ್ಧನಾಗಿ, ಸಂಸಾರವನ್ನು ನಿರ್ವಹಿಸುತ್ತಾ, ಮನೆಯಲ್ಲಿರುವ ನೆಂದು ತಾನು ತಿಳಿದಿದ್ದುದು ವ್ಯರ್ಥವಾಯಿತೆಂದು ದುಃಖಿಸುತಿದ್ದನು. ಹೀಗೆ ಕೆಲವು ದಿನಗಳು ಕಳೆದಮೇಲೆ ಪೂರ್ವಾಚಾರವು ಒಳ್ಳೆಯದಾಗಲಿ, ಕೆಟ್ಟದಾಗಲಿ, ಆಮೇಲು ಬೀಳು ಗಳೆರಡನ್ನೂ ನಾವು ಅವಲಂಬಿಸದೆ ತೀರದೆಂಬ ರಾಮಕಾಂತನ ವಾದಕ್ಕೂ, ನಮ್ಮ ಅಂತರಾ ತ್ಮವು ಯುಕ್ತವೆಂದು ಬೋಧಿಸಿದವುಗಳನ್ನೇ ಸ್ವೀಕರಿಸಿ, ಅಯುಕ್ತವಾದುದೆಂದು ಹೇಳತಕ್ಕ ವುಗಳನ್ನು ಪರಿತ್ಯಜಿಸೋಣವೆಂಬ ರಾಮಮೋಹನನ ವಾದಕ್ಕೂ ಇರುವ ಭೇದಗಳೇ ಇವರ ಪುನಃಕಲಹಕ್ಕೆ ಕಾರಣಗಳಾದುವು. ಇವುಗಳನ್ನು ನೋಡಿದ ಬಂಧುಜನರೆಲ್ಲರೂ ಅವನಲ್ಲಿ ಹಗೆತನವನ್ನು ತೋರುತ್ತ ಬಂದರೂ, ತರುವಾಯ ಒಂದು ದಿನ ರಾಮಕಾಂತನು ತನ್ನ ಮಗನನ್ನು ನೋಡಿ, " ಮತದ್ವೇಷಿಯಾದ ನಿನ್ನನ್ನು ನನ್ನ ಮನೆಯಲ್ಲಿಟ್ಟುಕೊಂಡಿರಲು ಅನೇಕ ಕಾರಣಗಳಿಂದ ಯೋಗ್ಯವಲ್ಲದೆ ಇದೆ ; ಆದಕಾರಣ ಇಂದಿನಿಂದ ನೀನು ಬೇರೆಯಾ ಗಿರು " ಎಂದು ಅವನನ್ನು ಮನೆಯಿಂದ ಹೊರಡಿಸಿ, ಅವನ ಜೀವನಕ್ಕಾಗಿ ಸ್ವಲ್ಪ ಹಣವನ್ನು ಕೊಡುತ್ತಿದ್ದನು.

ಆಗಿನಿಂದಲೇ ಈತನಿಗೆ ಇಂಗ್ಲಿಷ್ ವಿದ್ಯಾಭ್ಯಾಸದಲ್ಲಿ ಆಸಕ್ತಿಹುಟ್ಟಿತು. ಇವನು ಒಂದು ಕಡೆ ಹೀಗೆ ಬರೆದಿರುವನು-" ನಾನು ಟಿಬೆಟ್ಟಿಗೆ ಹೊರಟಾಗ ನನ್ನಮನಸ್ಸಿನಲ್ಲಿ ಈ ಪಾಶ್ಚಿಮಾತ್ಯರ ವಿಷಯದಲ್ಲಿಯೂ ಅವರ ಭಾಷೆಯ ವಿಷಯದಲ್ಲಿಯೂ ಅನಾದರಭಾವವುಂಟಾಗಿದ್ದಿತು ; ಆದರೆ ನಾನು ಹಿಂದಿರುಗಿಬಂದಮೇಲೆ ಅವರೊಡನೆ ಸ್ನೇಹಮಾಡಿ, ಆ ಮೂಲಕ ಅವರ ವಿಧಗಳನ್ನೂ, ಆಳಿಕೆಯ ಪದ್ಧತಿಗಳನ್ನೂ ನೋಡಿದೆನು. ಅವರು ಒಳ್ಳೇ ವೀರರೆಂತಲೂ, ಕಾರ್ಯಾಚರಣೆಯಲ್ಲಿ ದೃಢಸಂಕಲ್ಪರೆಂತಲೂ ನನಗೆ ಚೆನ್ನಾಗಿ ತಿಳಿಯಿತು. ಆದುದರಿಂದ ಪರದೇಶೀಯರಾದರೂ ನಮ್ಮ ದೇಶದವರ ಹೀನಸ್ಥಿತಿಯನ್ನು ಕ್ರಮಪಡಿಸುವುದಕ್ಕೆ ಅವರೇ ಅಧಿಕವಾಗಿ ಸಹಾಯಕರಾಗುವರೆಂದು ದೃಢವಾಗಿ ನಂಬಿದೆನು"

ಈ ಅಭಿಪ್ರಾಯವೇ ರಾಮಮೋಹನನನ್ನು ಇಂಗ್ಲಿಷು ವಿದ್ಯಾಭಿವೃದ್ಧಿಗಾಗಿ ಹುರಿಗೊಳಿಸಿತು. ಆದರೂ ತನ್ನ ಇಪ್ಪತ್ತೆರಡನೆಯ ವರುಷದಲ್ಲಿ ಇಂಗ್ಲೀಷುವಿದ್ಯೆಯನ್ನು ಕಲಿಯುವುದಕ್ಕೆ ಪ್ರಾರಂಭಿಸಿ, 26-27 ವರುಷಗಳ ತನಕ ಸಾಮಾನ್ಯವಾಗಿ ಮಾತನಾಡತಕ್ಕಷ್ಟು ಶಕ್ತಿಯನ್ನು ಮಾತ್ರ ಸಂಪಾದಿಸಿ, ಬರೆಯಲಿಕ್ಕೆ ಅಶಕ್ತನಾಗಿಯೇ ಇದ್ದನು. ಇವನು ಯಾವ ಕಾರಣದಿಂದ ಶೀಘ್ರವಾಗಿ ವಿದ್ಯಾಭಿವೃದ್ಧಿಯನ್ನು ಪಡೆಯದೆ ಇದ್ದನೋ ಆದನ್ನು ತಿಳಿಯಲು ತಕ್ಕ ಸಾಧನಗಳು ಸಿಕ್ಕಲಿಲ್ಲ.

ಮಹನೀಯದ್ದೃಢಚಿತ್ತದೆ |
ಮಹಿಯೊಳ್ಕಷ್ಟಗಳನೆಣಿಸದುದೆ ಧೀರತೆಯಿಂ ||
ಸಹಿಸುತ್ತಂ ಸುಗುಣಂಗಳ !
ಗ್ರಹಿಸುತ್ತಂ ನಡೆವರಂತರಾತ್ಮನೊಲಿವವೋಲ್ ||

## ಎರಡನೆಯ ಪ್ರಕರಣ.

### [1801 ರಿಂದ 1818ರ ವರಿಗೆ]

1801 ನೇ ಸಂವತ್ಸರದಲ್ಲಿ ಇವನಿಗೆ ಉದ್ಯೋಗದಲ್ಲಿ ಸೇರಬೇಕೆಂಬ ಆಶೆ ಹುಟ್ಟಿತು. ಮನೆ ಬಿಟ್ಟುಹೋದ ದಿನದಿಂದ ಇವನ ತಂದೆಯು ಸ್ವಲ್ಪಮಟ್ಟಿಗೆ ಧನಸಹಾಯಮಾಡುತ್ತಿದ್ದರೂ ಯಾವಾಗಲೂ ಸ್ವಾತಂತ್ರ್ಯವನ್ನಪೇಕ್ಷಿಸುವ ಅವನ ಅಂತರಾತ್ಮಕ್ಕೆ ಈ ವಿಧದ ಜೀವನವು ಹಿತವಾಗಿ ತೋರಲಿಲ್ಲ. ತನ್ನ ಮನಸ್ಸಿಗೆ ಯುಕ್ತವೆಂದು ತೋರಿದ ಅಂಶಗಳು ತನ್ನ ತಾಯಿತಂದೆಗಳಿಗೆ ಅಹಿತವಾಗಿ ತೋರಿದಲ್ಲಿ ಅಂತವರ ಸಂಬಂಧವನ್ನು ಸುದಾ ಬಿಟ್ಟುಬಿಟ್ಟು, ತನ್ನ ಉದ್ದೇಶಗಳನ್ನು ಸ್ವಲ್ಪವಾದರೂ ಬದಲಾಯಿಸಲಿಕ್ಕೆ ಇಷ್ಟಪಡದ ರಾಮಮೋಹನನಿಗೆ ಈ ಪರಾನ್ನದಿಂದ ಜೀವಿಸುವಿಕೆಯು ಹೇಗೆತಾನೇ ಹಿತಕರವಾಗಿದ್ದೀತು ? ಆದುದರಿಂದ ಇವನು ಸರ್ಕಾರದಲ್ಲಿ ಸೇರಲಪೇಕ್ಷಿಸಿದುದಕ್ಕೆ ಇದೇ ಮುಖ್ಯಕಾರಣವೆನ್ನಬಹುದು.

ಆದರೆ ಆ ಕಾಲದಲ್ಲಿ ಹಿಂದೂದೇಶೀಯರಿಗೆ ಇಂಗ್ಲೀಷರಬಳಿಯಲ್ಲಿ ಉದ್ಯೋಗವಮಾಡುವುದು ಈಗಿನಷ್ಟು ಸಂತೋಷಕರವಾಗಿರಲಿಲ್ಲ. ಮುಸಲ್ಮಾನರ ಆಳಿಕೆಯಲ್ಲಿ ಪ್ರಜೆಗಳಿಗೆ ಎಷ್ಟು ತೊಂದರೆಗಳು ಸಂಭವಿಸುತ್ತಿದ್ದರೂ ಅವರು ತಮ್ಮ ತಮ್ಮ ರಾಜ್ಯಾಂಶಗಳಲ್ಲಿ ಜಾತಿ ಮತ ವಿಪಕ್ಷತೆಗಳನ್ನು ಸ್ವಲ್ಪವಾದರೂ ಗಣಿಸದೆ, ತಕ್ಕ ಯೋಗ್ಯತೆಯನ್ನು ಮಾತ್ರ ಪರಿಶೀಲಿಸಿ, ತಮ್ಮ ಜಾತಿಯ ಮಹಮ್ಮದೀಯರಿಗೂ, ದೇಶೀಯರಾದ ಹಿಂದೂಜನರಿಗೂ ಸಮವಾಗಿ ಉನ್ನತಾಧಿಕಾರಗಳನ್ನು ಕೊಡುತ್ತ ಬಂದರು. ಮಹಾ ಯೋಧನಾದ ಔರಂಗಜೇಬನು ಸುದಾ ತನ್ನ ರಾಜ್ಯದ ನಾಲ್ಕುಮೂಲೆಗಳಲ್ಲಿರುವ ದೊಡ್ಡ ಸೇನೆಗೆಲ್ಲ ರಾಜಪುತ್ರನಾದ ಜಸ್ವಂತ ಸಿಂಗನನ್ನು ಸೇನಾನಾಯಕನನ್ನಾಗಿರಿಸಿ, ತನ್ನ ರಾಜ್ಯರಕ್ಷಣಭಾರವನ್ನು ಅವನ ಭುಜಪೀಠದಲ್ಲಿಯೇ ನಿಲ್ಲಿಸಿದನು. ಆದರೆ ಇಂಗ್ಲೀಷರ ಆಗಿನ ರಾಜ್ಯಭಾರದ ಕಾಲದಲ್ಲಿ ಮಾತ್ರ ಈ ಪದ್ಧತಿ ನಶಿಸಿತು. ಮುಖ್ಯವಾಗಿ ನಾವು ಈಗ ಹೇಳುತ್ತಿರುವ ರಾಮಮೋಹನನ ಕಾಲದಲ್ಲಿ ಕಲೆಕ್ಟರ ಬಳಿಯಲ್ಲಿಯಾಗಲಿ, ಜಡ್ಜಿಯ ಬಳಿಯಲ್ಲಿಯಾಗಲಿ ನೂರುರೂಪಾಯಿ ಸಂಬಳದ ಶಿರಸ್ತೆಯ ಉದ್ಯೋಗವೇ ಹಿಂದುಗಳಿಗೆ ಉನ್ನತಾಧಿಕಾರವೆಂದು ಎಣಿಸಲ್ಪಟ್ಟಿದ್ದಿತು. ಅದೂ ಕೂಡ ಒಂದೇ ಸಾರಿ ಸಿಕ್ಕುತ್ತಿರಲಿಲ್ಲ; ಹತ್ತು ಹದಿನೈದು ರೂಪಾಯಿಗಳ ಸಣ್ಣಉದ್ಯೋಗದಿಂದ ಅಭಿವೃದ್ಧಿಗೆ ಬಂದವನಿಗೇನೆ ಆ ದೊಡ್ಡ ಅಧಿಕಾರವು ಕೊಡಲ್ಪಡುತ್ತಿದ್ದಿತು.

ಉದ್ಯೋಗಸಿಕ್ಕುವ ಮಾತು ಹಾಗಿರಲಿ; ಈ ಉದ್ಯೋಗಸ್ಥರಲ್ಲಿ ಮೇಲಿನ ಅಧಿಕಾರಗಳು ತೋರುತ್ತಿದ್ದ ಅನಾದರವೂ ಚಿಂತಿಸತಕ್ಕುದಾಗಿಯೇ ಇದ್ದಿತು. ಒಂದೊಂದುವೇಳೆ ಇವರನ್ನು ತಿರ್ಯಗ್ಜಂತುಗಳಿಗಿಂತ ಹೀನವಾಗಿ ಕಾಣುತ್ತಿದ್ದರು. ಜನರು ವಿದ್ಯಾವಂತರಾಗಲಿಕ್ಕೆ ಬೇಕಾದ ಪಾಠಶಾಲೆಗಳು ಗಗನಕುಸುಮಗಳೆನಿಸಿದ್ದುವು. ನಮ್ಮವರಲ್ಲಿ ಪೌರುಷವೆಂಬುದು ಶೂನ್ಯವಾಯಿತು; ಆದುದರಿಂದ ಅಧಿಕಾರಿಗಳು ಅವರನ್ನು ನೈಚ್ಯಭಾವದಿಂದ ತಿಳಿಯುತಿದ್ದರು. ಅಧಿಕಾರಿಗಳು ತಕ್ಕ ಕಾರಣಗಳಿಂದಲಾಗಲಿ, ಕಾರಣವಿಲ್ಲದೆ ಆಗಲಿ ತಮ್ಮಮೇಲೆ ಅಸಮಾಧಾನಗೊಂಡಂತೆ ಮುಖಲಕ್ಷಣಗಳಿಂದ ತಿಳಿಯಬಂದ ಕೂಡಲೇ ನಮ್ಮವರು ಅವರಿಗೆ ಕೈಮುಗಿದು, ಬಹಳವಾಗಿ ಹೊಗಳಿ ಅವರ ಅನುಗ್ರಹವನ್ನು ಸಂಪಾದಿಸುವುದನ್ನು ಮಾತ್ರ ಚೆನ್ನಾಗಿ ಕಲಿತಿದ್ದರು.

ಸ್ವಾತಂತ್ರ್ಯಾಭಿಲಾಷಿಯಾದ ರಾಮಮೋಹನನಿಗೆ ಈ ವಿಷಯಗಳೆಲ್ಲವೂ ಚೆನ್ನಾಗಿ ತಿಳಿದಿದ್ದರೂ ತನ್ನ ಯೋಗ್ಯತೆಯಲ್ಲಿ ಸ್ವಲ್ಪಮಟ್ಟಿಗೆ ತನಗೆ ನಂಬಿಕೆಯಿದ್ದುದರಿಂದಲೂ, ಜೀವನಕ್ಕೆ ಬೇರೆ ಮಾರ್ಗವಿಲ್ಲದುದರಿಂದ ಸ್ವತಂತ್ರಜೀವನಕ್ಕೆ ಉದ್ಯೋಗವನ್ನು ಸಂಪಾದಿಸುವುದೇ ಉತ್ತಮವೆಂದು ತೋರಿದುದರಿಂದಲೂ, ಮೊದಲಲ್ಲಿ ಸಣ್ಣ ನೌಕರಿಯಲ್ಲಿಯಾದರೂ ಸೇರಲಿಕ್ಕೆ ಇಷ್ಟಗೊಂಡು, ಅಧಿಕಾರಗಳು ತನ್ನನ್ನು ಅಗೌರಪಡಿಸಿದರೆ ಆ ಕೆಲಸವನ್ನು ಬಿಟ್ಟುಬಿಡುವೆನೆಂದು ನಿಶ್ಚಯಿಸಿ, ಜಂಗ್‌ಪುರದ ಮಂಡಲಾಧಿಪತಿ (ಕಲೆಕ್ಟರ್) ಯಾದ ಡಿಗ್ಬಿಸಾಹೇಬನ ಬಳಿಗೆ ಹೋಗಿ ತನಗೊಂದು ಉದ್ಯೋಗವನ್ನು ಕೊಡಿಸಬೇಕೆಂದು ಮನವೆಯನ್ನು ಬರೆದುಕೊಟ್ಟನು. ಆ ಸಾಹೇಬನು ಆತನ ಮುಖಲಕ್ಷಣವನ್ನೂ, ವಾಕ್ಚಾತುರ್ಯವನ್ನೂ, ಬರಹದ

ತರಹೆಯನ್ನೂ ನೋಡಿ, ನಿನಗೆ ಒಂದು ಉದ್ಯೋಗವನ್ನು ಕೊಡುವೆನೆಂದು ಹೇಳಿದನು ; ಕೂಡಲೆ, ರಾಮಮೋಹನನು, " ನಾನು ತಮ್ಮ ಬಳಿಗೆ ಬಂದಾಗಲೆಲ್ಲ ಕೂತುಕೊಳ್ಳಲಿಕ್ಕೆ ಸ್ಥಳವನ್ನು ಕೊಡುವುದು, ಮರ್ಯಾದೆಯಿಂದ ನೋಡುವುದು, ಇವೆರಡು ವಿಷಯಗಳಿಗೆ ಸಮ್ಮತಿಸುವುದಾದರೆ ತಮ್ಮ ಅಪ್ಪಣೆಯಂತೆ ಉದ್ಯೋಗವನ್ನು ಒಪ್ಪಿಕೊಳ್ಳುವೆನೆಂದು ಮತ್ತೊಂದು ಬಿನ್ನವತ್ತಳೆಯನ್ನು ಬರೆದುಕೊಟ್ಟನು. ಆ ಅಧಿಕಾರಿಯು ದಯಾಳುವಾಗಿಯೂ, ಶಾಂತನಾಗಿಯೂ ಇದ್ದುದರಿಂದ ಈತನ ಪ್ರಾರ್ಥನೆಗೆ ಸ್ವಲ್ಪವೂ ಕೋಪಿಸಿಕೊಳ್ಳದೆ, ಆಶ್ಚರ್ಯದಿಂದಲೂ ಸಂತೋಷದಿಂದಲೂ ಒಪ್ಪಿಕೊಂಡುದಲ್ಲದೆ ಅದರಂತೆ ಬರೆದು ಕೊಟ್ಟನು. ರಾಮಮೋಹನನು ಉದ್ಯೋಗದಲ್ಲಿ ಪ್ರವೇಶಿಸಿ, ತನ್ನ ಚಾತುರ್ಯವನ್ನೆಲ್ಲ ತೋರಿಸಿ, ಬಹು ಶ್ರದ್ಧೆಯಿಂದ ಕೆಲಸಮಾಡುತ್ತಾ ಬಂದುದರಿಂದ ಡಿಗ್ಬಿಯವರಿಗೆ ಈತನಲ್ಲಿ ವಿಶ್ವಾಸವು ಹೆಚ್ಚುತ್ತ ಬಂದಿತು. ಬರುತ್ತಾ ಬರುತ್ತಾ ತಾನು ಕಲಿತ ವಿದ್ಯಾಬಲದಿಂದ ಆ ಕಾರ್ಯಸ್ಥಾನದಲ್ಲಿ ಯಾವ ಕೆಲಸವನ್ನಾದರೂ ನಿರ್ವಹಿಸುವ ಸಾಮರ್ಥ್ಯವನ್ನು ಪಡೆದುದರಿಂದ ಕಲೆಕ್ಟರಿಗೆ ಇವನಲ್ಲಿ ಹೆಚ್ಚಾದ ಗೌರವ ದೊರೆತು, ಸಲ್ಪ ದಿನಗಳಲ್ಲಿಯೇ ಆ ಅಧಿಕಾರಿಯಬಳಿ ದೊಡ್ಡ ಉದ್ಯೋಗವಾದ ದಿವಾನನೆಂಬ ಶಿರಸ್ತೇದಾರನ ಪದವಿಯು ಇವನಿಗೆ ಸಿಕ್ಕಿತು. ತರುವಾಯ ಸ್ವಭಾವವಾಗಿ ಗುಣವಂತನಾದ ಡಿಗ್ಬಿದೊರೆಗೂ, ರಾಮಮೋಹನನಿಗೂ ಪರಸ್ಪರ ಪರಿಚಯವು ಹೆಚ್ಚಿ, ಅದೇ ದೃಢತರವಾದ ಸ್ನೇಹವಾಗಿ ಬದಲಾಯಿಸಿ, ಸಾಯುವ ತನಕ ಒಂದೇಸಮವಾಗಿತ್ತು. ಇವರಿಬ್ಬರೂ ವಿಶೇಷವಾಗಿ ಹಿಂದೂದೇಶದ ವಿದ್ಯಾವಿಷಯವನ್ನು ಕುರಿತು ಯೋಚಿಸುತ್ತಾ, ಒಬ್ಬರಿಗೊಬ್ಬರು ಸಹಕಾರಿಗಳಾಗಿದ್ದರು.

ಡಿಗ್ಬಿಯ ಸ್ನೇಹಾನುಬಂಧದಿಂದ ರಾಮಮೋಹನನಿಗೆ ಸಿಕ್ಕಿದ ಲಾಭಗಳಲ್ಲಿ ಇಂಗ್ಲಿಷ್ ಭಾಷಾಜ್ಞಾನಾಭಿವೃದ್ಧಿಯೇ ಮುಖ್ಯವಾದುದು. ಈತನು ಮೊದಲು ಇಂಗ್ಲಿಷ್ ಭಾಷೆಯಲ್ಲಿ ವೇದಾಂತಸಾರವೆಂಬ ಗ್ರಂಥವನ್ನು ಬರೆದು, ಅದನ್ನು 1816 ರಲ್ಲಿ ಮುದ್ರಿಸಿದನು. ಈ ಪುಸ್ತಕದ ಆದಿಯಲ್ಲಿ ಡಿಗ್ಬಿಯವರೇ ಒಂದು ಉಪೋದ್ಘಾತವನ್ನು ಬರೆದು ಕೊಟ್ಟಿರುವರು. ರಾಮಮೋಹನನು ಇಂಗ್ಲಿಷ್ ವಿದ್ಯೆಯಲ್ಲಿ ಹೇಗೆ ಅಭಿವೃದ್ಧಿ ಪಡೆದನೆಂಬುದನ್ನು ಅದರಿಂದ ತಿಳಿಯಬಹುದಾದುದರಿಂದ ಅದರ ಸಾರಾಂಶವನ್ನಿಲ್ಲಿ ತಿಳಿಸುವೆವು. " ಈತನು ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಇಂಗ್ಲಿಷ್ ಓದಲು ಪ್ರಾರಂಭಿಸಿದನಂತೆ; ಆದರಲ್ಲವನಿಗೆ ವಿಶೇಷ ಶ್ರದ್ಧೆ ಇಲ್ಲದುದರಿಂದಲೇ ಆಮೇಲೆ ಐದುವರುಷಗಳಾದರೂ ಸಾಮಾನ್ಯವಾಗಿ ಮಾತನಾಡತಕ್ಕಷ್ಟು ಯೋಗ್ಯತೆಯನ್ನು ಮಾತ್ರ ಪಡೆದಿದ್ದರೂ ತಪ್ಪಿಲ್ಲದೆ ಬರೆಯಲಾರದವನಾಗಿದ್ದನು. ಈಸ್ಟಿಂಡಿಯಾ ಕಂಪೆನಿಯವರಕಡೆ ನಾನು ಜಂಗ್‌ಪುರದ ಕಲೆಕ್ಟರಾಗಿದ್ದ ಐದುವರುಷಗಳಲ್ಲಿಯೇ ಈತನು ನನ್ನ ಬಳಿಯ ದಿವಾನಕೆಲಸದಲ್ಲಿದ್ದು, ನನ್ನ ರಾಜಕೀಯ ವ್ಯವಹಾರಗಳನ್ನೂ ಸ್ವಂತ ವ್ಯವಹಾರಗಳನ್ನೂ ಬಹುಮಟ್ಟಿಗೆ ಸ್ವತಂತ್ರವಾಗಿಯೇ ನೆರವೇರಿಸುತ್ತಾ ಬುದ್ಧಿವಂತಿಕೆಯಿಂದ ಕೆಲಸಮಾಡುತ್ತಾ ಯೂರೋಪಿಯನರಿಂದ ನಮ್ಮ ದೇಶದವರೊಂದಿಗೆ ನಡಿಸುವ

ಉತ್ತರ ಪ್ರತ್ಯುತ್ತರಗಳಿಂದಲೂ, ಆ ಭಾಷಾಪಂಡಿತರಿಗೆ ಸಮಾನನಾದವನೆಂದು ಹೇಳುವುದಕ್ಕೆ ಸಂತೋಷಿಸುವುದಲ್ಲದೆ ಇದಕ್ಕೆ ನಾನೇ ಕಾರಣನೆಂದು ಗರ್ವಪಡುತ್ತಿದ್ದೇನೆ.

ಈತನಿಗೆ ಇಂಗ್ಲಿಷ್ ಭಾಷಾಭಿವೃದ್ಧಿಯಲ್ಲಿ ಮಾತ್ರವಲ್ಲ ; ಯೂರೋಫ್ ಖಂಡದ ರಾಜ್ಯಾಂಗವಿಷಯಗಳನ್ನು ತಿಳಿದುಕೊಳ್ಳುವುದರಲ್ಲಿಯೂ ಆಸಕ್ತಿಹೆಚ್ಚಾಗಿದ್ದಿತು. ಡಿಗ್ಬಿಯವರು ಈ ವಿಷಯವಾಗಿ ಒಂದುಕಡೆ ಹೀಗೆ ಬರೆದಿರುವರು “ ಇವನು ಪಾಶ್ಚಾತ್ಯರ ವಾರ್ತಾಪತ್ರಿಕೆಗಳನ್ನೋದುವ ಅಭ್ಯಾಸಮಾಡಿದನು. ಪ್ರ್ಯಾನ್ಸ್ ಮೊದಲಾದ ರಾಜ್ಯಗಳ ವೃತ್ತಾಂತಗಳನ್ನು ಕೂಡ ಬಹು ಶ್ರದ್ಧೆಯಿಂದ ಓದುತಲಿದ್ದನು. ಮೊಟ್ಟಮೊದಲು ನೆಪೋಲಿಯನ್ ಬೋನೋಪಾರ್ಟಿನ ಶೌರ್ಯವಿಜೃಂಭಣೆಗೆ ಬಹಳವಾಗಿ ಸಂತೋಷಿಸುತ್ತಾ ಆತನ ಅಪಜಯದ ಸುದ್ದಿಗಳಿಗೆ ವ್ಯಸನ ಪಡುತ್ತಾ ಇದ್ದನು. ಕೆಲವು ದಿನಗಳ ತರುವಾಯ ಅವನಿಗೆ ಆ ಅಭಿಪ್ರಾಯವು ಬದಲಾಯಿಸಿತು. ಒಂದುಸಾರಿ ನನ್ನೊಡನೆ ಮಾತನಾಡುವಾಗ “ ನನಗೆ ನಪೋಲಿಯನನಲ್ಲಿ ಮೊದಲುಹುಟ್ಟಿದ್ದ ಸದಭಿಪ್ರಾಯವು ಈಗ ಇಲ್ಲ ; ಅವನು ಮಾಡುತ್ತಿರುವ ದೊಡ್ಡ ಕೆಲಸಗಳನ್ನೆಲ್ಲ ಬಹು ನೀಚಕಾರ್ಯಗಳೆಂದು ನಾನು ತಿಳಿಯುತ್ತೇನೆ ” ಎಂದನು.

೧೮೦೪ ರಲ್ಲಿಯೋ ಅಥವಾ ೧೮೦೫ ರಲ್ಲಿಯೋ ರಾಮಮೋಹನನ ತಂದೆಯಾದ ರಾಮಕಾಂತರಾಯನು ತೀರಿಹೋದನು. ಆತನು ಸಾಯುವುದಕ್ಕಿಂತ ಎರಡು ವರುಷಗಳ ಮುಂಚೆಯೇ ತನ್ನ ಆಸ್ತಿಯನ್ನೆಲ್ಲ ಮೂವರು ಮಕ್ಕಳಿಗೂ ಹಂಚಿಕೊಟ್ಟನು. ರಾಮಮೋಹನನು ತಂದೆ ಸತ್ತ ತರುವಾಯ ಮನೆಗೆ ಪ್ರವೇಶಿಸಿದರೂ ಆಸ್ತಿಯ ವಿಷಯವಾಗಿ ಸ್ವಲ್ಪವೂ ಆಶಿಸದೆ ಅದನ್ನು ಉಳಿದವರ ಜೀವನಕ್ಕಾಗಿಯೇ ಬಿಟ್ಟುಕೊಟ್ಟು ತನ್ನ ಉದ್ಯೋಗದ ಹಣದಿಂದಲೇ ಜೀವನಮಾಡುತಿದ್ದನು. ತಂದೆಯ ಮನೆಯ ಗೃಹಕೃತ್ಯವನ್ನೆಲ್ಲ ಸಮರ್ಥೆಯಾದ ತಾರಿಣೀದೇವಿಯೇ ನಿರ್ವಹಿಸುತ್ತಿದ್ದಳು

ಮಹಾತ್ಮರ ಚರಿತ್ರೆಯನ್ನು ಓದಿದವರಿಗೆಲ್ಲ ಆ ಮಹಾತ್ಮರ ಜೀವಿತಕಾಲಗಳಲ್ಲಿ ನಡೆದ ಬದಲಾವಣೆಗಳಿಗೆ ನಾವು ಪ್ರತಿದಿನವೂ ನೋಡುತ್ತಿದ್ದು ಅಲಕ್ಷ್ಯಮಾಡುವ ಕಾರ್ಯಗಳೇ ಮುಖ್ಯಕಾರಣಗಳೆಂದು ತಿಳಿಯದೆ ಇಲ್ಲ. ನಾವು ಪ್ರತಿದಿನದಲ್ಲಿಯೂ ಎಷ್ಟು ಹೆಣಗಳನ್ನು ಕಣ್ಣಿನಿಂದಲೇ ನೋಡುತ್ತಲಿಲ್ಲ ? ಇವರಿಂದ ನಮ್ಮ ಮನಸ್ಸಿಗೆ ಯಾವ ಬದಲಾವಣೆಯಾದರೂ ತೋರುತ್ತಲಿದೆಯೋ ? ಹೀಗಿದ್ದರೂ ಕಪಿಲವಸ್ತುರಾಜನ ಕುಮಾರನಾದ ಗೌತಮಬುದ್ಧನು ಒಂದೇ ಹೆಣವನ್ನು ನೋಡಿದ ಮಾತ್ರದಿಂದಲೇ ತನ್ನ ಮಹದೈಶ್ವರ್ಯವನ್ನೆಲ್ಲ ಪರಿತ್ಯಜಿಸಿ ತಪಸ್ವಿಯಾಗಿ ಕಾಡಿಗೆ ಹೊರಟುಹೋದನಲ್ಲವೇ ? ನಾವು ಪಿಡುಗುಗಳಿಂದ ಸಾಯುವ ಎಷ್ಟು ಜನರನ್ನು ನೋಡುತ್ತಲಿಲ್ಲ ? ಆದರೂ ಲ್ಯೂತರ್ ಎಂಬುವನು ಪ್ರಪಂಚವನ್ನು ಬಿಟ್ಟು ಪರಮಾರ್ಥವನ್ನು ಆಶ್ರಯಿಸಿದುದು ಇದರಿಂದಲೇ ಅಲ್ಲವೇ ? ಮಕ್ಕಳು ಬಾಲ್ಯದಲ್ಲಿ ಎಷ್ಟು ಪ್ರಾಣಿಗಳನ್ನು ಹಿಂಸೆಮಾಡುವುದಿಲ್ಲ ? ತಿಯೋಡೋರ್ ಪಾರ್ಕರ್ ಎಂಬವನು ನಾಲ್ಕು ವರುಷದವನಾಗಿದ್ದಾಗ ಒಂದು ಇರುವೆಯನ್ನು ಕೊಲ್ಲಲಿಕ್ಕೆ ಹೋದುದರಿಂದಲೇ ಅಲ್ಲವೇ

ಅವನು ಆತ್ಮತತ್ವವನ್ನು ತಿಳಿದುಕೊಂಡು, ತನ್ನ ಜೀವಿತಪದ್ಧತಿಯನ್ನೇ ಬದಲಾಯಿಸಿಕೊಳ್ಳಲು ಪ್ರಬಲ ಹೇತುವಾಯಿತು. ಹಾಗೆಯೇ ರಾಮಮೋಹನನ ಜೀವಿತದಲ್ಲಿ ಕೂಡ ಗಂಡನು ಸತ್ತಕೂಡಲೇ ಅವನ ಹೆಣದೊಂದಿಗೆ ಬದುಕಿರುವ ಹೆಂಡತಿಯ ಶರೀರವನ್ನು ಸುಟ್ಟುಹಾಕುವ "ಸಹಗಮನ" ವೆಂಬ ಆಚಾರವೇ ದೊಡ್ಡ ಮಾರ್ಪಾಡಿಗೆ ಕಾರಣವಾಯಿತು. ಈತನು ಮೊದಲಲ್ಲಿ ತನ್ನ ಅಣ್ಣನಾದ ಜಗನ್ಮೋಹನನೊಂದಿಗೆ ಅವನ ಸತೀಮಣಿಯು ಸುಡಲ್ಪಡುತ್ತಲಿರುವುದನ್ನು ನೋಡಿದನು. ಆಗ ಭಯಂಕರವಾಗಿ ದೊಡ್ಡದೊಡ್ಡ ಜ್ವಾಲೆಗಳೊಂದಿಗೆ ಅಗ್ನಿಹೋತ್ರನು ಮೂರ್ತೀಭವಿಸಿದ ಹಾಗೆ ಚಿತಿಯ ನಾಲ್ಕು ದಿಕ್ಕುಗಳನ್ನೂ ಆವರಿಸಿ ಸುಡುತ್ತಿದ್ದನು. ಸುಡುತ್ತಿರುವಾಗ ಯಾವ ರೋಗವೂ ಇಲ್ಲದೆ ತುಂಬಿದ ಪ್ರಾಣದಿಂದ ಇದ್ದ ದೇಹಕ್ಕೆ ಉಂಟಾದ ಬಲಾತ್ಕಾರದ ಮರಣಬಾಧೆಯಿಂದ ಆ ಹೆಂಗಸು ಕೂಗುತ್ತಿದ್ದ ಆಕ್ರಂದನ ಧ್ವನಿಯು ನೋಟಕರ ಕಿವಿಗೆ ಕೇಳಿಸದಂತೆ ಬಾರಿಸುವ ತಮಟೆಯ ಧ್ವನಿಗಳಿಂದ ಕಿವಿ ಕಿವುಡಾಗುತ್ತಿದ್ದಿತು. ತೀಕ್ಷ್ಣವಾಗಿ ಅಷ್ಟಷ್ಟಕ್ಕೆ ಹೆಚ್ಚುತ್ತ ಸುಡುತ್ತಲಿರುವ ಅಗ್ನಿಜ್ವಾಲೆಗಳನ್ನು ತಡೆಯಲಾರದೆ ಆಕೆಯು ಪ್ರಾಣವನ್ನುಳಿಸಿಕೊಳ್ಳಬೇಕೆಂದು ಚಿತಿಯಿಂದ ಧುಮ್ಮಿಕಲು ಯತ್ನಿಸಿದಾಗ ಅವಳ ಸಮೀಪಬಂಧುಗಳೆಲ್ಲರೂ ಎರಡುಕಡೆಗಳಲ್ಲಿಯೂ ನಿಂತು ಬಿದಿರಿನ ದೊಣ್ಣೆಗಳಿಂದ ಬಲವಂತವಾಗಿ ಅವಳನ್ನು ಬೆಂಕಿಯೊಳಕ್ಕೆ ನೂಕುತ್ತಿದ್ದರು. ಇಂತಹ ದಯಾಶೂನ್ಯವಾದ ಘೋರಕೃತ್ಯವನ್ನು ನೋಡಿ ದುಃಖಿಸಿ ಕೋಪದಿಂದ ಕೆಂಪಡರಿದ ಕಣ್ಣುಗಳಿಂದ ಅವರನ್ನು ಬಿರಬಿರನೆ ನೋಡುತ್ತ, ದೊಡ್ಡ ಧ್ವನಿಯಿಂದ ರಾಮಮೋಹನನಿಂತೆಂದನು. 'ಲೇಶವಾದರೂ ದಯಾ ದಾಕ್ಷಿಣ್ಯಗಳು ಇಲ್ಲದ ಗೋಮುಖವ್ಯಾಘ್ರಗಳಿರಾ, ನಾನು ಇದೇ ಲೋಕದಲ್ಲಿ ಇನ್ನು ಕೆಲವುಕಾಲದತನಕ ಬದುಕಿದ್ದರೆ ನನ್ನ ಶಕ್ತಿಯನ್ನೆಲ್ಲ ವಿನಿಯೋಗಿಸಿ, ಈ ದುರಾಚಾರವೆಂಬ ಗಿಡವನ್ನು ಜಲ್ಲಿ ಬೇರಿನೊಂದಿಗೆ ಕಿತ್ತುಹಾಕುವೆನು. ನೋಡೋಣ, ನನ್ನ ಪ್ರಯತ್ನಗಳಿಗೆ ದೈವವು ಅನುಕೂಲಿಸಲಿ.'

ರಾಮಮೋಹನನು ಉದ್ಯೋಗದಲ್ಲಿದ್ದಾಗ ತನ್ನ ಜೀವಿತೌತ್ಕೃಷ್ಟ್ಯಕ್ಕೆ ಕಾರಣವಾದ ಈ ಕಾರ್ಯವನ್ನು ಮರೆತಿರಲಿಲ್ಲ. ನಿತ್ಯವೂ ಸಾಯಂಕಾಲ ತನ್ನ ಮನೆಯಲ್ಲಿ ಮತವಿಷಯವನ್ನು ಚರ್ಚಿಸುವುದಕ್ಕೆ ಒಂದು ಸಂಘವನ್ನೇರ್ಪಡಿಸಿ, ಅಲ್ಲಿ ವಿಗ್ರಹಾರಾಧನೆಯು ತಕ್ಕುದಲ್ಲವೆಂತಲೂ ಬ್ರಹ್ಮಜ್ಞಾನವನ್ನು ಪ್ರತಿಯೊಬ್ಬನೂ ಪಡೆಯಬೇಕೆಂತಲೂ, ಬೋಧಿಸುತಿದ್ದನು. ಈ ಸಭೆಯಲ್ಲಿ ಜೈನಮತ ಪ್ರವರ್ತಕರಲ್ಲಿ ಕೆಲವರು ಸೇರಿದ್ದುದರಿಂದ ಅವರ ಅನುಕೂಲ್ಯಕ್ಕೋಸ್ಕರ ತನಗೆ ವಿರಾಮ ದೊರೆತಾಗ ಜೈನರ ಮತಗ್ರಂಥಗಳನ್ನೂ ಓದುತ್ತ ಬಂದನು. ಹೀಗಿರುವಾಗ ಅಲ್ಲಿಯ ನ್ಯಾಯಸ್ಥಾನದಲ್ಲಿ ಶಿರಸ್ತೇದಾರನಾಗಿದ್ದು ಫಾರಸಿಯಲ್ಲಿಯೂ ಸಂಸ್ಕೃತದಲ್ಲಿಯೂ ಒಳ್ಳೆಯ ಪಾಂಡಿತ್ಯವನ್ನು ಸಂಪಾದಿಸಿ ಹಲವು ಮಂದಿ ಶಿಷ್ಯರೊಡಗೂಡಿದ್ದ ಗೌರೀಕಾಂತ ಚತರ್ಜೀ ಎಂಬಾತನು ರಾಮಮೋಹನನಿಂದ ಆತನ ಉದ್ದೇಶಗಳಿಗನುಗುಣವಾಗಿ ಜಂಗ್‌ಪುರದಲ್ಲಿದ್ದಾಗ ಫಾರಸಿಯಲ್ಲಿ ಬರೆಯಲ್ಪಟ್ಟ ಕೆಲವು ಗ್ರಂಥಗಳಿಗೆ ವಿರೋಧವಾಗಿ ಜ್ಞಾನಾಂಜನವೆಂಬ ಒಂದು ಪುಸ್ತಕವನ್ನು ಬರೆದನು. ಆದರೂ

ಕಾರಣಾಂತರದಿಂದ ಅದು ಪ್ರಸಿದ್ಧಿಗೆ ಬರಲಿಲ್ಲ ಈ ಗ್ರಂಥವು ೧೮೩೮ ರಲ್ಲಿ ಕಲ್ಕತ್ತೆಯಲ್ಲಿ ಮುದ್ರಿತವಾಯಿತು. ಇದು ಯಾವಗ್ರಂಥಗಳನ್ನು ಖಂಡಿಸುವುದಕ್ಕಾಗಿ ಬರೆಯಲ್ಪಟ್ಟಿತೋ ಆ ಗ್ರಂಥಗಳು ನಮಗೆ ಸಿಕ್ಕದೆ ಹೋದುದರಿಂದ ಆ ವಿಷಯವನ್ನು ಬಿಟ್ಟು ಕಥಾಭಾಗಕ್ಕೆ ಬರೋಣ.

ರಾಮಮೋಹನನು ಹದಿಮೂರು ವರ್ಷಗಳತನಕ ಸರಕಾರದ ಉದ್ಯೋಗದಲ್ಲಿದ್ದನು. ಜಂಗ್‍ಪುರ, ಭಾಗಲ್‍ಪುರ, ರಾಂಗಡ ಮೊದಲಾದ ಡಿಸ್ಟ್ರಿಕ್ಟುಗಳಲ್ಲಿ ಶಿರಸ್ತೇದಾರನಾಗಿ ಹತ್ತು ಸಂವತ್ಸರಗಳು ಕೆಲಸಮಾಡಿ, ಜನರೆಲ್ಲರಿಗೂ ಹಿತನೆಂದು ಹೆಸರು ಪಡೆದನು. ಆದರೆ ಈ ಮಹಾತ್ಮನು ಸಾಮಾನ್ಯರಂತೆ ಎಲ್ಲಿಯೋ ಹೊಟ್ಟೆ ಹೊರೆದುಕೊಂಡು, ನಾಮರೂಪಗಳಿಲ್ಲದೆ ನಶಿಸುವುದಕ್ಕಾಗಿ ಜನ್ಮಿಸಿದವನಲ್ಲ. ಆದುದರಿಂದ ಮುಂದೆ ತಾನು ಮಾಡಲಿಕ್ಕೆ ಸಂಕಲ್ಪಿಸಿರುವ ದುರ್ಘಟಕಾರ್ಯಗಳಿಗೆ ಉದ್ಯೋಗದಲ್ಲಿದ್ದಾಗ ಸಿಕ್ಕುವ ಸ್ವಲ್ಪ ವೇಳೆಯು ಸಾಕಾಗುವುದಿಲ್ಲವೆಂದು ತಿಳಿದು, ತನ್ನ ಉದ್ಯೋಗವನ್ನು ಬಿಟ್ಟು, ಹೆಚ್ಚುಕಾಲ ಕೆಲಸಮಾಡಿ ಕಾರ್ಯಸಾಧನೆ ಮಾಡಬೇಕೆಂದು ನಿಶ್ಚಯಿಸಿ, 1813 ರಲ್ಲಿ ತನ್ನ ಅಧಿಕಾರದಿಂದ ನಿವೃತ್ತನಾದನು.

ಇದುವರಿಗೆ ಉದ್ಯೋಗದಲ್ಲಿದ್ದು ಕೆಲಸಮಾಡಿದುದರಿಂದ ರಾಮಮೋಹನನು ತಾನು ಮುಂದೆ ಮಾಡಲುದ್ದೇಶಿಸಿದ ಕಾರ್ಯಗಳಿಗೆ ಅಗತ್ಯವಾದ ವಿದ್ಯೆ, ಜ್ಞಾನ, ದ್ರವ್ಯಸಾಧನೆ ಇವುಗಳನ್ನು ಸಂಪಾದಿಸಿದುದರಿಂದ ಇದೂ ಒಂದು ಲಾಭಹೇತುವೆಂತಲೇ ಹೇಳಬಹುದು. ಅಸೂಯಾಪರರಾದ ಕೆಲವರು ಈತನು ಅನ್ಯಾಯಮಾರ್ಗಗಳಿಂದ ಹಣವನ್ನು ಸಂಪಾದಿಸಿದನೆಂತಲೂ, ಇಲ್ಲದಿದ್ದರೆ ಅಷ್ಟು ಸ್ವಲ್ಪಕಾಲದಲ್ಲಿ ಹೆಚ್ಚು ಹಣವನ್ನು ಗಳಿಸುವುದಕ್ಕೆ ಅವಕಾಶವಿಲ್ಲವೆಂತಲೂ ಹೇಳುವರು. ಆದರೂ ಅದಕ್ಕೆ ತಕ್ಕ ಆಧಾರಗಳು ಯಾವುವೂ ಕಾಣಬಂದಿಲ್ಲ. ಮಿಸ್ಟರ್ ಲೀಮರ್‍ರೆಡ್ ಎಂಬುವರು ಬರದ ಬ್ರಹ್ಮಸಮಾಜದ ಚರಿತ್ರೆಯಲ್ಲಿ ಆ ಕಾಲದಲ್ಲಿ ನಿಯತವಾಗಿದ್ದ ವೇತನಗಳಲ್ಲದೆ ಕೆಲವು ಸಂದರ್ಭಗಳಲ್ಲಿ ನ್ಯಾಯಮಾರ್ಗದಿಂದ ಸುಂಕಗಳು ಬರುತ್ತಿದ್ದುವೆಂತಲೂ, ಹಾಗೆ ಸುಂಕಗಳನ್ನು ಪಡೆಯುವದು ತಪ್ಪಲ್ಲವೆಂದು ಎಣಿಸಲ್ಪಟ್ಟದ್ದುದರಿಂದ ಆಗಿನ ಅಧಿಕಾರಿಗಳು ಸುದಾ ಅಂತವುಗಳನ್ನು ಕೊಡಿಸಲು ಸಹಾಯಕರಾಗಿದ್ದರೆಂತಲೂ ಬರೆಯಲ್ಪಟ್ಟಿರುವುದರಿಂದ ಈ ಆಧಾರದಮೇಲೆ ಆತನು ಅಧರ್ಮಮಾರ್ಗದಲ್ಲಿ ದ್ರವ್ಯಸಂಪಾದನೆ ಮಾಡಿದನೆಂಬ ಅಪಕೀರ್ತಿಗೆ ಗುರಿಯಾಗಲಾಗನೆಂದು ನಾವು ಹೇಳಬಹುದು.

1793 ರಲ್ಲಿ ಲಾರ್ಡ್ ಕಾರನ್ವಾಲಿಸನು ವೈಸರಾಯಿಯಾಗಿದ್ದಾಗ ಜಮೀನ್‍ದಾರರಿಗೆ ಶಾಶ್ವತವಾದ ಪಟ್ಟೆಗಳನ್ನು ಕೊಡಲು ಆಲೋಚನೆಗಳು ನಡೆದುವು. ಒಬ್ಬೊಬ್ಬ ಮಂಡಲಾಧಿಪತಿಗೂ ಸ್ವಲ್ಪಸ್ವಲ್ಪ ಭೂಭಾಗಗಳು ನಿರ್ಣಯಿಸಲ್ಪಟ್ಟುವು. ಆಗ ರಾಮಮೋಹನನು ಡಿಗ್ಬಿಯವರ ಬಳಿ ಇದ್ದು, ಆತನಿಗೆ ಸಂತೋಷಕರವಾಗಿ ಕೆಲಸ ಮಾಡಿದುದಲ್ಲದೆ, ಉಪಕಾರಮಾಡಲಿಕ್ಕೆ ಅವಕಾಶ ದೊರೆತಾಗ ಪ್ರಜಾರಂಜಕಗಳಾದ ಕೆಲಸಗಳನ್ನು ಮಾಡಿ ಕೀರ್ತಿ

ಪಡೆದನು. ಈ ಕಾರಣದಿಂದಲೆ ಡಿಗ್ಬಿಯವರು ಯಾವ ಡಿಸ್ಟ್ರಿಕ್ಟಿಗೆ ವರ್ಗವಾಗಿಹೋದರೂ ಸಾಧ್ಯವಾದ ಮಟ್ಟಿಗೆ ಪ್ರಯತ್ನಿಸಿ, ರಾಮಮೋಹನನನ್ನೇ ತಮ್ಮ ಬಳಿಗೆ ಕರೆಯಿಸಿಕೊಳ್ಳುತ್ತಿದ್ದರು. ಈತನು ಹೊಸಮಂಡಲಕ್ಕೆ ಪ್ರಯಾಣಮಾಡುವಾಗ ಮೊದಲಿದ್ದ ಸ್ಥಳದ ಜನರೆಲ್ಲ ಬಹಳವಾಗಿ ಚಿಂತೆಗೊಂಡು, ಆತನ ಉಪಕಾರದ ಕೃತಜ್ಞತೆಗಾಗಿ ಅವನನ್ನು ವಂದಿಸುತ್ತಾ, 'ನಮಗೆ ಇಂತಹ ದಣಿ ಸಿಕ್ಕಲಾರನು' ಎಂದು ಹೇಳಿಕೊಳ್ಳುತ್ತಿದ್ದರು.

ಇದೂ ಅಲ್ಲದೆ ರಾಮಮೋಹನನಮೇಲೆ ಮತ್ತೊಂದು ದೋಷವನ್ನು ಹೊರಿಸಿದ್ದರು. ಇವನು ವಿಗ್ರಹಾರಾಧಕರಲ್ಲಿಯೂ, ಪೂರ್ವಾಚಾರ ಪರಾಯಣರಲ್ಲಿಯೂ ವಿರೋಧಿಸುತಿದ್ದುದಲ್ಲದೆ, ದ್ವೇಷದಿಂದ ಕಲಹಕ್ಕೆ ಕಾಲುಕೆರೆಯುತ್ತಿದ್ದನೆಂದು ಹೇಳುತ್ತಿದ್ದರು. ಆದರೆ ತಮ್ಮ ಇಷ್ಟಕ್ಕೆ ವಿರೋಧವಾದ ಅಂಶಗಳಿಗೆ ಅನೇಕ ಆಧಾರಗಳನ್ನು ತೋರಿಸಿ ಹೇಳುವ ಪ್ರತಿಕಕ್ಷಿಗಳು ಇಂತಹ ದೋಷಾರೋಪಣೆ ಮಾಡುತ್ತಿರುವುದು ಏನೂ ಆಶ್ಚರ್ಯಕರವಲ್ಲವು.

ಈತನು ಉದ್ಯೋಗವನ್ನು ಬಿಟ್ಟು, ತನ್ನ ಸ್ಥಳಕ್ಕೆ ಸೇರಿ, ಮತವಿಷಯವಾದ ಉಪನ್ಯಾಸಗಳನ್ನು ಮಾಡುತ್ತ, ಪೂರ್ವಾಚಾರಗಳನ್ನು ಮೀರದೆ ನಡೆಸುವವರಿಗೆ ಶತ್ರುವಾಗಿ ಇರುವ ಕಾಲದಲ್ಲಿಯೇ ಇವನ ಹಿರಿಯಮಗನಾದ ರಾಧಾಪ್ರಸಾದನಿಗೆ ವಿವಾಹವು ತಟಸ್ಥಿಸಿತು. ಈ ಶುಭಕಾರ್ಯಕ್ಕೆ ವಿಘ್ನವನ್ನಾಚರಿಸಬೇಕೆಂದು ಇವನ ವಿರೋಧಿಗಳಲ್ಲಿ ಕೆಲವರು ಯತ್ನಿಸಿದರು. ಆದರೆ ಅವುಗಳೊಂದೂ ಸಫಲವಾಗಲಿಲ್ಲ. ಹುಗ್ಲಿ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಗೃಹಸ್ಥನ ಮಗಳನ್ನು ಇವನ ಮಗನಿಗೆ ಕೊಟ್ಟು ಮದುವೆ ಮಾಡಿದರು.

ಮಗನ ಮದುವೆಯಾದಮೇಲೆ ರಾಮಮೋಹನನಿಗೆ ಕೆಲವು ತೊಂದರೆಗಳು ಸಂಭವಿಸಿದುವು. ಶಾಸ್ತ್ರಜ್ಞಾನದಿಂದ ಕೂಡಿದ ಇವನ ವಾದಗಳಿಗೆ ಶಾಸ್ತ್ರಸಮ್ಮತವಾದ ಉತ್ತರವನ್ನು ಕೊಡಲಾರದೆ ತಮ್ಮ ಪಕ್ಷವು ಸೋತುಹೋಗುತ್ತ ಬಂದುದರಮೇಲೆ ಕೆಲವರು ದುರಾತ್ಮರು ಈರ್ಷ್ಯಾಸೂಯೆಗಳನ್ನೇ ಮುಖ್ಯವಾಗಿ ಮಾಡಿಕೊಂಡು, ಒಂದು ಗುಂಪಾಗಿ ಸೇರಿ ಕೃಷ್ಣನಗರದ ಬಳಿಯ ರಾಮನಗರದ ನಿವಾಸಿಯಾದ ರಾಂಜೈಭಟ್ ಚಾಲನೆಂಬವನ ನಾಯಕತ್ವದಿಂದ ರಾಮಮೋಹನನು ಎಲ್ಲಿ ಕಾಣಿಸಿದರೆ ಅಲ್ಲೆಲ್ಲ ಅವನನ್ನು ಬೈಯುತ್ತಾ ಅವನ ಮನೆಯ ಸುತ್ತಲೂ ಸೇರಿ ಕೇಕೇ ಹಾಕುತ್ತ, ಎಲುಬು ಮುಂತಾದ ಹೇಸಿಗೆಯ ವಸ್ತುಗಳನ್ನು ಚೆಲ್ಲುತ್ತ, ಅವನ ಮನಸ್ಸಿಗೆ ಕಳವಳವನ್ನುಂಟುಮಾಡುತ್ತಾ ಬಂದರು. ಆದರೆ ಸತ್ಯವೇ ಜಯವೆಂದು ನಂಬಿ, ತನ್ನ ಉದ್ದೇಶವನ್ನು ಇಷ್ಟುಮಾತ್ರದಿಂದಲೇ ಬಿಟ್ಟುಬಿಡುವ ಸ್ವಭಾವವು ಈ ಕಥಾನಾಯಕನಲ್ಲಿಲ್ಲದುದರಿಂದ, ಕಷ್ಟಗಳು ಎಷ್ಟುವಿಧಗಳಿಂದ ತೊಂದರೆಪಡಿಸಿದರೂ ಅವುಗಳನ್ನೆಲ್ಲ ಸಹಿಸಿಕೊಂಡು, ಇದು ಏನೆಂದು ಒಂದುಸಲವಾದರೂ ಅವರನ್ನು ನಿಂದಿಸದೆ ಸುಮ್ಮನಿದ್ದನು. ಆನೀಜರು ಕೆಲವು ದಿನಗಳತನಕ ಹೀಗೆ ಮಾಡಿಮಾಡಿ, ಬೇಸತ್ತು ಕೊನೆಗೆ ತಮಗೆ ತಾವೇ ಸುಮ್ಮನಾದರು.

ಈ ಬಾಧೆಯು ಸ್ವಲ್ಪಮಟ್ಟಿಗೆ ಶಾಂತವಾದಕೂಡಲೇ ತನ್ನ ಮನೆಯಲ್ಲಿ ಪೂರ್ವಮತಾಚಾರವನ್ನೇ ಗಟ್ಟಿಯಾಗಿ ಹಿಡಿದಿದ್ದ ತಮ್ಮ ತಾಯಿಯ ತೊಂದರೆಯು ಹೆಚ್ಚಾಯಿತು. ಪ್ರತಿದಿನವೂ ತನ್ನ ಉಪನ್ಯಾಸಗಳಿಂದ ಉಂಟಾಗುತ್ತಿದ್ದ ವಿರೋಧಭಾವಗಳಿಗೆ ಜತೆಯಾಗಿ, ವಿರೋಧಗಳ ಹೇಳಿಕೆಗಳು ಇವರ ತಾಯಿಯ ಅಸೂಯೆಯನ್ನು ಹೆಚ್ಚಿಸಿದುವು. ತಾರಣೀದೇವಿಯು ಪ್ರತಿಪಕ್ಷದವರ ಬೋಧನೆಗಳಿಗೊಳಗಾಗಿ, ತಮ್ಮ ಕುಲಾಚಾರಗಳಿಗೆ ವಿರೋಧವಾಗಿ ನಡೆಯುತ್ತಿರುವ ತನ್ನ ಮಗನನ್ನೂ, ಅವನ ಹೆಂಡತಿ ಮಕ್ಕಳನ್ನೂ, ಮನೆಯಿಂದ ಹೊರಡಿಸಿಬಿಡಬೇಕೆಂದು ನಿಶ್ಚಯಿಸಿ, ಒಂದು ದಿನ ಮಗನಿಗೆ ಆಸಂಗತಿಯನ್ನು ಸ್ಪಷ್ಟವಾಗಿ ಹೇಳಿಬಿಟ್ಟಳು. ಪಾಪ! ಈತನು ಪ್ರೇಮಲತೆಯನ್ನು ಒಂದೇಸಾರಿಗೆ ಕೊಯ್ದು ಬಿಡಲಿಕ್ಕೆ ಮನಸ್ಸುಬಾರದೆ, ನೆರೆಯಲ್ಲಿಯೇ ಒಂದು ಮನೆಮಾಡಿಕೊಂಡು, ತಾಯಿ ಮತ್ತು ಸಹೋದರಿಯರ ಸಮೀಪದಲ್ಲಿಯೇ ಇರಬೇಕೆಂದು ಯತ್ನಿಸಿದನು. ಆದರೆ ಆ ಊರಿನವರು ಅವನ ತಾಯಿಗೆ ಬೋಧಿಸಿ, ಅವನನ್ನು ಆ ಊರಿನಲ್ಲಿಯೇ ಇರಕೂಡದೆಂದು ಹೇಳಿಸಿದರು. ಇವನು ಅಲ್ಲಿಯೇ ಇರಲು ತಕ್ಕವ್ಯವಹಾರಗಳನ್ನು ನಡಿಸಿ, ಜಯಿಸಬಲ್ಲವನಾಗಿದ್ದರೂ, ವಿವಾದಮಾಡುವುದಕ್ಕೆ ಮನಸ್ಸಿಲ್ಲದೆ ತನ್ನ ಕುಟುಂಬದೊಡನೆ ಲಾಂಗೋಲ'ಪಾಡಾದಿಂದ ಹೊರಟು, ಸಮೀಪದಲ್ಲಿರುವ ರಘುನಾಥಪುರವೆಂಬ ಗ್ರಾಮವನ್ನು ಸೇರಿ, ಆ ಊರಹೊರಗಿನ ಸ್ಮಶಾನದ ಹತ್ತಿರ ಒಂದು ಸಣ್ಣ ಗುಡಿಸಲು ಕಟ್ಟಿಕೊಂಡು, ಅದರ ಎದುರಿಗೆ ಒಂದು ಜಗತಿಯ ಕಟ್ಟೆಯನ್ನು ಕಟ್ಟಿ, ಅದಕ್ಕೆ ಒಂದು ಚಪ್ಪರವನ್ನು ಹಾಕಿ, ಅದರ ಸುತ್ತಲೂ ಸುಂದರವಾದ ಹೂವಿನ ತೋಟವನ್ನು ಬೆಳಸಿ ಮನೋಹರವಾದ ಬಳ್ಳಿಗಳನ್ನು ಹಬ್ಬಿಸಿ, ಒಳಗಡೆ 'ಓಂ ತತ್‌ಸತ್' 'ಏಕಮೇವಾ ದ್ವಿತೀಯಂ' ಮೊದಲಾದ ಮಹಾವಾಕ್ಯಗಳನ್ನು ಚಿತ್ರಿಸಿದ ಪಟಗಳಿಂದ ಅಲಂಕರಿಸಿ, ಆ ಸ್ಥಳವನ್ನೇ ತನ್ನ ಉಪಾಸನಾಗೃಹವನ್ನಾಗಿ ಮಾಡಿಕೊಂಡು ಅಲ್ಲಿ ಕೆಲವುಕಾಲ ವಾಸಮಾಡುತ್ತಿದ್ದನು.

ಈತನು ಮಸಣದ ಹತ್ತಿರ ವಾಸಮಾಡಿಕೊಂಡಿದ್ದುದರಿಂದ ಜನರು ಯಾವ ಅಭಿಪ್ರಾಯವುಳ್ಳವರಾಗಿದ್ದರೋ ತಿಳಿಯದು. ಆದರೂ ಈ ಕಾರ್ಯವು ಆತನ ಧೈರ್ಯಸ್ಥೈರ್ಯಗಳಿಗೆ ಒಂದು ಸಾಕ್ಷ್ಯವಾಗಿದೆ.

ಈ ಸ್ಥಳಕ್ಕೆ ಬಂದಮೇಲೆ ಸುದಾ ಈತನು ಆಗಾಗ್ಗೆ ಮುರಷದಾಬಾದ್ ಪಟ್ಟಣಕ್ಕೆ ಹೋಗಿ ಅಲ್ಲಿ ಕೆಲವು ದಿನಗಳಿದ್ದು ಉಪನ್ಯಾಸಗಳನ್ನು ಕೊಡುತ್ತಲಿದ್ದನು. ಆಗಲೇ "ತೋಹಫತುಲ' ಮೌಹದೀಕ" ಎಂಬ ಹೆಸರಿನಿಂದ ಫಾರಸಿಭಾಷೆಯಲ್ಲಿ ಒಂದು ಮತಗ್ರಂಥವನ್ನು ಬರೆದನು. ಅದರ ಉಪೋದ್ಘಾತವು ಆರಬ್ಬೀ ಭಾಷೆಯಲ್ಲಿ ಬರೆಯಲ್ಪಟ್ಟಿತು. ಈ ಗ್ರಂಥವು ಮುದ್ರಿಸಲ್ಪಡದಿದ್ದರೂ ಮೌಲ್ವೀ ಅಬೀದುಲ್ಲಾ ಎಂಬ ಪಂಡಿತನು ಕಲ್ಕತ್ತೆಯಲ್ಲಿ ಇದನ್ನು ಇಂಗ್ಲೀಷ್ ಭಾಷೆಗೆ ಪರಿವರ್ತಿಸಿದನೆಂದು ಹೇಳುವರು. ನಮಗೆ ಈ ಗ್ರಂಥಗಳು ಯಾವುವೂ ದೊರೆತಿಲ್ಲವು.

ದುರುಳರ ಬಿರುನುಡಿಗಂಜದೆ|
ಪರನೆರೆತನ್ನಯಚಿತ್ತಕೊಪ್ಪಿದುದನಾಚರಿಸಲ್||
ಪರಧೈರ್ಯರ್ಮಾಂತು ತೊಡಗುವ |
ನರನಿದಿರೊಳ್ನಿಲ್ಲಲಾರವೆಡರುಗಳೊಂದುಂ ||

---

# ಮೂರನೆಯ ಪ್ರಕರಣ.

ರಾಮಮೋಹನರಾಯನು 1815 ರಲ್ಲಿ ಇವನ ನಾಲ್ವತ್ತನೆಯ ವಯಸ್ಸಿನಲ್ಲಿ ತನ್ನ ವಾಸಸ್ಥಳವನ್ನು ಕಲ್ಕತ್ತೆಗೆ ಬದಲಾಯಿಸಿದನು. ಇದಕ್ಕೆ ಮುಂಚೆ ಅವನು ಮಾಡುತ್ತಿದ್ದ ಸಂಸ್ಕರಣಗಳು ಅವನ ಉದ್ಯೋಗದಶೆಯಲ್ಲಿದ್ದುದರಿಂದ ಅವನಿಗೆ ಸಾಕಾದಷ್ಟು ಅವಕಾಶವಿಲ್ಲದಕಾರಣ ಪ್ರಕಾಶಿಸದೆ ಇದ್ದುವು. ಈಗ ಆ ಬಂಧಗಳಿಂದ ವಿಮುಕ್ತನಾಗಿ ತನ್ನ ಜೀವಿತಕಾಲದಲ್ಲಿ ಪ್ರತಿ ನಿಮಿಷವನ್ನೂ, ದ್ರವ್ಯವನ್ನೂ, ದೇಹವನ್ನೂ, ದೇಶೋದ್ಧರಣೆಗಾಗಿಯೇ ಉಪಯೋಗಿಸುವುದರಲ್ಲಿ ಬದ್ಧಕಂಕಣನಾದನು ; ಆದುದರಿಂದ ಇವನ ಇತಿಹಾಸವನ್ನು ಮಹಾತ್ಮರ ಜೀವಿತಗಳಲ್ಲಿ ಒಂದನ್ನಾಗಿ ಭಾವಿಸತಕ್ಕಂತೆ ಅವಕ್ಕೆ ಪ್ರಾಶಸ್ತ್ಯವನ್ನುಂಟುಮಾಡಿದ ಸತ್ಕಾರ್ಯಗಳ ಪೂರ್ಣಾಚರಣೆಗೆ ಇದೇ ಪ್ರಾರಂಭವೆನ್ನಬಹುದು.

ಈ ಗ್ರಂಥದ ಪ್ರಾರಂಭದಲ್ಲಿ ರಾಮಮೋಹನನ ಜನ್ಮಕಾಲದಲ್ಲಿ ಈ ಹಿಂದೂ ದೇಶದ ಸ್ಥಿತಿಯು ಹೇಗಿದ್ದಿತೆಂಬುದನ್ನು ಸಂಕ್ಷೇಪವಾಗಿ ತಿಳಿಸಿರುವೆವು. ಈಗ ರಾಮಮೋಹನನು ಕಲ್ಕತ್ತೆಯಲ್ಲಿ ಮನೆಮಾಡಿಕೊಂಡಿದ್ದಾಗ ಇಲ್ಲಿಯ ಸಾಮಾಜಿಕ ಸ್ಥಿತಿಯು ಹೇಗಿದ್ದಿತೆಂಬುದನ್ನು ಅವನ ಶಿಷ್ಯನೊಬ್ಬನಿಂದ ಪ್ರಚುರಿಸಲ್ಪಡುತ್ತಿದ್ದ 1865 ನೇ ಇಸವಿಯ ತತ್ವಬೋಧಿನಿಯೆಂಬ ಮಾಸಪತ್ರದ ನವೆಂಬರು ಸಂಚಿಕೆಯಲ್ಲಿ ಬರೆದ ಈ ಕೆಳಗಿನ ಅಂಶಗಳಿಂದ ತಿಳಿಯಬಹುದು.

“ ರಾಮಮೋಹನನು ಕಲ್ಕತ್ತೆಗೆ ಬಂದಾಗ ಬಂಗಾಳರಾಜ್ಯದಲ್ಲೆಲ್ಲ ಮೂರ್ಖತ್ವವೆಂಬ ಗಾಢಾಂಧಕಾರವು ಕವಿದಿತ್ತು ; ಎಲ್ಲಿ ನೋಡಿದರೂ ವಿಗ್ರಹಾರಾಧನೆಯು ಪ್ರಬಲಿಸಿದ್ದಿತು ; ಪ್ರಜೆಗಳು ವೇದಗಳನ್ನೂ, ಕರ್ಮಕಾಂಡವನ್ನೂ, ಉಪನಿಷತ್ತುಗಳನ್ನೂ, ಬ್ರಹ್ಮಜ್ಞಾನದಲ್ಲಿ ಆಸಕ್ತಿಯನ್ನೂ ಬಿಟ್ಟಿದ್ದರು ; ದುರ್ಗೆಯ ವಿಗ್ರಹಗಳಿದಿರಿಗೆ ಮೇಕೆಗಳನ್ನು ಬಲಿಕೊಡುವುದೂ, ಜಾತ್ರೆಗಳನ್ನು ಮಾಡಿ ಬಂಡಾರವನ್ನೆರಚುವುದೂ, ತಮ್ಮ ಪುಣ್ಯಸಾಧನಗಳೆಂದು ತಿಳಿಯುತ್ತಿದ್ದರು. ತೀರ್ಥಗಳಲ್ಲಿ ಸ್ನಾನ ಮಾಡುವುದೂ, ಸೋಂಬೇರಿಗಳಿಗೆ ದಾನ ಮಾಡುವುದೂ, ವ್ರತೋಪವಾಸಗಳನ್ನಾಚರಿಸುವುದೂ, ತಮ್ಮ ಕಾಮ್ಯಾರ್ಥಸಿದ್ಧಿಗೂ, ಮೋಕ್ಷಪ್ರಾಪ್ತಿಗೂ ಸಾಧನಗಳೆಂದು ನಂಬುತ್ತಿದ್ದರು. ಅನ್ನಪಾನಗಳಲ್ಲಿ ಎಷ್ಟು ಮಿತದಿಂ

ದಿದ್ದರೆ ಅಷ್ಟು ಪುಣ್ಯವೆಂತಲೂ, ಬದುಕಿರುವ ತನಕ ಸ್ವಂತವಾಗಿ ಅಡಿಗೆ ಮಾಡಿಕೊಳ್ಳುವವರಿಗೆ ಮತ್ತಷ್ಟು ಶ್ರೇಷ್ಠತ್ವ ಬರುವುದೆಂತಲೂ ತಿಳಿದಿದ್ದರು. ಇಂಗ್ಲೀಷರ ಬಳಿ ಉದ್ಯೋಗ ವೃತ್ತಿಯಲ್ಲಿರುವ ಬ್ರಾಹ್ಮಣರು ತಮ್ಮ ಮನೆಗೆ ಬಂದ ಒಡನೆಯೇ ಆ ಉಡುಪುಗಳನ್ನೊಂದು ಕಡೆಯಲ್ಲಿರಿಸಿ, ಸ್ನಾನ ಪೂಜಾದಿಗಳನ್ನು ಮಾಡದಿದ್ದರೆ ಪಾಪವಿಮುಕ್ತರಾಗಿ ಇತರರ ಸಂಪರ್ಕದಲ್ಲಿರಲು ಅನರ್ಹರೆಂದು ಭಾವಿಸಲ್ಪಡುತ್ತಿದ್ದರು. ಉದ್ಯೋಗಸ್ಥರಲ್ಲದೆ ಕುಕ್ಷಿಂಬರರಾದ ಬ್ರಾಹ್ಮಣರು ಉದ್ಯೋಗದಲ್ಲಿರುವ ದೊಡ್ಡ ಮನುಷ್ಯರ ಮನೆಗಳಲ್ಲಿ ಯಾವಾಗಲು ಹವ್ಯ ಕವ್ಯಗಳಲ್ಲಿ ತಮಗೆ ಹಣವನ್ನು ಕೊಡುವ ದಾತನಿಗೆ ಪುಣ್ಯಬರುವುದೆಂದು ಹೇಳಿ, ಹಣ ಸಂಪಾದಿಸುತ್ತಾ ಮುಖಸ್ತುತಿಯನ್ನು ಮಾಡುತ್ತಾ, ತಮಗೆ ದಾನಮಾಡಿದವರು ಬಲಿಕರ್ಣರಿಗಿಂತಲೂ ಉದಾರಿಗಳೆಂದು ಹೊಗಳುತ್ತಾ, ತಾವು ಬೇಡಿದುದನ್ನು ಕೊಡದ ಉದ್ಯೋಗಸ್ಥರನ್ನು ಪ್ರತ್ಯಕ್ಷವಾಗಿ ಕೆಟ್ಟ ಮಾತುಗಳಿಂದ ಬೈಯುತ್ತಾ, ಭ್ರೂಣಹತ್ಯಾದಿ ಪಾಪಗಳನ್ನು ಮಾಡಿದ ಕ್ರೂರಸ್ತ್ರೀಯರಾದರೂ ತಮಗೆ ಸ್ವಲ್ಪಹಣ ಕೊಟ್ಟಲ್ಲಿ ತುಂಬಾ ಪರಿಶುದ್ಧೆಯರೆಂದು ಹೇಳುತ್ತಾ, ವರ್ತಮಾನ ಪತ್ರಿಕೆಗಳಿಲ್ಲವೆಂಬ ಲೋಪಕ್ಕೆ ಅವಕಾಶವಲ್ಲದಂತೆ ಇಲ್ಲಿಯ ಮಾತುಗಳನ್ನಲ್ಲಿಯೂ, ಅಲ್ಲಿಯ ಮಾತುಗಳನ್ನಿಲ್ಲಿಯೂ, ಹೇಳಿ ಜನಗಳಲ್ಲಿ ಕಲಹಗಳನ್ನು ಹೆಚ್ಚಿಸುತ್ತಾ ಇದ್ದರು. ಇಂತವರ ಕೆಟ್ಟನಡತೆಗಳನ್ನು ಚೆನ್ನಾಗಿ ತಿಳಿದ ಬುದ್ಧಿವಂತರು ಸುದಾ ತಮ್ಮ ಕೀರ್ತಿ ಪ್ರತಿಷ್ಠೆಗಳಿಗೆ ಲೋಪವಾಗುವಂತೆ ಅವರು ಎಲ್ಲಿ ಏನು ಹೇಳುವರೋ ಎಂದು ಹೆದರಿ, ಈ ಅಪಾತ್ರರಿಗೆ ದಾನಮಾಡುತ್ತಲೇ ಇರುವರು. ಇವರಲ್ಲದೆ ಗುರುಗಳೆಂಬ ಮತ್ತೊಂದು ಬಗೆಯ ಜನರಿದ್ದರು. ಅವರ ಸ್ಥಿತಿಯು ಮತ್ತಷ್ಟು ನಿಂದ್ಯವಾಗಿದ್ದಿತು. ಮೋಕ್ಷಮಾರ್ಗವನ್ನುಪದೇಶಿಸುವೆವೆಂಬ ನೆವದಿಂದ ಪ್ರಜೆಗಳ ಧನವನ್ನೆಲ್ಲ ಅಪಹರಿಸಿ, ಅದರಿಂದ ತಾವು ಆನೆ, ಕುದುರೆ, ಪಲ್ಲಕ್ಕಿಗಳನ್ನು ಸಂಪಾದಿಸಿ, ತಮ್ಮ ಪಾದಗಳನ್ನು ತೊಳೆದ ಕೊಳೆ ನೀರನ್ನು ಕುಡಿದರೆ ಪಾಪ ಪರಿಹಾರವಾಗಿ ಮುಕ್ತಿಯುಂಟಾಗುವುದೆಂದು ಹೇಳಿ ಕುಡಿಸುತ್ತಾ, ತಮ್ಮ ಪಾದಧೂಳಿಯನ್ನವರು ಕಣ್ಣುಗಳಿಗೆ ಒತ್ತಿಕೊಳ್ಳುವಂತೆ ಮಾಡಿ ದೇಶವನ್ನೆಲ್ಲ ಸುಲಿಯುತ್ತಿದ್ದರು. ಒಂದೆರಡು ನ್ಯಾಯಶಾಸ್ತ್ರಗಳನ್ನೋದಿದ ಮಾತ್ರದಿಂದಲೇ ಪಂಡಿತರೆಂಬ ಬಿರುದಿಗೆ ಅರ್ಹರಾಗುತ್ತಿದ್ದರು. ಇಂತವರಿಗೆ ಗಾಯತ್ರಿ ಎಂಬುದಿಂತದೆಂಬ ಜ್ಞಾನವೇ ಇರುತ್ತಿರಲಿಲ್ಲ. ಭಾಗ್ಯವಂತರು ತಮಗೆ ಅಗತ್ಯವಾದ ಲೆಕ್ಕಪತ್ರಗಳನ್ನು ಬರೆದುಕೊಳ್ಳಲಿಕ್ಕಿಂತ ಹೆಚ್ಚಾಗಿ ವಿದ್ಯಾರ್ಜನೆಯ ವಿಷಯದಲ್ಲಿ ಹೆಚ್ಚಾದ ಕೃಷಿಮಾಡಿದಲ್ಲಿ ಕಾಲವು ವ್ಯರ್ಥವಾಗಿ ಕಳೆದು ಹೋಗುವುದೆಂದು ಭಾವಿಸುತ್ತಿದ್ದರು. ರಾಜಕೀಯ ಭಾಷೆಗಳಾದ ಫಾರಿಷಿಯಲ್ಲಿಯಾಗಲಿ, ಇಂಗ್ಲೀಷಿನಲ್ಲಿಯಾಗಲಿ, ಒಂದೆರಡು ಪುಸ್ತಕಗಳನ್ನೋದಿದರೆ ತುಂಬಾ ಪ್ರಾಜ್ಞರೆಂದು ಎಣಿಸಲ್ಪಡುತ್ತಿದ್ದರು. ಬಂಗಾಳೀ ಭಾಷೆಯಲ್ಲಿ ಉಪಯುಕ್ತವಾದ ಗ್ರಂಥವೊಂದಾದರೂ ಕಾಣಬರಲಿಲ್ಲ. ಎಲ್ಲಿಯಾದರೂ ಒಂದೆರಡು ದೊರೆತರೆ ಕೋಗಿಲೆಯ ಕೂಗಿಗೂ ಗಿಳಿಯನುಡಿಗಳಿಗೂ ಉಲಿಕಿಬೀಳುವ ನಾಯಿಕಾನಾಯಕರ ವಿರಹಗಳೂ, ಹಂಸೆಗಳ ರಾಯಭಾರಗಳೂ, ಪೂರ್ವಕವಿ ರಚಿತಗಳಾದ ಕೆಲವು ಚಂಪುಗ್ರಂಥಗಳು ಮಾತ್ರ ದೊರೆವುವೇ ಹೊರತು,

ಜ್ಞಾನಾಭಿವೃದ್ಧಿಗೆ ಸಾಧಕಗಳಾದ ಸುಲಭಶೈಲಿಯ ವಚನಗ್ರಂಥಗಳು ಒಂದಾದರೂ ಇರಲಿಲ್ಲ. ಯೌವನಸ್ಥರು ಗಾಳಿಯಪಠಗಳನ್ನಾಡಿಸುವುದರಲ್ಲಿಯೂ ಪಾರಿವಾಳಗಳನ್ನು ಹಾರಿಸುವುದರಲ್ಲಿಯೂ ಪದ್ಯಗಳನ್ನು ಕಟ್ಟುವುದರಲ್ಲಿಯೂ, ತಮ್ಮ ಕಾಲಗಳನ್ನು ವಿನಿಯೋಗಿಸುತ್ತಿದ್ದರು. ಹೀಗೆ ಇದ್ದರೂ ಈಗಿನ ನಾಗರಿಕರಲ್ಲಿ ಪ್ರಬಲಿಸಿರುವ ಸ್ವದೇಶ ಪರದೇಶಗಳ ಮದ್ಯಗಳು ಮಾತ್ರ ಆಗಿನ ಕಾಲದಲ್ಲಿ ನಿಷಿದ್ಧಪದಾರ್ಥಗಳಾಗಿ ನೋಡಲ್ಪಡುತ್ತಿದ್ದುವೆಂಬುದು ತುಂಬ ಸಂತೋಷಕರವಾದುದು. ಒಂದಾನೊಂದು ಕಾಲದಲ್ಲಿ ಇಂಗ್ಲಿಷರಿಗೆ ಕೆಲವು ದೊಡ್ಡ ಮನುಷ್ಯರು ಔತನಗಳನ್ನು ಮಾಡಿಸುವಾಗ ಪಶ್ಚಿಮದೇಶದ ನಾಗರಿಕತೆಯನ್ನನುಸರಿಸಿ ಅತಿಥಿಗಳಿಗೆ ಪಾನದ್ರವ್ಯಗಳನ್ನು ತಂದು ಒದಗಿಸಿದರೂ ತಾವುಮಾತ್ರ ಅದನ್ನು ಮುಟ್ಟದೆ ಇದ್ದರು. ''

ಬಂಗಾಳ ರಾಜ್ಯವು ಈ ಸ್ಥಿತಿಯಲ್ಲಿದ್ದಾಗ ರಾಮಮೋಹನನು ಕಲ್ಕತ್ತಾಪಟ್ಟಣವನ್ನು ಸೇರಿ, ‟ಮಾನಿಕ್‌ತಲಾವ್‌ಲೋಯರ್ ಸರ್ಕ್ಯುಲರ್‌ರೋಡ್'' ಎಂಬ ಬೀದಿಯಲ್ಲಿ ಒಂದು ಮನೆಯನ್ನು ಕ್ರಯಕ್ಕೆ ತೆಗೆದುಕೊಂಡು ಅದನ್ನು ಇಂಗ್ಲೀಷರ ಪದ್ಧತಿಯಂತೆ ಅಲಂಕರಿಸಿ ಅಲ್ಲಿ ವಾಸಮಾಡುತ್ತಾ, ಕೆಲವು ಕಾಲದಿಂದಲೂ ತನ್ನ ಮನಸ್ಸಿನಲ್ಲಿದ್ದ ಸ್ವೇಚ್ಛಾವಲಂಬನಾಭಿಲಾಷೆಯುಳ್ಳವನಾಗಿ ದೇಶಸೇವೆಯನ್ನು ಮಾಡಬೇಕೆಂದು ಸಂಕಲ್ಪಿಸಿಕೊಂಡನು. ಹೀಗೆ ಸ್ಥಿರನಾಗಿ ಅಂದಿನಿಂದ ವಿಗ್ರಹಾರಾಧನೆಯು ಅನಾಚಾರವೆಂಬ ಭೇರಿಯನ್ನು ಮೊಳಗಿಸತೊಡಗಿದನು. ಇದರಿಂದ ಕಲ್ಕತೆಯಲ್ಲಿ ಮಾತ್ರವಲ್ಲ. ಇಡೀ ಬಂಗಾಳದೇಶದಲ್ಲೆಲ್ಲ ಒಂದು ಬಗೆಯ ಕಲ್ಲೋಲವು ವ್ಯಾಪಿಸಿತು. ಪಂಡಿತಸಭೆಗಳಲ್ಲಿಯೂ, ಪಾಠಶಾಲೆಗಳಲ್ಲಿಯೂ, ಹಳ್ಳಿಯ ಮನೆಗಳಲ್ಲಿಯೂ, ನಾಲ್ವರು ಗುಂಪುಕೂಡಿದ ಸ್ಥಳಗಳಲ್ಲಿಯೂ ರಾಮಮೋಹನನನ್ನು ಕುರಿತ ಚರ್ಚೆಯೇ ಪ್ರಾರಂಭವಾಗಿ, ಪುರುಷ ಸಭೆಗಳಲ್ಲಿ ಮಾತ್ರವಲ್ಲದೆ, ಮನೆಗಳಲ್ಲಿ ಹೆಂಗಸರ ಸಂಭಾಷಣೆಗಳಲ್ಲಿ ಕೂಡ ಇದೇ ವಿಷಯವು ಹಬ್ಬಿತು. ಆಗ ರಾಮಮೋಹನನ ಅಭಿಪ್ರಾಯಾನುಸಾರಿಗಳಾಗಿ, ಆತನ ಕೆಲಸಕ್ಕೆ ಸಹಾಯಮಾಡತಕ್ಕನರು ಕೆಲವರು ಸಿದ್ಧರಾದರು. ಹಾಗೆ ಮುಂದಾದವರಲ್ಲಿ ರಾಜಾ ಕಾಳೀಶಂಕರಘೋಷಾಲ್, ಪ್ರಸನ್ನಕುಮಾರ ಠಾಕೂರ್, ಗೋಪೀನಾಥ ಮುನಷಿ ಎಂಬುವರು ಮುಖ್ಯರು. ಇವರಲ್ಲದೆ ಇನ್ನೂ ಕೆಲವರು ಪಂಡಿತರಿದ್ದರು. 1812ರಲ್ಲಿ ಜಂಗ್‌ಪುರದಿಂದ ಅನೇಕ ಶಾಸ್ತ್ರಪಾರಂಗತನಾಗಿ, ಬ್ರಹ್ಮಮತಾವಲಂಬಿಯಾಗಿದ್ದ ಹರಿಹರಾನಂದತೀರ್ಥನೆಂಬ ಯೋಗಿಯೊಬ್ಬನು ಇಲ್ಲಿಗೆ ಬಂದು ಸೇರಿದನು. ಆತನು ರಾಮಮೋಹನನಿಗೆ ಜಂಗಪುರದಲ್ಲಿ ಪರಿಚಿತನಾಗಿ ಕ್ರಮಕ್ರಮವಾಗಿ ಇವನ ಅಂತರಂಗಮಿತ್ರನಾದನು. ಬ್ರಹ್ಮಸಮಾಜದಲ್ಲಿ ಮೊದಲು ಆಚಾರ್ಯಪೀಠವನ್ನಲಂಕರಿಸಿ ಪ್ರಸಿದ್ಧಪುರುಷನಾದ ರಾಮಚಂದ್ರವಿದ್ಯಾವಾಗೀಶನು ಇವನ ಸಹೋದರನು. ಉಪನಿಷದರ್ಥಗಳನ್ನು ಚೆನ್ನಾಗಿ ತಿಳಿದ ಶಿವಪ್ರಸಾದನೆಂಬ ಉತ್ತರಹಿಂದುಸ್ಥಾನದ ನಿವಾಸಿಯೂ ಒಬ್ಬನಾಗಿದ್ದನು. ಇವರಲ್ಲದೆ ಇನ್ನೂ ಅನೇಕರು ರಾಮಮೋಹನನ ಶಿಷ್ಯರಾದರು. ಇವನ ವಿನಯಶಾಂತ್ಯಾದಿ ಸದ್ಗುಣಗಳೂ ಸತ್ಯಸ್ವಭಾವವೂ ಅನೇಕ ಜನರನ್ನು ಇವನ ಕಡೆಗೆ ಆಕರ್ಷಿಸುತ್ತಿ

ದ್ದುವು. ಕೆಲವರು ತಮ್ಮ ವ್ಯವಹಾರಗಳಲ್ಲಿ ಆಲೋಚನೆಗಳನ್ನು ಕೇಳಲಿಕ್ಕೆ ಅವನ ಬಳಿಗೆ ಬರುತ್ತಿದ್ದರು. ಆದರೂ ಕೆಲವುದಿನಗಳು ಕಳೆದಮೇಲೆ ವಿಗ್ರಹಾರಾಧನೆಯು ಯುಕ್ತವಾ ದುದೆಂಬ ಪಕ್ಷದವರ ಆರ್ಭಟಗಳಿಗೆ ಅಂಜಿದ ಕೆಲವರು ಇವನ ಪಕ್ಷವನ್ನು ಬಿಟ್ಟುಬಿಟ್ಟರೂ ದ್ವಾರಕಾನಾಥಠಾಕೂರ', ರಾಜಾ ಕಾಳೀಶಂಕರಘೋಷಾಲ', ಗೋಪೀನಾಥಮುನಷಿ ಮೊದ ಲಾದವರು ಈ ಪಕ್ಷವನ್ನು ಬಿಡದೆ ದೃಢಚಿತ್ತರಾಗಿ ಇವನೊಂದಿಗೆ ಕೆಲಸಮಾಡುತ್ತಿದ್ದರು.

ರಾಮಮೋಹನನು ತನ್ನ ಧರ್ಮಪ್ರಚಾರಕ್ಕೆ ನಾಲ್ಕು ಪದ್ಧತಿಗಳನ್ನು ಏರ್ಪಡಿಸಿಕೊ ಳ್ಳುವುದು ಯುಕ್ತವೆಂದು ತಿಳಿದನು. ಅವುಗಳಲ್ಲಿ 1ನೆಯದು ವಾಗ್ರೂಪವಾದ ಬೋಧೆ ಮತ್ತು ವಾದ, 2ನೆಯದು ಪಾಠಶಾಲೆಯ ಸ್ಥಾಪನೆ. 3ನೆಯದು ಮಾಸಪತ್ರಿಕೆಯನ್ನೂ, ಪುಸ್ತಕಗಳನ್ನೂ ಪ್ರಚುರಗೊಳಿಸುವುದು 4ನೆಯದು ಸಮಾಜನಿರ್ಮಾಣ. ಇವುಗಳಲ್ಲಿ ಮೊ ದಲು ಪುಸ್ತಕ ಪ್ರಕಟನೆಯಲ್ಲಿ ಹೆಚ್ಚು ಶ್ರದ್ಧೆಯನ್ನು ವಹಿಸಿ, 1815 ರಲ್ಲಿ ವೇದಾಂತಸೂತ್ರ ಗಳನ್ನು ಬಂಗಾಳೀ ಭಾಷೆಯಲ್ಲಿ ಬರೆದು ಮಾತೃಕೆಯೊಂದಿಗೆ ಪ್ರಚುರಿಸಿದನು. ಈ ಪುಸ್ತಕ ದಲ್ಲಿ ಮೂರುಭಾಗಗಳುಂಟು. ಮೊದಲನೆಯ ಭಾಗದಲ್ಲಿ ಪೀಠಿಕೆಯೂ, ಎರಡನೆಯದರಲ್ಲಿ ಉಪೋದ್ಘಾತವೂ, ಮೂರನೆಯದರಲ್ಲಿ ಭಾಷಾಂತರಮಾಡಲ್ಪಟ್ಟ ಗ್ರಂಥವೂ ಬರೆಯಲ್ಪಟ್ಟು ವು. ಉಪೋದ್ಘಾತದಲ್ಲಿ ಬ್ರಹ್ಮೋಪಾಸಕರಿಗೆ ವಿರೋಧವಾಗಿ ವಾದಿಸುವವರ ಸಂದೇಹಗ ಳನ್ನು ತಿಳಿಸಿ ಅವುಗಳ ಪರಿಹಾರಕ್ಕಾಗಿ ಇದರಡಿ ಕಂಡಂತೆ ಸಮಾಧಾನಗಳನ್ನು ಬರೆದನು.

1. ಪರಮೇಶ್ವರನು ನಿರಾಕಾರನೆಂದು ಭಾವಿಸಿಯೇ ಧ್ಯಾನಮಾಡಬಹುದು.

2. ವಿಗ್ರಹಗಳೂ, ಪಟಗಳೂ ಇವುಗಳೊಂದೂ ಇಲ್ಲದೇನೇ ನಾವು ಆತನನ್ನು ಧ್ಯಾ ನಿಸತಕ್ಕದ್ದು.

3 ಈಶ್ವರಸಾಧನೆಗಾಗಿ ಹಲವುಮಾರ್ಗಗಳುಂಟು, ಆದರೆ ನಮ್ಮ ಅಂತರಾತ್ಮಕ್ಕೆ ಯಾವಮಾರ್ಗವು ಯುಕ್ತವೆಂದು ತೋರುವುದೋ ಅದನ್ನೇ ನಾವು ಅವಲಂಬಿಸತಕ್ಕದ್ದು.

4 ಬ್ರಹ್ಮಜ್ಞಾನಿಗೆ ಯುಕ್ತಾಯುಕ್ತ ವಿವೇಚನಾಶಕ್ತಿಯಿಲ್ಲವೆಂದು ತಿಳಿಯುವುದು ತಪ್ಪಾಗಿಯೂ ಕಲ್ಪಿತವಾಗಿಯೂ ಇರುವುದು.

5 ವಿಗ್ರಹಾರಾಧನೆಯು ಪಾಮರರಿಗೋಸ್ಕರ ಏರ್ಪಟ್ಟುದೆಂದು ಪುರಾಣಗಳಲ್ಲಿ ಯೂ, ತಂತ್ರಗಳಲ್ಲಿಯೂ ಹೇಳಲ್ಪಟ್ಟಿದೆ. ಆದರೆ ಅಂತವರಿಗೆ ಸುದಾ ಕೇವಲ ಈಶ್ವರೋ ಪಾಸನೆಯೇ ಸುಲಭವಾಗಿಯೂ, ಫಲಕಾರಿಯಾಗಿಯೂ, ಇರುವುದು.

6 ನಮ್ಮ ಮತಗ್ರಂಥಗಳನ್ನು ಯಾವಭಾಷೆಯಲ್ಲಿಯಾದರೂ ಬರೆಯಬಹುದು ; ಹೀಗೆ ಮಾಡುವುದರಿಂದ ಯಾವ ದೋಷವೂ ಇಲ್ಲ

ವೇದಾಂತಸೂತ್ರಗಳು ಬಂಗಾಳಿ ಭಾಷೆಯಲ್ಲಿ ಮಾತ್ರವೇ ಇದ್ದಲ್ಲಿ ಅವು ಆಭಾಷೆಯ ನ್ನರಿಯದವರಿಗೆ ದುರವಗಾಹನಗಳಾಗುವುವೆಂದು ಯೋಚಿಸಿ ಹಿಂದೀ ಭಾಷೆಯಲ್ಲಿಯೂ ಈ ಗ್ರಂಥವನ್ನು ಬರೆದನು. ತರುವಾಯ 1818 ರಲ್ಲಿ ಇದನ್ನು ಇಂಗ್ಲಿಷಿನಲ್ಲಿ ಬರೆದನು. ಇದರ ಪೀಠಿಕೆಯಲ್ಲಿ ಹಿಂದೂ ಮತದ ಮೇಲೆ ಹಲವು ದೋಷಾರೋಪಣೆಗಳನ್ನು ಮಾಡುವ

ಪಾಶ್ಚಾತ್ಯರಿಗೆ ಈ ಮತದ ತತ್ವವು ತಿಳಿಯುವುದಕ್ಕಾಗಿಯೂ, ಹಿಂದೂ ಧರ್ಮಗಳನ್ನು ಕೆಡಿಸಲಿಕ್ಕೆ ಏರ್ಪಟ್ಟ ಈಚಿನ ಗ್ರಂಥಗಳೆಲ್ಲವೂ ಪ್ರಾಮಾಣಿಕಗಳಲ್ಲವೆಂದು ತೋರಿಸುವುದಕ್ಕಾಗಿಯೂ ಈಗ ಈ ಗ್ರಂಥವನ್ನು ಇಂಗ್ಲಿಷಿನಲ್ಲಿ ಬರೆದಿರುವೆನೆಂದು ತನ್ನ ಉದ್ದೇಶವನ್ನು ವಿವರಿಸಿದನು.

ವೇದಾಂತ ಸೂತ್ರಗಳನ್ನು ರಚಿಸಿದ ತರುವಾಯ ವ್ಯಾಖ್ಯಾನದೊಂದಿಗೆ ಪ್ರಚುರಿಸಿದ ಆ ಗ್ರಂಥವು ಬಹು ದೊಡ್ಡದಾಗಿದ್ದುದರಿಂದಲೂ ಪಂಡಿತರು ಹೊರತಾಗಿ ಇತರರು ಅದನ್ನು ತಿಳಿಯುವುದು ಕಷ್ಟವಾಗಿದ್ದುದರಿಂದಲೂ, ಅದರಲ್ಲಿನ ವಿಷಯುಗಳನ್ನೆಲ್ಲ ಸಂಗ್ರಹಿಸಿ, ವೇದಾಂತಸಾರವೆಂಬ ಪುಸ್ತಕವನ್ನು ಬರೆದನು. ಇದು ಯಾವ ವರುಷದಲ್ಲಿ ಬರೆಯಲ್ಪಟ್ಟಿತೆಂಬುದು ತಿಳಿಯದು ; ಆದರೂ 1818 ರಲ್ಲಿ ಇದಕ್ಕೆ ಇಂಗ್ಲಿಷ್ ಭಾಷಾಂತರವು ಪ್ರಕಟಿಸಲ್ಪಟ್ಟುದರಿಂದ ವೇದಾಂತ ಸೂತ್ರಗಳನ್ನು ಬರೆದ ಸ್ವಲ್ಪ ದಿನಗಳಲ್ಲಿಯೇ ಇದನ್ನು ಬರೆದಿರಬಹುದೆಂದು ಕಾಣುವುದು. ಈ ಗ್ರಂಥವು ಕ್ರಿಸ್ತಮತ ಬೋಧಕರಿಗೆ ಹೆಚ್ಚಾಗಿ ಹಂಚಲ್ಪಟ್ಟಿತು. ಅವರು ಇದನ್ನೋದಿ ಅತ್ಯಾಶ್ಚರ್ಯಗೊಂಡು ಈ ಗ್ರಂಥಕರ್ತನ ಪ್ರಸಿದ್ಧಿಯನ್ನು ಯೂರೋಪ್ ಖಂಡದಲ್ಲೆಲ್ಲ ಹರಡಿದರು. ಈ ಪುಸ್ತಕದಲ್ಲಿ ಆಸ್ತಿಕ್ಯವನ್ನೂ, ಬ್ರಹ್ಮೋಪಾಸನೆಯನ್ನೂ ಬಹಳವಾಗಿ ಚರ್ಚಿಸಿ, ಅನೇಕ ಕಾರಣಗಳಿಂದ (ಈಶ್ವರನ) ಸಾಕಾರ ಸಿದ್ಧಾಂತವನ್ನು ಖಂಡಿಸಿರುವುದಲ್ಲದೆ ಸಕಲ ವಿಧಗಳಿಂದಲೂ ಬ್ರಹ್ಮಜ್ಞಾನಿಯೇ ಶ್ರೇಷ್ಠನೆಂದು ನಿರೂಪಿಸಿರುವರು. ವೇದಾಂತ ಸೂತ್ರ, ವೇದಾಂತ ಸಾರಗಳು ಪ್ರಜೆಗಳಲ್ಲಿ ವ್ಯಾಪಿಸಿದ ಮೇಲೆ 1818 ರಿಂದ ಕೇನ, ಈಶ, ಕಠ, ಮುಂಡಕ, ಮಾಂಡೂಕ್ಯ, ಛಾಂದೋಗ್ಯಗಳೆಂಬ ಉಪನಿಷತ್ತುಗಳನ್ನು ಬಂಗಾಳಿ ವ್ಯಾಖ್ಯಾನದೊಂದಿಗೆ ಒಂದೊಂದಾಗಿ ಪ್ರಚುರಪಡಿಸಿದನು.

ಮೇಲೆ ಹೇಳಲ್ಪಟ್ಟ ಗ್ರಂಥಗಳೆಲ್ಲವೂ ಕ್ರಮಕ್ರಮವಾಗಿ ಪ್ರಕಟಿಸಲ್ಪಡುತ್ತಾ ಸಾಮಾನ್ಯಜನರಿಂದ ಸುದಾ ಓದಲ್ಪಡುತ್ತಿದ್ದುದನ್ನು ನೋಡಿ ಪೂರ್ವಾಚಾರಪರಾಯಣರಾದವರು ತುಂಬ ಕೋಪಗೊಂಡರು. ಮನುಷ್ಯವರ್ಗದಲ್ಲಿ ಅಗ್ರಗಣ್ಯರಾದ ಬ್ರಾಹ್ಮಣೋತ್ತಮರು ಹೊರತು ಉಳಿದವರು ಮುಟ್ಟಲಿಕ್ಕೆ ಸುದಾ ಅರ್ಹವಲ್ಲದೆ ಇರುವ ಪವಿತ್ರ ಗ್ರಂಥಗಳನ್ನು ಈಗ ಮ್ಲೇಚ್ಛರು ಸುದಾ ಓದುತ್ತಲಿರುವರೆಂತಲೂ, ಮರವಿನಿಂದಲಾದರೂ 'ಓಂ' ಎಂಬ ಶಬ್ದವನ್ನು ಉಚ್ಚರಿಸಿದರೆ ನಾಲಗೆಯನ್ನು ಕೊಯ್ಸಿಕೊಳ್ಳುತ್ತಲಿದ್ದ ಶೂದ್ರರು ಈಗ ಗಾಯತ್ರಿಯ ಮಂತ್ರಾರ್ಥಗಳನ್ನು ಹೇಳತೊಡಗಿದರೆಂತಲೂ ಕೆಲವರು ಅಟ್ಟಹಾಸದಿಂದ ಕೂಗಿಕೊಳ್ಳುತ್ತಾ, ಭಟ್ಟಾಚಾರ್ಯನೆಂಬುವನನ್ನು ಮುಂದುಮಾಡಿಕೊಂಡು, ಘೋರ ಕಲಿಯುಗವು ಪ್ರಾಪ್ತವಾಯಿತೆಂದು ದಂಗೆಯೇಳಲಾರಂಭಿಸಿದರು.

ಇಂತಹ ಕಾಲದಲ್ಲಿ ತಮ್ಮ ಮತವನ್ನು ಕನಸಿನಲ್ಲಿ ಸುದಾ ಸ್ಮರಿಸದೆ ಇದ್ದ ಬಂಗಾಳಾದೇಶೀಯರೆಲ್ಲರೂ ಒಂದೇಸಾರಿ ದೊಂಬಿ ಎದ್ದು ರಾಮಮೋಹನನನ್ನು ಎದುರಿಸುತ್ತಾ ಬಂದರು. ಆಕಾಲದಲ್ಲಿ ಪ್ರಚಾರವಾಗುತ್ತಲಿದ್ದ "ಇಂಡಿಯಾ ಗೆಜೆಟ್"ಎಂಬ ವರ್ತಮಾನಪತ್ರದಲ್ಲಿ ಈತನ ಅಭಿಪ್ರಾಯಗಳನ್ನು ಕುರಿತು ಒಂದು ಲೇಖನವು ಬರೆಯಲ್ಪಟ್ಟಿತು. ಆವ್ಯಾಸದಲ್ಲಿ ಇವನು 'ಹಿಂದು ರಿಫಾರ್ಮರ್ (ಸಂಸ್ಕಾರಕರ್ತ)' ಎಂಬ ಬಿರುದಿ

ನಿಂದ ಸಂಬೋಧಿಸಲ್ಪಟ್ಟನು. ನಾಲ್ಕು ದಿಕ್ಕುಗಳಲ್ಲಿಯೂ ಪ್ರಚಾರದಲ್ಲಿದ್ದ ಈ ಪತ್ರಿಕೆಯನ್ನು ಮದ್ರಾಸ್ ನಿವಾಸಿಯಾದ ಶಂಕರಶಾಸ್ತ್ರಿಯೆಂಬ ಪಂಡಿತನು ಓದಿ, ವೇದಗಳಲ್ಲಿಯೂ ಉಪನಿಷತ್ತುಗಳಲ್ಲಿಯೂ ಹೇಳಲ್ಪಟ್ಟಿರುವ ನಿರಾಕಾರೋಪಾಸನವನ್ನು ನಾವು ಕೂಡ ಅಂಗೀಕರಿಸುವೆವು; ಇವರೂ ಸ್ವಕೃತವಲ್ಲಿ ಈ ವಿಷಯವನ್ನು ಸಂಗ್ರಹಿಸಿ, ಒಂದು ಹೊಸಮತವನ್ನು ಸ್ಥಾಪಿಸುವುದು ನ್ಯಾಯವಲ್ಲವೆಂತಲೂ, ಒಬ್ಬ ರಾಜನ ಬಳಿಗೆ ಕಾರ್ಯಾರ್ಥಿಗಳಾಗಿ ಹೋಗತಕ್ಕವರು ಹಲವು ಸಣ್ಣ ಉದ್ಯೋಗಸ್ಥರಮೂಲಕದಿಂದಲ್ಲದೆ ರಾಜನ ದರುಶನವನ್ನು ಹೊಂದಲಾರರೆಂಬಂತೆ ನಿರ್ಗುಣೋಪಾಸನವನ್ನು ಮಾಡಲಿಕ್ಕೆ ಮೊದಲು ಸಾಕಾರ ರೂಪವಾದ ಬಹುವಿಧ ದೇವತಾರಾಧನೆಯು ಆವಶ್ಯಕರ್ತವ್ಯವೆಂತಲೂ, ಒಂದು ಪತ್ರವನ್ನು ಬರೆದು ಅದೇ ಪತ್ರಿಕೆಯ ಮೂಲಕ ತಿಳಿಸಿದನು. ರಾಮಮೋಹನರಾಯನು ಇದನ್ನು ನೋಡಿ 'ನಾನು ಹೊಸಮತವನ್ನು ಸ್ಥಾಪಿಸಲಿಕ್ಕೆ ಪ್ರಯತ್ನಿಸಲೇ ಇಲ್ಲವೆಂತಲೂ, ನಮ್ಮ ಪೂರ್ವಿಕರಿಂದ ಅವಲಂಬಿಸಲ್ಪಟ್ಟ ಪ್ರಸ್ತುತಕಾಲದಲ್ಲಿ ನಮ್ಮ ಅಜ್ಞಾನದ ದೆಸೆಯಿಂದ ಮೂಲೆಗೆ ಬಿದ್ದಿರುವ ಪುರಾತನ ಮತವನ್ನೆ ಸ್ವೀಕರಿಸಬೇಕೆಂದು ಪ್ರಾರ್ಥಿಸುವೆನೆಂತಲೂ, ವಿಗ್ರಹಾರಾಧನೆಯು ಸರ್ವತ್ರ ನಿಷಿದ್ಧವೆಂದು ವೇದಗಳಿಂದಲೂ ಉಪನಿಷದ್ವಾಕ್ಯಗಳಿಂದಲೂ ಸ್ಪಷ್ಟಪಡುತ್ತಿದ್ದರೂ, ಪ್ರತಿಪಕ್ಷದವರು ನನ್ನ ವಾದಕ್ಕೆ ಅಪಾರ್ಥವನ್ನು ಕಲ್ಪಿಸುವುದಕ್ಕಾಗಿ ನಾನು ಮಾಡುತ್ತಿರುವಯತ್ನವು ನೂತನ ಮತ ನಿರ್ಮಾಣಕ್ಕೆಂದು ಜನರಿಗೆ ಭ್ರಮೆಯನ್ನು ಹುಟ್ಟಿಸುತ್ತಿರುವರೆಂತಲೂ, ಸರ್ವಜ್ಞನಾದ ಪರಮೇಶ್ವರನೊಂದಿಗೆ ಮಿತಜ್ಞನಾದ ರಾಜನನ್ನು ಹೋಲಿಸುವುದು ಯುಕ್ತವಲ್ಲವೆಂತಲೂ,' ಅನೇಕ ಹೇತುಗಳಿಂದ ಚರ್ಚಿಸಿ, ತನ್ನ ಪ್ರತ್ಯುತ್ತರವನ್ನು ಪ್ರಕಟಿಸಿದನು. ಇದರಮೇಲೆ ಶಂಕರಶಾಸ್ತ್ರಿಯು ಯಾವ ಉತ್ತರವನ್ನೂ ಬರೆಯಲಿಲ್ಲ.

ತರುವಾಯ ಕಲ್ಕತ್ತೆಯಲ್ಲಿ ಒಬ್ಬ ಬ್ರಾಹ್ಮಣನು ರಾಮಮೋಹನನ ಧರ್ಮ ಸಿದ್ಧಾಂತಗಳಿಗೆ ವಿರೋಧವಾಗಿ ವೇದಾಂತಚಂದ್ರಿಕೆ ಎಂಬ ಪುಸ್ತಕವನ್ನು ಪ್ರಚುರಿಸಿದನು. ರಾಮಮೋಹನನು ಅದರಲ್ಲಿನ ಆಕ್ಷೇಪಣೆಗಳಿಗೆ ಸಮಾಧಾನಗಳನ್ನು 1877 ರಲ್ಲಿ ಬರೆದನು. ಇವರಿಬ್ಬರೂ ಇಂಗ್ಲಿಷ್ ಭಾಷೆಯಲ್ಲಿಯೇ ಚರ್ಚಿಸತೊಡಗಿದರು. ರಾಮಮೋಹನನು ಈ ಚರ್ಚೆಯಲ್ಲಿ ಪುರಾತನ ಸಿದ್ಧಾಂತಗಳಿಂದಲೇ ಪ್ರಮಾಣಗಳನ್ನು ತೋರಿಸಿ, ಪರಮೇಶ್ವರನು ನಿರಾಕಾರನೆಂದು ದೃಢಪಡಿಸಿದುದಲ್ಲದೆ, ಅನಂತನಾದ ವಸ್ತುವಿಗೆ ಒಂದುರೂಪವನ್ನೇ ಏರ್ಪಡಿಸುವುದು ಅಸಂಭವವೆಂದು ಹಲವು ಯುಕ್ತಿಗಳಿಂದ ಸಾಧಿಸಿದನು.

ಈಶ್ವರನಿಗೆ ರೂಪಧಾರಣೆಯೇ ಇಲ್ಲದೆ ಇದ್ದಲ್ಲಿ ಪ್ರಪಂಚರೂಪದಲ್ಲಿರುವುದು ಹೇಗೆ? ಆತನು ವಿಶ್ವವೆಂಬರೂಪದಿಂದ ಪ್ರಕಾಶಿಸುತ್ತಿರುವನೆಂದು ಹೇಳುತ್ತೀರಲ್ಲವೇ? ವಿಶ್ವವನ್ನೇ ರೂಪವಾಗಿ ಧರಿಸುತ್ತಿರುವ ಅವನು ಒಂದುವೇಳೆ ಇತರ ರೂಪವನ್ನು ಏತಕ್ಕೆ ಧರಿಸಬಾರದು? ಎಂದು ಕೆಲವರು ಕೇಳಿದರು. ಅದಕ್ಕೆ ರಾಮಮೋಹನನು ಹಗ್ಗದಲ್ಲಿ ಸರ್ಪವೆಂಬ ಭ್ರಾಂತಿ ಹುಟ್ಟುವುದು ಸಹಜವಾದರೂ ಆ ಹಗ್ಗವೇ ಧ್ರುವವಾಗಿ ಸರ್ಪವು ಅಸತ್ಯ

ಬಾಗುವಹಾಗೆ ವೇದಾಂತಗಳಿಂದ ಬ್ರಹ್ಮನೇ ಸತ್ಯವೆಂತಲೂ, ನಿರಾಕಾರನಾದ ಆ ಪರಮೇಶ್ವರನಲ್ಲಿ ಆಕಾರಸಹಿತವಾದ ಪ್ರಪಂಚದ ಸ್ವರೂಪವನ್ನು ನಿರೂಪಿಸುವುದಕ್ಕೆ ಕಾರಣವು ಭ್ರಮೆಯೇ ಎಂತಲೂ, ಹೀಗೆ ನಿಶ್ಚಯಜ್ಞಾನವಿಲ್ಲದೇಇರುವುದಕ್ಕೆ ಜೀವನ ಅಜ್ಞಾನವೇ ಕಾರಣವೆಂತಲೂ ಉತ್ತರಕೊಟ್ಟನು.

ಭಟ್ಟಾಚಾರ್ಯನೆಂಬವನು ಪರಮೇಶ್ವರನಿಗೆ ರೂಪಧಾರಣವೇ ಇಲ್ಲದೆ ಇದ್ದರೆ ರಾಮಕೃಷ್ಣಾದ್ಯವತಾರಗಳು ಹೇಗೆ ನಡೆದುವೆಂತಲೂ, ಒಬ್ಬಾನೊಬ್ಬ ಅರಸನು ತನ್ನ ಪ್ರಜೆಗಳ ಕ್ಷೇಮವನ್ನು ವಿಚಾರಿಸುವುದಕ್ಕಾಗಿ ಬೇರೆ ವೇಷವನ್ನು ಧರಿಸಿ ತಿರುಗುವಂತೆ ಈಶ್ವರನು ಸದಾ ಸಂದರ್ಭಾನುಸಾರ ಭೂಮಿಯಲ್ಲಿ ಅವತರಿಸುವನೆಂಬುದು ಆಕ್ಷೇಪಕರವಲ್ಲವಾದುದರಿಂದ ಅಂತಹ ಅವತಾರ ರೂಪಕಗಳಾದ ವಿಗ್ರಹಗಳನ್ನು ಆರಾಧಿಸುವುದು ದೋಷವಲ್ಲವೆಂತಲೂ ವಾದಿಸಿದನು. ಇದಕ್ಕೆ ರಾಮಮೋಹನನು ಸಮಸ್ತಪ್ರಾಣಿಗಳಲ್ಲಿಯೂ ತುಂಬಿ ತುಳುಕುತ್ತಿರುವ ಸರ್ವೇಶ್ವರನ ಅಂಶವು ಶುಭ್ರವಾದ ಕನ್ನಡಿಗಳ ಮಧ್ಯದಲ್ಲಿರಿಸಿದ ದೀಪದ ಕುಡಿಯಂತೆ ರಾಮಕೃಷ್ಣಾದಿಗಳಲ್ಲಿ ತುಂಬಾ ಕಾಂತಿಯಿಂದ ಪ್ರಕಾಶಿಸಿದುದೆಂದು ಒಪ್ಪಿಕೊಳ್ಳಬಹುದೇ ಹೊರತು ಇಷ್ಟುಮಾತ್ರದಿಂದಲೇ ಸಾಕಾರ ನಿರ್ಣಯವಾಗಲಾರದೆಂತಲೂ, ಈಶ್ವರನು ಸರ್ವವ್ಯಾಪಿಯಲ್ಲವೇ ? ಎಂದು ವಿಗ್ರಹಗಳನ್ನು ಪೂಜಿಸತೊಡಗಿದರೆ ಮೃಗಪಕ್ಷಿಗಳನ್ನು ಕೂಡ ಪೂಜಿಸುವುದು ಆಗತ್ಯವಾಗುವುದೆಂತಲೂ, ವಿಗ್ರಹರೂಪವಾಗಿ ಹೊರತು ಬೇರೆ ರೂಪಗಳಲ್ಲಿ ಈಶ್ವರನನ್ನು ಪೂಜಿಸುವುದು ಶಾಸ್ತ್ರಸಮ್ಮತವಲ್ಲವೆಂದು ಹೇಳುವ ಪಕ್ಷದಲ್ಲಿ, ಅವೂ ಕೂಡ ಬ್ರಹ್ಮಜ್ಞಾನಿಗಳಿಗೆ ಈ ಅರ್ಚನೆ ಅನಾವಶ್ಯಕನೆಂದು ಹೇಳುತ್ತಿರುವುವೆಂತಲೂ, ವಾದಿಸುತ್ತಾ, ವಾಜಸನೇಯ ಸಂಹಿತಾದಿಗ್ರಂಥಪ್ರಮಾಣಗಳು ಹಲವನ್ನು ತೋರಿಸಿ, ಆ ವಾದವನ್ನು ಖಂಡಿಸಿದನು.

ಭಟ್ಟಾಚಾರ್ಯನ ತರುವಾಯ ಗೋಸ್ವಾಮಿಯೆಂಬುವನೂ, ಕೋತಾಕಾರನೆಂಬುವನೂ, ರಾಮಮೋಹನನು ವೇದಗಳಿಗೆ ಅಪಾರ್ಥವನ್ನು ಮಾಡುತ್ತಾ, ವ್ಯಾಸಾದಿ ಮಹರ್ಷಿಗಳಿಂದ ಮಾಡಲ್ಪಟ್ಟ ಗ್ರಂಥಗಳನ್ನು ಆಕ್ಷೇಪಿಸುತ್ತಾ, 'ಬ್ರಹ್ಮಬ್ರಹ್ಮ' ಎಂದು ಅರಚುತಿರುವನೆಂದು ಮನಸ್ಸುಬಂದಂತೆ ಬರೆದು ಅವನನ್ನು ಅವಮಾನಪಡಿಸತೊಡಗಿದರು. ಆದರೆ 1821 ರಲ್ಲಿ ಇವುಗಳಿಗೆ ಕೊಡಲ್ಪಟ್ಟ ಪ್ರತ್ಯುತ್ತರಗಳು ಗ್ರಂಥರೂಪವಾಗಿ ಪ್ರಚುರಿಸಲ್ಪಟ್ಟುದರಿಂದ ಅವರು ತಲೆಯೆತ್ತಲಿಕ್ಕೆ ಅವಕಾಶವಿಲ್ಲದೆ ಹೋಯಿತು. ತರುವಾಯ ಸುಬ್ರಹ್ಮಣ್ಯಶಾಸ್ತ್ರಿ ಎಂಬ ಪಂಡಿತನು ರಾಮಮೋಹನನಿಗೆ ಪ್ರತಿಕಕ್ಷಿಯಾಗಿ ಚರ್ಚಿಸುವುದಕ್ಕಾರಂಭಿಸಿದನು. ಇವನ ಪ್ರಶ್ನೆಗಳಿಗೆ ಬಂಗಾಳೀಭಾಷೆಯಲ್ಲಿ ಪ್ರತ್ಯುತ್ತರಗಳು ಕೊಡಲ್ಪಟ್ಟುವು. ಈ ಪ್ರತ್ಯುತ್ತರಗಳೇ ಗ್ರಂಥರೂಪವಾಗಿ ಸಕಲಜನರಿಗೂ ತಿಳಿಯುವಂತೆ ಸಂಸ್ಕೃತದಲ್ಲಿಯೂ, ಹಿಂದೀಭಾಷೆಯಲ್ಲಿಯೂ ಪ್ರಕಟಿಸಲ್ಪಟ್ಟುವು. ವೇದಾಧ್ಯಯನ ಮಾಡದೆ ಇದ್ದರೂ, ವರ್ಣಾಶ್ರಮಾಚಾರಗಳ ನಿರ್ಬಂಧವಿಲ್ಲದೆಯೇ ಯಾವ ಮನುಷ್ಯನಾದರೂ ಬ್ರಹ್ಮಮತಾವಲಂಬಿಯಾಗಿ, ಉನ್ನತಸ್ಥಾನವನ್ನು ಹೊಂದಬಹುದೆಂಬ ಸಿದ್ಧಾಂತವನ್ನು ಬಲಪಡಿಸಿದನು.

ಇದು ನಡೆದ ಕೆಲವು ದಿನಗಳ ತರುವಾಯ ಕಾಶೀನಾಥತರ್ಕಪಂಚಾನನನೆಂಬ ಪ್ರಸಿದ್ಧ ಪಂಡಿತನು "ಧರ್ಮಸ್ಥಾಪನಾಭಿಲಾಷಿ" ಎಂಬ ಹೆಸರಿನಿಂದ ಕೆಲವು ಪ್ರಶ್ನೆಗಳನ್ನು ಬರೆದು ಒಂದು ವರ್ತಮಾನಪತ್ರದಲ್ಲಿ ಪ್ರಚುರಿಸಿದನು. ಆ ಪ್ರಶ್ನೆಗಳಿಗೆಲ್ಲಾ ರಾಮಮೋಹನನು ತಕ್ಕ ಉತ್ತರಗಳನ್ನು ಬರೆದು ಪ್ರಕಟಿಸಿದನು. ಅದರಮೇಲೆ ರಾಮಮೋಹನನ ವಿರೋಧಿಯಾದ ಠಾಕೂರ್‌ನಂದಲಾಲ್ ಎಂಬುವನು ಆ ಪಂಡಿತನನ್ನು ತುಂಬ ಪ್ರೋತ್ಸಾಹಪಡಿಸಿ, ಆತನಿಂದ ತನ್ನ ಪ್ರಥಮಪ್ರಶ್ನೆಗಳಿಗೆ ರಾಮಮೋಹನನು ಕೊಟ್ಟ ಉತ್ತರಗಳನ್ನು ಆಕ್ಷೇಪಿಸ ತಕ್ಕ 'ಪಾಷಂಡಪೀಡನ' ಎಂಬ 225 ಪುಟಗಳ ಗ್ರಂಥವನ್ನು ಬರೆಯಿಸಿ, ಪ್ರಚುರಪಡಿಸಿದನು. ಈ ಗ್ರಂಥದಲ್ಲಿ ರಾಮಮೋಹನನ ಉದ್ದೇಶಗಳು ಶ್ರುತಿಸ್ಮೃತಿಪುರಾಣಗಳಿಂದ ಖಂಡಿಸಲ್ಪಡದೆ ಇದ್ದರೂ ಅವನು ಪಾಷಂಡನೆಂತಲೂ, ನಗರಾಂತವಾಸಿಯೆಂತಲೂ, ಇವೇ ಮೊದಲಾದ ನೀಚ ವಾಕ್ಯಪರಂಪರೆಯಿಂದಲೇ ಪ್ರತಿಪುಟವೂ ತುಂಬಿದ್ದಿತು. ರಾಮಮೋಹನನು ಇದಕ್ಕೆ ಪ್ರತ್ಯುತ್ತರವಾಗಿ 'ಪಥಪ್ರದಾನ' ಎಂಬ ಹೆಸರಿನಿಂದ ಒಂದು ಗ್ರಂಥವನ್ನು ಪ್ರಚುರಿಸಿದನು. ಇದರಲ್ಲಿ ಆತನು ತನ್ನ ಪ್ರತಿಪಕ್ಷದವರ ಆಕ್ಷೇಪಣೆಗಳಿಗೆಲ್ಲ ಕ್ರಮವಾದ ಖಂಡನೆಗಳನ್ನು ಬರೆದುದಲ್ಲದೆ ಅವರಂತೆ ದುರಾಲಾಪಗಳನ್ನು ತೋರಿಸದೆ ಬಹಳ ಸ್ಥೈರಣೆಯಿಂದ ಅಲ್ಲಲ್ಲಿ ದ್ವಂದ್ವಾರ್ಥಗಳನ್ನು ಕೊಡುವ ಮೃದುವಾಕ್ಯಗಳಿಂದ ತನ್ನ ಅಸಮ್ಮತಿಯನ್ನು ಮಾತ್ರ ತೋರಿಸಿದನು.

ಹೀಗೆ ತನ್ನಮೇಲೆ ಪಂಡಿತರು ಮಾಡುತಲಿದ್ದ ಕುತರ್ಕಗಳೆಲ್ಲಕ್ಕೂ ಶ್ರುತಿಸಮ್ಮತವಾದ ಪ್ರತ್ಯುತ್ತರಗಳನ್ನು ಕೊಡುತ್ತ, ಗ್ರಂಥಗಳನ್ನು ಬರೆಯುತ್ತ, ಎದುರಿಗೆ ಚರ್ಚಿಸುವಾಗ ಸದಾ ಅವರ ಬಳಿಯಲ್ಲಿ ಮರ್ಯಾದೆಯನ್ನೇ ತೋರಿಸುತ್ತಾ, ತನ್ನ ವಿದ್ಯಾವಿಜಯಭೇರಿಯ ಧ್ವನಿಯನ್ನು ಮತ್ತಷ್ಟು ಮುಗಿಲುಮುಟ್ಟುವಂತೆ ವಿವಾದಕಾಲದಲ್ಲಿ ಬರೆಯಲ್ಪಟ್ಟ ಪೂರ್ವೋಕ್ತಗ್ರಂಥಗಳಲ್ಲದೆ ಮತ್ತೆ ಕೆಲವು ಗ್ರಂಥಗಳನ್ನು ಬರೆದನು. ಅವುಗಳ ವಿವರಣೆಯನ್ನು ಇಲ್ಲಿ ಸಂಗ್ರಹವಾಗಿ ತಿಳಿಸುವೆವು.

1 ಬ್ರಹ್ಮನಿಷ್ಠೆ, ಗೃಹಸ್ಥ ಲಕ್ಷಣ—ಇದು ಗೃಹಸ್ಥನಾದಮೇಲೆ ಬ್ರಹ್ಮೋಪಾಸನೆಯನ್ನು ಹೇಗೆ ಮಾಡಬೇಕೆಂಬ ವಿಷಯವನ್ನು ಕುರಿತು ಬರೆಯಲ್ಪಟ್ಟಿರುವುದು. ಇದು ಶಾಲೀವಾಹನಶಕೆ 1747 ರಲ್ಲಿ ಮುದ್ರಿತವಾಯಿತು.

2 ಗಾಯತ್ರೀಪರಮೋಪಾಸನಾ ವಿಧಾನ—ಇದರಲ್ಲಿ ವೇದಾಧ್ಯಯನದ ಆವಶ್ಯಕವಿಲ್ಲದೆ ಗಾಯತ್ರಿಯನ್ನೇ ಉಪಾಸಿಸಬಹುದೆಂಬ ಅಂಶವು ಹಲವು ಕಾರಣಗಳಿಂದ ದೃಢಪಡಿಸಲ್ಪಟ್ಟಿದೆ. ಇದು ಸಂಸ್ಕೃತದಲ್ಲಿಯೂ ಬಂಗಾಳಿಭಾಷೆಯಲ್ಲಿಯೂ ಬರೆಯಲ್ಪಟ್ಟಿದೆ. 1827 ರಲ್ಲಿ ಇದರ ಇಂಗ್ಲೀಷು ಭಾಷಾಂತರದ ಪ್ರತಿಯು ಮುದ್ರಿಸಲ್ಪಟ್ಟಿತು.

3 ಗಾಯತ್ರಿಯ ಅರ್ಥ—ಇದರಲ್ಲಿ ಎರಡು ಭಾಗಗಳಿವೆ. 1 ಉಪೋದ್ಘಾತ, 2 ಗ್ರಂಥ, ಇದರಲ್ಲಿ ಬ್ರಾಹ್ಮಣರಿಂದ ಜಪಿಸಲ್ಪಡುತ್ತಿರುವ ಗಾಯತ್ರೀಮಂತ್ರವು ಬ್ರಹ್ಮೋಪಾಸನೆಯನ್ನೇ ಬೋಧಿಸುವುದೆಂಬ ಅರ್ಥವನ್ನು ಸ್ಪಷ್ಟಪಡಿಸಿದೆ.

4 ಅನುಷ್ಠಾನ—ಇದರಲ್ಲಿಯೂ ಮೇಲಿನ ಗ್ರಂಥದಂತೆ 2 ಭಾಗಗಳಿವೆ. ಇವುಗಳಲ್ಲಿ

ಬ್ರಹ್ಮೋಪಾಸನೆ ಮಾಡುವ ಕ್ರಮ ಯಾವುದು? ಎಂಬ ಬಗ್ಗೆ 12 ಪ್ರಶ್ನೆಗಳನ್ನು ಹಾಕಿ ಪ್ರತಿ ಒಂದಕ್ಕೂ ಕ್ರಮವಾಗಿ ಉತ್ತರಗಳು ಬರೆಯಲ್ಪಟ್ಟಿವೆ.

5 ಪ್ರಾರ್ಥನಾಪತ್ರಿಕೆ—ಇದರಲ್ಲಿ ಸ್ವಜಾತಿ, ಅನ್ಯಜಾತಿ ಎಂಬ ವಿಭೇದನೆಯನ್ನು ಕುರಿತು ಸ್ವಲ್ಪದೂರ ಚರ್ಚಿಸಿ, ಸರ್ವರೂ ಸಹೋದರರೆಂಬರ್ಥವನ್ನು ಪ್ರತಿಪಾದಿಸಿದೆ.

6 ಆತ್ಮಾನಾತ್ಮವಿವೇಕ—ಇದು ಶಂಕರಾಚಾರ್ಯರಿಂದ ರಚಿಸಲ್ಪಟ್ಟಿದ್ದು. ರಾಮಮೋಹನನು ಇದನ್ನು ಬಂಗಾಳೀಭಾಷೆಯಲ್ಲಿ ಬರೆದನು. ಇದರಲ್ಲಿ ಸರ್ವಮತವೇದಾಂತಗಳೂ ವಿವರಿಸಲ್ಪಟ್ಟಿವೆ.

7 ಬ್ರಹ್ಮೋಪಾಸನೆ—ಇದರಲ್ಲಿ ಬ್ರಹ್ಮನನ್ನು ಆರಾಧಿಸುವ ಕ್ರಮಗಳು ಹೇಳಲ್ಪಟ್ಟಿವೆ. ಇವುಗಳಲ್ಲದೆ ಕೆಲವು ಉಪನಿಷತ್ತುಗಳು, ಗುರುಪಾದುಕೆ, ಪೋಲಕಿತಪೇಟಿಕಾಘಾತ, ಸೂರ್ಯಸೂತ್ರಗಳು, ಶಂಕರಾಚಾರ್ಯಕೃತವೇದಾಂತಸೂತ್ರ ಭಾಷ್ಯಾರ್ಥ, ಇನ್ನೂ ಕೆಲವು ಸಂಸ್ಕೃತಗ್ರಂಥಗಳನ್ನು ಈತನು ಬರೆದಿರುವನೆಂದು ಇವನ ಚರಿತ್ರೆಯನ್ನು ಬಂಗಾಳಿಭಾಷೆಯಲ್ಲಿ ಬರೆದಿರುವ ರಾಜನಾರಾಯಣಬೋಸ್ ಎಂಬಾತನು ಬರೆದಿರುವನು. ಆದರೆ ಇವುಗಳಲ್ಲಿ ಕೆಲವು ಈಗ ಸಿಕ್ಕುವಂತೆ ಕಾಣಲಿಲ್ಲವು.

ರಾಮಮೋಹನರಾಯನಿಂದ ಮಾಡಲ್ಪಟ್ಟ ಬ್ರಹ್ಮಜ್ಞಾನವಿಷಯವಾದ ಚರ್ಚೆಗಳು ವೇದವೇದಾಂತಗಳನ್ನು ತಿಳಿಯದೆ ಪುರಾಣಗಳನ್ನೂ ನ್ಯಾಯಶಾಸ್ತ್ರಗಳನ್ನೂ ಮಾತ್ರವೇ ಓದಿಕೊಳ್ಳುತಲಿದ್ದ ಆಗಿನ ಬಂಗಾಳರಾಜ್ಯದ ನವದ್ವೀಪ, ವಿಕ್ರಮಪುರ, ಭಾಟ್ಪಾಡಾ, ತಿರ್ಬೇನಿ, ಪೇಷುಬಾಟಿ, ಮೊದಲಾದ ಪಟ್ಟಣಗಳವರಿಗೆ ಬಹಳ ಉಪಕಾರವಾಯಿತು. ಅದುವರೆಗೆ ಈ ವೇದವೇದಾಂತ ವಿಷಯದ ಚರ್ಚೆಯೇ ಇರಲಿಲ್ಲವೆಂದು ವಿದ್ವಾಂಸರೆಲ್ಲರೂ ಒಪ್ಪಿಕೊಂಡರು.

ರಾಮಮೋಹನನ ಶಿಷ್ಯನೊಬ್ಬನು ತತ್ವಬೋಧಿನಿ ಎಂಬ ಪತ್ರಿಕೆಯಲ್ಲಿ ಹೀಗೆ ಬರೆದಿರುವನು:—'ಬಂಗಾಳದಲ್ಲಿ ವೇದದ ಚರ್ಚೆಯು ನಶಿಸಿ ಬಹು ದಿನಗಳಾದವು. ಹೀಗೆ ವೇದವೇದಾಂತ ಮಂತ್ರಗಳು, ಬ್ರಾಹ್ಮಣಗಳು, ಶ್ಲೋಕಗಳು, ಸೂತ್ರಗಳು, ಭಾಷ್ಯಗಳು ಮೊದಲಾದುವು ಸರ್ವತ್ರ ವ್ಯಾಪಿಸುವಿಕೆಯೂ, ಇವುಗಳ ಮೂಲಕ ರಾಮಮೋಹನರಾಯನ ಬ್ರಹ್ಮೋಪಾಸನೆಯು ಸ್ಥಾಪಿಸಲ್ಪಡುವಿಕೆಯೂ, ಇವುಗಳನ್ನು ನೋಡಿ, ಇದಕ್ಕೆ ಮುಂಚೆ ವಿಗ್ರಹಾರಾಧನೆ ಮಾಡಲಿಕ್ಕೆ ವೇದದಲ್ಲಿ ಸ್ಪಷ್ಟವಾದ ಅಂಗೀಕಾರವಿರುವುದೆಂದು ನಂಬುವ ಭಟ್ಟಾಚಾರ್ಯ, ಗೋಸ್ವಾಮಿ, ಮೊದಲಾದವರು ಆಶ್ಚರ್ಯಗೊಂಡರು. ಆದರೆ ರಾಮಮೋಹನನು ತನ್ನ ಗ್ರಂಥಗಳನ್ನು ಎಲ್ಲಾ ಕಡೆಯಲ್ಲಿಯೂ ವ್ಯಾಪಿಸುವಂತೆ ಮಾಡಿ, ಆ ಬಾಲಗೋಪಾಲರಿಗೆಲ್ಲ ವೇದ ವೇದಾಂತಗಳೆಂದರೆ ಇಂತವುಗಳೆಂದು ತಿಳಿಯಪಡಿಸಿ, ಪ್ರತಿಪಕ್ಷದವರ ಆರ್ಭಟಗಳನ್ನಡಗಿಸಿಬಿಟ್ಟನು.

ಈ ಚರ್ಚೆಯಿಂದ ಬಂಗಾಳಿ ಭಾಷೆಯು ಕೂಡ ಅಭಿವೃದ್ಧಿ ಸ್ಥಿತಿಗೆ ಬಂದಿತು. ಪಂಡಿತ ರಾಮಗತನ್ಯಾಯರತ್ನನೆಂಬವನು ಬಂಗಾಳೀ ಪುಸ್ತಕಭಾಂಡಾಗಾರವೆಂಬ ಹೆಸರಿನಿಂದ

ರಚಿಸಿದ ಗ್ರಂಥದಲ್ಲಿ ಹೀಗೆ ಹೇಳಿರುವನು. 'ರಾಮಮೋಹನನಿಂದ ರಚಿಸಲ್ಪಟ್ಟವುಗಳೂ ಭಾಷಾಂತರಿಸಲ್ಪಟ್ಟವುಗಳೂ ಆದ ಗ್ರಂಥಗಳಿಂದಲೂ, ಆತನ ಪ್ರತಿಪಕ್ಷದವರಿಂದ ಬರೆಯಲ್ಪಟ್ಟ ಗ್ರಂಥಗಳಿಂದಲೂ ಮೊಟ್ಟಮೊದಲು ಈ ಭಾಷೆಯಲ್ಲಿ ವಚನ ಗ್ರಂಥಗಳು ಅಭಿವೃದ್ಧಿಗೆ ಬಂದುವು, ಮತ್ತು ಈ ಮೂಲಕವಾಗಿಯೇ ಭವಿಷ್ಯತ್ಸಂತತಿಯವರಿಗೆ ಉತ್ತಮರೀತಿಯಿಂದ ಗ್ರಂಥಗಳನ್ನು ಬರೆಯುವ ಮಾರ್ಗವು ಗೊತ್ತಾಯಿತು.'

ಬ್ರಹ್ಮಜ್ಞಾನಪ್ರಚಾರಕ್ಕಾಗಿ ರಾಮಮೋಹನನು ಅನೇಕ ಶಾಸ್ತ್ರಗಳನ್ನು ಪರಿಶೋಧಿಸಿದನು. ಆತನು ಬರೆದ ಗ್ರಂಥಗಳು ಅಷ್ಟು ಹೆಚ್ಚಾಗಿಲ್ಲದಿದ್ದರೂ ಪ್ರತಿ ಒಂದು ವಿಷಯದಲ್ಲಿಯೂ ವಿಶೇಷವಾಗಿ ವೇದಶಾಸ್ತ್ರೋಕ್ತಗಳಾದ ಉದಾಹರಣೆಗಳನ್ನೇ ಕೊಡುತ್ತಾ ಬಂದಿರುವನು. ಇವನು ಎಷ್ಟು ಕಷ್ಟಗಳನ್ನಾದರೂ ಸೈರಿಸಿ, ತನ್ನ ಉದ್ದೇಶಗಳನ್ನು ನೆರವೇರಿಸಿಕೊಳ್ಳುತ್ತಿದ್ದನು. ಇದಕ್ಕೊಂದು ನಿದರ್ಶನವುಂಟು. ಒಂದು ದಿನ ಈತನ ಬಳಿಗೆ ಒಬ್ಬ ಪಂಡಿತನು ಬಂದು, ತಂತ್ರಶಾಸ್ತ್ರವನ್ನು ಕುರಿತು ಚರ್ಚಿಸಬೇಕೆಂದು ಅಪೇಕ್ಷಿಸಿದನು. ಆದರೆ ಅದಕ್ಕೆ ಮುಂಚೆ ಈತನು ಆ ಸಂಬಂಧದ ವಿಷಯಗಳನ್ನು ತಿಳಿದುಕೊಳ್ಳದೆ ಇದ್ದುದರಿಂದ 'ನಾಳೆ ಇದೇ ಹೊತ್ತಿಗೆ ದಯಮಾಡಿಸಿದಲ್ಲಿ ಸ್ವಲ್ಪಮಟ್ಟಿಗೆ ಮಾತನಾಡುವೆನು' ಎಂದು ಆ ಪಂಡಿತನಿಗೆ ಹೇಳಿ ಕಳುಹಿಸಿ, ಕೂಡಲೇ ಶೋಭಾ ಎಂಬ ಬೀದಿಗೆ ಹೋಗಿ ಅಲ್ಲಿನ ಸರಸ್ವತೀ ಭಂಡಾರದಲ್ಲಿ ಆ ವಿಷಯದ ಗ್ರಂಥವನ್ನು ತೆಗೆದುಕೊಂಡು ಬಂದು, ಆ ದಿನವೆಲ್ಲ ಅದನ್ನು ಬಹು ಆಸಕ್ತಿಯಿಂದ ಓದಿ, ತನ್ನ ಕುಶಾಗ್ರಬುದ್ಧಿಯಿಂದ ಆ ಗ್ರಂಥದಲ್ಲಿನ ಅಂಶಗಳನ್ನೆಲ್ಲ ತಿಳಿದುಕೊಂಡು, ಮರುದಿನ ಕಾಲಕ್ಕೆ ಸರಿಯಾಗಿ ಬಂದ ಆ ಪಂಡಿತನ ಸಂಗಡ ಒಳ್ಳೆಯ ಅನುಭವಸ್ಥನಂತೆ ಆ ವಿಷಯವನ್ನು ವಾದಿಸಿ ಜಯಶೀಲನಾದನು. ಇದನ್ನು ಕಂಡ ಆ ಪಂಡಿತನು ಈತನ ವಿದ್ಯೆಗೂ, ಯೋಗ್ಯತೆಗೂ ತುಂಬ ಸಂತೋಷಿಸಿ, ಹೊಗಳುತ್ತ ಹೊರಟು ಹೋದನು.

ಈತನು ಯಾರ ಸಂಗಡ ಮಾತನಾಡಿದರೂ, ಯಾರೊಂದಿಗೆ ಚರ್ಚಿಸಿದರೂ ವಿನಯವಾಗಿಯೇ ಪ್ರಶಂಸಿಸುತ್ತಿದ್ದುದಲ್ಲದೆ ಮೃದುಪದಗಳನ್ನೇ ಉಪಯೋಗಿಸುತ್ತಾ ಕೊಟ್ಟ ಕೊನೆಗೆ ಎಂತಹ ಅಲ್ಪವಿಷಯದಲ್ಲಿಯಾದರೂ ಬಹು ಸುಲಭವಾಗಿ ಎದುರಾಳಿಯನ್ನು ತನ್ನ ಮಾರ್ಗಕ್ಕೆ ತಿರುಗುವಂತೆ ಮಾಡುತ್ತಿದ್ದನು. ಒಬ್ಬ ಬ್ರಾಹ್ಮಣನು ಇವನ ಮನೆಯ ಎದುರಿಗೆ ಅಲಂಕಾರಕ್ಕಾಗಿ ಬೆಳೆಸಿದ್ದ ಹೂವಿನ ತೋಟಕ್ಕೆ ನಿತ್ಯವೂ ಬಂದು, ಹೂಗಳನ್ನು ಬಿಡಿಸಿಕೊಂಡು ಹೋಗುತ್ತಿದ್ದನು. ಒಂದು ದಿನ ತಾನು ಮೈಮೇಲೆ ಹಾಕಿಕೊಂಡಿದ್ದ ಸಣ್ಣ ಅಂಗವಸ್ತ್ರವನ್ನು ಒಂದು ಗಿಡದಬಳಿ ಇಟ್ಟು, ತಾನು ಮತ್ತೊಂದು ಕಡೆ ಒಂದುಗಿಡದ ಹೂಗಳನ್ನು ಕುಯ್ಯುತ್ತಿದ್ದನು. ಆ ತೋಟದ ಆಳು ಹಾಸ್ಯಕ್ಕಾಗಿ ಆ ಅಂಗವಸ್ತ್ರವನ್ನು ಬೇರೊಂದು ಕಡೆ ಮುಚ್ಚಿಟ್ಟನು. ಅಷ್ಟರಲ್ಲಿ ರಾಮಮೋಹನನೂ ಅಲ್ಲಿಗೆ ಬಂದನು. ಬ್ರಾಹ್ಮಣನು ಹೂಗಳನ್ನು ಬಿಡಿಸಿಕೊಂಡು ಬಂದು ನೋಡುವಲ್ಲಿ ತನ್ನ ಅಂಗವಸ್ತ್ರ ಕಾಣಿಸಲಿಲ್ಲ. ಇದಕ್ಕೆ ಆತನು ಕೋಪಿಸಿ, ಗಟ್ಟಿಯಾಗಿ ಅರಚುತ್ತಿದ್ದುದನ್ನು ನೋಡಿ ರಾಮಮೋಹನನು ಈ ವರ್ತ

ಮಾನವನ್ನೆಲ್ಲ ಕೇಳಿ, ' ನೀವು ಆತುರಪಡಬೇಡಿ, ಇಷ್ಟುಗಟ್ಟಿಯಾಗಿ ಏತಕ್ಕೆ ಕೂಗಿಕೊಳ್ಳ ಬೇಕು, ನಿಮ್ಮ ಅಂಗವಸ್ತ್ರವನ್ನು ನಾನು ತರಿಸಿಕೊಡುವೆನು ಸೈರಿಸಿ ' ಎಂದು ಹೇಳಿ ಆ ತೋಟಗಾರನನ್ನು ಗದರಿಸಿ, ವಸ್ತ್ರವನ್ನು ಬ್ರಾಹ್ಮಣನಿಗೆ ಕೊಡಿಸಿ ಅವನ ಸಂಗಡ ಹೀಗೆ ಸಂಭಾಷಿಸಿದನು:—

ರಾಮ— ಏನು ಸ್ವಾಮಿ, ಈಗ ಸಂತೋಷವಾಯಿತೆ ?

ಬ್ರಾಹ್ಮ—ನನ್ನ ವಸ್ತ್ರವನ್ನು ನನಗೆ ಕೊಡಿಸಿದ್ದರಿಂದ ಸಂತೋಷಪಡಬೇಕಾದುದೇನಿದೆ?

ರಾಮ—ನಿನಗೆ ಸಂತೋಷಕ್ಕೆ ಅವಕಾಶವೇ ಇಲ್ಲವೇ? ಪಾಪ ! ಹಾಗಾದರೆ ನಿನ್ನ ಕೈಯಲ್ಲಿರುವ ಹೂವುಗಳನ್ನು ಇಲ್ಲಿಂದ ಕೊಯ್ದುಕೊಂಡು ಹೋಗುವದಾದರೂ ನಿನಗೆ ಸಂತೋಷಪ್ರದವಲ್ಲವೋ ?

ಬ್ರಾಹ್ಮ—ಅದೂ ಅಲ್ಲ. ಈ ಹೂಗಳನ್ನು ನಾನು ಅಲಂಕರಿಸಿಕೊಳ್ಳುವೆನೆ ? ದೇವರ ಪೂಜೆಗಲ್ಲವೆ ಇದನ್ನೊಯ್ಯುವುದು ?

ರಾಮ—ಈ ಪುಷ್ಪಗಳಿಂದ ದೇವರನ್ನು ಪೂಜಿಸಿದರೆ ಅವನು ಸಂತೋಷಪಡುವನೆಂದು ನಂಬುತ್ತೀಯೋ ?

ಬ್ರಾಹ್ಮ—ಹೌದು, ನಂಬುವೆನು.

ರಾಮ—ದೇವರು ನಿನ್ನ ಪೂಜೆಗೆ ಸಂತೋಷಪಟ್ಟರೆ ಅದು ನಿನಗೆ ಸಂತೋಷವನ್ನು ಕೊಡಲಾರದೆ ?

ಬ್ರಾಹ್ಮ—ಹೌದು, ನನಗ ಅದಕ್ಕಿಂತ ಪರಮಸಂತೋಷವಾವುದು ? ಎಂದು ಉತ್ತರ ಕೊಟ್ಟು ತನ್ನ ದಾರಿಯಲ್ಲಿ ಹೋದನು.

ರಾಮಮೋಹನನ ಶಾಸ್ತ್ರೀಯ ಸಿದ್ಧಾಂತಗಳನ್ನು ಖಂಡಿಸಲಾರದ ಜನರು 'ನಮ್ಮ ಪೂರ್ವಿಕರು ಆಚರಿಸುತ್ತಿದ್ದ ಪದ್ಧತಿಗಳೇ ಯೋಗ್ಯವಾದುದರಿಂದ ಅವುಗಳನ್ನೇ ನಾವು ಆಚರಿ ಸುವೆವು' ಎಂದು ಮೂರ್ಖತನದಿಂದ ಹಟಾ ಹಿಡಿದಿರುವುದನ್ನು ನೋಡಿ, ಆತನು ಒಂದು ಪುಸ್ತಕದಲ್ಲಿ ಬರೆದುದೇನಂದರೆ;—'ಯಾವುದಾದರೂ ಒಂದು ಪೂರ್ವದ ಆಚಾರವು ಶಾಸ್ತ್ರ ಸಮ್ಮತವಾಗಿಯೂ ಕೆಲವುಕಾಲ ನಮ್ಮವಾಡಿಕೆಯಲ್ಲಿಯೂ ಇದ್ದು ಕೆಲವು ದಿನಗಳಮೇಲೆ ನಮ್ಮ ಅಜ್ಞಾನವಶದಿಂದ ಅದು ತಪ್ಪಿಹೋಗಿದ್ದಲ್ಲಿ ಮರಳಿ ಅದನ್ನು ಉಪಕ್ರಮಿಸಬೇಕೆಂದು ಯತ್ನಿಸಿದರೆ, ತತ್‌ಕ್ಷಣವೇ ಪ್ರಜೆಗಳಿಗೆ ಲೌಕಿಕಸಂಬಂಧವಾದ ದ್ರವ್ಯಲಾಭಗಳನ್ನು ಮಾತ್ರ ಕೊಡಲಾರದುದಾಗಿದ್ದರೂ ಇದನ್ನು ಹೊಸದಾಗಿ ಆಚರಿಸತೊಡಗುವಲ್ಲಿ 'ಈ ಪದ್ಧತಿ ನಮ್ಮ ಬಳಕೆಯಲ್ಲಿ ಇಲ್ಲ. ಇದನ್ನು ಮಾಡಕೂಡದು' ಎಂದು ಗದ್ದಲ ಹತ್ತಿಸತಕ್ಕ ಯುಕ್ತಾ ಯುಕ್ತ ಜ್ಞಾನವಿಲ್ಲದ ಮನುಷ್ಯನನ್ನು ನೋಡಿ ಇವರನ್ನು ಮಾರ್ಗಕ್ಕೆ ತರುವುದು ಬಹು ಕಷ್ಟವೆಂದು ಎಣಿಸುತ್ತೇನೆ. ಇವರೆಲ್ಲರೂ ಪೂರ್ವಕಾಲದವರು ಆಚರಿಸದೆಯೂ, ಶಾಸ್ತ್ರ ಸಮ್ಮತವಲ್ಲದೆಯೂ ಇರುವ ಹೊಸದಾರಿಯೆಂದು ತಮಗೆ ಲೌಕಿಕ ಸಂಬಂಧವಾದ ದ್ರವ್ಯ ಲಾಭವನ್ನುಂಟು ಮಾಡುವುದಾಗಿ ತಿಳಿದಕೂಡಲೆ ಅದು ಸಶಾಸ್ತ್ರೀಯವಾದ ಪೂರ್ವಾಚಾರ

ವೆಂತಲೇ ನಿಂದಿಸುತ್ತ ಅವಕ್ಕೆ ವಿರೋಧವಾಗಿ ಒಂದು ಮಾತನ್ನಾದರೂ ಆಡದೆ ಇರುವರು. ಶಾಸ್ತ್ರವ್ಯತಿರಿಕ್ತವಾಗಿ ಪೂರ್ವಿಕರಿಂದ ಆಚರಿಸಲ್ಪಡದ ವಾಡಿಕೆಗಳಷ್ಟನ್ನು ನಾವು ಬಳಕೆಯಲ್ಲಿಟ್ಟುಕೊಂಡಿಲ್ಲ ? ಮ್ಲೇಚ್ಛವಿದ್ಯಾಭ್ಯಾಸವೆಂದು ನಿಷೇಧಿಸಲ್ಪಟ್ಟ ಯವನ ಹೂಣವಿದ್ಯಾಭ್ಯಾಸಗಳನ್ನು ಯಾವ ಶಾಸ್ತ್ರಾಧಾರದಿಂದ ಆಚರಣೆಯಲ್ಲಿ ತಂದಿರುವರೊ ? ಅಂತಹ ಜನಗಳಿಂದ ಮಾಡಲ್ಪಟ್ಟ ಕಾಗದಗಳಮೇಲೆ ಬರಿಯಲಿಕ್ಕೆ ಅವರ ದೇಶಗಳಲ್ಲಿ ಸಿದ್ಧಮಾಡಿದ ವಸ್ತುಗಳನ್ನೆಲ್ಲ ಉಪಯೋಗಿಸುವುದಕ್ಕೆ ಯಾವಶಾಸ್ತ್ರಗಳು ಅನುಮತಿ ಕೊಟ್ಟವೆ ? ಅವರಿಂದ ಮುದ್ರಿಸಲ್ಪಟ್ಟು, ಉಚ್ಛಿಷ್ಟಪದಾರ್ಥವಾಗಿ ಭಾವಿಸಲ್ಪಡುವ ಅಂಬಲಿಯಿಂದ ಅಂಟಿಸಲ್ಪಟ್ಟ ರಕ್ಷಾಪತ್ರ (ಬೈಂಡು)ಗಳನ್ನುಳ್ಳ ಪುಸ್ತಕಗಳನ್ನು ಯಾವ ಪೂರ್ವಕಾಲದವರು ಓದುತ್ತಲಿದ್ದರು ? ಅವರ ಭಾಷೆಯಿಂದಲೂ, ಅವರ ರೂಪಗಳಿಂದಲೂ ಮುದ್ರಿಸಲ್ಪಟ್ಟ ನಾಣ್ಯಗಳು ಪವಿತ್ರಸ್ಥಾನಗಳಲ್ಲಿಯೂ, ದೇವಾಲಯಗಳಲ್ಲಿಯೂ ಕಾಣಿಕೆಗಳಾಗಿಯೂ ವೈದಿಕ ಕರ್ಮಗಳಲ್ಲಿ ದಕ್ಷಿಣೆಗಳಾಗಿಯೂ ತೆಗೆದುಕೊಳ್ಳಲ್ಪಡಲು ಹೇಗೆ ಅರ್ಹವಾದುವು ? ಇದಕ್ಕೆ ಯಾವಶಾಸ್ತ್ರದ ಆಧಾರವಿರುವುದು ? ಯಾವ ಪೂರ್ವಾಚಾರ ಸಮ್ಮತವನ್ನು ಕೊಡುವರು ? ಇವುಗಳನ್ನು ಹೇಗೆ ಅಂಗೀಕರಿಸತೊಡಗಿದರೋ ಹಾಗೆಯೇ ಸಂಘದ ಪುರೋವೃದ್ಧಿಗೆ ಸಹಾಯಕವಾದ ನೂತನಾಚಾರವು ಯಾವುದಾದರೂ ಸಮಾದರಣೀಯವಾಗಿಯೇ ಇರುವುದು. ”

ಸತ್ಯವನ್ನು ಹುಡುಕುವುದರಲ್ಲಿ ಆಸಕ್ತನಾದ ರಾಮಮೋಹನನು ಬಾಲ್ಯದಿಂದಲೂ ಮಹಮ್ಮದೀಯ ಮತಗ್ರಂಥಗಳನ್ನೂ, ಹಿಂದೂಮತ ಗ್ರಂಥಗಳನ್ನೂ, ಬೌದ್ಧ ಜೈನಮತ ಗ್ರಂಥಗಳನ್ನೂ, ವೇದವೇದಾಂತಗಳನ್ನೂ ಶೋಧಿಸುವಿಕೆಯೂ, ಅವುಗಳಿಂದ ಈತನ ಮನಸ್ಸಿನಲ್ಲಿ ಈಶ್ವರ ಸದ್ಭಾವ ಮತ್ತು ಅವನ ಏಕತ್ವ ಇವುಗಳನ್ನು ಕುರಿತು ಸ್ಥಿರಪಟ್ಟ ಮಹತ್ತರವಾದ ಜ್ಞಾನವು ಇದುವರೆಗೆ ವಿಜೃಂಭಿಸಿ ಪ್ರಕಾಶಿಸಿದ ರೀತಿಯೂ ಸಂಗ್ರಹವಾಗಿ ವಾಚಕರಿಗೆ ತಿಳಿಸಿರುವೆವು. ಇಂತಹ ಅಸಾಧಾರಣ ಪ್ರಜ್ಞಾವಂತನಾದ ಈ ರಾಮಮೋಹನನು ಇದುವರೆಗೆ ಕ್ರೈಸ್ತಮತ ಧರ್ಮಗಳನ್ನು ಅಷ್ಟು ಹೆಚ್ಚಾಗಿ ತಿಳಿದುಕೊಳ್ಳದೆ ಹೋದುದು ಸ್ವಲ್ಪ ಆಶ್ಚರ್ಯಕರವಾಗಿಯೇ ತೋರುವುದು ; ಆದರೆ ಈತನು ಈ ಕೊರತೆಯನ್ನು ನಿವಾರಿಸಿಕೊಳ್ಳಬೇಕೆಂತಲೇ 1816 ರಲ್ಲಿ ಶಿರಾಂಪುರದಲ್ಲಿ ಪ್ರಸಿದ್ಧವಾದ ಕೇರಿ ವಾರ್ಡ್, ಮಾರ್ಷ್‌ಮನ್ ಎಂಬ ಪಾದರಿಗಳೊಡನೆ ಸ್ನೇಹಮಾಡಿ, ಅವರ ಮತಾಭಿಪ್ರಾಯಗಳನ್ನು ಗ್ರಹಿಸತೊಡಗಿದನೆಂದು ತೋರುತ್ತದೆ. ಈತನು ಪ್ರಾರಂಭದಲ್ಲಿ ಇಂಗ್ಲೀಷುಭಾಷೆಯಲ್ಲಿ ಬರೆಯಲ್ಪಟ್ಟ ಬೈಬಲನ್ನು ಸಂಪೂರ್ಣವಾಗಿ ಓದಿದನು; ಆದರೂ ಭಾಷಾಂತರಿಸಿದ ಗ್ರಂಥಗಳನ್ನೋದಿ ತಿಳಿದುಕೊಳ್ಳುವ ಜ್ಞಾನಕ್ಕಿಂತ ಮೂಲಗ್ರಂಥಗಳು ಯಾವ ಭಾಷೆಯಲ್ಲಿ ಹುಟ್ಟಿದುವೋ ಅಂತಹ ಭಾಷೆಯ ಗ್ರಂಥವನ್ನೇ ಓದುವುದರಿಂದ ಉಂಟಾಗುವ ಜ್ಞಾನವು ಉತ್ತಮವಾದುದೆಂದು ತಿಳಿದು ಬೈಬಿಲ್ ಮೊದಲಲ್ಲಿ ಬರೆಯಲ್ಪಟ್ಟ ಹೀಬ್ರೂಭಾಷೆಯನ್ನು ಕಲಿಸುವುದಕ್ಕೆ ಒಬ್ಬ ಯೆಹೂದಿಯನನ್ನು ನಿಯಮಿಸಿಕೊಂಡನು. ಇದನ್ನು ಕುರಿತು

ಬಂಗಾಳಿಭಾಷೆಯಲ್ಲಿ ರಾಮಮೋಹನನ ಚರಿತ್ರೆಯನ್ನು ಬರೆದಾತನು 'ರಾಮಮೋಹನನು ಆರು ತಿಂಗಳಲ್ಲಿಯೇ ಈ ಭಾಷೆಯಲ್ಲಿ ಬರಿಯುವುದಕ್ಕೂ ಓದುವುದಕ್ಕೂ ಸಾಕಾದಷ್ಟು ಜ್ಞಾನವನ್ನು ಪಡೆದನು ' ಎಂದು ಬರೆದಿರುವನು. ಆದರೆ ಇದೇನೂ ಆಶ್ಚರ್ಯಕರವಲ್ಲವೆಂದು ಹೇಳಬಹುದು ಇವನಿಗೆ ಇದುವರಿಗೇನೆ ಅರಬ್ಬೀ ಭಾಷೆಯಲ್ಲಿ ಪರಿಪೂರ್ಣವಾದ ಜ್ಞಾನವುಂಟಾಗಿದ್ದಿತು. ಮಹಮ್ಮದೀಯರೆಲ್ಲರೂ ಈತನನ್ನು ಮೌಲ್ವೀ ರಾಮಮೋಹನರಾಯನೆಂದು ಕರೆಯುತಿದ್ದರು. ಹೀಬ್ರೂ ಭಾಷೆಯು ಬಹುಮಟ್ಟಿಗೆ ಅರಬ್ಬೀ ಭಾಷೆಯನ್ನೇ ಹೋಲಿರುವುದು. ಒಂದಂಶವನ್ನು ಒಂದಾವರ್ತಿ ನೋಡಿದ ಮಾತ್ರದಿಂದಲೇ ಆ ವಿಷಯವನ್ನು ಸಾಯುವತನಕ ಮರೆಯದಷ್ಟು ಕುಶಾಗ್ರಬುದ್ಧಿಯುಳ್ಳ ಈತನು ಆರುತಿಂಗಳಲ್ಲಿ ಆ ಭಾಷೆಯಲ್ಲಿ ಜ್ಞಾನವನ್ನು ಸಂಪಾದಿಸುವುದು ಅಸಾಧ್ಯವಲ್ಲ. ಆಗ ರೆವರೆಂಡ್ ವಿಲ್ಲಿಯಂ ಆಡಂ ಎಂಬ ಬಾಪ್ಟಿಸ್ಟು ಮತಬೋಧಕನಾಗಿದ್ದನು. ರಾಮಮೋಹನನು ಅವನನ್ನು ಪರಿಚಿತನಾಗಿ ಮಾಡಿಕೊಂಡು, ಯುನಾನಿ ಭಾಷೆಯಲ್ಲಿ ಪಾಠವನ್ನೋದುತ್ತಾ, ಈ ಮೂಲಕ ದಿನೇ ದಿನೇ ಸ್ನೇಹವನ್ನು ಬೆಳಸಿ, ಕೆಲವು ಕಾಲದ ಮೇಲೆ ಅವನನ್ನು ಸನ್ಮಾರ್ಗಕ್ಕೆ ತಂದನು. ಈ ಆಡಂ ದೊರೆಯು ರಾಮಮೋಹನನಿಗೆ ಎಂದಿಗಾದರೂ ತಮ್ಮ ಜ್ಞಾನಸ್ನಾನಮಾಡಿಸಬೇಕೆಂದು ಯೋಚಿಸಿದ್ದನು. ಪಾಪ !! ಇದಕ್ಕೆ ವಿರೋಧವಾಗಿ ಆ ದೊರೆಯೇ ಸ್ವಧರ್ಮವನ್ನು ಬಿಟ್ಟುಬಿಡಲೆಳಸಿದನು. ರಾಮಮೋಹನನಿಂದ ಸಕಾರಣವಾಗಿ ಮಾಡಲ್ಪಡುವ ವಾದಗಳು ಅವನ ಹೃದಯವನ್ನಾಕರ್ಷಿಸಿ, ಕೆಲವು ದಿನಗಳಲ್ಲಿಯೇ ಆತನಿಗೆ ಯೇಸುವು ದೇವರ ಮಗನಲ್ಲವೆಂತಲೂ, ಅಂತ್ಯವಿಚಾರಣೆಯ ದಿನವುಂಟೆಂಬುದು ಅಬದ್ಧವೆಂತಲೂ ತೋರಿತು. ಇದರಿಂದ ಇವನು ತನ್ನಫಾದಿರಿ ಉದ್ಯೋಗವನ್ನು ಪರಿತ್ಯಜಿಸಿ *ಯೂನಿಟೇರಿಯನ್ ಮತವನ್ನವಲಂಬಿಸಿ, ಜೀವನೋಪಾಯಕ್ಕಾಗಿ ಇಂಡಿಯಾ ಗೆಜೆಟ್ ಎಂಬ ಪತ್ರಿಕಾದಿಪತ್ಯವನ್ನು ವಹಿಸಿದನು. ಪೂರ್ವಮತಾಭಿಪ್ರಾಯದ ಬದಲಾವಣೆಯು ಆ ಮತದವರಿಗೆಲ್ಲ ಮನೋವ್ಯಥೆಯನ್ನೂ ತೊಂದರೆಯನ್ನೂ ಉಂಟುಮಾಡಿದ್ದರಿಂದ ಅವರು ಎಲ್ಲಾ ಕಡೆಗಳಿಂದಲೂ ನಿಂದೆಯನ್ನೂ, ಆಕ್ಷೇಪಣೆಯನ್ನೂ ಮಾಡತೊಡಗಿದರು, ಮತ್ತೂ ಸೃಷ್ಟಿಯ ಆದಿಕಾಲದಲ್ಲಿ ಹುಟ್ಟಿದ ಆಡಂ ಎಂಬವನು ಸೈತಾನನ ದುರ್ಬೋಧನೆಗೊಳಗಾಗಿ ತನ್ನ ಉನ್ನತಸ್ಥಾನದಿಂದ ಭ್ರಷ್ಟನಾದಹಾಗೆ ಈಗ ಈ ಆಡಂ ದೊರೆಯು ರಾಮಮೋಹನನ ದುರ್ಬೋಧನೆಗಳಿಂದ ತನ್ನ ಪದವಿಯನ್ನು ಕಳೆದುಕೊಂಡು 2ನೆಯ ಆಡಂ ಆದನಾದುದರಿಂದ ಇವನನ್ನು ' ಸೆಕೆಂಡ್‌ಫಾಲನ್ ಆಡಂ ' (ಪತಿತನಾದ 2 ನೆಯ ಆಡಂ) ಎಂದು ಹೆಸರಿರಿಸಿ ಕರೆಯ ಬೇಕೆಂತಲೂ ನಿರ್ಣಯಿಸಿದರು. ಆದರೂ ಧೀರನಾದ ಈ ವಿಲ್ಲಿಯಂ ಆಡಂ ಆ ದುರಾತ್ಮರ ಅಪಹಾಸ್ಯಗಳನ್ನು ಲಕ್ಷ್ಯಮಾಡದೆ, ತನ್ನ ಮನ

* ಏಸುಕ್ರಿಸ್ತನು ದೇವರ ಮಗನೆಂತಲೂ, ಅವನು ಮನುಷ್ಯರ ಪಾಪಪರಿಹಾರಕ್ಕಾಗಿ ಸತ್ತುಹೋದನೆಂತಲೂ, ಅಂತ್ಯಕಾಲದಲ್ಲಿ ಆತನಿಂದಲೇ ಪಾಪಿಗಳ ವಿಚಾರಣೆ ಮಾಡಲ್ಪಟ್ಟು ಮೋಕ್ಷವು ಕೊಡುವದೆಂತಲೂ, ಹೇಳುವ ಮಾತುಗಳನ್ನು ನಂಬದ ಮತಕ್ಕೆ ಯೂನಿಟೇರಿಯನ್ ಮತವೆಂದು ಹೆಸರು.

ಸ್ವಾಕ್ಷಿಗೆ ಯೋಗವೆಂದು ತೋರಿದ ಅಭಿಪ್ರಾಯದಲ್ಲಿಯೇ ಸ್ಥಿರಬುದ್ಧಿಯುಳ್ಳವನಾಗಿ ರಾಮಮೋಹನನ ಬಾಹ್ಯಾಭ್ಯಂತರಗಳಲ್ಲಿನ ಪರಿಶುದ್ಧ ಗುಣಗಳಿಗೆ ಬಹಳವಾಗಿ ಸಂತೋಷಿಸುತ್ತಲೂ, ತಾನು ಜೀವಿಸಿರುವ ತನಕ ರಾಮಮೋಹನನ ದೇಶೋದ್ಧರಣ ಕಾರ್ಯಕ್ಕೆ ತನ್ನ ಕೈಯಲ್ಲಾದಮಟ್ಟಿಗೆ ಸಹಾಯಮಾಡುತ್ತಲೂ ಇದ್ದನು.

ರಾಮಮೋಹನನು ಕ್ರೈಸ್ತರ ಮತಧರ್ಮಗಳನ್ನೆಲ್ಲ ತಿಳಿದುಕೊಂಡ ತರುವಾಯ ಇಂಜೀಲ್ ಎಂಬ ಆ ಕ್ರೈಸ್ತೀಯ ಗ್ರಂಥಗಳನ್ನು ತಮ್ಮ ದೇಶ ಭಾಷೆಗಳಲ್ಲಿ ಬರೆಯಬೇಕೆಂದು ಯೋಚಿಸಿ ಆಡಂ ಮತ್ತು ರೆವರೆಂಡ್ ಟಿಸೆ ಎಂಬಿವರ ಸಹಾಯದಿಂದ ಆ ಕೆಲಸಕ್ಕೆ ಪ್ರಾರಂಭಿಸಿದನು. ಆದರೆ ಸ್ವಲ್ಪ ದಿನಗಳಲ್ಲಿಯೇ ಟಿಸೆ ಎಂಬವನು ಮತ ವಿಷಯಗಳಲ್ಲಿ ರಾಮಮೋಹನನ ಅಭಿಪ್ರಾಯಕ್ಕೆ ವಿರುದ್ಧವಾದ ತಾತ್ಪರ್ಯವುಳ್ಳವನಾಗಿ, ಈ ಸಮಾಜವನ್ನು ಬಿಟ್ಟು ಹೋದನು. ಆದುದರಿಂದ ಆ ಕಾರ್ಯಕ್ಕೆ ವಿಘ್ನವುಂಟಾಯಿತು. ಹೀಗೆ ಈತನು ತನ್ನ ಕೋರಿಕೆಯನ್ನು ನೆರವೇರಿಸಿಕೊಳ್ಳದೆ ಹೋದರೂ ಈ ಕ್ರಿಸ್ತೀಯಮತಬೋಧಕರ ಸಹವಾಸದಿಂದ ತನಗೆ ಓದಲಿಕ್ಕೆ ಅನುಕೂಲಿಸಿದ ಗ್ರಂಥಗಳಲ್ಲಿ ಇದುವರೆಗೆ ಯಾವ ಮತ ಸಂಪ್ರದಾಯಗಳಲ್ಲಿಯೂ ಹೇಳಲ್ಪಡದಿದ್ದ ಹೊಸ ನೀತಿಯೊಂದನ್ನು ಕಂಡು ಹಿಡಿದನು. ಅದು "ನಿನ್ನಲ್ಲಿ ಪರರು ಹೇಗೆ ನಡೆದುಕೊಳ್ಳಬೇಕೆಂದು ಅಪೇಕ್ಷಿಸುವೆಯೋ ಹಾಗೆಯೇ ನೀನೂ ಪರರ ವಿಷಯದಲ್ಲಿ ನಡೆದುಕೊಳ್ಳತಕ್ಕದು" ಎಂಬುದೇ. ಇದನ್ನೇ ಆರಂಭಪೀಠಿಕೆಯಾಗಿ ತೆಗೆದುಕೊಂಡು, ಆ ಗ್ರಂಥಗಳಲ್ಲಿನ ನೀತಿಗಳನ್ನೆಲ್ಲ ಒಟ್ಟುಗೂಡಿಸಿ "ನಾನು ಹೇಳುವ ನೀತಿಗಳು ಸೌಖ್ಯಕ್ಕೆ ಮಾರ್ಗಗಳು" ಎಂಬ ಹೆಸರಿಟ್ಟು 1820 ರಲ್ಲಿ ಒಂದು ಪುಸ್ತಕವನ್ನು ಪ್ರಚುರಿಸಿದನು. ಇಂಗ್ಲಿಷ್ ಭಾಷೆಯಲ್ಲಿ ಬರೆಯಲ್ಪಟ್ಟ ಆ ಗ್ರಂಥವನ್ನು ದೇಶೀಯರು ಓದಿ, ಅವರ ಮತ ತತ್ವಗಳನ್ನೂ, ಜೀಸಸ್ ಎಂಬ ಮಹಾತ್ಮನ ಯೋಗ್ಯತೆಗಳನ್ನೂ ತಿಳಿದುಕೊಳ್ಳತಕ್ಕದ್ದೆಂದು ಆಲೋಚಿಸಿ, ಬಂಗಾಳೀ ಸಂಸ್ಕೃತ ಭಾಷೆಗಳಲ್ಲಿಯೂ ಅದನ್ನು ಬರೆದು ಮುದ್ರಿಸಿದನು. ಈ ಪ್ರಯತ್ನಕ್ಕೆ ಮತಬೋಧಕರಾದ ಪಾದ್ರಿಗಳು ತಮ್ಮ ಕೃತಜ್ಞತೆಯನ್ನು ಹೊರಪಡಿಸುವುದಕ್ಕೆ ಬದಲಾಗಿ, ಇವನನ್ನು ದ್ವೇಷಿಸತೊಡಗಿದರು. ಇದಕ್ಕೆ ಕಾರಣವಿಲ್ಲದೆ ಇರಲಿಲ್ಲ. ರಾಮಮೋಹನನು ಈ ಗ್ರಂಥದಲ್ಲಿ ಜೀಸಸ್ಸು ಹೇಳಿದ ಅಂತ್ಯವಿಚಾರಣೆ ಮೊದಲಾದ ಮತ ವಿಷಯಗಳೊಂದನ್ನೂ ಸೇರಿಸದೆ ಪೀಠಿಕೆಯಲ್ಲಿ ಹೀಗೆ ಬರೆದನು:—"ಈ ಕಾಲದಲ್ಲಿ ಮತಗಳು ಒಂದೇವಿಧವಾಗಿಲ್ಲದೆ ಹಲವುಬಗೆಗಳಾಗಿವೆ. ಮೂರ್ಖರಾದ ಕೆಲವರು ಸತ್ಯವೆಂಬುದಿಂತದೆಂದು ತಿಳಿಯಲಾರದೆ ಇದ್ದರೂ ಇತರ ಮತಗಳನ್ನಾಕ್ಷೇಪಿಸುವುದೇ ತಮ್ಮ ಉದ್ಯೋಗವೆಂದು ತಿಳಿದು ಹಾಗೆ ನಡೆಯುವರು. ಕೆಲವರು ವಿದ್ಯಾವಂತರಾಗಿದ್ದರೂ ಮತಾಭಿಮಾನದಿಂದ ಅಗಸ್ತ್ಯನು ಸಮುದ್ರವನ್ನು ಮೂರುಹಿಡಿ ನೀರಾಗಿ ಮಾಡಿ ತನ್ನ ಮೂತ್ರವಾಗಿ ಬಿಟ್ಟುಬಿಟ್ಟನೆಂತಲೂ ಆದರಿಂದಲೇ ಸಮುದ್ರದನೀರು ಉಪ್ಪಾಗಿರುವುದೆಂತಲೂ, ಇವೇ ಮುಂತಾದ ಅಸಂಬದ್ಧ ಪ್ರಸಂಗಗಳನ್ನು ಹೇಳಿದಕೂಡಲೇ ಸತ್ಯ, ಸತ್ಯ ಎಂದು ತಲೆದೂಗುವರು. ಆದುದರಿಂದ ಯೇಸುಕ್ರಿಸ್ತನ ಸ್ವಾಭಿಮಾನ ಪೂರಿತಗಳಾದ ಮತಬೋಧೆಗಳನ್ನುಳಿದು, ಪ್ರಪಂಚದಲ್ಲಿ ಎಲ್ಲಾ ಜಾತಿ

ಯವರಿಗೂ ಅನುಕೂಲವಾದುದಾಗಿಯೂ, ಅನುಸರಿಸತಕ್ಕುದಾಗಿಯೂ ಇರುವುದೆಂದು ತೋರಿದ ನೀತಿಗಳನ್ನೇ ಇದರಲ್ಲಿ ಸೇರಿಸಿರುವೆನು. ಈ ಪದ್ಧತಿಯೇ ಪಾದರಿಗಳಿಗೆ ಅನಿಷ್ಟವನ್ನೂ ದ್ವೇಷವನ್ನೂ ಉಂಟುಮಾಡಲು ಕಾರಣವಾಯಿತು. ಈ ಪುಸ್ತಕದಮೇಲೆ ಗ್ರಂಥಕರ್ತನ ಹೆಸರು ಬರೆಯಲ್ಪಡದಿದ್ದರೂ ಆತನು ಯಾರೆಂಬುದನ್ನು ಎಲ್ಲರೂ ತಿಳಿದೇ ಇದ್ದರು. ಈ ಗ್ರಂಥವು ಪ್ರಚುರವಾದ ಕೆಲವು ದಿನಗಳಲ್ಲಿಯೇ ಶ್ರೀರಾಂಪುರದ ಪಾದರಿಗಳಿಂದ ನಡಿಸಲ್ಪಡುವ ಹಿಂದೂದೇಶದ ಮಿತ್ರನು (Friend of India) ಎಂಬ ಆಂಗ್ಲೇಯ ವೃತ್ತಾಂತಪತ್ರದಲ್ಲಿ ಈ ಗ್ರಂಥವನ್ನು ತಿರಸ್ಕರಿಸುವ ವ್ಯಾಸವೊಂದು ಸ್ಮಿತ್ ಎಂಬ ಪಾದರಿಯಿಂದ ಬರೆಯಲ್ಪಟ್ಟಿತು. ಆ ಪತ್ರಿಕೆಯ ಯಜಮಾನನಾದ ಮಾರ್ಷ್‌ಮೆನ್ ಎಂಬವನು ಇದರಲ್ಲಿ ತನ್ನ ಅಭಿಪ್ರಾಯಗಳನ್ನೂ ಬರೆದು, ಅಲ್ಲಲ್ಲಿ ರಾಮಮೋಹನನನ್ನು ಕುರಿತು (ಹೀದನ್) ವಿಗ್ರಹಾರಾಧಕನೆಂದು ಸೂಚಿಸಿ ಆಕ್ಷೇಪಿಸಿದ್ದನು. ಕ್ರಿಸ್ತಿಯರಿಗೆ ಮೊದಲನೆಯ ವಿಜ್ಞಾಪನೆ (First Appeal to the Christian public) ಎಂಬ ಶೀರ್ಷಿಕೆಯಿಂದ ಆ ವಾರ್ತಾಪತ್ರದ ಆಕ್ಷೇಪಗಳಿಗೆ ಸತ್ಯಸ್ನೇಹಿತನು ಎಂಬ ಹೆಸರಿನಿಂದ ರಾಮಮೋಹನನು ಪ್ರತ್ಯುತ್ತರವನ್ನು ಪ್ರಕಟಿಸಿದ್ದನು. ಡಾಕ್ಟರ್ ಮಾರ್ಷ್‌ಮೆನ್ ಅದಕ್ಕೆ 1820ನೇ ಇಸವಿಯ ಮೇ ಮತ್ತು ಸೆಪ್ಟಂಬರು ತಿಂಗಳುಗಳ ಸಂಚಿಕೆಯಲ್ಲಿ ತಿರುಗಿ ಬದಲು ಆಕ್ಷೇಪಗಳನ್ನು ಬರೆದನು. ತರುವಾಯ ಗುಟ್ಟಾಗಿದ್ದ ತನ್ನ ಹೆಸರನ್ನು ಬಹಿರಂಗಪಡಿಸಿ ಕ್ರಿಸ್ತಿಯರಿಗೆ ಎರಡನೆಯ ವಿಜ್ಞಾಪನೆ (Second Appeal to the Christian public) ಎಂಬ ಪ್ರತ್ಯುತ್ತರವನ್ನು ಮುದ್ರಿಸಿದನು. 1821 ನೇ ಡಿಸೆಂಬರು ತಿಂಗಳ ಸಂಚಿಕೆಯಲ್ಲಿ ಡಾಕ್ಟರ್ ಮಾರ್ಷ್‌ಮೆನ್ ಇದಕ್ಕೆ ಸುದಾ ಮೊದಲಿಗಿಂತ ಚಮತ್ಕಾರವಾಗಿ ಉತ್ತರವನ್ನು ಬರೆದನು. ಈ ಆಕ್ಷೇಪಣೆಗಳಿಗೆ ರಾಮಮೋಹನನು "ಕ್ರಿಸ್ತಿಯರಿಗೆ ತುದಿಯ ವಿಜ್ಞಾಪನೆ" (Final Appeal to the Christian public) ಎಂಬ ಮೂರನೆಯ ಪ್ರತ್ಯುತ್ತರವನ್ನು ಬರೆದನು. ಆದರೆ ಮೊದಲು ಬರೆಯುತ್ತಿದ್ದ ಇಂಗ್ಲೀಷು ಗ್ರಂಥಗಳನ್ನೂ ವ್ಯಾಸಗಳನ್ನೂ ಬ್ಯಾಪ್ಟಿಸ್ಟೀಮಿಷನ್ ಮುದ್ರಾಕ್ಷರಶಾಲಾಧಿಕಾರಿಗಳು ಮುಂದೆ ತಮ್ಮ ಪ್ರೆಸ್ಸಿನಲ್ಲಿ ಇಂತಹ ಸ್ವಮತವಿರುದ್ಧವಾದ ಗ್ರಂಥಗಳನ್ನು ಎಷ್ಟು ಹಣಕೊಟ್ಟರೂ ಮುದ್ರಿಸಲಾರೆವು ಎಂದು ನಿರ್ಣಯಮಾಡಿಕೊಂಡದ್ದರಿಂದ ಒಡನೆಯೇ ಮುದ್ರಿಸಲು ಅವಕಾಶವಿಲ್ಲದೆ ಸ್ವಲ್ಪ ಕಾಲಹರಣವಾದರೂ ಸ್ವಲ್ಪಕಾಲದಮೇಲೆ ಸ್ವಂತವಾಗಿ ಆಂಗ್ಲೇಯ ಮುದ್ರಾಕ್ಷರಗಳನ್ನೂ ಮುದ್ರಾಯಂತ್ರಗಳನ್ನೂ ಕೊಂಡು ತಂದು "ಯೂನಿಟೇರಿಯನ್ ಪ್ರೆಸ್" ಎಂದು ಹೆಸರಿಟ್ಟು ಅದರಲ್ಲಿಯೇ ಈ ಮೂರನೆಯ ಪುಸ್ತಕವನ್ನು 1823 ರಲ್ಲಿ ಮುದ್ರಿಸಿ ಪ್ರಚುರಪಡಿಸಿದನು.

ಈ ಪುಸ್ತಕದಲ್ಲಿಯ ಸಹೇತುಕಗಳಾದ ಖಂಡನಗಳನ್ನು ನೋಡಿದ ಜನರೆಲ್ಲರೂ ಪರಮಾಶ್ಚರ್ಯಮಗ್ನರಾದರು. ಮಾರ್ಷ್‌ಮೆನ್‌ರವರು ತಮ್ಮ ಖಂಡನಪತ್ರಗಳಲ್ಲಿ ಇಂಗ್ಲೀಷ್ ಬೈಬಿಲ್ಲಿನ ಉದಾಹಣೆಗಳನ್ನು ಕೊಡುತ್ತಿದ್ದರು. ರಾಮಮೋಹನನು ಹೀಬ್ರೂ, ಗ್ರೀಕ್ ಭಾಷೆಗ

ಳಲ್ಲಿರುವ ಮೂಲಗ್ರಂಥಗಳಿಂದ ಅನೇಕ ವಾಕ್ಯಗಳನ್ನು ತೆಗೆದು ಭಾಷಾಂತರದಲ್ಲಿನ ದೋಷಗಳನ್ನೆಲ್ಲ ಹೊರಪಡಿಸಿ ನಿರ್ಣಯಮಾಡಿದನು.

1 ಯೇಸುಕ್ರಿಸ್ತನ ರಕ್ತದಿಂದ ಪ್ರಪಂಚವು ಪವಿತ್ರವಾಯಿತೆಂದು ಬೈಬಿಲಿನಲ್ಲಿ ಎಲ್ಲಿಯೂ ಹೇಳಲ್ಪಟ್ಟಿಲ್ಲ. ನಿರ್ಮಲಹೃದಯದಿಂದ ತನ್ನ ಪಾಪಗಳನ್ನೊಪ್ಪಿಕೊಂಡು ಪಶ್ಚಾತ್ತಾಪಪಡುವುದೇ ಪವಿತ್ರತೆಗೆ ಕಾರಣವೆಂದು ಬೈಬಿಲ್ ಸಾರಿ ಹೇಳುವುದು.

2 ಯೇಸುವು ದೇವರ ಮಗನೆಂದು ಹೇಳುವುದು ಅತಿಶಯೋಕ್ತಿ, ಬೈಬಿಲ್‌ನಲ್ಲಿ ಎಲ್ಲಿಯೂ ಇದನ್ನು ಹೇಳಿಲ್ಲ. ಪ್ರಸಿದ್ಧಪುರುಷರಲ್ಲಿ ಈತನೂ ಒಬ್ಬನೆಂತಲೂ ಭಕ್ತಾಗ್ರೇಸರನಾಗಿ ಆ ಭಕ್ತಿಜ್ಞಾನಗಳನ್ನು ಮೂಢರಿಗೆ ಬೋಧಿಸಿ ಅವರನ್ನು ಸನ್ಮಾರ್ಗಕ್ಕೆ ತಂದನೆಂಬುದನ್ನು ಮಾತ್ರ ಒಪ್ಪಿಕೊಳ್ಳಬಹುದು.

3 ಪಾಪ ಪುಣ್ಯಗಳನ್ನು ಕುರಿತು ಅಂತ್ಯವಿಚಾರಣೆಯೊಂದು ಆಗುವುದೆಂಬುದು ಸುದಾಯುಕ್ತಿಯುಕ್ತವಾದುದಲ್ಲವೆಂದು ಈತನು ಖಂಡಿಸಿದನು. ಇಂಥಾ ವಿಷಯಗಳನ್ನುಳ್ಳ ಗ್ರಂಥಗಳನ್ನು ನೋಡಿ ಡಾಕ್ಟರ್ ಮಾರ್ಷಮೆನ್‌ರು ಮೌನವಾಗಿರಲಿಕ್ಕಿಂತ ಬೇರೊಂದು ಉಪಾಯ ತೋರದೆ ಸುಮ್ಮನಾದರು. ತರುವಾಯ ಇಂಡಿಯಾ ಗೆಜೆಟ್ ಪತ್ರಿಕಾಧಿಪತಿಯು ರಾಮಮೋಹನರಾಯನು ವಿದ್ಯಾರ್ಜನೆಯಲ್ಲಿ ಅಜೇಯನೆಂತಲೂ ಅದ್ವಿತೀಯನೆಂತಲೂ ಬರೆದನು. ಮತ್ತು ಇಂಗ್ಲೆಂಡಿನಲ್ಲಿರುವ "ಮಂತ್ಲಿ ರಿಪಾಜಿಟರಿ" ಎಂಬ ಪತ್ರಿಕಾಧಿಪತಿಯು ಈ ಗ್ರಂಥವು ಎಲ್ಲಕ್ಕಿಂತ ಉತ್ಕೃಷ್ಟವಾಗಿರುವದಲ್ಲದೆ ಯೂನಿಟೇರಿಯನ್ ಮತಾಭಿಮಾನಿಗಳಿಗೆ ಮಹೋಪಕಾರಿಯಾಗಿದೆ ಎಂದೂ ಹೊಗಳಿ ಬರೆದನು.

1822ನೇ ಸಂವತ್ಸರದಲ್ಲಿ ಡಾಕ್ಟರ್ ಮಾರ್ಷಮೆನ್ ಎರಡನೆಯ ಅಪೀಲಿಗೆ ಬದಲು ಬರೆದು ತನ್ನ ಖಂಡನೆಗಳಿಗೆ ರಾಮಮೋಹನನ ಪ್ರತ್ಯುತ್ತರವು ಜಾಗ್ರತೆಯಲ್ಲಿ ಬಾರದ್ದರಿಂದ ಪ್ರೆಸ್ಸಿನ ಅಧಿಕಾರಿಗಳು ಮಾಡಿಕೊಂಡ ಕಟ್ಟಳೆಗಳನ್ನರಿಯದೆ, ಮುಂದೆ ಈತನು ಪ್ರತ್ಯುತ್ತರ ಬರೆಯಲಿಕ್ಕೆ ತೋರದೆ ಸುಮ್ಮನೆ ಆದನೆಂದು ತಿಳಿದು ರಾಮಮೋಹನನು ಪ್ರಕಟಿಸಿದ್ದ "ಫಸ್ಟ್ ಅಂಡ್ ಸೆಕೆಂಡ್ ಅಪೀಲ್ಸ್" ಎಂಬ ಎರಡು ವ್ಯಾಸಗಳನ್ನೂ, ತಾನು ಬರೆದ ಖಂಡನೆಗಳನ್ನೂ ಸೇರಿಸಿ ಒಂದು ಸಂಪುಟವಾಗಿ ಇಂಗ್ಲೆಂಡಿನಲ್ಲಿದ್ದ ತನ್ನ ಸ್ನೇಹಿತರಿಂದ ಅಲ್ಲಿಯೇ ಅಚ್ಚು ಹಾಕಿಸಿದನು. ಆದರೆ 1824ರಲ್ಲಿ ಯೂನಿಟೇರಿಯನ್ ಸಂಘದವರು ರಾಮಮೋಹನನಿಂದ ಬರೆಯಲ್ಪಟ್ಟ "ನಾನು ಹೇಳಿದ ರೀತಿಗಳು ಸೌಖ್ಯಕ್ಕೆ ಮಾರ್ಗಗಳು" ಎಂಬ ಗ್ರಂಥಗಳನ್ನೂ ಫಸ್ಟ್, ಸೆಕೆಂಡ್ ಅಂಡ್ ಫೈನಲ್ ಅಪ್ಪೀಲ್ ಎಂಬ ಮೂರು ವ್ಯಾಸಗಳನ್ನೂ ಸೇರಿಸಿ ಒಂದು ಸಂಪುಟವಾಗಿ ಪ್ರಚುರಿಸಿದನು. 1828ರಲ್ಲಿ ಈ ಸಲವೂ ಇದು ಅಮೇರಿಕಾಖಂಡದಲ್ಲಿ ಮರಳಿ ಮುದ್ರಿಸಲ್ಪಟ್ಟಿತು. 1834ರಲ್ಲಿ ಲಂಡನ್ ನಗರದಲ್ಲಿ ಇದು ಮೂರನೆಯಸಾರಿ ಅಚ್ಚುಹಾಕಲ್ಪಟ್ಟಿತು. ಆಗ ರಾಮಮೋಹನನು ಆ ಪಟ್ಟಣದಲ್ಲಿಯೇ ಇದ್ದನು. ಈ ಮೇರೆಗೆ ಈತನ ಪ್ರಸಿದ್ಧಿಯು ಯೂರೋಪ್ ಅಮೇರಿಕಾಖಂಡಗಳತನಕ ವ್ಯಾಪಿಸಿತು.

ಹೀಗೆ ಮಾರ್ಷಮೆನ್ ಸಂಗಡ ವಿವಾದಗಳು ಜರುಗುತ್ತಿದ್ದ ಕಾಲದಲ್ಲಿಯೇ ಶ್ರೀರಾಮ

ಪುರದ ಪಾದಿರಿಗಳಿಂದ ಪ್ರಚುರಿಸಲ್ಪಡುತ್ತಿದ್ದ "ಸಮಾಚಾರದರ್ಪಣ" ಎಂಬ ಬಂಗಾಳೀಭಾಷಾಪತ್ರಿಕೆಯ 1321ನೇ ಜುಲೈ 14ನೇ ತಾರೀಖಿನ ಪತ್ರಿಕೆಯಲ್ಲಿ ಹಿಂದೂಧರ್ಮಗಳನ್ನು ದೂಷಿಸುವ ಕೆಲವು ಪ್ರಶ್ನೆಗಳನ್ನು ಬರೆದು ಇದಕ್ಕೆ ಹಿಂದೂಮಹಾಸಂಘದವರಲ್ಲಿ ಯಾರಾದರೂ ಪ್ರತ್ಯುತ್ತರವನ್ನು ಕೊಡಬಹುದೆಂದು ಒಂದು ವ್ಯಾಸವು ಪ್ರಕಟಿಸಲ್ಪಟ್ಟಿತು. ಆಗ ಮತದ್ವೇಷವೇ ಪ್ರಧಾನವಾಗಿ ಉಳ್ಳ ಈ ಅಕ್ರಮಕಾರ್ಯಕ್ಕೆ ಪ್ರತಿಭಟಿಸಿ ನಿಲ್ಲಲು ಸ್ವಜಾತಿಯವರೆಲ್ಲರಿಂದಲೂ ವಿರೋಧಿಯಾಗಿ ಭಾವಿಸಲ್ಪಡುತ್ತಿದ್ದ ರಾಮಮೋಹನನೊಬ್ಬನು ಶಕ್ತನಾಗಿದ್ದುದರಿಂದ ಆ ಪ್ರಶ್ನೆಗಳಿಗೆಲ್ಲ ಮೃದುವಾಗಿ ಸದುತ್ತರಗಳನ್ನು ಬರೆದು ಮರಳಿ ಆ ಪತ್ರಿಕಾಧಿಪತಿಯ ಬಳಿಗೆ ಪ್ರಚುರಪಡಿಸಲಿಕ್ಕಾಗಿ ಕಳುಹಿಸಿದನು. ಆದರೆ ಅವರು ಅದನ್ನು ಮುದ್ರಿಸಲು ಒಪ್ಪದೆ ಹೋದರು. ಇದರಿಂದ ಹೊಸದಾಗಿ ಪ್ರಕಟಿಸಲ್ಪಡುತ್ತಾ ಇದುವರೆಗೆ ಎರಡು ಸಂಚಿಕೆಗಳು ಮಾತ್ರ ಹೊರಡಿಸಲ್ಪಟ್ಟಿದ್ದ "ಬ್ರಾಹ್ಮಿನಿಕಲ್ ಮೆಗಜೀನ್" ಎಂಬ ಮಾಸಪತ್ರಿಕೆಯಲ್ಲಿ ಈ ಖಂಡನೆಯನ್ನು ಪ್ರಕಟಿಸಿದನು. ಇದರಲ್ಲಿ ವೇದಾಂತ, ನ್ಯಾಯ, ಮೀಮಾಂಸಾ, ಪುರಾಣಗಳನ್ನು ಕುರಿತ ಆಕ್ಷೇಪಣೆಗಳಿಗೆಲ್ಲ ಸಹೇತುಕವಾಗಿ ಉತ್ತರ ಕೊಡಲ್ಪಟ್ಟಿದ್ದಲ್ಲದೆ ಹಿಂದೂಮತದಲ್ಲಿನ ವಿಷಯಗಳು ಎಷ್ಟುಮಟ್ಟಿಗೆ ಬುದ್ಧಿಗೆ ವಿರುದ್ಧಗಳಾಗಿ ತೋರಿದರೂ, ಜೀಸೆಸನ ಜನ್ಮವನ್ನೂ, ಆತನ ದೈವತ್ವವನ್ನೂ, ಕುರಿತು ಹೇಳುವ ವಿಷಯಗಳಂತಹ ವಿಪರೀತಗಳಾಗಿಲ್ಲವೆಂದು ಸ್ಥಿರಪಡಿಸಿದನು. ಪಾದಿರಿಗಳು ಇದಕ್ಕೆ "ಫ್ರೆಂಡ್ ಆಫ್ ಇಂಡ್ಯ" ಎಂಬ ಪತ್ರಿಕೆಯಲ್ಲಿ ಪ್ರತ್ಯುತ್ತರವನ್ನು ಬರೆದರು. ಆದರೂ ಬ್ರಾಹ್ಮಿನಿಕಲ್ ಮೆಗಜೀನ್‌ನಲ್ಲಿ ಮತ್ತೊಂದು ಪೂರ್ವಪಕ್ಷವ್ಯಾಸವನ್ನು ಶಿವಪ್ರಸಾದಶರ್ಮನೆಂಬ ಹೆಸರಿನಿಂದ ಪ್ರಚುರಿಸಿ ಕೆಲವುದಿನಗಳ ತನಕ ನಿರೀಕ್ಷಿಸಿ ಪಾದಿರಿಗಳು ಉತ್ತರ ಕೊಡದೆ ಮೌನವಾಗಿದ್ದುದರಿಂದ ಅವರ ಆಕ್ಷೇಪಣೆಗಳನ್ನೂ ತನ್ನ ಪ್ರತ್ಯುತ್ತರಗಳನ್ನೂ ಸೇರಿಸಿ ಇಂಗ್ಲಿಷ್ ಭಾಷಾನುವಾದದೊಡನೆ ಒಂದು ಸಂಪುಟದಲ್ಲಿ ಮುದ್ರಿಸಿದನು.

1823 ರಲ್ಲಿ ಸಣ್ಣದಾದರೂ ವಿಚಿತ್ರವಾದ ಒಂದು ಚರ್ಚೆ ನಡೆಯಿತು. ಆನರೆಬಿಲ್ ಈಸ್ಟಿಂಡಿಯಾ ಕಂಪೆನಿಯವರ ಉದ್ಯೋಗಸ್ಥನಾಗಿಯೂ, ಮತವಿಷಯಗಳಲ್ಲಿ ಅನೇಕ ಗ್ರಂಥಗಳನ್ನು ಬರೆದವನಾಗಿಯೂ, ಏಷ್ಯಾಟಿಕ್ ಸೊಸೈಟಿಯ ಸಾಮಾಜಿಕನಾಗಿಯೂ, ಮತಾಭಿಮಾನದಿಂದ ಯೇಸುಕ್ರಿಸ್ತನ ದೈವತ್ವವನ್ನು ನಂಬಿ ಯೂನಿಟೇರಿಯನ್ ಮತದವರೆಲ್ಲರೂ ಅಧೋಗತಿಯನ್ನು ಹೊಂದುವರೆಂದು ತಿಳಿದವನಾಗಿಯೂ ಇದ್ದ ಡಾಕ್ಟರ್ ಟೈಲರ್ M.D. ಎಂಬುವನು ಯೂನಿಟೇರಿಯನ್ ಮತಾಭಿಮಾನವನ್ನು ವಹಿಸಿದ್ದಕ್ಕಾಗಿ ರಾಮಮೋಹನನಲ್ಲಿ ಒಂದು ವಿಧವಾದ ದ್ವೇಷವನ್ನು ಹೊಂದಿ "ಬೆಂಗಾಲ್ ಹರ್ಕಾರ್" ಎಂಬ ಪತ್ರಿಕೆಯ 1823 ನೇ ಮೇ 3 ನೇ ದಿನದ ಸಂಚಿಕೆಗೆ ರಾಮಮೋಹನನನ್ನು ಹಲವು ಬಗೆಗಳಿಂದ ಆಕ್ಷೇಪಿಸಿ ತನ್ನ ಅಸಮ್ಮತವನ್ನು ಹೊರಪಡಿಸಿ ಒಂದು ಪತ್ರ ಬರೆದನು. ರಾಮಮೋಹನನು ಅದನ್ನು ನೋಡಿ "ಯೇಸುವೇ ದೈವವೆಂದು ತಿಳಿದು, ಆತನು ಜನರ ಪಾಪಗಳಿಗೆ ಬದಲಾಗಿ ತನ್ನ ಪ್ರಾಣಗಳನ್ನು ಕೊಟ್ಟನೆಂದು ನಂಬಿ, ತಮಗೆ ಅದೇ ಪವಿತ್ರವೆಂದು ತಿಳಿದು, ತೃಪ್ತಿಪಡುವ ಕ್ರಿಸ್ತೀಯರೂ, ಅವತಾರ ಪುರುಷನನ್ನು ಪೂಜಿಸುವುದೂ, ಮನ್ವಾದಿಗಳನ್ನು ಸ್ತುತಿ

ಸುವುದೂ, ತಮ್ಮ ಮುಕ್ತಿಗೆ ಪರಮಸಾಧನಗಳೆಂದು ಭಾವಿಸುವ ಹಿಂದುಗಳೂ ಸಮಾನರಾಗಿ ಗರ್ಹಿತರೇ ಸರಿ'' ಎಂಬುದೇ ತನ್ನ ಅಭಿಪ್ರಾಯವೆಂದು ಉತ್ತರ ಬರೆದು ಪ್ರಚುರಪಡಿಸಿದನು. ಟೈಲರು ಈ ಲೇಖನವನ್ನು ನೋಡಿ, ಬಹಳವಾಗಿ ಸಿಟ್ಟುಗೊಂಡು “ ಬೈಬಿಲಿನೊಳಗಣ ಪವಿತ್ರಾಂಶಗಳಿಗೆ ವಿಪರೀತಾರ್ಥವನ್ನು ಗ್ರಹಿಸಿದ ಯೂನಿಟೇರಿಯನ್ ಮತಾಭಿಮಾನಿಯಾದ ಒಬ್ಬ ಹಿಂದುವು ನಮ್ಮ ಹಿರಿಯರಕಾಲದಿಂದಲೂ ನಾವು ಪ್ರಮಾಣವೆಂದು ಭಾವಿಸರುವ ಸತ್ಯಧರ್ಮಗಳನ್ನು ತಿರಸ್ಕರಿಸುತ್ತಿರುವನು. ಅವನ ಅಜ್ಞಾನಾಂಧಕಾರವನ್ನು ನನ್ನ ಸತ್ಯವಾದವೆಂಬ ಸೂರ್ಯೋದಯದಿಂದ ತೊಲಗಿಸುವುದಕ್ಕಾಗಿ ಒಂದು ದೊಡ್ಡ ಸಭೆ ಸೇರಿಸಬೇಕೆಂದು ಪ್ರಾರ್ಥಿಸುವೆನು. ಕ್ರಿಸ್ತಮತಾಭಿಮಾನಿಗಳಾದ ವಾಚಕರೇ ! ನೀವುಗಳೆಲ್ಲರೂ ಈ ಪ್ರಯತ್ನಕ್ಕೆ ಸಹಾಯಕರಾಗಿರಿ'' ಎಂದು ಬರೆದು ತನ್ನ ದ್ವೇಷವನ್ನು ಹೊರಪಡಿಸಿದನು.

ಇಂತಹ ಚರ್ಚೆಗಳಿಗೆ ರಾಮಮೋಹನನು ಎಷ್ಟು ವಿವೇಕದಿಂದ ನಡೆದುಕೊಳ್ಳುವೆನೆಂಬುದನ್ನು ವಾಚಕರು ಇದುವರೆಗೇ ತಿಳಿದಿರುವರು. ಇವನು ಟೈಲರ್ ಬರೆದುದನ್ನು ನೋಡಿ, ಇದರ ಪರ್ಯವಸಾನವು ಹೇಗೆ ಆಗುವುದೋ ನೋಡೋಣವೆಂದು ಯೋಚಿಸಿ, ಮೊದಲು ಟೈಲರ್ ಮೇ 3 ರಲ್ಲಿ ಪ್ರಕಟಿಸಿದ ಪತ್ರದ ಆಧಾರದಮೇಲೆ ರಾಮದಾಸನೆಂಬ ನಾಮಾಂತರದಿಂದ ಇದರಡಿ ಬರೆದಂತೆ ಒಂದು ಉತ್ತರವನ್ನು ಬರೆದು ಪ್ರಚುರಗೊಳಿಸಿದನು.

ನಮ್ಮಿಂದ ಬರೆಯಲ್ಪಟ್ಟ ಮೇ 3 ನೇ ತಾರೀಖಿನ ಬೆಂಗಾಲ್ ಹರ್ಕಾರ್ ಪತ್ರಿಕೆಯ ವ್ಯಾಸವನ್ನು ನೋಡಿ ಅದರಲ್ಲಿ ರಾಮಮೋಹನನನ್ನು ಹಿಂದುವೆಂದು ಭ್ರಮಿಸಿ ನಿಮ್ಮ ಮನಸ್ಸು ಬಂದಂತೆ ಆತನ ಮತವನ್ನು ದೂಷಿಸಿರುವುದಕ್ಕಾಗಿ ತುಂಬಾ ವಿಷಾದಿಸುತ್ತೇನೆ. ನಿಜವಾಗಿ ವಿಚಾರಮಾಡಿ ನೋಡಿದರೆ ಕ್ರಿಸ್ತೀಯರೂ ಹಿಂದುಗಳೂ ದೇವರು ಮನುಷ್ಯಾವತಾರವನ್ನೆತ್ತಿದನೆಂಬುವುದನ್ನು ಒಪ್ಪಿಕೊಳ್ಳತಕ್ಕವರಾಗಿದ್ದಾರೆ. ಆದುದರಿಂದ ಸಾಮಾನ್ಯವಾಗಿ ಈ ಎರಡು ಮತಗಳೂ ಕೆಲವು ಸಿದ್ಧಾಂತ ಭೇದಗಳಲ್ಲಿ ಹೊರತು ಉಳಿದ ಮುಖ್ಯವಿಷಯಗಳಲ್ಲಿ ಒಂದೇ ಅಭಿಪ್ರಾಯವುಳ್ಳವುಗಳಾಗಿವೆ. ದೇವರು ಮನುಷ್ಯಶರೀರದಲ್ಲಿ ಅವತರಿಸಿದನೆಂಬ ಮಾತು ಸ್ವಲ್ಪವೂ ವಿಶ್ವಾಸಾರ್ಹವಲ್ಲವೆಂದು ವಾದಿಸುವ ಯೂನಿಟೇರಿಯನ್ ಮತಾಭಿಮಾನಿಯಾದ ರಾಮಮೋಹನನು ನಿಜವಾಗಿಯೂ ಪೂರ್ವೋಕ್ತಮತಗಳೆರಡಕ್ಕೂ ವಿರೋಧಿಯಾಗಿರುವನೆಂಬುದಕ್ಕೆ ಸಂದೇಹವೇನು ? ರಾಮಮೋಹನನನ್ನು ಸೋಲಿಸುವುದೇ ನಿಮ್ಮ ಮುಖ್ಯೋದ್ದೇಶವಾಗಿದ್ದಲ್ಲಿ ಹಿಂದುಗಳನ್ನು ಆಕ್ಷೇಪಿಸುವುದಕ್ಕೆ ಬದಲಾಗಿ ಉಭಯಮತಗಳ ಪ್ರಥಮ ಪೀಠಿಕೆಯೊಂದೇ ಎಂದು ತಿಳಿದುಕೊಂಡು ಇದಕ್ಕೆ ಮೊದಲುಮಾಡಿದ ತಪ್ಪುಗಳಿಗೆ ಕ್ಷಮೆಯನ್ನು ಬೇಡಿ, ನಿಮ್ಮ ಪಕ್ಷವು ಬಲವಾಗಲಿಕ್ಕಾಗಿ ಆತನನ್ನು ನಿಮ್ಮೊಂದಿಗೆ ಸೇರಿಸಿಕೊಂಡರೆ ಯುಕ್ತವಾಗಿರುವುದೆಂದು ನಿಮಗೆ ಸೂಚಿಸುತ್ತೇನೆ.

ಈ ಲೇಖನವನ್ನು ಪ್ರಚುರಪಡಿಸುವುದಕ್ಕೆ ಬೆಂಗಾಲ್ ಹರ್ಕಾರ್ ಪತ್ರಿಕೆಗೆ ಕಳುಹಿಸಿದನು. ಆ ಪತ್ರಿಕಾಧಿಕಾರಿಯು ಕ್ರಿಸ್ತಿಯನಾಗಿದ್ದುದರಿಂದ ಇದನ್ನು ಪ್ರಕಟಿಸಲು, ಒಪ್ಪ

ಲಿಲ್ಲ. ತರುವಾಯ ಆ ಲೇಖನವನ್ನು ಟಪಾಲ್ ಮೂಲಕ ಟೈಲರಿಗೆ ಕಳುಹಿ, ಮತದ್ವೇಷ ವನ್ನೇ ಮುಖ್ಯವಾಗಿ ತಿಳಿದು ಹಿಂದುಗಳನ್ನು ಆಕ್ಷೇಪಿಸಿ ಬರೆಯುವ ವ್ಯಾಸಗಳನ್ನು ಪ್ರಕಟಿ ಸುವುದೂ ಅದಕ್ಕೆ ವ್ಯತಿರಿಕ್ತವಾಗಿ ಬರೆದ ಖಂಡನೋಪನ್ಯಾಸಗಳನ್ನು ಪ್ರಕಟಿಸದೆ ಹೋಗು ವುದೂ, ಸ್ವಭಾವವಾಗಿ ಉಳ್ಳ ನಮ್ಮ ಪತ್ರಿಕೆಯ ಅನ್ಯಾಯಗಳನ್ನು ವಿವೇಕಿಗಳಾದ ಸಜ್ಜ ನರು ತಿಳಿದುಕೊಳ್ಳುವ ವೇಳೆ ಸಮೀಪಿಸಿದೆ. ತೊಂದರೆ ಏತಕ್ಕೆ ? ಎಂದು ಮತ್ತೊಂದು ಪತ್ರ ಬರೆದು ಅದನ್ನು ಪತ್ರಿಕಾಧಿಕಾರಿಗೆ ಕಳುಹಿಸಿದನು. ಆತನು ಇವನ್ನು ನೋಡಿದ ಕೂ ಡಲೆ ಕ್ಷಮೆಯನ್ನು ಬೇಡಿಕೊಂಡು ಮೊದಲು ತಾನು ತಿರಸ್ಕರಿಸಿದ್ದ ಲೇಖನವನ್ನು ಮರುಸಂ ಚಿಕೆಯಲ್ಲಿ ಪ್ರಚುರಿಸಿದನು. ಕೆಲವು ದಿನಗಳಾದಮೇಲೆ ಟೈಲರ್ ತನಗೆ ರಾಮಮೋಹನನು ಬರೆದಿದ್ದ ಪತ್ರಕ್ಕೆ ಹೀಗೆ ಪ್ರತ್ಯುತ್ತರವಿತ್ತನು.

ರಾಮದಾಸೇ ! ನಿಮ್ಮ ಪತ್ರವನ್ನೋದಿದೆನು. ಪವಿತ್ರವಾದ ನಮ್ಮ ಮತವನ್ನು ದೂಷಿಸಿರುವುದು ಸರಿಯಲ್ಲ. ಮುಂದೆ ನಾನು ಹಿಂದೂ ಯೂನಿಟೇರಿಯನ್ ಮತಗಳೆರಡೂ ಒಂದೇ ಎಂತಲೂ, ಇವೆರಡು ಮತಗಳೂ ಸೈತಾನನಿಂದ ಉತ್ಪನ್ನವಾದವುಗಳೆಂತಲೂ, ಸಿದ್ಧಾಂ ತಪಡಿಸುವುದಕ್ಕಾಗಿ ಈದಿನ ಸಾಯಂಕಾಲದಲ್ಲಿಯೇ ಒಂದು ಮಹಾಸಭೆಯನ್ನು ಕೂಡಿಸ ಬೇಕೆಂದು ಯೋಚಿಸಿದೆನು. ಆದರೂ ಕೇಳಲಪೇಕ್ಷಿಸುವ ಕೆಲವು ದೊಡ್ಡ ಮನುಷ್ಯರು ಬರುವ ತನಕ ಈ ಯೋಚನೆಯನ್ನು ತಡೆಯಬೇಕೆಂದು ನನ್ನ ಪರಮಮಿತ್ರನಾದ ರಾಬಿನ್‌ಸನ್ ಹೇಳಿದ್ದರಿಂದ ಯತ್ನವಿಲ್ಲದೆ ಅದಕ್ಕೆ ಒಪ್ಪಬೇಕಾಯಿತು. ಇತರ ಸಹಾಯಗಳು ಯಾವುವೂ ಇಲ್ಲದೆ ದೇವರ ಪವಿತ್ರ ಗ್ರಂಥವೆಂಬ ತೀಕ್ಷ್ಣವಾದ ಆಯುಧವೊಂದನ್ನೇ ಕೈಯಲ್ಲಿ ಹಿಡಿದ ಮನುಷ್ಯಮಾತ್ರನೊಬ್ಬನು ನಾಳೆ ಎಷ್ಟು ಜನ ದುರ್ಮತಿಗಳ ತಲೆಯನ್ನು ತರಿದೊಟ್ಟುವನೋ ನೋಡಲಕ್ಕೆ ಸಿದ್ಧವಾಗಿರಿ. ಮಹಾಶಕ್ತಿಯುಕ್ತವಾದ ಆ ವೀರಖಡ್ಗವನ್ನು ನೀನೂ ನಿನ್ನ ಮಿತ್ರನಾದ ರಾಮಮೋಹನನೂ ಮತ್ತು ಪತಿತನಾದ ಆದಮನಂತವರೆಷ್ಟು ಮಂದಿಯಾದ ರೂ ಇದಿರಿಸಲಾರರೆಂದು ತಿಳಿದುಕೊಳ್ಳುವುದು. " ಹೀಗೆ ನಿನ್ನ ವಿರೋಧಿ ಆರ್. ಟೈಲರ್ "

ತರುವಾಯ ಯಾವ ಕಾರಣದಿಂದಲೋ ಟೈಲರ್ ಸಭೆಗೂಡಿಸುವ ಹೆಸರನ್ನೇ ಎತ್ತದೆ ಕೆಲವು ದಿನಗಳನ್ನು ಕಳೆದನು. ತರುವಾಯ ಉತ್ತರ ಪ್ರತ್ಯುತ್ತರರೂಪವಾಗಿ ವಿವಾದಮಾಡಲಾ ರಂಭಿಸೆ, ಈತನು ಪ್ರತಿಲೇಖನದಲ್ಲಿಯೂ ಮುಖ್ಯವಿಷಯಗಳನ್ನೆಲ್ಲಾ ಬಿಟ್ಟು, ಅನುಪಯೋಗವೂ, ಅಪ್ರಸ್ತುತವೂ ಆದಮಾತುಗಳಿಂದ ಹೆದರಿಸುತ್ತ ಬಂದನು. ರಾಮಮೋಹನನೂ ಅದಕ್ಕೆ ಕ್ರಿಸ್ತ ಮತ, ಹಿಂದೂಮತಗಳೆರಡೂ ಒಂದೇ ಎಂದು ಒಪ್ಪಿಕೊಳ್ಳುವುದೇ, ಅಥವಾ ತಕ್ಕ ಕಾರಣಗಳಿಂದ ಖಂಡಿಸುವುದೇ, ಇವುಗಳನ್ನುಳಿದು ನಿಷ್ಪ್ರಯೋಜನಗಳಾದ ಪ್ರಸಂಗಗಳಿಂದ ಹೆದರಿಸುವುದು ವಿದ್ಯಾವಂತರ ಪದ್ಧತಿಗೆ ವಿರೋಧವಾದುದೆಂದು ಬರೆಯುತ್ತಾ, ಅಲ್ಲಲ್ಲಿ ಮೃದುಪದಗಳಿಂದಲೂ, ಪ್ರಹಸನಗಳಿಂದಲೂ ಅವರ ಮತದಲ್ಲಿನ ಆಕ್ಷೇಪಾರ್ಹಗಳಾದ ವಿಷಯಗಳನ್ನು ಮಾತ್ರ ಹೊ ರಪಡಿಸುತ್ತಲೂ ಬರೆದನು. ಪಾಪ ! ಟೈಲರ್ ತಾನು ಮಾಡತಕ್ಕುದೇನೂ ತೋರದೆ

ರಾಮಾಯಣವೂ, ಭಾರತವೂ ಮಹಮ್ಮದೀಯರು ಹಿಂದೂಸ್ಥಾನಕ್ಕೆ ಬಂದಮೇಲೆ ಬರೆಯಲ್ಪಟ್ಟುವುಗಳೆಂತಲೂ, ಹಿಂದುಗಳು ಅವತಾರವೆಂಬ ಶಬ್ದವನ್ನು ಬೈಬಲಿನಿಂದಲೇ ಕಲಿತುಕೊಂಡರೆಂತಲೂ ಚರಿತ್ರಜ್ಞಾನವಿಲ್ಲದ ಅಸಂಬಂಧವಾಕ್ಯಗಳಿಂದ ಬರೆದು ರಾಮಮೋಹನನಿಗೆ ಪ್ರತ್ಯುತ್ತರವಾಗಿ ಪ್ರಕಟಿಸಿದನು. ಆದರಮೇಲೆ ರಾಮಮೋಹನನು 'ಡಾಕ್ಟರ್ ಆಫ್ ಮೆಡಿಸನ್' ಎಂಬ M. D. ಪ್ರಶಸ್ತಿಯನ್ನು ತಾವು ಯಾವ ಕಲಾಶಾಲೆಯಿಂದ ಪಡೆದಿರಿ ? ಅಲ್ಲಿ ವಿದ್ಯಾಪರಿಶ್ರಮವುಳ್ಳವರಿಗೆ ಆ ಪ್ರಶಸ್ತಿಯನ್ನು ಕೊಡುವುದು ಅರ್ಹವಾಗಿದೆಯೇ ? ಎಂದು ಲಿಖಿತಪೂರ್ವಕ ಕೇಳಿದನು. ಅದಕ್ಕೆ ಟೈಲರ್ ಧೊರೆಗಳು " ಮೌನಮೇವ ವಿಭೂಷಣಂ "ಎಂಬ ನೀತಿಯನ್ನನುಸರಿಸಿ ಸುಮ್ಮನೆ ಆದರು. 1823 ನೇ ಮೇ 3 ನೇ ತಾರೀಖಿನಲ್ಲಿ ಪ್ರಾರಂಭಿಸಿದ ಈ ಚರ್ಚೆಯು ಮೇ 23 ನೇ ವರೆಗೂ ನಡೆಯುತ್ತಲೇ ಇದ್ದಿತು. ಜೂನ್ 30 ನೇ ತಾರೀಖಿಗೆ ರಾಮಮೋಹನನು ಈ ಉತ್ತರಪ್ರತ್ಯುತ್ತರಗಳನ್ನೆಲ್ಲಾ ಪುಸ್ತಕರೂಪವಾಗಿ ಪ್ರಕಟಿಸಿದನು. ಗ್ರಂಥವು ಪ್ರಚುರಿಸಲ್ಪಟ್ಟಮೇಲೆ ಟೈಲರು ರೋಷಾವಿಷ್ಟನಾಗಿ ಮರಳಿ ವಾದಿಸಲಿಕ್ಕೆ ಪ್ರಾರಂಭಿಸಿದನು. ಆದರೆ ಪ್ರತ್ಯುತ್ತರ ಕೊಡುವುದರೊಳಗಾಗಿ ಈತನು ಈ ದೇಶವನ್ನು ಬಿಟ್ಟು ಹೊರಟುಹೋಗಬೇಕಾಗಿ ಬಂದುದರಿಂದ ಹೊರಟುಹೋದನು. ಟೈಲರ್‌ರವರಿಗೆ ರಾಮಮೋಹನನಿಂದ ಬರೆದು ಕಳುಹಿಸಲ್ಪಟ್ಟ ಪ್ರಹಸನದಲ್ಲಿ ಕೆಲವು ವಾಕ್ಯಗಳನ್ನು ವಾಚಕರಿಗೆ ಸಂತೋಷಕರವಾಗಿರಲೆಂದು ಇದರಡಿ ಬರೆದಿರುವೆವು.

ಪಾದಿರಿಯವರಿಗೂ, ಅವರ ಮೂವರು ಶಿಷ್ಯರಿಗೂ ನಡೆದ ಸಂಭಾಷಣೆ:—

ಫಾದಿರಿ—(ಮೂವರು ಶಿಷ್ಯರೊಂದಿಗೆ) ಪ್ರಿಯಮಿತ್ರರೇ ! ದೇವರು ಎಷ್ಟುರೂಪಗಳನ್ನುಳ್ಳವನು ?

ಮೊದಲನೆಯ ಶಿಷ್ಯ—ಮೂರು. ದ್ವಿತೀಯನು—ಎರಡು. ತೃತೀಯನು—ಯಾವ ರೂಪವೂ ಇಲ್ಲದವನು.

ಫಾದಿರಿ—ಏನಿದು ! ನೀನು ಸೈತಾನನ ಪದ್ಧತಿಯಲ್ಲಿ ಸೇರಿದ್ದೀಯೆ ?

ಶಿಷ್ಯರು—ತಾವು ಯಾರಲ್ಲಿ ಕಲ್ತಿರೋ ನಮಗೆ ತಿಳಿಯದು. ನಮಗೆ ಮಾತ್ರ ತಾವೇ ಬೋಧಕರಲ್ಲವೆ ?

ಫಾದಿರಿ—(ಮೊದಲನೆಯವನ ಕಡೆಗೆ ತಿರುಗಿ) ಸರಿಸರಿ. ಮೂರುರೂಪಗಳೂ ಹೇಗೆ ಆದವು ? ತಿಳಿಸು.

ಮೊದಲನೆ—ತಂದೆ (ದೇವರು) ಮಗನು (ದೇವರಮಗನು) ಆತ್ಮ. ಮೂವರು.

ಫಾದರಿ—ಚೆನ್ನಾಗಿದೆ! ಆಗಲಿ, ಈ ಮೂವರು ಒಂದೇ ಎಂದು ತಿಳಿದುಕೊ.

ಮೊದಲನೆ—ಅಪ್ಪಣೆ.

ಫಾದರಿ—(ಎರಡನೆಯವನನ್ನು ನೋಡಿ) ನೀನು ಎರಡೆಂದು ಹೇಗೆ ತಿಳಿದೆ?

ದ್ವಿತೀಯ—ನಾನು ಇದುವರೆಗೂ ಮೂವರೆ ಎಂದು ತಿಳಿದಿದ್ದೆನು. ಆ ಮೂವರಲ್ಲಿ

ಒಬ್ಬನು ಪಶ್ಚಿಮದೇಶದಲ್ಲಿ ಸತ್ತುಹೋಗಿ ಬಹು ದಿನಗಳಾದುವೆಂದು ತಾವೇ ಹೇಳಿದ್ದಿರಿ. ಆದುದರಿಂದ ಉಳಿದವರಿಬ್ಬರೇ ಎಂದು ನಿಶ್ಚಯಿಸಿಕೊಂಡೆನು.

ಫಾದಿರಿ—(ಮೂರನೆಯವನೊಂದಿಗೆ) ನೀನು ಏನೂ ಇಲ್ಲವೆಂದು ಹೇಗೆ ಹೇಳಿದೆ?

ತೃತೀಯ—ನೀವು ಮೂವರೆಂದು ಹೇಳುತ್ತಿದ್ದರೂ ಆ ಮೂವರೂ ಸೇರಿ ಒಬ್ಬನೇ ಎಂದು ಹೇಳುತ್ತಾ, ಕೆಲವು ಜನರು ಅವನೊಬ್ಬನನ್ನು ಹಿಡಿದುಕೊಂಡು ಗಿಡಕ್ಕೆ ನೇತುಹಾಕಿ ಈಗ್ಗೆ 18 ನೂರು ವರ್ಷಗಳ ಹಿಂದೆಯೇ ಕೊಂದುಹಾಕಿದಹಾಗೆ ಹೇಳಿದ್ದಿರಿ. ಆದುದರಿಂದ ಮತ್ತೇನೂ ಉಳಿಯಲಿಲ್ಲವೆಂದು ತಿಳಿದುಕೊಂಡೆನು.

ಫಾದಿರಿ—ನೀವೆಲ್ಲರೂ ಪರಿಶುದ್ಧಗ್ರಂಥವನ್ನೂ, ಪ್ರಜೆಗಳ ಪಾಪಕ್ಕಾಗಿ ಜೇಸಸು ತನ್ನ ಪ್ರಾಣವನ್ನೊಪ್ಪಿಸಿದ ವಿಷಯವನ್ನೂ ನಂಬಲಿಲ್ಲವಾದುದರಿಂದ ನಿಮಗೆ ನರಕವೇ ಶಾಶ್ವತವಾದ ವಾಸವಾಗುವುದು. ಅದುಹಾಗಿರಲಿ. ಏಸುಕ್ರಿಸ್ತನು ಮರಳಿ ಮೂರನೆಯ ದಿನ ಬದುಕಿ ಬಂದ ವಿಷಯವನ್ನಾದರೂ ನಂಬುವಿರಾ ?

ಶಿಷ್ಯನು—ನಿಮಗೆ ಹೆಚ್ಚು ಸಂಬಳವನ್ನು ಕೊಟ್ಟು ಹತ್ತುಸಾವಿರ ಮೈಲುಗಳ ದೂರಕ್ಕೆ ಕಳುಹಿಸಿದುದು ಇದನ್ನು ಹೇಳುವುದಕ್ಕೇನೇ? ಇಂತಹ ವಿಪರೀತ ವಿಷಯಗಳು ಬೇಕಾಗಿದ್ದರೆ ನಮ್ಮ ಮತಸಂಪ್ರದಾಯದಲ್ಲಿ ಬೇಕಾದಷ್ಟಿಲ್ಲವೆ? ಅನೇಕ ತಲೆಗಳೂ, ಅನೇಕ ಕೈಗಳೂ ಉಳ್ಳವರೂ, ಸತ್ತುಹುಟ್ಟಿದವರೂ, ನಮ್ಮಲ್ಲಿ ಸಮೃದ್ಧಿಯಾಗಿರುವರು. ನಿಮಗೆ ಬೇಕಾಗಿದ್ದಲ್ಲಿ ಕೆಲವು ಸಾಧನಸಾಮಗ್ರಿಗಳನ್ನು ಸಂಗ್ರಹಿಸಿಕೊಳ್ಳಿರಿ.

ರಾಮಮೋಹನನ ಇಂಗ್ಲಿಷ್ ಗ್ರಂಥಗಳ ಪ್ರಥಮ ಸಂಪುಟ 265 ರಿಂದ 288 ರವರೆಗೆ ಇರುವ ಪುಟಗಳಲ್ಲಿ ಈ ವಿಷಯವು ತುಂಬ ನಗು ಬರುವಂತೆ ಬರೆಯಲ್ಪಟ್ಟಿರುವುದು. ಗ್ರಂಥ ವಿಸ್ತರಭೀತಿಯಿಂದ ಅದನ್ನೆಲ್ಲಾ ಇಲ್ಲಿ ಬರೆಯಲಾಗಲಿಲ್ಲ.

1823ನೇ ಸಂವತ್ಸರದಲ್ಲಿ ಅಮೆರಿಕಾದಲ್ಲಿನ ಕೇಂಬ್ರಿಡ್ಜ್ ನಗರನಿವಾಸಿಯೂ, ಯೂನಿಟೇರಿಯನ್ ಮತಸ್ಥನೂ ಆದ ಹೆನ್ರಿವೈರ್ ಎಂಬ ಮತಬೋಧಕನೊಬ್ಬನು (1) ಕ್ರಿಸ್ತಮತವು ಹಿಂದೂ ದೇಶದಲ್ಲಿ ಪ್ರಬಲಿಸುವುದೆಂದು ನಂಬುವುದಕ್ಕೆ ಏನಾದರೂ ಆಧಾರಗಳಿವೆಯೋ (2) ಇದ್ದಲ್ಲಿ ಎಷ್ಟರಮಟ್ಟಿಗೆ ಇವೆ ? ಇದುವರೆಗೆ ಕೆಲಸಮಾಡುತ್ತಿರುವ ಫಾದಿರಿಗಳಿಂದ ಏನಾದರೂ ಒಳ್ಳೇ ಫಲಿತಾಂಶವು ಕಾಣಬರುತ್ತಿದೆಯೆ ? ಎಂಬ ಪ್ರಶ್ನೆಗಳನ್ನು ಒಂದು ವೃತ್ತಾಂತ ಪತ್ರದ ಮೂಲಕ ಹಿಂದೂ ದೇಶದಲ್ಲಿ ಯಾರಾದರೂ ಪ್ರತ್ಯುತ್ತರವನ್ನು ಕೊಡಬಹುದೆಂದು ಪ್ರಾರ್ಥಿಸಿ ಪ್ರಕಟಿಸಿದನು. ರಾಮಮೋಹನನು ಅದಕ್ಕೆ 1824ನೇ ಫೆಬ್ರವರಿಯಲ್ಲಿ ಪ್ರತ್ಯುತ್ತರವನ್ನು ಬರೆದು ಆ ಬೋಧಕನಿಗೆ ಕಳುಹಿ, ಸ್ವದೇಶ ಪ್ರಜೆಗಳ ಉಪಯೋಗಾರ್ಥವಾಗಿ ಗ್ರಂಥರೂಪವಾಗಿ ಮುದ್ರಿಸಿ ಪ್ರಕಟಿಸಿದನು. 1825ರಲ್ಲಿ ಈ ಪುಸ್ತಕವು ಲಂಡನ್ ಪಟ್ಟಣದಲ್ಲಿ ಮುದ್ರಿಸಲ್ಪಟ್ಟಿತು. ಈ ಪ್ರತ್ಯುತ್ತರದಲ್ಲಿ ' ರೋಮನ್ ಕ್ಯಾಥೊಲಿಕ', ಪ್ರೊಟೆಸ್ಟೆಂಟ್, ಬ್ಯಾಫ್ಟಿಸ್ಟ್ ಚರ್ಚ್" ಎಂಬ ಹೆಸರುಗಳಿಂದ ಕೆಲಸಮಾಡುವ ಸಾಮಾಜಿಕರೆಲ್ಲರೂ ಅನ್ನಾತುರರಾಗಿ ಪರಿತಪಿಸುವ ವಿದ್ಯಾವಿಹೀನರಾದ ನೀಚಜಾತಿಯವರಿಗೆ ಪ್ರಾಪಂಚಿಕ ಲಾಭ

ಗಳನ್ನುಂಟುಮಾಡುವೆವೆಂದು ಆಶೆ ತೋರಿಸಿ ಇತರರಿಗೆ ನಂಬಿಕೆ ಹುಟ್ಟುವಂತೆ ಒಬ್ಬರಿಬ್ಬರಿಗೆ ಅಂತಹ ಸಹಾಯಗಳನ್ನು ಮಾಡುತ್ತಿದ್ದರೂ ಪ್ರತಿ ವರ್ಷವೂ ಅತ್ಯಲ್ಪ ಸಂಖ್ಯೆಯ ಜನರು ಮಾತ್ರ ಈ ಮತಕ್ಕೆ ಸೇರುತ್ತಿದ್ದಾರೆಂತಲೂ, ನಿಜವಾಗಿ ಮತ ತತ್ವಗಳನ್ನು ಗ್ರಹಿಸಬಲ್ಲ ಉತ್ತಮ ವರ್ಣಗಳವರಾರೂ ಸೇರುವುದಿಲ್ಲವೆಂತಲೂ, ಕೆಲವರು ಫಾದರಿಗಳು ತಾವು ತುಂಬ ಕೆಲಸಮಾಡುತ್ತಿದ್ದೇವೆಂತಲೂ ಈ ವರ್ಷದಲ್ಲಿ ಇಂತಿಷ್ಟು ಮಂದಿ ಹಿಂದೂ ಜನರನ್ನು ಕ್ರಿಸ್ತಿಯರಾಗಿ ಮಾಡಿದ್ದೇವೆಂತಲೂ ಬರೆದುಕೊಳುಹುತ್ತಿದ್ದರೂ ಕ್ರಿಸ್ತಮತವು ನಿಜವಾಗಿಯೂ ಅಭಿವೃದ್ಧಿ ಹೊಂದಲಿಲ್ಲವೆಂಬಂಶವನ್ನು ಬುದ್ಧಿವಂತರಾದ ಕೆಲವರು ಒಪ್ಪುತ್ತಲೇ ಇರುವರೆಂತಲೂ, ನೂರು ವರ್ಷಗಳಲ್ಲಿ ಇಷ್ಟು ಸ್ವಲ್ಪ ವೃದ್ಧಿಯನ್ನು ಹೊಂದಿದ ಪ್ರಯತ್ನಗಳು ಹಿಂದೂ ಮತವನ್ನು ಬಾಧಿಸಲಿಕ್ಕೆ ಸಾಲವಾದುದರಿಂದ ಪಾಶ್ಚಾತ್ಯ ನಾಗರಿಕತೆಯನ್ನು ವ್ಯಾಪನೆಗೊಳಿಸಬೇಕೆಂಬ ಉದಾರಬುದ್ಧಿಯಿದ್ದಲ್ಲಿ ವಿದ್ಯಾಶಾಲೆಗಳನ್ನೂ ಕರ್ಮಶಾಲೆಗಳನ್ನೂ ಸ್ಥಾಪಿಸಿ ಈ ದೇಶೀಯರನ್ನು ಜ್ಞಾನವಂತರನ್ನಾಗಿ ಮಾಡುವುದು ಅಗತ್ಯವೆಂತಲೂ ಬಹು ಯುಕ್ತಿಯುಕ್ತವಾಗಿ ಚರ್ಚಿಸಿ ಬರೆದನು.

ಮತವಿಷಯ ಚರ್ಚೆಗಳನ್ನೇ ನಾವು ಪರಂಪರೆಯಾಗಿ ಬರೆಯುತ್ತಾ ಬಂದುದರಿಂದ ನಾವು ರಾಮಮೋಹನನಿಂದ ಮಾಡಲ್ಪಟ್ಟ ಸಾಂಘಿಕ, ರಾಜಕೀಯ, ವಿದ್ಯಾಸಂಬಂಧವಾದ ಕಾರ್ಯಗಳನ್ನು ಬರೆಯದೆ ಬಿಟ್ಟುಬಿಟ್ಟೆವು. ಆದರೂ ಆ ವಿಷಯಗಳನ್ನು ಕುರಿತು ಸ್ವಲ್ಪಮಟ್ಟಿಗೆ ವಿಚಾರಮಾಡಬೇಕಾಗಿದೆ. ಓದತಕ್ಕವರಿಗೆ ಅನುಕೂಲವಾಗಿರುವಂತೆ ರಾಮಮೋಹನನ ಇತರ ಕಾರ್ಯಗಳನ್ನೆಲ್ಲ ಪ್ರತ್ಯೇಕವಾಗಿ ಒಂದು ಪ್ರಕರಣದಲ್ಲಿ ಬರೆಯಬೇಕೆಂದೇ ನಾವು ಯೋಚಿಸಿದ್ದರೂ ಆತನ ಜೀವಿತಕಾಲದ ಕಾರ್ಯಗಳಲ್ಲಿ ಬಹುಮುಖ್ಯವಾಗಿ ಭಾವಿಸಲ್ಪಡತಕ್ಕ ಒಂದು ಮಹಾಕಾರ್ಯವನ್ನು ಮಾತ್ರ ಈ ಪ್ರಕರಣದಲ್ಲಿ ಸಂಕ್ಷೇಪವಾಗಿ ಹೇಳುವೆವು.

ಆ ವಿಷಯವು ಬ್ರಹ್ಮಸಮಾಜ ಮತ ಸ್ಥಾಪನೆಯೇ. ಕಲ್ಕತ್ತೆಗೆ ಪ್ರವೇಶಿಸಿದ (1815) ತರುವಾಯ ಮಾನಿಕತುಲಾದಲ್ಲಿನ ತನ್ನ ಮನೆಯಲ್ಲಿ ಆತ್ಮೀಯ ಸಭೆ ಎಂಬ ಹೆಸರಿನಿಂದ ಒಂದು ಸಮಾಜವನ್ನು ಸ್ಥಾಪಿಸಿ ಅದರಲ್ಲಿ ವಾರಕ್ಕೊಂದುಸಾರಿ ಉಪನ್ಯಾಸವನ್ನೂ ಭಜನೆಯನ್ನೂ ಶಿವಪ್ರಸಾದನಿಂದ ವೇದಪಾಠಗಳನ್ನೂ ಜರುಗಿಸುತ್ತಿದ್ದನು. ಈ ಸಭೆಯು ಸರ್ವಜನೋಪಯುಕ್ತವಾಗುವಂತೆ ಸ್ಥಾಪಿಸಲ್ಪಟ್ಟಿದ್ದರೂ ರಾಮಮೋಹನನಲ್ಲಿ ಮತದ್ವೇಷವನ್ನು ಬೆಳಸುತ್ತಿದ್ದವರು ಈತನ ಮೇಲಣ ಆಗ್ರಹದಿಂದ ಸಭೆಗೆ ಬಾರದೆ ಇರುತ್ತಿದ್ದರು. ಆದರೆ ಆತನಿಗೆ ಮನಃಪ್ರಾಣಗಳನ್ನು ಕೊಟ್ಟು ಸ್ನೇಹಿತರಾಗಿದ್ದವರೂ ರಾಮಮೋಹನನ ಮತವನ್ನು ಸ್ವೀಕರಿಸಿದೆವೆಂದು ಬಹಿರಂಗವಾಗಿ ತಿಳಿಯಪಡಿಸಿ ಅದರ ಅಭಿವೃದ್ಧಿಗಾಗಿ ಪ್ರಯತ್ನಪಡುತ್ತಿದ್ದವರೂ ಆದ ಕೆಲವರು ಮಾತ್ರವೇ ಈ ಸಭೆಗೆ ಬರುತ್ತಿದ್ದರು.

ಪ್ರತಿ ಪಕ್ಷದವರು ಎಷ್ಟು ಮಟ್ಟಿಗೆ ವಿಘ್ನಮಾಡಲಿಕ್ಕೆ ಪ್ರಯತ್ನಿಸಿದರೂ ರಾಮಮೋಹನನು ತನ್ನ ಕರ್ತವ್ಯವನ್ನು ಬಹುಶ್ರದ್ಧೆಯಿಂದಲೇ ನಡಿಸುತ್ತಿದ್ದನು. 1819 ನೇ ವರ್ಷದಲ್ಲಿ ಬಾರೀಲಾಸ್ ಜೋಬೆ ಎಂಬವನ ಮನೆಯಲ್ಲಿ ರಾಮಮೋಹನನಿಂದ ಸ್ಥಾಪಿಸಲ್ಪಟ್ಟ

ಆತ್ಮೀಯ ಸಭೆಗೆ ವಿರೋಧವಾಗಿ ಚರ್ಚಿಸುವುದಕ್ಕೆ ಒಂದು ದೊಡ್ಡ ಸಭೆ ಸೇರಿತು. ಆ ಸಭೆಗೆ ಕಲ್ಕತ್ತೆಯಲ್ಲಿರುವ ಪಂಡಿತರು ಮಾತ್ರವಲ್ಲದೆ ಸುತ್ತುಮುತ್ತಿನ ಗ್ರಾಮಗಳಲ್ಲಿನ ವಿದ್ವಾಂಸರು ಸುದಾಬಂದರು. ಬ್ರಹ್ಮಸಮಾಜವನ್ನು ಮುಕ್ತಾಯಮಾಡುವ ಬುದ್ಧಿಯಿಂದ ಈ ಸಭೆಗೆ ರಾಜಾರಾಧಾಕಾಂತದೇವನೆಂಬಾತನು ಪ್ರಮುಖನಾಗಿದ್ದು ದೊಡ್ಡ ದೊಡ್ಡ ಪಂಡಿತರನ್ನೂ, ಭಟ್ಟಾಚಾರ್ಯರನ್ನೂ ಕರೆಯಿಸಿದನು. ಆದರೆ ದೈವಬಲವಿದ್ದಲ್ಲಿ ನ್ಯಾಯಕ್ಕೆ ಎಲ್ಲಿಯೂ ಪರಾಜಯವಿಲ್ಲವಷ್ಟೆ! ರಾಮಮೋಹನನು ಬಹು ಚಾತುರ್ಯದಿಂದ ವಾದಿಸಿ ಅವರನ್ನೆಲ್ಲಾ ಸೋಲಿಸಿದನು. ವಿವಾದಕ್ಕಾಗಿ ಸೇರಿದ ಪಂಡಿತರಲ್ಲಿ ಸುಬ್ರಹ್ಮಣ್ಯ ಶಾಸ್ತ್ರಿ ಎಂಬವನು ಬಂಗಾಳಾದಲ್ಲಿ ಈಗ ನಿಜವಾಗಿ ಬ್ರಾಹ್ಮಣರೆಂಬ ಹೆಸರಿಗೆ ಅರ್ಹರಾದವರು ಯಾರೂ ಇಲ್ಲದುದರಿಂದ ಇವರಿಗೆ ವೇದಪಾಠಕ್ಕೆ ಅಧಿಕಾರವೇ ಇಲ್ಲವೆಂದು ಹೇಳಿದನು. ಇದನ್ನು ಕೇಳಿದ ಪಂಡಿತರೆಲ್ಲರೂ ಮೌನವಾಗಿ ಕುಳಿತಿದ್ದರು. ರಾಮಮೋಹನನು ಆ ವಿಷಯವನ್ನು ತತ್ಕ್ಷಣವೇ ಖಂಡಿಸಿದನು.

ಈ ಸಂತೋಷಕರವಾದ ರಾಮಮೋಹನನ ವಿಜಯವೆಂಬುದು ಅವನ ಪ್ರತಿಪಕ್ಷದವರ ಹೃದಯದ ದ್ವೇಷಾಗ್ನಿಯನ್ನು ಮತ್ತಷ್ಟು ಬಿರಿಗೊಳಿಸಿತು. ಅವರು ರಾಮಮೋಹನನ ಸಹೋದರರ ಮಕ್ಕಳಿಗೆ ಬೋಧಿಸಿ, ಇವನು ಧರ್ಮಬಾಹ್ಯನಾಗಿರುವುದರಿಂದ ಇವನಿಗೆ ಪಿತ್ರಾರ್ಜಿತದ ಆಸ್ತಿಯಲ್ಲಿನ ಹಕ್ಕನ್ನು ತೊಲಗಿಸಬೇಕೆಂದು ಸೂಪ್ರೀಂ ಕೋರ್ಟಿನಲ್ಲಿ ವ್ಯಾಜ್ಯ ಹೂಡಿದರು. ಮತ್ತು ವರ್ಧಮಾನದ (ಬರದ್ವಾನ್) ಜಮೀನ್ದಾರನಾದ ತೇಜಚಂದ್ ಎಂಬವನು ಕೂಡ ಆಗಲೇ ಕಲ್ಕತ್ತೆಯ ಪ್ರೊವಿನ್ಷಿಯಲ್ ಕೋರ್ಟಿನಲ್ಲಿ ರಾಮಕಾಂತರಾಯನು ತನಗೆ ಸಾಲಕೊಡಬೇಕಾಗಿತ್ತು ಎಂತಲೂ ಅವನ ಆಸ್ತಿಯನ್ನು ಅನುಭವಿಸುತ್ತಿರುವ ಆತನ ಮಕ್ಕಳಲ್ಲಿ ಇವನ ಪಾಲಿಗೆ ಬಂದ ಹಣವನ್ನು ಕೊಡಿಸಿಕೊಡಬೇಕೆಂತಲೂ ದಾವಾ ಮಾಡಿದನು. ಪೂರ್ವಮತಾಚಾರಗಳಿಗೆ ವಿರುದ್ಧನಾಗಿ ಈತನು ವರ್ತಿಸುತ್ತಿರುವನೆಂಬ ಈರ್ಷ್ಯೆಯಿಂದಲೇ ಈ ವ್ಯಾಜ್ಯವು ತರಲ್ಪಟ್ಟಿತು.

ರಾಮಮೋಹನನು ಈ ತೊಡಕುಗಳನ್ನು ತಕ್ಕ ಜಾಗ್ರತೆಯಿಂದ ತಪ್ಪಿಸಿಕೊಂಡನು. ಅಣ್ಣನ ಮಕ್ಕಳಿಂದ ತರಲ್ಪಟ್ಟ ಅಭಿಯೋಗಕ್ಕೆ ತಾನು ಹಿಂದೂಧರ್ಮವನ್ನತಿಕ್ರಮಿಸಿ ನಡೆಯುವುದಿಲ್ಲವೆಂದು ಹಲವು ದೃಷ್ಟಾಂತಗಳಿಂದ ಸಾಧಿಸಿದನು. ತೇಜಚಂದನೊಂದಿಗೆ ಒಡಂಬಡಿಕೆ ಮಾಡಿಕೊಂಡನು. ಆದರೂ ಈ ತೊಂದರೆಗಳಿಂದ ರಾಮಮೋಹನನಿಗೆ ಧನವ್ಯಯವೂ, ಪ್ರಯಾಸವೂ ಆದುವು. ಇತರ ಕೆಲಸಗಳನ್ನು ಕ್ರಮಪಡಿಸಿಕೊಂಡು, ಈ ಸಭೆಯ ವಿಷಯದಲ್ಲಿ ಹೆಚ್ಚು ಶ್ರದ್ಧೆಯನ್ನು ವಹಿಸುವುದಕ್ಕೆ ಎರಡು ವರ್ಷಗಳ ತನಕ ಅವಕಾಶವಾಗಲಿಲ್ಲ.

ಆದರೂ ಈ ವಿಷಯವಾಗಿ ಮತ್ತೊಂದು ಬಗೆಯಲ್ಲಿ ಸ್ವಲ್ಪಕೆಲಸ ಮಾತ್ರ ಜರುಗುತ್ತಿದ್ದಿತು. ಪಾದಿರಿ ಕೆಲಸವನ್ನು ಬಿಟ್ಟುಬಿಟ್ಟು ಯೂನಿಟೇರಿಯನ್ ಮತದಲ್ಲಿ ಸೇರಿ ಪತ್ರಿಕಾಧಿಪತಿಯಾಗಿದ್ದ ಆಡಂದೊರೆಯಿಂದ ಯೂನಿಟೇರಿಯನ್ ಸೊಸೈಟಿ ಎಂಬ ಹೆಸರಿನಿಂದ ಒಂದು

ದೇವಾರಾಧನೆಗಾಗಿ ಒಂದು ಸಮಾಜವೇರ್ಪಡಿಸಲ್ಪಟ್ಟಿತು. ರಾಮನಾರಾಯಣನು ಈ ಸಮಾಜವನ್ನು ಏರ್ಪಡಿಸುವುದಕ್ಕಾಗಿ ಸ್ವಲ್ಪ ಸಹಾಯಮಾಡಿ ತನ್ನ ಮಕ್ಕಳು, ಬಂಧುಗಳು, ಶಿಷ್ಯರು, ಇವರೊಡನೆ ಪ್ರಾರ್ಥನಾಲಯಕ್ಕೆ ಹೋಗಿ ಪ್ರಾರ್ಥನೆ ಮಾಡುವವರ ಜತೆಯಲ್ಲಿ ಸೇರುತ್ತಿದ್ದನು. ಒಂದುಸಾರಿ ಸಮಾಜಕ್ಕೆ ಹೋಗಿ ಬರುತ್ತಿರುವಾಗ ಮಧ್ಯಮಾರ್ಗದಲ್ಲಿ ಹಿಂದೆ ಇದ್ದ ತಾರಾಚಂದ್ ಚಕ್ರವರ್ತಿ, ಚಂದ್ರಶೇಖರದೇವ ಎಂಬಿಬ್ಬರು ಶಿಷ್ಯರು ರಾಮಮೋಹನನೊಂದಿಗೆ ನಾವು ವಿದೇಶೀಯರ ಉಪಾಸನಾಮಂದಿರಕ್ಕೆ ಹೋಗಿ ಪ್ರಾರ್ಥನೆ ಮಾಡಲಿಕ್ಕಿಂತ ಪ್ರತ್ಯೇಕವಾಗಿ ನಾವೇ ಒಂದು ಧ್ಯಾನಗೃಹವನ್ನು ಏರ್ಪಡಿಸಿಕೊಳ್ಳುವುದು ಉತ್ತಮವೆಂದು ಹೇಳಿದರು. ಅದಕ್ಕೆ ರಾಮಮೋಹನನು ಸಂತೋಷಿಸಿ, ಆ ವಿಷಯವನ್ನು ಕುರಿತು ಒಾಒಾ ದ್ವಾರಕಾನಾಥಠಾಕೂರ್, ರಾಯಕಾಳೀನಾಥ ಮುನಷಿ, ಪ್ರಸನ್ನಕುಮಾರಠಾಕೂರ್ ಮೊದಲಾದವರೊಂದಿಗೆ ಆಲೋಚಿಸಲು ಅವರೆಲ್ಲರೂ ಈ ಕಾರ್ಯಕ್ಕೆ ಕೈಯಲ್ಲಾದ ಮಟ್ಟಿಗೆ ಸಹಾಯಮಾಡುತ್ತೇವೆಂದು ಹೇಳಿದರು. ತರುವಾಯ ಒಂದು ಸಭೆ ಸೇರಿಸಿ ಅದರಲ್ಲಿ ಸಮಾಜಸ್ಥಾಪನೆಯ ವಿಷಯವನ್ನು ನಿರ್ಣಯಿಸಿದನು. ಪ್ರಥಮದಲ್ಲಿ ಸ್ಥಳವನ್ನು ಕೊಂಡುಕೊಳ್ಳಲು ಯತ್ನಿಸಿದರು. ಆದರೂ ಆವೇಳೆಗೆ ಸರಿಯಾಗಿ ಅದು ಸಿಕ್ಕದೆ ಹೋದುದರಿಂದ ತತ್ಕಾಲದಲ್ಲಿ ಒಂದು ವಿಸ್ತಾರವಾದ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು 1828 ರಲ್ಲಿ ಉಪಾಸನ ಸಭೆಯನ್ನು ಸ್ಥಾಪಿಸಿದರು.

ಎರಡು ವರ್ಷಗಳಲ್ಲಿಯೇ ತುಂಬ ಹಣ ಕೂಡಿದ್ದರಿಂದ ಚಿತ್ಪುರದ ರಸ್ತೆಯಹತ್ತಿರ ಸ್ವಲ್ಪ ಭೂಮಿಯನ್ನು ಕ್ರಯಕ್ಕೆ ಕೊಂಡುಕೊಂಡು, ಅಲ್ಲಿ ಸಮಾಜಮಂದಿರವನ್ನು ಕಟ್ಟಿಸಿ ಮಾಘ ಶುದ್ಧ ೧೧ನೇ ದಿನ ಆ ಮಂದಿರದಲ್ಲಿ ಸಮಾಜಸ್ಥಾಪನೋತ್ಸವವನ್ನು ನಡಿಸಿದರು. ಅಂದಿನಿಂದಲೂ ಈದಿನವು ಬ್ರಹ್ಮಮತಾವಲಂಬಿಗಳಿಂದ ಬಹು ಸಂತೋಷ ದಿನವಾಗಿ ಭಾವಿಸಲ್ಪಡುತ್ತಲಿದೆ. ಮತ್ತು ಈ ಧರ್ಮವನ್ನು ಬೆಳಸಿದ ಪ್ರತಿಯೊಂದು ಸ್ಥಳದಲ್ಲಿಯೂ ಈ ಹಬ್ಬದ ದಿವಸದಲ್ಲಿ ಇದುವರೆಗೂ ಸಂತೋಷೋತ್ಸವವನ್ನು ನಡಿಸುತ್ತಿರುವರು.

ಬ್ರಹ್ಮ ಸಮಾಜವನ್ನು ಕುರಿತು ರಾಮಮೋಹನನ ಮುಖ್ಯ ಅಭಿಪ್ರಾಯವು ಹೇಗಿರಬಹುದೆಂದು ಜನರು ಸಂದೇಹ ಪಡಬಹುದು. ಆ ಸಂದೇಹಗಳನ್ನು ಮೂರು ಪ್ರಶ್ನೆಗಳಿಂದ ತಿಳಿಸಿ, ಅದಕ್ಕೆ ಉತ್ತರಗಳನ್ನು ವಿಚಾರ ಮಾಡೋಣ. ಅವುಗಳಲ್ಲಿ ಮೊದಲನೆಯದು ಈ ಉಪಾಸನ ಮಂದಿರದಲ್ಲಿ ಯಾವ ದೇವರ ಪೂಜೆ ನಡೆಯುವುದು ? ಎರಡನೆಯದು ಪೂಜೆಯನ್ನು ಮಾಡುವವರು ಯಾರು ? ಮೂರನೆಯದು ಉಪಾಸನೆ ಮಾಡುವ ಮಾರ್ಗ ಯಾವುದು ? ಇವೇ.

(1) ಯಾವ ದೇವತೆ ಪೂಜಿಸಲ್ಪಡುವುದು ? ಬ್ರಹ್ಮಾಂಡವನ್ನು ಸೃಷ್ಟಿಸಿ, ಲಯವನ್ನು ಹೊಂದಿಸತಕ್ಕವನಾಗಿಯೂ, ಆದ್ಯಂತರಹಿತನಾಗಿಯೂ ಸಾಮಾನ್ಯ ಬುದ್ಧಿಗೆ ಗೋಚರಿಸದವನೂ ಯಾವ ನಾಮಪಾಡುಗಳೂ ಇಲ್ಲದವನೂ, ಆದ ಈಶ್ವರನು ಪೂಜಿಸಲ್ಪಡುವನು.

(2) ಪೂಜೆಮಾಡತಕ್ಕವರು ಯಾರು ? ಯಾವ ಮನುಷ್ಯನು ಸತ್ಯವಾಗಿಯೂ ಮನಃಪೂರ್ವಕವಾಗಿಯೂ ಈಶ್ವರನನ್ನು ಉಪಾಸಿಸಲಿಕ್ಕೆ ಬರುವನೋ ಅವನಿಗೋಸ್ಕರ ವಾಗಿಯೇ ರಾಮಮೋಹನನ ಉಪಾಸನ ಮಂದಿರವು ತೆರೆಯಲ್ಪಟ್ಟಿರುವುದು, ಆದರಲ್ಲಿ ಕುಲ, ಮತ, ಸಂಘ ಸಂಬಂಧ ಭೇದಗಳು, ಸ್ವಲ್ಪತ್ವಾಧಿಕ್ಯಗಳು, ಎಣಿಸಲ್ಪಡಲಾರವು ಯಾವ ಸಂಘದವರಿಗಾದರೂ ಯಾವಕುಲದವರಿಗಾದರೂ ಯಾವ ಮತಾವಲಂಬಿಗಳಿಗಾ ದರೂ ಮೇಲಣ ಸಮಾಜಗಲ್ಲಿ ಸೇರಿ ಉಪಾಸನೆ ಮಾಡಲಿಕ್ಕೆ ಅಧಿಕಾರವಿರುವುದು.

(3) ಪೂಜಿಸುವ ಮಾರ್ಗ ಯಾವುದು ? ಯಾವವಿಧವಾದ ಬೊಂಬೆಗಳಾಗಲಿ ಪ್ರತಿಬಿಂಬಗಳಾಗಲಿ, ಕಲ್ಪಿತವಿಗ್ರಹಗಳಾಗಲೀ ಇಲ್ಲಿ ಬಳಸಲ್ಪಡುವುದಿಲ್ಲ. ಇಲ್ಲಿ ಪೂಜೆ ಗಾಗಿ ಸಕ್ಕರೆ ಮೊದಲಾದವೂ, ಮಾಂಸಾಹಾರಗಳೂ, ಬಲಿಗಳೂ, ಭೋಜನ ಪಾನೀಯ ವಸ್ತು ವರ್ಗಗಳೂ, ಮಧುವೂ ಪ್ರಸಾದಗಳೂ, ಬಾಲಭೋಗಗಳೂ ಯಾವುವೂ ಇಲ್ಲಿ ಇಲ್ಲವು. ಇತರ ಮತಗಳವರಾಗಲಿ ಮಾಡುವ ಪೂಜಾ ವಿಷಯಗಳಲ್ಲಿ ದ್ವೇಷ, ನಿರಸನ, ಹೇಳನ ಭಾವಗಳನ್ನು ಸೂಚಿಸುವ ಸಂಭಾಷಣೆಗಳೂ ಜರುಗವು. ಸಾಧ್ಯವಾದಮಟ್ಟಿಗೆ ಸೃಷ್ಟಿ ಸ್ಥಿತಿ ಲಯಕಾರಕನಾದ ಪರಮೇಶ್ವರನನ್ನು ಧ್ಯಾನಿಸುವುದು. ಪ್ರೇಮ, ನೀತಿ ಧರ್ಮದಯಾದಿಗಳಲ್ಲಿ ಅಭಿರುಚಿಯನ್ನು ಹೆಚ್ಚಿಸುವುದು. ಎಲ್ಲಾ ಸಂಘಗಳಲ್ಲಿಯೂ ಐಕ ಮತ್ಯವನ್ನೂ ಬಲಪಡಿಸುವುದು ಇವುಗಳೇ ಸಮಾಜದ ಮುಖ್ಯೋದ್ದೇಶಗಳು. ಈ ವಿಧ ವಾದ ಸಂಭಾಷಣೆಗಳು, ಬೋಧೆಗಳು, ಸಂಗೀತವು ಮಾತ್ರ ಸಮಾಜದಲ್ಲಿ ಹೇಳಲ್ಪಡುವವು. ಇದೇ ರಾಮಮೋಹನನ ಸಮಾಜಸ್ಥಾಪನೆಯ ಮುಖ್ಯೋದ್ದೇಶವು. ಈ ಸಮಾಜ ನಿಯ ಮಗಳೆಲ್ಲವೂ ರಾಮ ಮೋಹನನಿಂದ ಬರೆಯಲ್ಪಟ್ಟ 'ಟ್ರಸ್ಟ್‌ಡೀಡ್' ಎಂಬ ನಿರ್ಣಯ ಪತ್ರದಲ್ಲಿ ಬಹು ಸ್ಪಷ್ಟವಾಗಿ ವಿವರಿಸಲ್ಪಟ್ಟಿರುವುದು.

ನಿರಾಕಾರಪರಮೇಶ್ವರನ ಉಪಾಸನೆಯನ್ನು ಕುರಿತು ಹಲವು ಸಾವಿರ ವರ್ಷಗಳ ಹಿಂ ದೆಯೇ ಮಹರ್ಷಿವರ್ಯರು ಬೋಧಿಸಿ ಕರತಲಾಮಲಕದಂತೆ ಅನುಭವಕ್ಕೆ ತಂದುಕೊಟ್ಟಹಾಗೆ ವೇದಗಳಿಂದ ವಿಶದವಾಗುತ್ತಿರುವಲ್ಲಿ ಆ ವಿಷಯವಾಗಿ ರಾಮಮೋಹನನು ಮಾಡಿದ ಹೊಸ ಕೆಲಸವು ಏನಿರುವುದೆಂದು ಕೆಲವರು ಕೇಳಲು ಅದಕ್ಕೆ ಬಂಗಾಳೀ ಚರಿತ್ರಕರ್ತನು ತನ್ನ ಗ್ರಂಥದಲ್ಲಿ ಹೀಗೆ ಉತ್ತರವನ್ನು ಬರೆದಿರುವನು.

ರಾಮಮೋಹನನು ಹೊಸಕೆಲಸವಾವುದನ್ನೂ ಮಾಡಲಿಲ್ಲವೆಂಬುದು ನಿಶ್ಚಯವು. ಮತ್ತು ಇದು ಹೊಸಕಾರ್ಯವೆಂದು ಹೇಳುವುದಕ್ಕೆ ಸುದಾ ಅವನಿಗೆ ಇಷ್ಟವಿರಲಿಲ್ಲ. ಆದರೂ ಎಲ್ಲಾ ಕುಲಗಳವರೂ ಎಲ್ಲಾ ಮತಗಳವರೂ ಯಾವ ಜಾತಿಭೇದವನ್ನೂ ನೋಡದೆ ಈ ಮಂದಿರಕ್ಕೆ ಬಂದು ನಿರಾಕಾರ ಪರಮೇಶ್ವರನಪೂಜೆಯನ್ನು ಮಾಡಬಹುದೆಂತಲೂ ಬ್ರಾಹ್ಮಣ ನಿಗೂ, ಚಂಡಾಲನಿಗೂ, ಹಿಂದುವಿಗೂ, ಮಹಮ್ಮದೀಯನಿಗೂ, ಮತ್ತೆ ಯಾವನಿಗಾದರೂ ಭಕ್ತಿಭಾವವಿದ್ದಲ್ಲಿ ಈ ಮಂದಿರದಲ್ಲಿ ಸಮಾನವಾದ ಅಧಿಕಾರಉಂಟೆಂದು ಪ್ರಚುರಪಡಿಸು ವುದೇ ಇದರಲ್ಲಿನ ಹೊಸಪದ್ಧತಿ, ಎಂದು ಒಪ್ಪಿಕೊಳ್ಳದೆ ತಪ್ಪದು. ಮಹನೀಯರ ಇತಿ

ಹಾಸಗಳನ್ನು ಓದಿನೋಡಿದರೆ ಅವರು ಯಾವುದಾದರೂ ಒಂದು ಮುಖ್ಯ ವಿಷಯವನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಕೆಲಸಮಾಡುತಿದ್ದರೆಂತಲೂ, ಅವರ ಜೀವಿತ ಕಾಲದಲ್ಲಿ ಅದೇ ಮಾರ್ಗದರ್ಶನವಾಗಿತ್ತೆಂತಲೂ ಸ್ಪಷ್ಟಪಡುವುದು. ಉಪನಿಷತ್ಕಾರಕನು 'ಆತ್ಮದ ಮೂಲಕ ಪರಮಾತ್ಮನನ್ನು ನೋಡಬಹುದು' ಎಂಬರ್ಥವನ್ನು ಹೊರಪಡಿಸಿದನು. ಗೌತಮ ಬುದ್ಧನು 'ಸಮಸ್ತ ಪ್ರಪಂಚವನ್ನೂ ಪ್ರೇಮದಿಂದ ನೋಡು' ಎಂದು ಉಪದೇಶಿಸಿದನು. ಶುಕ್ರಾತೀ ಎಂಬ ಮಹಾತ್ಮನು 'ನಿನ್ನನ್ನು ನೀನು ತಿಳಿದುಕೋ' ಎಂದು ಬೋಧಿಸಿದನು. ಜೀನಸಸ್ಸು 'ಈ ಪ್ರಪಂಚವೇ ಸ್ವರ್ಗವಾಗಬೇಕು' ಎಂದುಸುರಿದನು.

ಮಹಮ್ಮದನು 'ಅದ್ವಿತೀಯನೆಂದು ದೇವನನ್ನು ಉಪಾಸಿಸು' ಎಂದು ಹೇಳಿದನು. ಲೂಥರನೆಂಬ ತತ್ವಜ್ಞಾನಿಯು 'ತನ್ನ ಮತವನ್ನು ತಿಳಿದುಕೊಳ್ಳಲು ಮನುಷ್ಯನಿಗೆ ಪೂರ್ಣವಾದ ಸ್ವಾತಂತ್ರ್ಯವಿರಬೇಕು' ಎಂದು ಬೋಧಿಸಿದನು. ಚೈತನ್ಯ ಮಹಾರಾಜನು 'ಭಕ್ತಿಯೇ ಮುಕ್ತಿಗೆ ಸಾಧನ' ವೆಂದು ಹೇಳುತ್ತಿದ್ದನು. ಥಿಯೋಡರ್‌ಪಾರ್ಕರೆಂಬುವನು 'ಮನುಷ್ಯನ ಜ್ಞಾನವು ಚೆನ್ನಾಗಿ ವೃದ್ಧಿಯಾಗಬೇಕು' ಎಂದು ತಿಳಿಸಿದನು. ಹೀಗೆಯೇ ಈ ಲೋಕದಲ್ಲಿರುವ ಎಲ್ಲಾ ಜಾತಿಯವರೂ ಕಲೆತು ಒಂದೇ ಸ್ಥಳದಲ್ಲಿ ಪ್ರಾರ್ಥನೆ ಮಾಡುತ್ತಿರಬೇಕೆಂಬುವುದೇ ರಾಮಮೋಹನನ ಇಷ್ಟವಾಗಿದ್ದಿತು, ಇದರಿಂದಲೇ ಆತನು ಬ್ರಹ್ಮ ಸಮಾಜವನ್ನು ಸ್ಥಾಪಿಸಿದನು. ಇದಕ್ಕಿಂತ ಮುಂಚೆ ಯಾರಾದರು ಈ ವಿಷಯವನ್ನು ಮುಂದಕ್ಕೆ ತಂದಿರಲಿಲ್ಲ. ಆದುದರಿಂದ ನಿಜವಾಗಿಯೂ ಇದೊಂದು ಹೊಸಕಾರ್ಯವೇ ಎಂದು ಹೇಳಲಿಕ್ಕೆ ಅಡ್ಡಿ ಇಲ್ಲವು.

ಸಮಾಜವು ಏರ್ಪಟ್ಟು ನಿಯಮಾನುಸಾರವಾಗಿ ಬ್ರಹ್ಮಜ್ಞಾನ ಪೂಜಾದಿಗಳು ನಡಿಯುತ್ತಿರುವುದನ್ನು ನೋಡಿ ಗುಣಜ್ಞರಾದ ಕೆಲವರು ಬುದ್ಧಿಶಾಲಿಗಳು ಈ ವಿಷಯದ ಗ್ರಂಥಗಳನ್ನೂ, ರಾಮಮೋಹನನ ಶಿಷ್ಯರಿಂದ ರಚಿಸಲ್ಪಟ್ಟ ಪುಸ್ತಕಗಳನ್ನೂ, ಓದಿ ಇದರಲ್ಲಿ ಸೇರಿದರು. ಈ ನೂತನ ಮತವು ವಿದ್ಯಾವಂತರಾದ ಯುವ್ವನಸ್ಥರ ಹೃದಯವನ್ನು ಬಹಳವಾಗಿ ಆಕರ್ಷಿಸಿತು. ಇದರಿಂದ ಪ್ರತಿಮನೆಯಲ್ಲಿಯೂ ತಂದೆಯದೊಂದು ಮತ, ಮಗನದೊಂದುಮತವಾಗಿ ಏರ್ಪಟ್ಟಿತು. ಆಗ ಯಜ್ಞೋಪವೀತ ತಿರಸ್ಕಾರ, ಇತರಮತಗಳವರೊಂದಿಗೆ ಸಂಬಂಧ, ಬಾಂಧವ್ಯ, ಮೊದಲಾದ ಮತವಿರುದ್ಧಕೃತ್ಯಗಳನ್ನು ಮಾಡಿದವರನ್ನು ಮತದಿಂದ ಬಹಿಷ್ಕರಿಸುತ್ತಿದ್ದಹಾಗೆಯೇ ಬ್ರಹ್ಮಸಮಾಜದಲ್ಲಿ ಸೇರಿದವರನ್ನು ಸುದಾ ಬಹಿಷ್ಕರಿಸುವಕಾಲವು ಬಂದಿತು. ಬಂಗಾಳದಲ್ಲಿನ ಪೂರ್ವಾಚಾರಪರಾಯಣರೆಲ್ಲರೂ ಒಂದಾಗಿ ಬ್ರಹ್ಮಜ್ಞಾನ ಸಂಪಾದನೆಯು ಆವಶ್ಯಕವೆಂತಲೂ, ವಿಗ್ರಹಾರಾಧನೆಯು ನಿಷಿದ್ಧಕಾರ್ಯವೆಂತಲೂ ಉಪನ್ಯಾಸಗಳನ್ನು ಮಾಡುತ್ತಲೂ ಗ್ರಂಥಗಳನ್ನು ಬರೆಯುತ್ತಲೂ ಇದ್ದ ರಾಮಮೋಹನನು ಈಗ ತನ್ನ ಅಭಿಪ್ರಾಯಗಳನ್ನು ಕ್ರಮವಾಗಿ ಬದಲಾಯಿಸುತ್ತಿರುವನೆಂತಲೂ, ಇಷ್ಟರಿಂದ ತೃಪ್ತನಾಗದೆ ಸಹಗಮನವು ನಿಷೇಧಿಸಲ್ಪಡತಕ್ಕದ್ದೆಂದು ಬಲವಾಗಿ ವಾದಿಸಲಾರಂಭಿಸಿರುವನೆಂತಲೂ ಬರುತ್ತ ಬರುತ್ತ ವಿದ್ಯಾರ್ಥಿ

ಗಳೂ ವಿದ್ಯಾವಂತರೂ ಸೇರುತ್ತ ಬರುವುದರಿಂದ ಅವನ ಪಕ್ಷವು ಬಲವಾಗುತ್ತಿರುವುದೆಂತಲೂ, ಈ ಪ್ರಯತ್ನಗಳನ್ನೆಲ್ಲ ಒಡನೊಡನೆ ಮುರಿಯುವುದಕ್ಕೆ ಇದುವರೆಗೆ ಮಾಡಿದ ಸಣ್ಣ ಸಭೆಗಳಿಂದ ಯಾವ ಫಲವೂ ಉಂಟಾಗಲಿಲ್ಲವಾದುದರಿಂದ ಪುರಾತನ ಧರ್ಮರಕ್ಷಣಾರ್ಥವಾಗಿ ನಮ್ಮ ಪಕ್ಷದಲ್ಲಿ ಬೇರೊಂದು ಸಭೆಯನ್ನು ಸ್ಥಾಪಿಸಬೇಕೆಂತಲೂ, ಆಲೋಚಿಸಿ ಧರ್ಮಸಭೆ ಎಂಬ ಹೆಸರಿನಿಂದ ರಾಮಮೋಹನನಿಗೆ ಪ್ರತಿಕೂಲವಾಗಿ ಕೆಲಸಮಾಡಲಿಕ್ಕೆ ಒಂದು ಸಮಾಜವನ್ನು ಸ್ಥಾಪಿಸಿದರು. ಮಂದಿರಸ್ಥಾಪನೆಯಾದಮೇಲೆ ರಾಮಮೋಹನನು ಪ್ರಜೆಗಳಲ್ಲಿ ತನ್ನ ಮತಧರ್ಮಗಳನ್ನು ಪ್ರಕಾಶಪಡಿಸುವುದಕ್ಕಾಗಿ, "ಸಂವಾದ ಕೌಮುದಿ" ಎಂಬ ವಾರ್ತಾಪತ್ರಿಕೆಯೊಂದನ್ನು ಪ್ರಕಟಿಸುತ್ತ ಬಂದನು. ಅದಕ್ಕೆ ಪ್ರತಿಯಾಗಿ ಈ ಧರ್ಮಸಭೆಯವರು "ಚಂದ್ರಿಕೆ" ಎಂಬ ಪತ್ರವನ್ನು ಹೊರಡಿಸಿದರು. ರಾಮಮೋಹನನು ಬಂಗಾಳೀ ಭಾಷೆಯು ಹಿಂದೂದೇಶದವರಿಗೆಲ್ಲ ತಿಳಿಯದ ಭಾಷೆಯಾದುದರಿಂದ ಸಮಸ್ತರಿಗೂ ತಿಳಿಯತಕ್ಕ ರಾಜಭಾಷೆಯಾದ ಫಾರಸಿಯಲ್ಲಿ ಒಂದು ಪತ್ರಿಕೆಯನ್ನು ಪ್ರಚುರಿಸುತ್ತಿದ್ದನಂತೆ. ಆದರೆ ಅದರ ಹೆಸರು ಯಾವುದೋ ನಮಗೆ ತಿಳಿಯಬಂದಿಲ್ಲ.

ಧರ್ಮಸಭೆಯವರು ಬ್ರಹ್ಮಸಮಾಜದಲ್ಲಿ ವಿಶೇಷವಾದ ವಿರೋಧವನ್ನು ತೋರಿಸತೊಡಗಿದರು. ಕಲ್ಕತ್ತಾದಲ್ಲಿನ ಜಮೀನ್ದಾರರು, ಬಡಬಗ್ಗರು, ಸ್ವಲ್ಪ ಹೆಚ್ಚುಕಡಿಮೆ ಎಲ್ಲರೂ ಅವರಿಗೆ ಸಹಾಯಪರರಾದರು. ರಾಜಾರಾಧಾಕಾಂತದೇವನು ಸಭಾಧ್ಯಕ್ಷನಾಗಿಯೂ, ಉಳಿದ ದೊಡ್ಡಮನುಷ್ಯರು ಸಭಿಕರಾಗಿಯೂ ನಿಯಮಿಸಲ್ಪಟ್ಟರು. ಸಭೆಯ ಅಭಿವೃದ್ಧಿಗಾಗಿ ನಗರವಾಸಿಗಳಿಂದ ಕೊಡಲ್ಪಡುತ್ತಿದ್ದ ಸಹಾಯ ದ್ರವ್ಯವು ಸ್ವಲ್ಪ ದಿವಸಗಳಲ್ಲಿಯೇ ಒಂದುಲಕ್ಷ ರೂಪಾಯಿಗಳಾದವು. ಮತ್ತು ಈ ಸಭೆಯ ಕಾರ್ಯದರ್ಶಿಯಾಗಿದ್ದ ಬಾಬೂ ಭವಾನೀಚರಣಬೆನರ್ಜಿ ಎಂಬಾತನು ಮನೆಮನೆಗೂ ಹೋಗಿ ರಾಮಮೋಹನ ಮತ್ತು ಬ್ರಹ್ಮಸಮಾಜದ ಆಕ್ಷೇಪಗಳನ್ನು ವಿವರಿಸಿ ನೀವು ಯಾವಾಗಲಾದರೂ ಅಲ್ಲಿಗೆ ಹೋಗಲೇಕೂಡದೆಂದು ಹೇಳುತ್ತಿದ್ದನು. ಇದನ್ನು ಮೀರಿ ಅಲ್ಲಿಗೆ ಹೋದವರಿಗೆ ಬಹಿಷ್ಕಾರ ಹಾಕುತ್ತಿದ್ದರು. ಹೀಗಿದ್ದರೂ ಠಾಕೂರ್ ವಂಶದವರೂ, ಶಿಂಗ್‌ವಂಶದವರೂ, ಗಂಗೆಯ ಪಶ್ಚಿಮತೀರದ ಮಿಲ್ಲರಿನಲ್ಲಿದ್ದ ಬಾಬುಗಳೂ, ಟೋಕಿಯಲ್ಲಿದ್ದ ಕಾಳೀನಾಥನೆಂಬುವನೂ, ಆನಂದಪ್ರಸಾದ ಬೆನರ್ಜಿ ಎಂಬುವನೂ ಇನ್ನೂ ಕೆಲವರು ತಾವು ಎಂತಹ ಇಕ್ಕಟ್ಟುಗಳನ್ನಾದರೂ ಸಹಿಸಿಕೊಂಡು ತಮ್ಮ ಅಂತರಾತ್ಮಕ್ಕೆ ಅಂಗೀಕೃತವಾಗಿರುವ ರಾಮಮೋಹನನ ಸಂಬಂಧವನ್ನು ಅಗಲದೆ ಹೀನಸ್ಥಿತಿಗೆ ಬರುತ್ತಿದ್ದ ಆ ಸಮಾಜಕ್ಕೆ ಆಧಾರಭೂತರಾಗಿ ನಿಂತಿದ್ದರು. ಸತ್ಯಕ್ಕೆ ಎಂದಿಗೂ ಪರಾಜಯವಿಲ್ಲ ಎಂಬುದಕ್ಕೆ ಇದೊಂದು ಪ್ರಬಲನಿದರ್ಶನವಾಗಿದೆ. ಇಂತಹ ಪ್ರಬಲವಿರೋಧಕಾಲದಲ್ಲಿ ಬ್ರಹ್ಮಸಮಾಜಕ್ಕೂ ಅದರ ಅಭಿಮಾನಿಯಾದ ರಾಮಮೋಹನನಿಗೂ ಹೇಗೆ ಜಯ ಸಿಕ್ಕಿತು ? ಈ ಜಯವನ್ನು ಪಡೆಯಲು ಆತನು ಎಷ್ಟು ಕಷ್ಟಗಳನ್ನು ಅನುಭವಿಸಿದನು ? ಯಾವ ಯಾವ ಸಾಧನಗಳನ್ನು ಆಯುಧಗಳಾಗಿ ಮಾಡಿಕೊಂಡು ಈ ಮಹಾ ರಣರಂಗದಲ್ಲಿ ಆತನು ಜಯಶೀಲನಾದನು ? ಎಂಬ ವಿಷಯವನ್ನು ಕುರಿತು ಮ

ಹರ್ಷಿ ದೇವೇಂದ್ರನಾಥಠಾಕೂರ್ ಎಂಬ ಪ್ರಸಿದ್ಧಜ್ಞಾನಿಯು ನುಡಿದ ಕೆಲವು ವಾಕ್ಯಗಳನ್ನು ವಾಚಕರಿಗೆ ಶ್ರುತಪಡಿಸಿ ಈ ಪ್ರಕರಣವನ್ನು ಮುಗಿಸುವೆವು. ಬ್ರಹ್ಮಸಮಾಜದ ಹೆಸರನ್ನೆತ್ತಿದಕೂಡಲೆ ನಮಗೆ ಪ್ರಥಮಭಕ್ತನಾದ ರಾಮಮೋಹನನ ಹೆಸರು ನೆನಪಿಗೆ ಬಾರದೆ ಇರದು. ಆತನ ದೇಹವು ಎಷ್ಟು ದೃಢವಾಗಿದ್ದಿತೋ ಜ್ಞಾನವು ಅಷ್ಟರ ಪರಿಪೂರ್ಣವಾಗಿದ್ದಿತು. ಧೈರ್ಯ, ಸ್ಥಿರಸಂಕಲ್ಪ, ಮೊದಲಾದ ಸದ್ಗುಣಗಳನ್ನುಳ್ಳ ಆ ಮಹಾತ್ಮನ ಸುಂದರಸ್ವರೂಪವು ಈಗ ನಮ್ಮ ಕಣ್ಣೆದಿರಿಗೆ ಪ್ರತ್ಯಕ್ಷವಾಗಿ ಕಾಣಿಸುತ್ತಿದೆ. ಆ ವಿದ್ವಾಂಸನು ಧೈರ್ಯದಿಂದ ಸಾಧಿಸಿದ ಮಹತ್ಕಾರ್ಯಗಳಿಂದ ನಾಲ್ಕು ದಿಕ್ಕುಗಳಲ್ಲಿಯೂ ವ್ಯಾಪಿಸುತ್ತಿರುವ ಕೀರ್ತಿಚಂದ್ರಿಕೆಯು ನಮ್ಮನ್ನು ಸಂತೋಷಸಮುದ್ರದಲ್ಲಿ ಮುಳುಗಿಸುತ್ತದೆಯಲ್ಲವೇ! ಈತನು ಧರ್ಮಸಂರಕ್ಷಣಾರ್ಥವಾಗಿಯೇ ಈ ಭೂಲೋಕದಲ್ಲಿ ಜನಿಸಿ, ಹುಟ್ಟಿದ್ದು ಮೊದಲು ಸಾಯುವ ತನಕ ವಿಗ್ರಹಾರಾಧನೆ ಮೊದಲಾದ ದುರಾಚಾರಪಿಶಾಚಗಳೊಂದಿಗೆ ಹೋರಾಡಿ ತನ್ನ ಜಯಧ್ವಜವನ್ನು ಈ ಗಂಗಾನದೀಪ್ರಾಂತ ಪ್ರದೇಶದಲ್ಲಿ ಸ್ಥಾಪಿಸಿದನು. ಇವನು ಜನ್ಮಿಸಿದಾಗ ಬಂಗಾಳಾದೇಶದ ಸ್ಥಿತಿಯನ್ನು ನೆನಸಿಕೊಂಡರೆ ಎದೆ ಬಿರಿಯುತ್ತಿತ್ತು. ಆಗಿನ ಜನರು ಬ್ರಹ್ಮಸಮಾಜದ ಹೆಸರನ್ನು ಕೇಳಿದಕೂಡಲೇ ಹಗೆಗೊಳ್ಳುತ್ತಿದ್ದರು. ಅವಿದ್ಯೆ ಎಂಬ ಕತ್ತಲೆಯಲ್ಲಿ ಅಡಗಿದ್ದ ಬಂಗಾಳಾದೇಶದಲ್ಲಿ ದುರ್ವರ್ತನವೆಂಬ ದುಷ್ಟರಾಕ್ಷಸನು ನಿರಂಕುಶವಾಗಿ ಪ್ರಭುತ್ವ ಮಾಡುತ್ತಿದ್ದನು. ಆಗ ರಾಮಮೋಹನನು ಧೈರ್ಯವೆಂಬ ಕತ್ತಿಯನ್ನು ಕೈಯಲ್ಲಿ ಹಿಡಿದು ಕೋಪಿಸಿ, ಧುಮಿಕಿ ದುರ್ವಿಷಯ ಶತ್ರುಸಮೂಹವನ್ನು ಒಂದೇಸಾರಿ ಕತ್ತರಿಸಿ, ಬ್ರಹ್ಮಸಮಾಜ ವಿಜಯಧ್ವಜವನ್ನು ನೆಟ್ಟು ಒಣಗಿಹೋಗುತ್ತಿದ್ದ ಧರ್ಮವೆಂಬ ಗಿಡವನ್ನು ಮರಳಿ ಚಿಗುರಿಸಿದನು. ತರುವಾಯ ಆ ಧರ್ಮ ವೃಕ್ಷವು ದಿನೇದಿನೇ ಅಭಿವೃದ್ಧಿ ಹೊಂದು ಶಾಖಾ ಪುಷ್ಪಫಲಗಳಿಂದ ಕಂಗೊಳಿಸುತ್ತಿದ್ದಿತು. ಬ್ರಹ್ಮಧರ್ಮವನ್ನುದ್ಧರಿಸುವವರೊಬ್ಬರೂ ಇಲ್ಲವೆಂಬ ಲೋಪವನ್ನು ನಿವಾರಿಸುವುದಕ್ಕಾಗಿಯೇ ಈ ಮಹಾತ್ಮನು ಜನ್ಮಿಸಿ ಆರ್ಯಾವರ್ತದಲ್ಲಿ ಸದ್ವಿದ್ಯೆಯೆಂಬ ದೀಪವನ್ನು ಬೆಳಗಿಸಿದನು. ಬ್ರಹ್ಮಸಮಾಜಧರ್ಮಪ್ರಚಾರಕ್ಕಾಗಿಯೇ ಈತನು ತುಂಬ ಕಷ್ಟಪಟ್ಟು ತನ್ನ ಹಣವನ್ನೆಲ್ಲ ಧಾರೆಯೆರೆದು ಕೊನೆಗೆ ದೆಹಲಿಯ ರಾಜನಿಂದ ವೇತನವನ್ನು ಪಡೆದು ಜೀವಿಸಬೇಕಾದ ಸ್ಥಿತಿಗೆ ಬಂದರೂ ಚಿಂತಿಸದೆ ತನ್ನಿಂದ ಉಪಕ್ರಮಿಸಲ್ಪಟ್ಟ ಈ ಮಹಾಕಾರ್ಯಕ್ಕೆ ಮುಂದಿನ ತಲಾಂತರದ ಜನರು ಸಹಾಯಕರಾಗಿ ಕೆಲಸ ಮಾಡಿ ವೃದ್ಧಿಯನ್ನು ಹೊಂದುವರೆಂಬ ನಂಬಿಕೆಯಿಂದುಂಟಾದ ಸಂತೋಷದಿಂದಲೇ ಆ ವಿಚಾರದಲ್ಲಿ ಲಕ್ಷ್ಯಮಾಡದೆ ಇದ್ದನು. ತನ್ನ ಕೆಲಸಗಳಲ್ಲಿ ತನಗಿರುವ ಶ್ರದ್ಧೆಗಿಂತ ನೂರುಪಾಲು ಹೆಚ್ಚಾಗಿ ಬ್ರಹ್ಮಸಮಾಜದ ಕಾರ್ಯಗಳಲ್ಲಿ ಶ್ರದ್ಧೆಯುಳ್ಳವನಾಗಿದ್ದ ಈತನು ತನ್ನ ೧೬ನೆಯ ವಯಸ್ಸಿನಿಂದ ೫೯ನೆಯ ವರ್ಷದ ತನಕ ಅದರ ಅಭಿವೃದ್ಧಿಗಾಗಿಯೇ ಕಷ್ಟಪಟ್ಟು ಕೆಲಸ ಮಾಡಿದನು. ಇಂತಹ ಹೆಚ್ಚು ಶ್ರಮಪಟ್ಟು ನಿರ್ವಹಿಸಿದ ಈ ಮಹೋತ್ಕೃಷ್ಟ ಕಾರ್ಯವನ್ನು ನೋಡಿಯಾದರೂ ನಮಗೆ ಏಕೆ ಉತ್ಸಾಹ ಹುಟ್ಟಬಾರದು? ಈ ಮಹಾತ್ಮನು ಯಾವ ಪವಿತ್ರಕಾರ್ಯಕ್ಕಾಗಿ ತನ್ನ ದೇಹ ರಕ್ತವನ್ನೆಲ್ಲಾ ಒಪ್ಪಿಸಿದನೋ ಅಂಥ ಬ್ರಹ್ಮಜ್ಞಾನವಿಷಯ

ವನ್ನು ಕುರಿತು ಸ್ವಲ್ಪ ಮಟ್ಟಿಗಾದರೂ ತಿಳಿದುಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ರಾಮಮೋಹನನು ಪ್ರಾರಂಭದಲ್ಲಿ ಕಲ್ಕತ್ತೆಗೆ ಬಂದಾಗ ಒಬ್ಬ ಪರದೇಶಿಯಂತೆ ಇದ್ದನು, ಆಗ ಅವನಿಗೆ ಯಾರು ಸಹಾಯಕರಾಗಿದ್ದರು ? ತನ್ನ ಜ್ಞಾನ, ಧರ್ಮ, ಸತ್ಯ ಎಂಬವುಗಳನ್ನೇ ತನಗೆ ಸಾಧನಗಳಾಗಿ ಮಾಡಿಕೊಂಡು ತನ್ನ ಜತೆಗೆ ಬಹು ಮಂದಿಯನ್ನೂ ಸೇರಿಸಿಕೊಂಡನು. ಅವರೇ ಅವನ ಪ್ರಾಣಸ್ನೇಹಿತರಾಗಿ ಎಂತಹ ಕೆಲಸಕ್ಕಾದರೂ ಹಿಂದೆಗೆಯದೆ ಸಹಕಾರಿಗಳಾದರು. ಧರ್ಮಬಾಹಿರನೆಂದು ಒಂದುಸಾರಿ ಪೂರ್ವಾಚಾರ ಪರಾಯಣರಾದ ಮೂರ್ಖರಿಂದ ಆಕ್ಷೇಪಿಸಲ್ಪಟ್ಟ ರಾಮಮೋಹನನು ಈಗ ಯುಕ್ತಾಯುಕ್ತ ವಿವೇಚನಶೀಲರಾದ ವಿದ್ವಾಂಸರ ಹೃದಯವೆಂಬ ಸಿಂಹಾಸನದಲ್ಲಿ ಕುಳಿತು ಲೋಕಪೂಜ್ಯನಾಗಿ ಒಪ್ಪುತ್ತಿರುವನು. ಇಷ್ಟು ಸತ್ಯಮಾರ್ಗಾಭಿವೃದ್ಧಿಗೆ ದೈವಬಲವೇ ಕಾರಣವು.

ಪಿಡಿದುದನಳುಕದೆ ಧೈರ್ಯದೆ |
ದೃಢದಿಂ ಮಾಡುತ್ತ ಬಂದೊಡಾವುದಸಾಧ್ಯಂ ||
ಮಡೆಯುರ್ಕೆ ಘ್ನಕ್ಕಂಜುತೆ |
ತೊಡಗದಿಹ ಧೀರರೇಕೆ ಕಂದುವರಿಳೆಯೊಳ್ ||

## ನಾಲ್ಕನೆಯ ಪ್ರಕರಣ.

ಕೆಲವು ಇಂಗ್ಲಿಷ್ ಇತಿಹಾಸ ಲೇಖಕರು ರಾಮಮೋಹನನಿಗೆ ಸರ್ವವಿಷಯ ಸಂಸ್ಕಾರ ಕರ್ತ (All round Reformer) ಎಂಬ ಬಿರುದನ್ನಿತ್ತಿರುವರು. ಇದರಿಂದ ಈತನು ಕೇವಲ ಪರಮಾರ್ಥ ಬೋಧನೆಯೊಂದರಲ್ಲಿಯೇ ತನ್ನ ಶಕ್ತಿಯನ್ನೆಲ್ಲಾ ವಿನಿಯೋಗಿಸದೆ, ಸಾಂಘಿಕ ವಿಷಯದಲ್ಲಿಯೂ, ರಾಜ್ಯಾಂಗ ವಿಷಯದಲ್ಲಿಯೂ ಸಹ ಎಚ್ಚರ ತಿಗೆದುಕೊಂಡು, ಅವುಗಳನ್ನು ಸಂಸ್ಕರಿಸುತ್ತಿದ್ದನೆಂತಲೂ, ಯಾವ ವಿಷಯದಲ್ಲಿಯಾದರೂ ಲೋಪವಿದ್ದಂತೆ ಕಾಣಿಸಿದರೆ ಕೂಡಲೇ ಅದನ್ನು ಸವರಿಸಲಿಕ್ಕೆ ಪ್ರಯತ್ನಿಸುತ್ತಿದ್ದನೆಂತಲೂ, ಅವರ ಅಭಿಪ್ರಾಯವಿತ್ತೆಂದು ಸ್ಪಷ್ಟಪಡುವುದು.

ಬಹು ಕಾಲದಿಂದಲೂ ಯುರೋಪ್ ರಾಜ್ಯಗಳವರು ಪ್ರಾಪಂಚಿಕ ವ್ಯವಹಾರಗಳಿಗೂ, ಪರಮಾರ್ಥ ವಿಷಯಗಳಿಗೂ ಸಂಬಂಧವೇನೂ ಇಲ್ಲವೆಂತಲೂ, ಇವೆರಡೂ ಒಂದರೊಡನೆ ಮತ್ತೊಂದು ಬೆರೆಯದ ಪ್ರತ್ಯೇಕ ಪದಾರ್ಥಗಳೆಂತಲೂ ಹೇಳುತ್ತಿರುವರು. ಪಾಶ್ಚಾತ್ಯವಿದ್ಯಾಭಿವೃದ್ಧಿಯಾದಹಾಗೆಲ್ಲಾ ನಮ್ಮ ದೇಶದಲ್ಲಿ ಕೂಡ ಈಗ ಇದೇ ಅಭಿಪ್ರಾಯವು ವ್ಯಾಪಿಸುತ್ತಿರುವುದರಿಂದ ವಿದ್ಯಾವಂತರಲ್ಲಿ ಅಹುದು ಅಲ್ಲವೆಂಬ ಎರಡು ಬಗೆಯ ಭಿನ್ನೋದ್ದೇಶಗಳವರು ಏರ್ಪಟ್ಟು ಒಬ್ಬರನ್ನೊಬ್ಬರು ಹಗೆ ಮಾಡುವ ಸ್ಥಿತಿಯುಂಟಾಯಿತು. ವಿಚಾರ ಮಾಡಿ ನೋಡಿದರೆ ಇವರಲ್ಲಿ ಒಳ್ಳೆಯ ಉದ್ದೇಶವುಳ್ಳವರು ಕೆಲವರಿದ್ದರೂ ಅವರಾದರೂ ಸತ್ಯಾಂಶವು ಯಾವುದೆಂಬುದನ್ನು ತಿಳಿದುಕೊಳ್ಳುವುದೇ ಇಲ್ಲವೆಂತಲೂ ಹಾಗೆ ತಿಳಿದುಕೊಂಡರೂ ಅದು ಅತ್ಯಲ್ಪವಾದುದೆಂತಲೂ ಸ್ಫುಟಸದೆ ಇರದು.

ಮನುಷ್ಯನ ಜೀವಿತವು ನಿಸ್ಸಂಶಯವಾಗಿ ಪರಮಾರ್ಥವಿಷಯದಲ್ಲಿಯೇ ವಿನಿಯೋಗಿಸಲಾಗುವುದು. ಯಾವ ಮತವೇ ಆದರೂ ಕೆಲವು ಕಟ್ಟುಪಾಟುಗಳಿಗೆ ಒಳಪಟ್ಟಿರಬೇಕು. ಸಂಸ್ಕರಣವೆಂಬುದು ಉಚಿತವಾದ ನಿಬಂಧನೆಯನ್ನನುಸರಿಸಿ ಕಾಲಾನುಗುಣವಾಗಿ ಮಾಡಲ್ಪಟ್ಟರೆ ಫಲದಾಯಕವಾಗಿರುವುದು. ಸಂಸ್ಕಾರ ಜ್ಞಾನದಿಂದಲೇ ಯುಕ್ತಾಯುಕ್ತವಿವೇಚನೆಯೂ ಪ್ರಾಪಂಚಿಕ ಧರ್ಮಗಳಲ್ಲಿ ಆಸಕ್ತಿಯೂ ಉಂಟಾಗುವುವು. ಯಾವನು ಸಂಪೂರ್ಣವಾಗಿ ಪರಮಾರ್ಥವನ್ನು ತಿಳಿಯುವನೋ ಇವನು ಮನುಷ್ಯರ ಕರ್ತವ್ಯಗಳಲ್ಲಿ ಎರಡನೆಯ ಭಾಗವಾದ ಪ್ರಾಪಂಚಿಕಧರ್ಮಗಳಲ್ಲಿ ಸ್ವಭಾವವಾಗಿಯೇ ಮನಸ್ಸಿಡುವನು. ಬುದ್ಧಿವಂತರಾದ ಕೆಲವರು ಆಗಾಗ ಲೋಕದಲ್ಲಿ ಹುಟ್ಟಿ ಮೂಢಜನಗಳನ್ನೆಲ್ಲಾ ಸನ್ಮಾರ್ಗಕ್ಕೆ ತಿರುಗಿಸಬೇಕೆಂದು ಯತ್ನಿಸಿದರು. ಅದು ಸರ್ವತ್ರ ಪ್ರಯೋಜನಕಾರಿಯಾಗದೆ ಕೆಲವು ಕಡೆಗಳಲ್ಲಿ ನಷ್ಟಕ್ಕೆ ಕಾರಣವಾಗುತ್ತಾ ಬಂತು. ಮುಂದೆ ನಿಜವಾಗಿ ಸಂಸ್ಕಾರವನ್ನು ಮಾಡಿ ಸನ್ಮಾರ್ಗವನ್ನು ತೋರಿಸುವನಾವನೆಂದು ವಿಚಾರ ಮಾಡುವಲ್ಲಿ ಸರ್ವವಿಷಯ ಸಂಸ್ಕಾರ ಶಕ್ತಿಯುಳ್ಳವನೊಬ್ಬನೇ ಆ ಕಾರ್ಯಕ್ಕೆ ಅರ್ಹನೆಂದು ಹೇಳದೆ ತೀರದು. ಅಂಥವರೇ ದೇಶವನ್ನಭಿವೃದ್ಧಿಗೆ ತರತಕ್ಕವರು ಯಾವಾಗಲಾದರೂ ದೇಶವು ಸರ್ವವಿಧಗಳಲ್ಲಿಯೂ ಅಭಿವೃದ್ಧಿಗೆ ತರಲ್ಪಡಬೇಕಾದರೆ ಇಂತವರ ಸಹಾಯವು ಆವಶ್ಯವಾದುದು. ಹಿಂದೂ ದೇಶವು ಉನ್ನತಸ್ಥಿತಿಗೆ ಬಂದಿದ್ದ ಪೂರ್ವಕಾಲದ ಕಡೆಗೆ ನಾವು ದೃಷ್ಟಿಯಿಟ್ಟು ನೋಡಿದರೆ ಇದುವರೆಗೆ ನಾವು ಹೇಳಿದ ಮಾತಿನಲ್ಲಿ ಎಷ್ಟರ ಮಟ್ಟಿಗೆ ಸತ್ಯವಿರುವುದೆಂಬುದು ಸ್ಪಷ್ಟವಾಗುವುದು. ಆ ಕಾಲದಲ್ಲಿ ಯಾರು ಮತವಿಧಗಳನ್ನೆಲ್ಲ ನಿರ್ಣಯಿಸಿದರೋ ಅವರೇ ಇತರ ಸಂಸ್ಕಾರಗಳಿಗೂ, ರಾಜ್ಯಾಂಗದ ಯೋಜನೆಗಳಿಗೂ ಮಾರ್ಗದರ್ಶಕರಾಗಿದ್ದರು.

ಮಹರ್ಷಿಗಳೆಲ್ಲರೂ ಬ್ರಹ್ಮಜ್ಞಾನವನ್ನೂ, ಧರ್ಮ ತತ್ವವನ್ನೂ ಕುರಿತು ಹೇಗೆ ಉತ್ತಮ ಗ್ರಂಥಗಳನ್ನು ಬರೆದರೊ ಹಾಗೆಯೇ ಅವರು ರಾಜನೀತಿ, ಮಾನವ ಧರ್ಮ ಮುಂತಾದ ಐಹಿಕ ವ್ಯವಹಾರಗಳನ್ನು ಕುರಿತು ಗ್ರಂಥಗಳನ್ನು ಕೂಡ ಬರೆದಿಟ್ಟರು. ಅವರು ಕೇವಲ ವನವಾಸಿಗಳಾಗಿ ಅಲ್ಲಿಯೇ ಕುಳಿತಿದ್ದು ಬ್ರಹ್ಮಜ್ಞಾನ ವಿಚಾರದಲ್ಲಿ ಮಾತ್ರ ಆಸಕ್ತರಾಗಿರದೆ. ಅವರಲ್ಲಿ ಕೆಲವರು ದೊಡ್ಡವರು ಗೃಹಸ್ಥಧರ್ಮವನ್ನವಲಂಬಿಸಿ ಸಂದರ್ಭ ದೊರೆತಹಾಗೆಲ್ಲಾ ದೇಶ ಮತ್ತು ಸಂಘಗಳ ಕ್ಷೇಮಾಭಿವೃದ್ಧಿಯಲ್ಲಿ ತುಂಬ ಶ್ರದ್ಧೆಯನ್ನು ತೆಗೆದುಕೊಂಡು ಮಾತುಗಳಿಂದಲೂ, ಕಾರ್ಯಗಳಿಂದಲೂ ಅವುಗಳನ್ನು ವೃದ್ಧಿಗೆ ತರಲು ಯತ್ನಿಸುತ್ತಿದ್ದರು. ಇದಕ್ಕೆ ಶ್ರುತಿಗಳೂ ಶಾಸ್ತ್ರಗಳೂ ಪ್ರಬಲವಾದ ಸಾಕ್ಷಿಗಳಾಗಿವೆ. ಆಗಿನ ರಾಜರೆಲ್ಲರೂ ರಾಜ್ಯದ ವ್ಯಾವಹಾರಿಕ ಕಾರ್ಯಗಳಲ್ಲಿ ಇಂತವರ ಆಲೋಚನೆಗಳನ್ನು ಕೇಳಿ ತಿಳಿದುಕೊಂಡು ಪರಿಷ್ಕರಿಸುತ್ತಿದ್ದಂತೆ ಪೂರ್ವದ ಗ್ರಂಥಗಳಿಂದ ನಮಗೆ ತಿಳಿಯಬರುವುದು. ಇದು ಹೀಗಿರಲಿ; ನಮ್ಮದೇಶವನ್ನು ಬಿಟ್ಟು ಪರದೇಶಗಳ ಕಡೆಗೆ ದೃಷ್ಟಿಕೊಟ್ಟು ನೋಡೋಣ. ಅರೇಬಿಯಾ ದೇಶದಲ್ಲಿ ದೊಡ್ಡ ಸಂಸ್ಕರಣಕರ್ತನೆನಿಸಿದ 'ಖಲೀಲ್ ಅರಬ್' ಎಂಬಾತನು ಪರಮಾರ್ಥೋಪದೇಶದ ಜತೆಗೆ ಸಂಘ ಸಂಸ್ಕರಣವನ್ನೂ ರಾಜ್ಯಾಂಗ

ಸಂಸ್ಕಾರವನ್ನೂ ಮಾಡಿದನು. ಹಾಗೆ ಮಾಡಿದುದರಿಂದಲೇ ಆನೇಕೀಯರು ಪ್ರಪಂಚದ ಲ್ಲಿನ ದೊಡ್ಡ ದೊಡ್ಡ ಭೂಭಾಗಗಳನ್ನು ಜಯಿಸುವುದಕ್ಕೂ, ಸ್ವಮತಧರ್ಮವನ್ನು ಸ್ಥಾಪಿ ಸುವುದಕ್ಕೂ ಕಾರಣವಾಯಿತು. ಇಂಗ್ಲೆಂಡಿನಲ್ಲಿ ಮತದಲ್ಲಿ ದೃಢವಾದ ಅಭಿಮಾನವ ನ್ನುಳ್ಳ ಪ್ಯೂರಿಟನ್ ಬಣದವರು ರಾಜರ ಬಲವನ್ನು ತಗ್ಗಿಸಿ ಪ್ರಜಾ ಬಲವನ್ನು ಹೆಚ್ಚಿಸ ಲಿಕ್ಕೆ ಕಾರಣರಾದರು. ಮತ್ತು ಅಮೆರಿಕಾ ಖಂಡದ ಸಂಯುಕ್ತ ಸಂಸ್ಥಾನಗಳ ನಾಗರಿಕ ತೆಗೂ, ಅಭಿವೃದ್ಧಿಗೂ ಪ್ರಥಮದಲ್ಲಿ ಇವರಿಂದಲೇ ಬೀಜಹಾಕಲ್ಪಟ್ಟಿತು. ಕಳೆದ ಶತ ಮಾನದಲ್ಲಿ ತಾನು ಮಾಡುವ ಪ್ರತಿ ಒಂದು ಕೆಲಸಕ್ಕೂ ಮೊದಲಲ್ಲಿ ದೇವರ ಪ್ರಾರ್ಥನೆ. ಯನ್ನು ಮಾಡಿ ಪ್ರಾರಂಭಿಸುವಷ್ಟು ಪರಮ ಭಕ್ತಿಭಾವವನ್ನುಳ್ಳ ಜೋಸೆಫ್ ಮೋಜನೀ ಎಂಬಾತನೇ 'ಡ್ಯೂಟೀಸ' ಆಫ್ ಮೆನ್' ಮೊದಲಾದ ಮನುಷ್ಯ ಸ್ವಾತಂತ್ರ್ಯಗಳನ್ನು ತಿಳಿಸುವ ಗ್ರಂಥಗಳನ್ನು ಬರೆದು ಪ್ರಜಾ ಸ್ವಾತಂತ್ರ್ಯವನ್ನೂ ಅವರ ಅಭಿವೃದ್ಧಿಯನ್ನೂ ಬೆಳಸಲಿಕ್ಕೆ ಪ್ರಧಾನ ಕಾರಣನಾದನು. 'ಥಿಯೋಡರ ಪಾರ್ಕರ' ಎಂಬ ಅಮೆರಿಕಾಖಂಡ ವಾಸಿಯು ಮತಸಂಸ್ಕಾರಗಳ ಜತೆಯಲ್ಲಿ ಕೊಂಚಕೊಂಚ ಲೋಕವ್ಯವಹಾರಗಳ ಬದಲಾ ವಣೆಗಳಲ್ಲಿ ಕೂಡ ಜ್ಞಾನಪ್ರಕಾಶವನ್ನು ವ್ಯಾಪನಗೊಳಿಸಿರುವನು.

ಮಹಾತ್ಮನಾದ ರಾಜಾರಾಮಮೋಹನರಾಯನನ್ನು ಸುದಾ ಮೇಲೆ ಹೇಳಲ್ಪಟ್ಟವ ರೊಂದಿಗೆ ಹೋಲಿಸಬಹುದು. ಆತನು ಮತ ಸಂಸ್ಕಾರಗಳ ಜತೆಯಲ್ಲಿ ತನ್ನ ದೇಶದ ಇತರ ಲೋಪಗಳನ್ನೂ ರಾಜ್ಯಾಂಗ ಸಂಸ್ಕಾರಗಳನ್ನೂ ಕುರಿತು ಬಹುಮಟ್ಟಿಗೆ ಪ್ರಯತ್ನಿಸಿ ಕೆಲಸ ಮಾಡಿದನೆಂದು ಹೇಳಿದರೆ ಅದು ಆಶ್ಚರ್ಯಕರವಾಗಿಯೂ ಆಕ್ಷೇಪಣೀಯವಾಗಿಯೂ ಇರು ವುದೆಂದು ಭಾವಿಸಲಾಗದು. ಏತಕ್ಕೆಂದರೆ ಮನುಷ್ಯನ ಜೀವಿತದಲ್ಲಿನ ಸಂಸ್ಕಾರವಿಷಯಗಳ ನ್ನೆಲ್ಲಾ ಒಂದರೊಂದಿಗೆ ಒಂದನ್ನು ಜತೆಗೊಳಿಸಿ, ಕೆಲಸಮಾಡದೆ ಯಾವುದಾದರೂ ಒಂದು ಭಾಗವನ್ನು ಮಾತ್ರ ತೆಗೆದುಕೊಂಡು ಕೆಲಸಮಾಡಿದಲ್ಲಿ ಆ ಸಂಸ್ಕರಣವು ಸಂಸ್ಕಾರವೇ ಅಲ್ಲವು.

ಮತವಿಷಯ ಸಂಸ್ಕರಣಗಳನ್ನು ಕುರಿತು ರಾಮಮೋಹನನು ಕಲ್ಕತ್ತೆಯಲ್ಲಿದ್ದು ಕೊಂಡು ತನ್ನಿಂದ ಮಾಡಲ್ಪಡಬೇಕಾದ ಕೆಲಸಗಳನ್ನೆಲ್ಲಾ ಹೇಗೆಹೇಗೆ ನೆರವೇರಿಸಿದನೆಂಬು ದನ್ನು ಹಿಂದಿನ ಪ್ರಕರಣದಲ್ಲಿ ಸಂಗ್ರಹವಾಗಿ ಹೇಳಿರುವೆವು. ಈಗ ರಾಜಕೀಯ ಸಂಸ್ಕ ರಣಗಳನ್ನೂ ಇತರ ಸಂಸ್ಕಾರಗಳನ್ನೂ ಕುರಿತು ರಾಮಮೋಹನನು ಯಾವ ಯಾವ ಯತ್ನಗಳನ್ನು ಮಾಡಿದನೋ ಅವುಗಳನ್ನು ಈ ಪ್ರಕರಣದಲ್ಲಿ ವಿವರಿಸುವೆವು.

ರಾಮಮೋಹನನು ಸಹಗಮನ ಸಂಘ ದುರಾಚಾರವನ್ನು ತೊಲಗಿಸುವುದರಲ್ಲಿಯೇ ತನ್ನ ಜೀವಮಾನದ ಬಹುಭಾಗವನ್ನು ವಿನಿಯೋಗಿಸಿದನು. ಸತ್ತುಹೋದ ಪತಿಯ ಶವದೊಂ ದಿಗೆ ಬದುಕಿರುವ ಹೆಂಡತಿಯ ದೇಹವನ್ನು ಸುಟ್ಟುಬಿಟ್ಟರೆ ಅದು ತುಂಬ ಪಾತಿವ್ರತ್ಯವೆಂತ ಲೂ, ಅದರಿಂದ ಸ್ವರ್ಗಲೋಕದಲ್ಲಿ ಸತಿಪತಿಗಳಿಬ್ಬರೂ ಶಾಶ್ವತವಾದ ಸೌಖ್ಯವನ್ನನುಭವಿಸು ವರೆಂತಲೂ ನಮ್ಮವರು ಒಂದುಬಗೆಯ ಮೂಢವಿಶ್ವಾಸವುಳ್ಳವರಾಗಿದ್ದರು. ಈ ಘೋರ

ವಿಚಾರವು ಯಾವಾಗ ಹೇಗೆ ಪ್ರಾರಂಭವಾಯಿತೆಂಬುದನ್ನು ತಿಳಿಯುವುದು ಕಷ್ಟವಾಗಿದೆ. ಆದರೆ ವೇದಗಳಲ್ಲಿ ಎಲ್ಲಿಯಾದರೂ ಇದನ್ನು ಕುರಿತು ಪ್ರಸ್ತಾಪವೇ ಇಲ್ಲದಿರುವುದಲ್ಲದೆ ವಿತಂತುಗಳ ವಿವಾಹವಾಗಲಿಕ್ಕೆ ಎಲ್ಲರಿಗೂ ಧಾರಾಳವಾಗಿ ಅಪ್ಪಣೆ ಕೊಡಲ್ಪಟ್ಟಿದೆ. ಮನುವು, ಯಾಜ್ಞವಲ್ಕ್ಯನು ಮೊದಲಾದ ಸ್ಮೃತಿಕರ್ತರಿಗೆ ಸುದಾ ಈ ವಿಷಯವನ್ನು ಕುರಿತು ಏನೂ ತಿಳಿಯದು. ಇದರಿಂದ ಈ ದುರಾಚಾರವು ಪುರಾಣರಚನೆಯ ಕಾಲದಲ್ಲಿ ಆರಂಭವಾಗಿ ಕ್ರಮಕ್ರಮವಾಗಿ ದೇಶದಲ್ಲೆಲ್ಲಾ ವ್ಯಾಪಿಸಿ, ಮಹಮ್ಮದೀಯರು ಈ ದೇಶದ ಮೇಲೆ ದಂಡೆತ್ತಿ ಬರುವವರೆಗೆ ಸಂಪೂರ್ಣವಾಗಿ ಅಭಿವೃದ್ಧಿಗೆ ಬಂದಿತ್ತೆಂದು ಸ್ಪಷ್ಟವಾಗಿ ತಿಳಿಯಬರುವುದು. ಘಜ್ನೀ ಮಹಮ್ಮದನ ತರುವಾಯ ಈ ದೇಶಕ್ಕೆ ಬಂದಿದ್ದ ಅಲಭೂರನೀ ಎಂಬಾತನು ಹೀಗೆ ಬರೆದಿರುವನು.

"ಒಂದುವೇಳೆ ಯಾವ ಹೆಂಗಸಾದರೂ ತನ್ನ ಗಂಡನನ್ನು ಕಳೆದುಕೊಂಡರೆ ಎರಡನೆಯ ಮದುವೆಯನ್ನು ಮಾಡಿಕೊಳ್ಳಕೂಡದು. ಬದುಕಿರುವತನಕ ವಿಧವೆಯಾಗಿದ್ದು, ಬ್ರಹ್ಮಚರ್ಯವನ್ನು ಅನುಷ್ಠಿಸತಕ್ಕದ್ದು; ಅಥವಾ ಗಂಡನ ಶವದೊಂದಿಗೆ ಸುಡಲ್ಪಡತಕ್ಕದ್ದು: ಎಂಬವೆರಡರಲ್ಲಿ ಯಾವುದಾದರೊಂದನ್ನು ನಡಿಸಬೇಕಾಗಿರುವುದು ಬದುಕಿರುವತನಕ ಅನೇಕ ನಿರ್ಬಂಧಗಳಿಗೆ ಒಳಪಟ್ಟಿರಬೇಕಾಗಿ ಇದ್ದುದರಿಂದ ಎರಡನೆಯದಾದ ಸಹಗಮನವೇ ಉತ್ತಮವೆಂದು ತಿಳಿದಿದ್ದಿತು."

ಮಹಮ್ಮದೀಯರ ಆಳಿಕೆಯಲ್ಲಿ ಯಾರಾದರೂ ಈ ಭಯಂಕರವಾದ ದುರಾಚಾರವನ್ನು ತೊಲಗಿಸುವುದಕ್ಕೆ ಪ್ರಯತ್ನಿಸದೆ ಹೋದರು. ಕೆಲವು ಪಾರಸಿ ಕವಿಗಳು ಈ ಆಚಾರವನ್ನನುಸರಿಸಿ, ಹಿಂದೂಸ್ತ್ರೀಯರ ಪಾತಿವ್ರತ್ಯವು ಶ್ಲಾಘನೀಯವೆಂತಲೂ, ಪತಿಗಳಲ್ಲಿ ಅವರಿಗಿರುವ ಪ್ರೇಮವು ಅಸಾಧಾರಣವೆಂತಲೂ, ವರ್ಣಿಸಿ ಹಲವು ಗ್ರಂಥಗಳನ್ನು ಬರೆದರು. ನ್ಯಾಯಮೂರ್ತಿಯಾದ ಅಕ್ಬರು ಚಕ್ರವರ್ತಿ ಮಾತ್ರ ಈ ನೀತಿಬಾಹ್ಯವಾದ ದುಷ್ಕಾರ್ಯವನ್ನು ನಿಲ್ಲಿಸಲಿಕ್ಕೆ ಸ್ವಲ್ಪಮಟ್ಟಿಗೆ ಪ್ರಯತ್ನಿಸಿದನು. ಇಷ್ಟವಿಲ್ಲದ ಸ್ತ್ರೀಯನ್ನು ಬಲಾತ್ಕಾರವಾಗಿ ಸುಟ್ಟುಹಾಕಬಾರದೆಂದು ಮಾತ್ರ ಆಜ್ಞಾಪಿಸಿ ಸುಮ್ಮನಿದ್ದನು. ಅಕ್ಬರನ ಮಗನಾದ ಜಹಾಂಗೀರನು ಹಿಂದೂಮತವನ್ನು ಬಿಟ್ಟು ಮಹಮ್ಮದೀಯಮತವನ್ನವಲಂಬಿಸಿದವರು ಸುದಾ ಬಂಗಾಳದ ಕೆಲ ಕೆಲವು ಗ್ರಾಮಗಳಲ್ಲಿ ಸಹಗಮನ ಮಾಡುತ್ತಿರುವರೆಂಬುದನ್ನು ಕೇಳಿ ಆಶ್ಚರ್ಯದಲ್ಲಿ ಮಗ್ನನಾದನು. ಆತನು ಒಂದುವೇಳೆ ಕಾಶ್ಮೀರಕ್ಕೆ ಹೋಗಿ "ರಾಜೋರಿ" ಎಂಬಲ್ಲಿ ಗುಡಾರದಲ್ಲಿದ್ದಾಗ ಆ ಗ್ರಾಮದಲ್ಲಿದ್ದ ಒಬ್ಬ ಮಹಮ್ಮದೀಯ ಸ್ತ್ರೀಯು ತನ್ನ ಪತಿಯ ಹೆಣದೊಂದಿಗೆ ಹೂಳಲ್ಪಡುತ್ತಿರುವುದನ್ನು ಕೇಳಿದನು. ಮತ್ತು ಅದೇ ದಿನಗಳಲ್ಲಿಯೇ 12 ವರ್ಷಗಳ ವಯಸ್ಸಿನ ಒಬ್ಬ ಮುಸಲ್ಮಾನರ ಹುಡುಗಿಯು ಅದೇರೀತಿಯಲ್ಲಿ ಹೂಳಲ್ಪಟ್ಟಳು; ಮುಂದೆ ಇಂಗ್ಲಿಷರ ಪ್ರಭುತ್ವವು ಆರಂಭಿಸಿದಮೇಲೆ ಅವರು ಪರಿಪಾಲನಾದಿ ಕಾರ್ಯಗಳಲ್ಲಿದ್ದುದರಿಂದ ಪ್ರಜಾಸಾಮಾನ್ಯಕ್ಕೆ ಅಹಿತವಾದ ಸಂಘ ಸಂಬಂಧಗಳಲ್ಲಿ ಬದಲಾವಣೆಗಳನ್ನು ಮಾಡಲು ಅನುಕೂಲವಿಲ್ಲದೆ ಇದ್ದಿತು. ಪಶ್ಚಿಮನಾಗರಿಕರಿಗೆ ಇದಕ್ಕಿಂತ ವಿಷಾದಕರವಾಗಿಯೂ ಭಯಂಕರವಾಗಿಯೂ ಇರುವ ದುಷ್ಕಾರ್ಯವು ಮತ್ತಾವುದೂ ಇಲ್ಲದಿದ್ದರೂ

ಕಂಪೆನಿಯವರಿಗೆ ತಮ್ಮ ಆಳಿಕೆಯ ಅಭಿವೃದ್ಧಿಯಲ್ಲಿಯೂ, ದ್ರವ್ಯಾರ್ಜನೆಯಲ್ಲಿಯೂ ಇದ್ದಷ್ಟು ಅಭಿಮಾನವು ಸಹಗಮನಪದ್ಧತಿಯನ್ನು ನಿಲ್ಲಿಸಿ ನಾಗರಿಕತೆಯನ್ನು ಹೆಚ್ಚಿಸುವ ವಿಷಯದಲ್ಲಿ ಇಲ್ಲದೆ ಹೋಯಿತು. ಮತ್ತು ಈ ದುರಾಚಾರವನ್ನು ಬಿಡಿಸಿದಲ್ಲಿ ಪ್ರಜೆಗಳ ಮತವಿಷಯದಲ್ಲಿ ಪ್ರವರ್ತಿಸಿದಂತೆ ಆಗುವುದೆಂದು ತಿಳಿದು, ಆಗಿನ ಅಧಿಕಾರಿಗಳು ಅಲ್ಲಲ್ಲಿ ಎಷ್ಟೆಷ್ಟು ಭಯಂಕರಗಳಾದ ಮರಣಗಳು ಜರುಗುತ್ತಿದ್ದರೂ ಅಲಕ್ಷ್ಯದಿಂದ ಆ ಕಡೆಗೆ ತಿರುಗಿನೋಡದೆ ಈ ದುರಾಚಾರವು ಕ್ರಮಕ್ರಮವಾಗಿ ತೊಲಗಿಹೋಗಬೇಕೇ ಹೊರತು ನಾವು ಈಗ ಯಾವುದನ್ನೂ ಮಾಡಲಿಕ್ಕಾಗದೆಂದು ಹೇಳುತ್ತಾ, ತಾವು ಸುಮ್ಮನೆ ಇದ್ದುದಲ್ಲದೆ ಅವರ ಅಧೀನದಲ್ಲಿಲ್ಲದ ಇಂಡಿಯಾದಲ್ಲಿರುವ ಇತರ ಯೂರೋಪಿಯನ್ ಮಿಷನರಿಗಳಿಗೆ ಸುದಾ ಕೆಲವು ರಾಜಕೀಯ ರಹಸ್ಯಕಾರಣಗಳಿಂದ "ನೀವು ಯಾರಾದರೂ ಸಹಗಮನವನ್ನು ಕುರಿತು ಯಾವ ವಿಧವಾದ ಮಾತನ್ನಾಗಲಿ, ನಾಲಿಗೆಯಿಂದ ಉಚ್ಚರಿಸಲೇಬಾರದು" ಎಂದು ಕಠಿನವಾದ ಆಜ್ಞೆಯನ್ನಿತ್ತಿದ್ದರು. ಒಂದುಸಾರಿ ಯಾವನೋ ಒಬ್ಬ ಪಾದಿರಿಯು ಒಂದುಕಡೆ ತನ್ನ ವಾರ್ತಾಪತ್ರದಲ್ಲಿ ಈ ಘೋರ ದುರಾಚಾರವನ್ನು ನಿಲ್ಲಿಸಬೇಕೆಂದು ಜನಗಳನ್ನೆಲ್ಲಾ ಪ್ರಾರ್ಥಿಸಿದಂತೆ ಒಂದು ಲೇಖನವನ್ನು ಪ್ರಕಟಿಸಲು ಅವನನ್ನು ತಕ್ಷಣವೇ ಹಿಂದೂದೇಶದಿಂದ ತೊಲಗಿ ಹೋಗೆಂದು ಆಜ್ಞೆಮಾಡಿದರು.

ಲಾರ್ಡ್ ಟೀನ್‍ಮತ್ (ಸರ್‍ಜಾನ್‍ಷೋರ್) ಕಾಲದ ತನಕ ಹೊರೆತನದವರು ಇದೇ ಪದ್ಧತಿಯನ್ನವಲಂಬಿಸಿದ್ದರು. ಆದರೆ ಕೊನೆಗೆ ಪ್ರಸಿದ್ಧನಾದ "ಲಾರ್ಡ್ ವೆಲ್ಲೆಸ್ಲಿ" ಎಂಬ ಸರ್ವಾಧಿಪತಿ ಮಾತ್ರ ಇದನ್ನು ಕುರಿತು ಸ್ವಲ್ಪ ಶ್ರದ್ಧೆಗೆ ತೆಗೆದುಕೊಂಡನು. ಅದೇನೆಂದರೆ :-ಅವನ ಕಾಲದಲ್ಲಿ (1805) "ಈ ಘೋರಕೃತ್ಯವನ್ನೇತಕ್ಕೆ ತಪ್ಪಿಸಬಾರದು ?" ಎಂದು ಒಂದು ಮನವಿಯನ್ನು ಬರೆದು ವಿಲಾಯಿತಿಯ ಕಾರ್ಯಸ್ಥಾನಕ್ಕೆ ಕಳುಹಿದನು. ಅದರ ಪರ್ಯವಸಾನವು ಹೇಗೆ ಆಯಿತೋ ನಮಗೆ ತಿಳಿಯದು. ಇವನ ತರುವಾಯ ರಾಜಪ್ರತಿನಿಧಿಗಳಾಗಿ ಬಂದ ಲಾರ್ಡ್ ಮಿಂಟೋ, ಮತ್ತು ಲಾರ್ಡ್ ಹೇಸ್ಟಿಂಗ್ಸ್ ಇವರೂ ಈ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಯೋಚಿಸುತ್ತಿದ್ದರು. ಆದರೆ ಪ್ರಜೆಗಳು ಇದಿರುಬೀಳುವರೇನೋ ! ಎಂಬ ಭಯವೂ, ಹಿಂದೂಮತಾಚಾರಗಳಲ್ಲಿ ತಾವು ಪ್ರವೇಶಿಸುವುದಾದರೆ ಪಾರ್ಲಿಮೆಂಟಿನವರು ಏನು ಹೇಳುವರೋ ಎಂಬ ಭಯವೂ ಒಂದಕ್ಕೊಂದು ಜತೆಯಾಗಿ ಅವರು ಮಾಡಲೆಳಸಿದ ಕೆಲಸವನ್ನು ಧಾರಾಳವಾಗಿ ನಡೆಸಲು ಅವರು ಅವಕಾಶ ಕೊಡದೆ ಹೋದುವು. ಇದರಿಂದ ಅವರು ಈ ದುರಾಚಾರವನ್ನು ಸಂಪೂರ್ಣವಾಗಿ ನಿಲ್ಲಿಸದೆ ಹೋದರು. ಸ್ವಲ್ಪಮಟ್ಟಿಗೆ ತಗ್ಗುವುದೆಂದೆಣಿಸಿ, ಕೆಲವು ಪದ್ಧತಿಗಳನ್ನು ಆಚರಣೆಯಲ್ಲಿ ತರಬೇಕೆಂದು ಆಲೋಚಿಸಿದರು. ತರುವಾಯ ಅವರ ಸ್ಥಾನಕ್ಕೆ ಬಂದ ಲಾರ್ಡ್ ಅಂಹರಸ್ಟನು ತನ್ನ ಕಾಲದಲ್ಲಿ ಮೊದಲು ಯೋಚಿಸುತ್ತಿದ್ದವರಿಗೆ ತಕ್ಕಂತೆ ಸ್ವಲ್ಪ ಧೈರ್ಯವಾಗಿ ಕೆಲಸಮಾಡಿದನು. ಆದರೆ ಈತನು ಸುದಾ ಒಂದೇ ಸಾರಿ ಈ ಆಚಾರವನ್ನು ನಿಲ್ಲಿಸುವುದು ಸರಿಯಲ್ಲವೆಂತಲೇ ತಿಳಿದಿದ್ದನು. ಮನುಷ್ಯನನ್ನು ವೃದ್ಧಿಗೆ ತರುವ ಉಪಾಯಸಾಧನಗಳೆಲ್ಲವೂ ಕ್ರಿಯಾರೂಪವಾಗಿಮಾರ್ಪಡುವ ತನಕ ಆ ಸಾಧನೆಗಳು ಆಲೋಚನೆಗೆ ವಿರೋಧವಾಗಿಯೇ ಕಾಣಿಸುತ್ತಿರುವುವು. ಲಾರ್ಡ್ ಅಂಹರಸ್ಟನು ಸಹಗಮನ ಮಾಡುವ ಸ್ತ್ರೀಯರ ಸಂಖ್ಯೆ ತಗ್ಗು

ವುದಕ್ಕಾಗಿ 'ಮೊಟ್ಟಮೊದಲು ಈ ದೇಶದಲ್ಲಿ ಯಾವ ಭಾಗದಲ್ಲಿಯಾದರೂ ಯಾವ ಸ್ತ್ರೀಯಿಂದಲಾದರೂ ಬಲವಂತವಾಗಿಯಾಗಲಿ ಮರಣಕ್ಕೆ ಸಾಹಸ ಮಾಡುವಂತೆ ಪ್ರೋತ್ಸಾಹ ವಾಕ್ಯಗಳನ್ನು ಹೇಳಿಯಾಗಲಿ, ಸಹಗಮನವನ್ನು ಮಾಡಿಸಕೂಡದು' ಎಂದು ಅಪ್ಪಣೆ ಕೊಟ್ಟು, ಬಲವಂತವೇನೂ ಮಾಡಲ್ಪಟ್ಟಿಲ್ಲವೆಂದು ನಿರ್ಣಯಿಸುವುದಕ್ಕೆ ಪೋಲೀಸಿನವರು ಸಹಗಮನ ನಡೆಯುವ ಪ್ರತಿ ಒಂದು ಸ್ಥಳಕ್ಕೂ ಹೋಗಿ ನೋಡಬೇಕೆಂತಲೂ, ಸಹಗಮನ ನಡೆಯುತ್ತಿರುವ ಗ್ರಾಮದಲ್ಲಿ ನ್ಯಾಯಾಧಿಪತಿ ಆ ವಿಷಯವನ್ನು ವಿಚಾರಿಸುವುದಕ್ಕೆ ತಾನೇ ಆ ಸ್ಥಳಕ್ಕೆ ಹೋಗಿ ನೋಡಬೇಕೆಂತಲೂ, ನಿಯಮಗಳನ್ನೇರ್ಪಡಿಸಿದನು. ಆದರೂ ಈ ಅಪ್ಪಣೆಯ ಫಲವು ದಿನಗಳ ತನಕ ವಿರುದ್ಧವಾಗಿಯೇ ಪರಿಣಮಿಸಿತು. ಪ್ರಜೆಗಳಿಗೆಲ್ಲಾ ಈ ವಿಚಾರದಲ್ಲಿ ಭಕ್ತಿಶ್ರದ್ಧೆಗಳು ಹುಟ್ಟಿದುವು. ದೊರೆತನದವರು ಈ ವಿಷಯದಲ್ಲಿ ಪ್ರವೇಶಿಸಿದ ಮೊದಲು ಸಹಗಮನ ಮಾಡುವ ಸ್ತ್ರೀಯರ ಸಂಖ್ಯೆಯು ಅಭಿವೃದ್ಧಿ ಹೊಂದುತ್ತಿರುವುದೆಂತಲೂ, ರಕ್ಷಕ ಭಟರೂ, ನ್ಯಾಯಾಧಿಪತಿಯೂ ಸಹಗಮನ ಮಾಡಲ್ಪಡುವ ಪ್ರದೇಶದಲ್ಲಿರುವುದನ್ನು ನೋಡಿ, ಆ ಪುಣ್ಯಕಾರ್ಯವನ್ನು ನೆರವೇರಿಸುವುದರಲ್ಲಿ ಯಾವ ಲೋಪವೂ ಉಂಟಾಗದೆ ಇರುವುದಕ್ಕಾಗಿ ಇವರನ್ನು ಸರ್ಕಾರದವರೇ ಕಳುಹುತ್ತಿರುವರೆಂತಲೂ, ಪ್ರಜೆಗಳು ವಿಪರೀತಾರ್ಥವನ್ನು ಮಾಡಿಕೊಳ್ಳುತ್ತಿರುವರೆಂದು ಅನುಭವದಿಂದ ಕಂಡು ಹಿಡಿದ ಅಧಿಕಾರಿಗಳೂ ದೇಶಾಭಿಮಾನಿಗಳೂ ಮೇಲಿನ ಅಧಿಕಾರಿಗಳಿಗೆ ತಿಳಿಯಪಡಿಸಿದರು. ಪಾಪ ! ಆ ನ್ಯಾಯಾಧಿಕಾರಿಗಳಿಗೆ ರಾಯಭಾರಿಗಳ ಮೂಲಕವಾಗಿ ಸ್ತ್ರೀಯರ ಇಷ್ಟವನ್ನು ಕಂಡು ಹಿಡಿಯುವುದು ಸ್ವತಃ ಗೋಷಾ ಇದ್ದಲ್ಲಿ ಬಹು ಕಷ್ಟ ಸಾಧ್ಯವಾಗಿತ್ತಲ್ಲದೆ ಆಕೆಯು ಯಾವ ಕಾರಣದಿಂದಲಾದರೂ ಸಹಗಮನವು ತನಗೆ ಸಮ್ಮತವಾಗಿದೆ ಎಂದು ಹೇಳಿದಲ್ಲಿ ಅದಕ್ಕೆ ಪ್ರತಿಕ್ರಿಯೆ ಇಲ್ಲದೆ ಸುಮ್ಮನೆ ಇರಬೇಕಾಗಿ ಬರುತ್ತಿತ್ತು. ಸಹಗಮನಕ್ಕೆ ಅಪ್ಪಣೆ ಕೊಡಲಾರದ ದಯಾಳುಗಳಾದ ನ್ಯಾಯಾಧಿಪತಿಗಳಿಗೆ ಒಂದೊಂದು ವೇಳೆ ಧನವಂತರೂ ಬಲವಂತರೂ ಆದ ಕೆಲವು ಹಿಂದೂಗಳ ಮೂಲಕ ಮಾತು ಬರುತ್ತಲೇ ಇದ್ದಿತು.

ಹೀಗೆ ಜರುಗುವುದನ್ನು ಕಂಡು ಪ್ರಭುತ್ವದವರು ಇನ್ನೂ ಕೆಲವು ನಿಬಂಧನೆಗಳನ್ನು ಆಚರಣೆಗೆ ತಂದರು. ಯಾವ ಹೆಂಗುಸಾದರೂ ಗಂಡನ ಶವವನ್ನು ಸುಟ್ಟ ಕೆಲವು ದಿನಗಳ ತರುವಾಯ ಪ್ರತ್ಯೇಕವಾಗಿ ಚಿತೆಯನ್ನೊಡ್ಡಿ ಸಹಗಮನ ಮಾಡಲು ಯತ್ನಿಸಿದರೆ ಅಂಥಾ ಸ್ತ್ರೀಯರನ್ನು ಆತ್ಮಹತ್ಯದ ತಪ್ಪಿತಕ್ಕಾಗಿ ಶಿಕ್ಷಿಸಬಹುದೆಂದು ಹೊಸದಾದ ಶಾಸನವನ್ನು ಪ್ರಕಟಿಸಿದರು. ಎಲ್ಲಿಯಾದರೂ ಒಬ್ಬ ಸ್ತ್ರೀಯು ಸಹಗಮನ ಮಾಡಿದಕೂಡಲೆ ಆಕೆಯ ಮತ್ತು ಅವಳ ಗಂಡನ ಚರಸ್ಥಿರವಾದ ಆಸ್ತಿಯನ್ನೆಲ್ಲ ಸರಕಾರದವರು ತಮ್ಮ ಸ್ವಾಧೀನಪಡಿಸಿಕೊಳ್ಳುತ್ತಿದ್ದರು. ಮತ್ತು ಯಾವ ವಂಶದಲ್ಲಿಯಾದರೂ ಒಬ್ಬ ಸ್ತ್ರೀಯು ಸಹಗಮನವನ್ನು ಮಾಡಿ ಮೃತಪಟ್ಟಿದ್ದರೆ ಆ ವಂಶದವರು ಯಾರೇ ಆಗಲಿ ಸರಕಾರದ ಉದ್ಯೋಗಕ್ಕೆ ಅರ್ಹರಾಗಲಾರರೆಂದು ಕಠಿನವಾದ ನಿಬಂಧನೆಯನ್ನು ಆಚರಣೆಯಲ್ಲಿ ತಂದರು. ಹೀಗೆ ಎಷ್ಟು ನಿರ್ಬಂಧಗಳನ್ನು ಏರ್ಪಡಿಸಿದರೂ ಈ ಘೋರದುರಾಚಾರವನ್ನು ನಿಲ್ಲಿಸಲಾಗಲೇ ಇಲ್ಲ. 1815 ನೇ ವರುಷದಿಂದ 1828 ರ ವರೆಗೆ ಈ ಸಹಗಮನದಿಂದ ಎಷ್ಟು ಮಂದಿ ಸ್ತ್ರೀಯರು ಮಡಿದಿರೆಂಬುದನ್ನು ಕೆಳಗಣಪಟ್ಟಿಯಿಂದ ತಿಳಿಯ ಬಹುದು.

## ಕಟ್ಟಲೆಗಳನ್ನು ಏರ್ಪಡಿಸಿದ ಮೊದಲು ಸರ್ಕಾರದವರು ಸಹಗಮನವನ್ನು ಆತಂಕಪಡಿಸುವವರೆಗಿನ ಸಂವತ್ಸರಗಳು.

| ಪಟ್ಟಣದ ಹೆಸರು | ೧೮೧೫ | ೧೮೧೬ | ೧೮೧೭ | ೧೮೧೮ | ೧೮೧೯ | ೧೮೨೦ | ೧೮೨೧ | ೧೮೨೨ | ೧೮೨೩ | ೧೮೨೪ | ೧೮೨೫ | ೧೮೨೬ | ೧೮೨೭ | ೧೮೨೮ |
|---|---|---|---|---|---|---|---|---|---|---|---|---|---|---|
| ಕಲ್ಕತ್ತಾ | ೩೫೩ | ೨೮೯ | ೪೪೨ | ೫೪೪ | ೪೨೧ | ೩೭೦ | ೩೭೨ | ೩೨೮ | ೩೪೦ | ೧೧೩ | ೩೯೮ | ೩೨೪ | ೩೩೭ | ೩೦೯ |
| ಢಾಕಾ | ೩೧ | ೨೪ | ೫೨ | ೫೮ | ೫೫ | ೫೧ | ೫೨ | ೪೫ | ೪೦ | ೪೦ | ೧೦೧ | ೬೫ | ೪೯ | ೪೭ |
| ಮುರಷದಾಬಾದ್ | ೧೧ | ೨೨ | ೪೨ | ೩೦ | ೨೫ | ೨೧ | ೧೨ | ೨೨ | ೫೩ | ೧೮ | ೨೧ | ೮ | ೨ | ೧೦ |
| ಪಾಟ್ನಾ | ೨೦ | ೨೯ | ೪೯ | ೫೧ | ೪೦ | ೬೨ | ೬೯ | ೭೦ | ೪೮ | ೪೨ | ೪೭ | ೪೫ | ೫೫ | ೫೫ |
| ಬನಾರೀಸ್ | ೪೮ | ೬೫ | ೧೦೩ | ೧೩೭ | ೯೪ | ೧೦೩ | ೧೧೪ | ೧೦೨ | ೧೨೨ | ೯೩ | ೫೫ | ೪೮ | ೩೯ | ೩೩ |
| ಬರೇಲಿ | ೧೫ | ೧೩ | ೧೯ | ೧೩ | ೧೭ | ೨೦ | ೧೫ | ೧೬ | ೧೨ | ೧೦ | ೧೭ | ೮ | ೧೮ | ೧೦ |
| ಒಟ್ಟು | ೪೭೮ | ೪೪೨ | ೭೦೭ | ೮೩೩ | ೬೫೨ | ೬೨೭ | ೬೩೪ | ೫೮೩ | ೬೧೫ | ೫೧೬ | ೬೩೯ | ೪೯೮ | ೫೦೦ | ೪೬೬ |

ಮೇಲಿನ ಪಟ್ಟಿಯಲ್ಲಿ ತೋರಿಸಿದ ಸಂಖ್ಯೆಗಳೆಲ್ಲವೂ ಆಗಾಗ್ಗೆ ಪೋಲೀಸ್ ಉದ್ಯೋಗಸ್ಥರಿಂದ ಬರೆಯಲ್ಪಟ್ಟ ರಿಪೋರ್ಟುಗಳಿಂದ ಸಂಗ್ರಹಿಸಲ್ಪಟ್ಟು ಇದರಲ್ಲಿ ಒಂದು ವರ್ಷದ ಮೊತ್ತದ ಸಂಖ್ಯೆಯಲ್ಲಿ ಜಾತಿ ವಿವರಣೆಯನ್ನು ತಿಳಿಸುವೆವು. 1823ರಲ್ಲಿ 615 ಮಂದಿ ಸಹಗಮನ ಮಾಡಿದರು. ಇವರಲ್ಲಿ 274 ಬ್ರಾಹ್ಮಣರು, 35 ಕ್ಷತ್ರಿಯರು, 14 ವೈಶ್ಯರು, 292 ಶೂದ್ರರು. ಇವರಲ್ಲಿ 60 ವರ್ಷಕ್ಕೆ ಮೀರಿದ ವಯಸ್ಸಿನವರು 109 ಮಂದಿ, 40 ರಿಂದ 60 ವಯಸ್ಸಿನವರು; 226, 20 ರಿಂದ 40 ವರುಷದೊಳಗಿನವರು 208, 20 ವರ್ಷಕ್ಕೆ ಒಳಪಟ್ಟವರು 72 ಮಂದಿ. ಈ ಅಂಕೆಗಳಿಂದ ನಿಕೃಷ್ಟಜಾತಿಗಳಲ್ಲಿ ಸುದಾ ಈ ಭಯಂಕರಕೃತ್ಯವು ಎಷ್ಟರಮಟ್ಟಿಗೆ ವಾಡಿಕೆಯಲ್ಲಿತ್ತೆಂಬುದು ಸ್ಪಷ್ಟವಾಗುವುದು. ಮತ್ತು ಈ ದುರಾಚಾರವು ಒಳ್ಳೆ ವಯಸ್ಸಿನ ಸ್ತ್ರೀಗಳನ್ನು ಮಾತ್ರವಲ್ಲದೆ ವೃದ್ಧರನ್ನು ಸುದಾ ಆಹುತಿಗೊಳುತ್ತಿತ್ತೆಂತಲೂ, ಬ್ರಿಟಿಷ್ ಅಧಿಕಾರಿಗಳು ಈ ಪದ್ಧತಿಯನ್ನು ನಿಲ್ಲಿಸಲಿಕ್ಕಾಗಿ ಮಾಡಿದ ಪ್ರಯತ್ನಗಳೆಲ್ಲವೂ ಸಫಲವಾಗದೆ ಹೋದುವೆಂತಲೂ ತಿಳಿಯಬರುತ್ತದೆ. ಇಲ್ಲಿ ಕೊಟ್ಟಿರುವ ಲೆಖ್ಖವು ಕೆಲವು ಮುಖ್ಯಪಟ್ಟಣಗಳದು. ಇದಲ್ಲದೆ ದೇಶದಲ್ಲೆಲ್ಲ ಇನ್ನು ಎಷ್ಟು ತುಂಬಿದ ಜೀವಗಳು ಬಲಿ ಕೊಡಲ್ಪಡುತ್ತಿದ್ದುವೋ ನಮಗೆ ತಿಳಿಯದು. ಪ್ರಪಂಚದ ಜನರೆಲ್ಲರೂ ಈ ಘೋರಕೃತ್ಯವನ್ನು ಪ್ರತ್ಯಕ್ಷವಾಗಿ ನೋಡುತ್ತಲೇ ಇದ್ದರೂ ಅವರಲ್ಲಿ ಒಬ್ಬನಾದರೂ ಮಹಾಜನಮಧ್ಯದಲ್ಲಿ ಈ ವಿಷಯವನ್ನು ಕುರಿತು ಸಂಭಾಷಿಸದೆ ಇದ್ದರೂ ಅಂಥಹ ಸಮಯದಲ್ಲಿ ಮೊದಲು ಟಿಬೆಟ್ಟಿನಲ್ಲಿಯ ಸ್ತ್ರೀಗಳಿಂದ ಸ್ತ್ರೀಜಾತ್ಯಭಿಮಾನವನ್ನು ಕಲ್ತು ಅಣ್ಣನಾದ ಜಗನ್ಮೋಹನನು ತೀರಿಹೋದಾಗ ಅವನ ಶವದೊಂದಿಗೆ ಆತನ ಹೆಂಡತಿಯನ್ನು ಸುಡುತ್ತಿರುವುದನ್ನು ಕಣ್ಣಾರನೋಡಿ 'ನಾನು ಬದುಕಿ ಇದ್ದಲ್ಲಿ ಈ ದುರಾಚಾರದ ಹುಟ್ಟಡಗಿಸಿಬಿಡುವೆನು' ಎಂದು ಪ್ರತಿಜ್ಞೆಮಾಡಿದ್ದ ರಾಮಮೋಹನರಾಯನೊಬ್ಬನೇ ಆ ಅನಾಥ ಯುವತಿಯರ ಸಹಾಯಕ್ಕೋಸ್ಕರ ನಿಂತು, ಲಾರ್ಡ್ ವಿಲಿಯಂ ಬೆಂಟಿಂಕ್ ಕಾಲದಲ್ಲಿ ಸಹಗಮನವನ್ನು ಯಾರೂ ಮಾಡಕೂಡದು ಎಂಬ ಕಟ್ಟಪ್ಪಣೆ ಪ್ರಕಟಿಸಲ್ಪಡುವಂತೆ ಮಾಡಿದನು.

ಈ ದುರಾಚಾರವನ್ನು ನಿರ್ಮೂಲಮಾಡುವುದಕ್ಕೆ ಸರ್ಕಾರದವರು ಇದುವರೆಗೆ ಹಲವು ಪ್ರಯತ್ನಗಳನ್ನು ಮಾಡುತ್ತಿದ್ದಂತೆ ತಿಳಿಯುತ್ತಿರುವಾಗ ಇದರ ಘನತೆಯನ್ನೆಲ್ಲಾ ರಾಮಮೋಹನನಿಗೆ ಕೊಡುವುದು ಹೇಗೆ ಎಂದು ಕೆಲವರು ಯೋಚಿಸುವರು. ಆದರೆ ಇತರ ಹೇತುಗಳಿಂದ ಸಂಪೂರ್ಣವಾಗಿ ಶ್ರದ್ಧೆಯನ್ನು ಹೊಂದದೆ ಇದ್ದ ಸರ್ಕಾರದವರಿಗೆ ಪ್ರೋತ್ಸಾಹ ಕೊಟ್ಟು ಪ್ರಜೆಗಳ ಪಕ್ಷವಾಗಿ ಈ ಅನರ್ಥಗಳನ್ನೆಲ್ಲ ತಿಳಿಸಿ ಸಫಲವಾಗುವ ತನಕ ದೃಢವಾಗಿ ಪ್ರಯತ್ನಮಾಡಿದವನು ಈ ಮಹಾತ್ಮನೇ. ಆದುದರಿಂದ ಈತನೇ ಇದಕ್ಕೆ ಕಾರಣನೆಂದು ಹೇಳುವುದು ಅತಿಶಯೋಕ್ತಿಯಲ್ಲವು.

ಸಹಗಮನವು ಮಾಡಕೂಡದೆಂಬುದಕ್ಕೆ ರಾಮಮೋಹನನು ಬಂಗಾಳೀಭಾಷೆಯಲ್ಲಿ ಮೂರು ಗ್ರಂಥಗಳನ್ನು ಬರೆದು ತನ್ನ ಸ್ವಂತ ವೆಚ್ಚದಿಂದ ಅವುಗಳನ್ನು ಮುದ್ರಿಸಿ ಹಲವು ಸಾವಿರ ಪ್ರತಿಗಳನ್ನು ಉಚಿತವಾಗಿಯೇ ಜನರಲ್ಲಿ ಹಂಚಿದನು. ಒಂದೆರಡನೆಯ ಗ್ರಂಥಗಳಲ್ಲಿ

ಇದನ್ನು ನಿಷೇಧಿಸಬೇಕೆಂಬ ತನ್ನ ಅಭಿಪ್ರಾಯವನ್ನು ಶಾಸ್ತ್ರ ದೃಷ್ಟಾಂತಗಳಿಂದ ತೋರಿಸಿ ಮೂರನೆಯ ಗ್ರಂಥದಲ್ಲಿ ಪ್ರತಿಪಕ್ಷದವರ ಆಕ್ಷೇಪಣೆಗಳಿಗೆ ಸಮಾಧಾನಗಳನ್ನು ಬರೆದನು. ಈ ಮೂರು ಪುಸ್ತಕಗಳನ್ನು ಇಂಗ್ಲೀಷಿಗೆ ತರ್ಜುಮೆ ಮಾಡಿ ಪ್ರಥಮ ಪುಸ್ತಕವನ್ನು 1818 ರಲ್ಲಿ ಮುದ್ರಿಸಿ ಪ್ರಚುರಪಡಿಸಿದನು. ಇವುಗಳಲ್ಲಿ 2 ನೆಯ ಪುಸ್ತಕವನ್ನು 'ಮಾರ್ಕ್ವೀಸ' ಆಫ್ ಹೇಸ್ಟಿಂಗ್ಸ್' ಎಂಬ ಗೌರ್ನರ್ ಜನರಲ್ಲಿನ ಪತ್ನೀಯ ಹೆಸರಿನ ಅಂಕಿತದಿಂದ ಪ್ರಕಟಿಸಿದನು. ಯೂರೋಪಿಯನರಲ್ಲಿ ಕೆಲವರು ಸಹಗಮನವೆಂಬುದು ಹಿಂದೂಜನರ ಪವಿತ್ರಧರ್ಮವೆಂತಲೂ, ಅವರಿಗೆ ಮುಖ್ಯವಾದ ವೇದವಿಧಿಗಳನ್ನನುಸರಿಸಿ ಮಾಡಲ್ಪಡುವ ಈ ಕಾರ್ಯವನ್ನು ತಾವು ಯಾರೂ ಅಡ್ಡಿಮಾಡಕೂಡದೆಂತಲೂ ವಾದಿಸುತ್ತಿದ್ದರು. ಅಂತವರಲ್ಲಿ 'ಬೆತೂನ್' ಎಂಬವನೇ ಮುಖ್ಯನು. ಈತನ ಹೆಸರಿನಿಂದ ಏರ್ಪಟ್ಟ ಬೆತೂನ್ ಸೊಸೈಟಿ, ಬೆತೂನ್ ಲೇಡೀಸ' ಕಾಲೇಜ' ಎಂಬಿವು ಈಗಲೂ ಕಲ್ಕತ್ತೆಯಲ್ಲಿವೆ. ಹೀಗೆ ತಿಳಿಯುತಿದ್ದವರಿಗೆಲ್ಲ ಇದು ವಿಹಿತವಾದ ಕರ್ಮವಲ್ಲವೆಂತಲೂ, ನೂತನ ಕಲ್ಪಿತವೆಂತಲೂ ಸ್ಪಷ್ಟವಾಗಿ ತಿಳಿಸಲಿಕ್ಕೋಸ್ಕರವೇ ರಾಮಮೋಹನನು ಈ ಗ್ರಂಥಗಳನ್ನು ಇಂಗ್ಲಿಷಿನಲ್ಲಿ ಬರೆದನು. ಈ ಪುಸ್ತಕಗಳನ್ನೋದಿದಮೇಲೆ ಆತನ ಅಭಿಪ್ರಾಯಗಳೆಲ್ಲವೂ ಮಾರ್ಪಟ್ಟವು. ಬೆತೂನ್ ಪಾಠಶಾಲೆಯನ್ನು ಕಟ್ಟಲಿಕ್ಕೆ ಆರಂಭಿಸಿದ ಮೊದಲನೆಯ ದಿನದಲ್ಲಿ 'ಸಹಗಮನಕ್ಕೆ ಅನುಕೂಲವಾಗಿ ಪ್ರವರ್ತಿಸಿದ ಆ ಅಪಕೀರ್ತಿಯನ್ನು ತೊಲಗಿಸಲಿಕ್ಕಾಗಿ ನಾನು ಹಿಂದೂ ಸ್ತ್ರೀಯರ ಹಿತವನ್ನು ಅಪೇಕ್ಷಿಸಿ ಅವರ ವಿದ್ಯಾಭಿವೃದ್ಧಿಯನ್ನು ಬಯಸಿ ಈ ಪಾಠಶಾಲೆಯನ್ನು ಸ್ಥಾಪಿಸುತ್ತಿದ್ದೇನೆ' ಎಂದು ಹೇಳಿದನು. ರಾಮ ಮೋಹನನು ತನ್ನ ಗ್ರಂಥದಲ್ಲಿ ಈ ಕೆಳಗಿನ ವಿಷಯಗಳನ್ನು ಕುರಿತು ಬಹಳವಾಗಿ ಚರ್ಚಿಸಿ ಬರೆದನು.

(1) ವೇದಗಳ ಮೊದಲು ಮನುಸ್ಮೃತಿಯ ವರೆಗೆ ಎಲ್ಲಿಯೂ ಸಹಗಮನ ಮಾಡಲಿಕ್ಕೆ ಆಜ್ಞೆ ಕೊಡಲ್ಪಟ್ಟಿಲ್ಲ. ಆದುದರಿಂದ ಈ ಆಚಾರವು ಈಗಿನಕಾಲದವರಿಂದ ಕಲ್ಪಿಸಲ್ಪಟ್ಟದ್ದು.

(2) ಸಹಗಮನವನ್ನು ಕುರಿತು ಬರೆಯಲ್ಪಟ್ಟಿರುವ ಗ್ರಂಥಗಳಲ್ಲಿಯೂ ಕೂಡಾ ಸ್ತ್ರೀಗೆ ಪತಿಯ ಮರಣಾನಂತರದಲ್ಲಿ ಇದೊಂದೇ ಗತಿಯೆಂದು ನಿರ್ಣಯಿಸಲ್ಪಟ್ಟಿಲ್ಲ. ಶಾಶ್ವತ ಸೌಖ್ಯಗಳನ್ನು ವರ್ಜಿಸಿ ಇರಬಹುದೆಂದು ಕೂಡ ಹೇಳಲ್ಪಟ್ಟಿದೆ ಆದುದರಿಂದ ಆ ವಾಕ್ಯದಂತೆ ಸ್ತ್ರೀಯರು ಬ್ರಹ್ಮಚರ್ಯವ್ರತವನ್ನವಲಂಬಿಸಿ ಪುಣ್ಯಕಾರ್ಯಗಳನ್ನು ಮಾಡುತ್ತಾ ತಮ್ಮ ಜೀವಿತಕಾಲವನ್ನು ಕಳೆಯಬಹುದು. ದರಿದ್ರ ಸ್ತ್ರೀಯರು ಅಪಕೀರ್ತಿಯ ಪಾಲಾಗಬಾರದೆಂದು ಅವರನ್ನು ಸುಟ್ಟುಹಾಕುವದಕ್ಕಿಂತ ಬೇರೆ ಯಾವ ಉಪಾಯವಾದರೂ ಇಲ್ಲವೆ ?

(3) ಸಹಗಮನ ಮಾಡುತ್ತಿರುವ ಸ್ತ್ರೀಯರಲ್ಲಿ ಅನೇಕರು ತಮಗೆ ಸಮ್ಮತವಿಲ್ಲದಿದ್ದರೂ ಬಂಧು ಜನರ ಒಲವಂತದ ಮೂಲಕ ಸತ್ತುಹೋಗುತ್ತಿರುವರು.

ಸಾಮಾನ್ಯವಾಗಿ ಸ್ತ್ರೀಯರು ಸ್ವತಂತ್ರವಾಗಿ ವರ್ತಿಸುವುದು ಅಸಾಧ್ಯವಾದುದ

ರಿಂದ ವಿಧಿ ಇಲ್ಲದೆ ಸಹಗಮನ ಮಾಡುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಅವರ ಸಮೀಪ ಬಂಧುಗಳು, ಅವರ ಆಸ್ತಿಯನ್ನು ಅಪಹರಿಸಬೇಕೆಂಬ ಆಸೆಯಿಂದಲೋ ಅಥವಾ ಅವರನ್ನು ಸಂರಕ್ಷಿಸುವ ಭಾರವು ತಮ್ಮ ಮೇಲೆ ಬೀಳುವುದೆಂಬ ಭಯದಿಂದಲೋ ಈ ಅನಾಥ ಯುವತಿಯರಿಗೆ 'ನೀನು ಸಹಗಮನ ಮಾಡಿದರೆ ಸ್ವರ್ಗ ಸುಖವನ್ನು ಸೂರೆಗೊಳ್ಳುವೆ' ಯೆಂತಲೂ 'ಬದುಕಿದ್ದರೆ ಬಹುವಿಧದ ಕಷ್ಟಗಳಿಗೆ ಗುರಿಯಾಗುವೆ' ಯೆಂತಲೂ ಮನಸ್ಸಿಗೆ ನಾಟುವಂತೆ ಬೋಧಿಸುತ್ತಿದ್ದರು. ತಮ್ಮ ಸೌಖ್ಯಗಳಿಗೆಲ್ಲ ಮೂಲಭೂತನಾದ ಪತಿಯು ಮೃತನಾದುದರಿಂದ ಉಂಟಾದ ದುಃಖದ ದೆಸೆಯಿಂದ ಈ ಪ್ರಪಂಚವೆಲ್ಲವೂ ಕತ್ತಲೆಯಾಗಿ ಕಾಣಿಸುತ್ತಿರಲು ಮೈಮೇಲೆ ಎಚ್ಚರವಿಲ್ಲದೆ ಪರವಶರಾಗಿ ಗೋಳಿಡುತ್ತಿರುವ ಅನಾಥಸ್ತ್ರೀಯರಿಗೆ ಅಂಥ ಉಪದೇಶಗಳು ಆ ವೇಳೆಯಲ್ಲಿ ವ್ಯರ್ಥವಾದಾವೆ? ಅಯ್ಯೋ! ಪಾಪ! ಆ ದೀನೆಯರು ದುಃಖಪೀಡಿತೆಯರಾಗಿ ವಿಚಾರಜ್ಞಾನವಿಲ್ಲದೆ ಒಡನೆಯೇ ಸಹಗಮನಕ್ಕೆ ಸಮ್ಮತಿಸಬೇಕಾದ ಸಂಭವವು ಬರುತ್ತಿತ್ತು. ಒಂದೊಂದುವೇಳೆ ಯಾವಳಾದರೂ ಅರ್ಧಾಂಗೀಕಾರವಾಗಿ ಸಂಧಿಗ್ಧಾರ್ಥದ ಮಾತುಗಳನ್ನಾಡುತ್ತಿದ್ದರೆ ಅವಳಿಗೆ ಮಾದಕ ಪದಾರ್ಥಗಳನ್ನು ಕೊಟ್ಟು ಬುದ್ಧಿಭ್ರಂಶವಾಗುವಂತೆ ಮಾಡಿ, ತಾವು ಯೋಚಿಸಿದ ಘೋರಕೃತ್ಯಕ್ಕೆ ಸಮ್ಮತಿಪಡೆಯುತ್ತಿದ್ದರು.

ಸತಿಯೆಂದರೆ ಪತಿವ್ರತೆ ಈ ಸಂದರ್ಭದಲ್ಲಿ ಸಹಗಮನ ಮಾಡಿದ ಸ್ತ್ರೀಯೆಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. ಸತಿಯಾಗುವೆನೆಂದು ಒಂದಾವರ್ತಿ ಬಾಯಿಂದ ಹೊರಟಕೂಡಲೇ ಆಮೇಲೆ ಎಷ್ಟುವಿಧವಾಗಿ ಬೇಡಿಕೊಂಡರೂ ಮೊದಲು ಹೇಳಿದಂತೆ ಆ ಸ್ತ್ರೀಗೆ ಸಹಗಮನವು ತಪ್ಪುತ್ತಿರಲಿಲ್ಲ. ಅಂಥವರನ್ನು ಬಲವಂತದಿಂದಲಾದರೂ ಸುಟ್ಟುಬಿಡುತ್ತಿದ್ದರು. ಒಂದುವೇಳೆ ಯಾವಳಾದರೂ ಸತಿಯಾಗುವೆನೆಂದು ಹೇಳಿದಮೇಲೆಯಾಗಲಿ, ಚಿತಿಯಿಂದಲಾಗಲಿ, ಭಯದಿಂದ ಓಡಿಹೋದರೆ ಹಾಗೆ ಮಾಡಿದ ಸ್ತ್ರೀಯನ್ನು ಪುನಹ ಮನೆಗೆ ಬರಗೊಳಿಸುತ್ತಿರಲಿಲ್ಲ. ಅಂಥವಳನ್ನು ಕುಲದಲ್ಲಿಯೂ ಕೂಡುತ್ತಿರಲಿಲ್ಲ. ಆದುದರಿಂದ ಅಂಥವಳ ಬಾಳು ಸಾವಿಗಿಂತ ಕಷ್ಟತರವಾಗಿದ್ದಿತು. ಸಹಗಮನ ಮಾಡುವ ಸ್ತ್ರೀಯನ್ನು ಚಿತಿಯ ಬಳಿಗೆ ಒಳ್ಳೆಯ ಮರ್ಯಾದೆಯಿಂದಲೂ ವಸ್ತ್ರಾಭರಣಾದ್ಯಲಂಕಾರಗಳಿಂದಲೂ, ವಾದ್ಯಗಳಿಂದಲೂ ಕರೆದುಕೊಂಡು ಹೋಗಿ, ಅಲ್ಲಿ ಒಡವೆ ವಸ್ತುಗಳನ್ನೆಲ್ಲಾ ಕಸುಕೊಂಡು, ಬಲವಾದ ಹಗ್ಗಗಳಿಂದ ಪತಿಯ ಹೆಣದೊಂದಿಗೆ ಸೇರಿಸಿ ಬಿಗಿದು ಕಟ್ಟಿ ಅದರಮೇಲೆ ಎತ್ತರವಾಗಿ ಸೌದೆಗಳನ್ನು ಸೇರಿಸಿ ಉರಿಗೊಳಿಸಿ, ಸಂಪೂರ್ಣವಾಗಿ ಉರಿದು ಜ್ವಾಲೆಯು ಹಬ್ಬಿಕೊಳ್ಳುವ ಹೊತ್ತಿಗೆ ಬಾಧೆಯಿಂದ ಆ ವನಿತೆಯು ಹೊರಡಲಿಕ್ಕೆ ಅವಕಾಶವಿಲ್ಲದಂತೆ ಉದ್ದವಾದ ಬಿದಿರುಬೊಂಬುಗಳಿಂದ ಅದುಮಿ ಹಿಡಿದು, ಅವಳ ಆರ್ತಶಬ್ದಗಳು ಕೇಳಬಾರದಂತೆ ವಾದ್ಯಧ್ವನಿಗಳನ್ನು ಮಾಡಿಸುತ್ತಾ ತುದಿಗೆ ಚಿತಿಯಿಂದ ತಲೆಬುರುಡೆಯೊಡೆದ ಶಬ್ದವು ಹೊರಟಕೂಡಲೇ ಚಪ್ಪಾಳೆತಟ್ಟಿ "ಆಯಿತು. ಆ ಮಹಾಪತಿವ್ರತೆಯು ನಾವು ನೋಡುತ್ತಿರುವಾಗಲೇ ಸ್ವರ್ಗಕ್ಕೆ ಹೋಗಿ ತನ್ನ ಪತಿಯ ತೊಡೆಯನ್ನಲಂಕರಿಸಿದಳು" ಎಂದು ಹಲವು ಬಗೆಯಿಂದ ಹೊಗ

ಳುತ್ತಾ ತಮ್ಮ ಸ್ಥಳಗಳಿಗೆ ಹೋಗುತ್ತಿದ್ದರು. ಈ ವಿಷಯಗಳೆಲ್ಲವೂ ರಾಮಮೋಹನನ
ಗ್ರಂಥಗಳಿಂದ ಮಾತ್ರವಲ್ಲದೆ ಆಗಾಗ್ಗೆ ಪ್ರತ್ಯಕ್ಷವಾಗಿ ನೋಡಿದ ಕೆಲವು ಆಂಗ್ಲೇಯರಿಂದ
ಕೂಡ ದೃಢಪಡಿಸಲ್ಪಟ್ಟಿದೆ. ಜೇಮ್ಸ್ ಎಂಬಾತನು ಬರೆದ "ಸತ್ಟ್ರಜ್ ಕ್ರೈಟೂ ಬ್ರಿಟನ್'
ಎಂಬ ಗ್ರಂಥದಲ್ಲಿ ಈವಿಷಯವಾಗಿ ಬಹು ವ್ಯಸನವುಂಟಾಗುವಂತೆ ಬರೆಯಲ್ಪಟ್ಟಿದೆ.

ಅಕ್ಕಟಾ ! ಮರಣವೆಂಬುದು ಬಲು ಭಯಂಕರವಾದುದಲ್ಲವೆ ? ಆದರಿಂದ ಉಂಟಾ
ಗುವ ಬಾಧೆಗೆ ಈ ಲೋಕದಲ್ಲಿ ಇತರ ಕಷ್ಟಗಳು ಯಾವುವೂ ಸಮವಾಗಲಾರವು. ಮನು
ಷ್ಯನು ಒಂದೊಂದುವೇಳೆ ಹೆಚ್ಚಾದ ಕೋಪಬಂದಾಗಲೂ, ತುಂಬಾ ಚಿಂತೆಯುಂಟಾದಾ
ಗಲೂ, ಸಾಯುವದೇ ಲೇಸೆಂದು ಬಯಸುವುದು ನಮ್ಮಲ್ಲಿ ಸ್ವಾಭಾವಿಕವಾಗಿಯೇ ಇರು
ವುದು. ಆದರೆ ಹಾಗೆ ಬಯಸುವ ಮನುಷ್ಯನ ಇದಿರಿಗೆ ಮೃತ್ಯುವು ಪ್ರತ್ಯಕ್ಷವಾಗಿ ಬಂದು
ನಿಂತರೆ ಅವನು ಅದರ ಕರಾಳ ಮುಖದಲ್ಲಿ ಪ್ರವೇಶಿಸಿ ಸಾಯಲಿಕ್ಕಿಂತಲೂ, ಬದುಕಿದ್ದು
ಪ್ರಪಂಚದ ಸಕಲವಿಧ ಕಷ್ಟಗಳನ್ನೆಲ್ಲಾ ಸಹಿಸುವುದಕ್ಕೆ ಮನಃಪೂರ್ವಕವಾಗಿ ಒಪ್ಪಿಕೊ
ಳ್ಳುವನು, ಅಯ್ಯೋ ! ಪಾಪ .ಕೆಲವರು ಅನಾಥಯುವತಿಯರು ಮೇಲೆಹೇಳಿದಂತೆ ಎಷ್ಟು
ವಿಧವಾಗಿ ಬಿಗಿದು ಕಟ್ಟಲ್ಪಟ್ಟರೂ ಅಗ್ನಿಜ್ವಾಲೆಯ ಬಾಧೆಗಳಿಗೆ ತಡೆಯಲಾರದೆ, ಕಟ್ಟುಗ
ಳನ್ನು ಹರಿದುಕೊಂಡು, ತಮ್ಮ ಪ್ರಾಣಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಚಿತೆಯಿಂದ
ಹೊರಕ್ಕೆ ಧುಮುಕುತ್ತಿದ್ದರು. 1828 ನೆ ನವಂಬರ್ 7 ನೆಯ ತಾರೀಖಿನಲ್ಲಿ ಕಾನ್ಪುರದಲ್ಲಿ
ಒಬ್ಬ ಮಾರವಾಡಿ ವರ್ತಕನು ಸತ್ತುಹೋದನು. ಆತನ ಹೆಂಡತಿಯು ಸತಿಯಾಗಬೇಕೆಂ
ದು ಆಗತ್ಯವಾದ ವಸ್ತುಸಾಧನಗಳನ್ನೆಲ್ಲ ಸಜ್ಜುಗೊಳಿಸಿಕೊಂಡು ತಾನಾಗಿಯೇ ಚಿತೆಯನ್ನು
ಪೇರಿಸಿ ತುಂಬ ಧೈರ್ಯದಿಂದ ಪತಿಯ ಶವವನ್ನು ತನ್ನ ತೊಡೆಯಮೇಲಿಟ್ಟುಕೊಂಡು ಅಲ್ಲಿನ
ಆಚಾರದಂತೆ ರಾಮನಾಮವೇ ಸತ್ಯವೆಂಬ ಅರ್ಥಕೊಡುವ "ರಾಮ' ನಾಮ' ಸತ್ಯ ಹೈ'
ಎಂಬ ವಾಕ್ಯವನ್ನುಚ್ಚರಿಸುತ್ತ ಉರಿಗೊಳಿಸಿ ಚಿತೆಯಲ್ಲಿ ಕುಳಿತಳು. ಆದರೆ ಕ್ರಮಕ್ರಮ
ವಾಗಿ ಅಗ್ನಿಜ್ವಾಲೆಗಳು ಬೆಳೆದು ದೇಹವನ್ನು ಸುಡತೊಡಗಿದ ಕೂಡಲೇ ಆ ಬಾಧೆಯನ್ನು
ತಾಳಲಾರದೆ ಹೊರಕ್ಕೆ ಹೊರಟು, ಗಂಗಾನದಿಯಲ್ಲಿ ಬೀಳಲು ಯತ್ನಿಸಿದಳು. ಆವೇಳೆಗೆ
ಏನಾದರೂ ಬಲಾತ್ಕಾರವು ನಡೆದಿದೆಯೆ, ಎಂಬುದನ್ನು ಸರ್ಕಾರದ ಅಪ್ಪಣೆಯಂತೆ ವಿಚಾರಿ
ಸುವುದಕ್ಕಾಗಿ ಆಸ್ಥಳಕ್ಕೆ ಬಂದಿದ್ದ ಪಟ್ಟಣದ ನ್ಯಾಯಾಧಿಕಾರಿಯು ತಾನು ದೂರವಾಗಿ
ದ್ದುಕೊಂಡು ಚಿತೆಯ ಬಳಿಯಲ್ಲಿ ಒಬ್ಬ ಭಟನನ್ನು ಒರೆಹಿರಿದ ಕತ್ತಿಯೊಂದಿಗೆ ನಿಲ್ಲಿಸಿದ್ದನು.
ಆ ಸ್ತ್ರೀಯು ಚಿತೆಯಿಂದ ಹೊರಕ್ಕೆ ಬರಬೇಕೆಂದು ತಲೆಯೆತ್ತಿದಕೂಡಲೆ ನ್ಯಾಯಾಧಿಪ
ತಿಯು ತನನ್ನು ಅಲ್ಲಿ ನಿಲ್ಲಿಸಿರುವುದು ಆ ಹೆಂಗಸನ್ನು ಹೊರಕ್ಕೆ ಉರಳದಂತೆ ಮಾಡಲಿಕ್ಕೆ
ಎಂತಲೇ ಭ್ರಮಿಸಿ ಆಭಟನು ತನ್ನ ಕತ್ತಿಯನ್ನು ಝಳಪಿಸಿದನು. ಪಾಪ ! ಆ ಯುವ
ತಿಯು ಭಯಪಟ್ಟು ಮರಳಿ ಚಿತೆಯಲ್ಲಿ ಪ್ರವೇಶಿಸಿದಳು. ಆದರೆ ಭಯಂಕರ ಜ್ವಾಲೆಗಳಿಗೆ
ತಡೆಯಲಾರದೆ ಒಂದೇಸಾರಿಗೆ ಹಾರಿ ಹೊರಕ್ಕೆ ಧುಮುಕಿ ಗಂಗಾ ನದಿಯಲ್ಲಿ ಬಿದ್ದಳು.
ಆ ವರ್ತಕನ ಬಂಧುಗಳೆಲ್ಲರೂ ಒಂದಾಗಿ ಬಂದು ಬಲವಂತವಾಗಿ ಸುಟ್ಟುಬಿಡಬೇಕೆಂದು

ಯತ್ನಿಸಿದರು. ನ್ಯಾಯಾಧಿಪತಿಯು ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿದುದರಿಂದ ಅವರ ಉದ್ದೇಶವು ನೆರವೇರದೆ ಹೋಯಿತು. ಒಬ್ಬ ಇಂಗ್ಲಿಷರ ಸ್ತ್ರೀಯು ಈ ಸಂಗತಿಯು ನ್ನೆಲ್ಲ ಪ್ರತ್ಯಕ್ಷವಾಗಿ ನೋಡಿ 'ವಿನೋದಗಳೂ ವಾಡಿಕೆಗಳೂ'(Fun Farce) ಎಂಬ ಗ್ರಂಥ ದಲ್ಲಿ ಬರೆದಳೆಂದು ಬಂಗಾಳೀ ಜೀವಚರಿತ್ರಕಾರನು ಹೀಗೆ ಬರೆದಿರುವನು. 'ಕಾಶೀಪಟ್ಟಣ ದಲ್ಲಿ ಒಬ್ಬ ಸ್ತ್ರೀಯು ತನ್ನ ಪತಿಯು ಸತ್ತುಹೋದ 12 ತಿಂಗಳ ತರುವಾಯ ಬಂಧುಗಳ ಪ್ರೋತ್ಸಾಹದಿಂದ ಸತಿಯಾಗುವುದಕ್ಕೆ ಯತ್ನಿಸಿದಳು. ಈಕೆಯು ಚಿತೆಯಿಂದ ಧುಮುಕಿ ಗಂಗೆಯಲ್ಲಿ ಬಿದ್ದಳು. ಪಟ್ಟಣದಲ್ಲಿನ ಮುಖಂಡರೆಲ್ಲರೂ ಅವಳನ್ನು ಬಲಾತ್ಕಾರದಿಂದ ಸುಡಬೇಕೆಂದು ನಿಶ್ಚಯಿಸಿಕೊಂಡು ಅಧಿಕಾರಿಗಳು ಅಡ್ಡಿಮಾಡಿದರೆ ಅವರನ್ನು ಇದಿರಿಸ ಬೇಕೆಂಬ ಸನ್ನಾಹವನ್ನು ಮಾಡುತ್ತಿದ್ದರು. ಆದರೆ ವಿವೇಕಿಯಾದ ಅಲ್ಲಿನ ಅಧಿಕಾರಿಯು ಆ ಪ್ರಯತ್ನಗಳನ್ನೆಲ್ಲಾ ನೋಡಿ ಉಪಾಯದಿಂದ ಅವನ್ನೆಲ್ಲಾ ಅಗಲಿಸಿ ಸಾಯಲಿಕ್ಕಿ ರುವ ದಿಕ್ಕಿಲ್ಲದ ಆ ಅನಾಥೆಯ ಪ್ರಾಣವನ್ನು ಕಾಪಾಡಿದನು. ಈ ವಿಷಯವನ್ನು ನಾನು ಸ್ವಂತವಾಗಿ ನೋಡಿದೆನೆಂದು ಲೆಫ್ಟನೆಂಟ್ ಕರ್ನಲ್ ಸ್ಲಿಮೆನ್ ಎಂಬಾತನು ಬರೆದಿರುವನು.' ಇನ್ನೂ ಇಂತಹ ಅನೇಕ ದೃಷ್ಟಾಂತಗಳಿರುವುವು.

ರಾಮಮೋಹನನು ಈ ದುರಾಚಾರ ನಿರ್ಮೂಲನಕ್ಕಾಗಿ ಗ್ರಂಥಗಳನ್ನು ಬರೆಯು ವುದು, ವಾಗ್ರೂಪದಿಂದ ಚರ್ಚಿಸುವುದು ಇವುಗಳು ಮಾತ್ರವಲ್ಲದೆ ಆಗಾಗ್ಗ ಗಂಗಾ ತೀರಕ್ಕೆ ಸ್ವಂತವಾಗಿ ಹೋಗಿ ಸಹಗಮನವು ಎಂತಹ ದುಃಖಕರವಾದ ಆಚಾರವೆಂಬುದನ್ನು ವಿವರಿಸುತ್ತಾ, ಕೇಳುವರ ಮನಸ್ಸಿನಲ್ಲಿ ನಾಟುವಂತೆ ಉಪನ್ಯಾಸಮಾಡುತ್ತಾ ಕೆಲವು ಸಹ ಗಮನಗಳನ್ನು ತಡೆಯುತ್ತಾ ಬಂದನು. ಒಂದಾನೊಂದುದಿನ ದೊಡ್ಡಮನೆತನದ ಒಬ್ಬ ಹೆಂಗಸು ಸಹಗಮನ ಮಾಡಬೇಕೆಂಬುದನ್ನು ಕೇಳಿ ರಾಮಮೋಹನನು ಅಲ್ಲಿಗೆ ಹೋಗಿ ಆಕೆಯ ಬಂಧುಗಳೆಲ್ಲರಿಗೂ ಮರುಕಹುಟ್ಟುವಹಾಗೆ ಬೋಧಿಸುತ್ತಿರಲು ಅವರೆಲ್ಲರೂ ಕೋ ಪಿಸಿ ನೀನು ಮ್ಲೇಚ್ಛನೆಂದು ನಿಂದಿಸಿದರು.

ಮತ್ಸರವಿಲ್ಲದ ಈ ಮಹಾತ್ಮನು ಇದರಿಂದ ಕೋಪಿಸಿಕೊಳ್ಳುವನೋ ? ಇವನು ಯಥಾಪ್ರಕಾರವಾಗಿ ಬೋಧಿಸುತ್ತಿದ್ದನು. ಆದರೆ ಇವನ ಹಿಂದೆ ಇದ್ದ ಭೃತ್ಯರು ತಮ್ಮ ಯಜಮಾನನನ್ನು ಬೈದುದಕ್ಕಾಗಿ ಬಹಳವಾಗಿ ಕೋಪಿಸಿಕೊಂಡರು. ರಾಮಮೋಹನನು ಅವರನ್ನು ಸಮಾಧಾನಗೊಳಿಸಿದನು.

ಹೀಗೆ ತನ್ನಿಂದಮಾಡಲ್ಪಟ್ಟ ಪ್ರಯತ್ನಗಳಿಂದುಂಟಾದ ಸತ್ಫಲಗಳನ್ನು ತನ್ನ ಕಣ್ಣಿನಿಂದ ಲೇ ನೋಡತಕ್ಕ ಭಾಗ್ಯವು ರಾಮಮೋಹನನಿಗೆ ಲಭಿಸಿದುದಕ್ಕೆ ನಾವು ತುಂಬಾ ಸಂತೋಷಿಸ ಬೇಕಾಗಿದೆ. 1829 ನೇ ಇಸವಿಯ ಡಿಸೆಂಬರು 4ನೆಯ ದಿನವು ಹಿಂದೂ ಚರಿತ್ರೆಯಲ್ಲಿ ಜ್ಞಾಪಕದಲ್ಲಿ ಇಡಬೇಕಾದ ದಿವಸವಾಗಿದೆ. ಆ ದಿನ 'ಲಾರ್ಡ್ ವಿಲಿಯಂ ಬೆಂಟಿಂಕ್' ಎಂಬ ರಾಜಪ್ರತಿನಿಧಿಯ ಸಭಾಸ್ಥಾನದಲ್ಲಿ ಈ ದುರಾಚಾರವು ನಿಲ್ಲಿಸಲ್ಪಟ್ಟಿದೆ ಎಂಬ ಶಾಸ

ನವು ಹುಟ್ಟಿ ಹಿಂದುಗಳ ನಾಗರಿಕತೆಯೆಂಬ ನಿರ್ಮಲವಾದ ಕನ್ನಡಿಯಲ್ಲಿ ಹತ್ತಿಕೊಂಡಿದ್ದ ವಿಕಾರಕಳಂಕವನ್ನು ಅಳಿಸಿಬಿಟ್ಟಿತು.

ಈ ಕಾನೂನನ್ನು ಪ್ರಸಿದ್ಧಿಪಡಿಸುವುದಕ್ಕೆ ಮುಂಚೆ ರಾಜಪ್ರತಿನಿಧಿಯು ರಾಮಮೋಹನನೊಂದಿಗೆ ಈ ವಿಷಯವಾಗಿ ಮಾತನಾಡಬೇಕೆಂದು ಯೋಚಿಸಿ ಆತನನ್ನು ಕರೆಯ ಕಳುಹಿದನು. ರಾಮಮೋಹನನು ಆ ಕರೆಯುಬಂದವನ ಸಂಗಡ "ನಾನು ವೃತ್ತಿಯನ್ನು ಬಿಟ್ಟು ನನ್ನ ಜೀವಿತಕಾಲವನ್ನು ಧರ್ಮಶಾಸ್ತ್ರಗಳಿಗೆ ಸಂಬಂಧಿಸಿದ ಕೆಲಸಗಳಲ್ಲಿಯೇ ಕಳೆಯುತ್ತಿರುವೆನು. ಈ ಸ್ಥಿತಿಯಲ್ಲಿರುವ ನಾನು ರಾಜಸಭೆಗೆ ಬರಲಾರೆನು. ಕ್ಷಮಿಸಬೇಕೆಂದು ಪ್ರಾರ್ಥಿಸಿದೆನೆಂಬದಾಗಿ ನನ್ನ ಮನವಿಯನ್ನು ಶ್ರುತಪಡಿಸತಕ್ಕದು'' ಎಂದು ಹೇಳಿದನು. ಅವನು ಹಾಗೆಯೇ ಬಿನ್ನವಿಸಲು 'ನೀನು ಹೇಗೆ ಕರೆದೆಯೋ ಹೇಳು' ಎಂದು ರಾಜಪ್ರತಿನಿಧಿಯು ಕೇಳಿದನು. ಆದಕ್ಕೆ ಆ ಪ್ರಮುಖನು ''ಗೌರ್ನರ್ ಜನರಲ್ ಆದ ಲಾರ್ಡ್ ವಿಲ್ಲಿಯಂ ಬೆಂಟಿಂಕ್‌ರವರು ನಿಮ್ಮನ್ನು ಒಂದು ಸಾರಿ ಬರಬೇಕೆಂದು ಅಪೇಕ್ಷಿಸಿರುವರು,'' ಎಂದು ಹೇಳಿದೆನೆಂದು ಹೇಳಿದನು. ಅದಕ್ಕೆ ಹಾಗಲ್ಲ '' ವಿಲ್ಲಿಯಂ ಬೆಂಟಿಂಕನು ದಯಮಾಡಿ ಒಂದು ಸಾರಿ ಬರಬೇಕೆಂದು ನಿಮ್ಮನ್ನು ಪ್ರಾರ್ಥಿಸುತ್ತಾನೆ'' ಎಂದು ಹೇಳಬೇಕೆಂದು ಮರಳಿ ಕಳುಹಿಸಿದನು. ರಾಮಮೋಹನನು ಆ ದಯಾಳುವು ಕರೆದುದಕ್ಕೆ ಬಹು ಸಂತೋಷಗೊಂಡು ಒಡನೆಯೇ ಹೊರಟು ಅಲ್ಲಿಗೆ ಹೋಗಿ ರಾಜಪ್ರತಿನಿಧಿಯನ್ನು ಕಂಡು ಬಹಳ ಹೊತ್ತು ಆತನ ಸಂಗಡ ಮಾತನಾಡುತ್ತಿದ್ದನು. ಈ ಪವಿತ್ರಸಂಭಾಷಣೆಯ ಪರ್ಯವಸಾನವು ಯಾವುದೆಂದರೆ ನಮ್ಮ ದೇಶೀಯರು ಎಂದೆಂದಿಗೂ ಮರೆಯದೆ ಕೃತಜ್ಞರಾಗಿರುವ ಸತ್ಫಲವು ದೊರಕಿದುದೇ.

ಸಹಗಮನವನ್ನು ನಿಷೇಧಿಸುವ ಶಾಸನವು ಪ್ರಕಟಿಸಲ್ಪಟ್ಟ ಕೂಡಲೆ ಕಲ್ಕತ್ತಾ ದೇಶೀಯ ಸಂಘದಲ್ಲಿ ಪ್ರಮುಖರಾದವರು, ನಾಮ್‌ದಾರರು, ಶ್ರೀಮಂತರು ಒಟ್ಟಾಗಿ ಸೇರಿ ಒಂದೇಸಾರಿ ಅಲ್ಲಕಲ್ಲೋಲ ಮಾಡಿದರು. ಈ ಶಾಸನವು ಏನೇನೋ ಮಾಡಬೇಕೆಂದು ಯತ್ನಿಸುತ್ತಿದ್ದ ಧರ್ಮಸಮಾಜದ ಸಭಿಕರಮೇಲೆ ಸಿಡಿಲಿನಂತೆ ಬಿತ್ತು. ಇನ್ನೇನಿದೆ ? ಅನ್ಯಾಯಕ್ಕೆ ಆಡುಂಬೊಲವಾದ ಘೋರ ಕಲಿಯುಗವು ಬಂದು ತನ್ನ ಬಲವನ್ನು ತೋರುತ್ತಲಿದೆ ಎಂಬ ವಾಕ್ಯಗಳೇ ಕೇಳಬರುತ್ತಲಿದ್ದುವು. ಇದಕ್ಕೆಲ್ಲಾ ರಾಮಮೋಹನನೇ ಕಾರಣನೆಂದು ನಿರ್ಣಯಿಸಿದರು. ನಾಲ್ಕು ಕಡೆಗಳಲ್ಲಿಯೂ ಜನರು ಈತನನ್ನು ಬಂಡಮಾತುಗಳಿಂದ ಬೈಯತೊಡಗಿದರು. ಅವನನ್ನು ತಮ್ಮ ಸಂಘದಿಂದಲೇ ಬಹಿಷ್ಕರಿಸಿದರು. ಇಷ್ಟೇ ಅಲ್ಲ ? ಆಗಲಾ ಮಹಾತ್ಮನು ಪ್ರಾಣಾಪಾಯಕರವಾದ ದುಸ್ಥಿತಿಯಲ್ಲಿ ಕೂಡ ಇದ್ದನು. ರಾಮಮೋಹನನ ಸ್ನೇಹಿತರು ತಮ್ಮ ಸ್ಥಿತಿಯೂ ಸ್ವಲ್ಪ ಹೆಚ್ಚು ಕಡಿಮೆ ಅವನಂತೆಯೇ ಇದ್ದರೂ ರಾಮಮೋಹನನಿಗೆ ತುಂಬ ಎಚ್ಚರದಿಂದ ಎಚ್ಚರದಿಂದ ಇರಬೇಕೆಂತಲೂನಾಲ್ವರು ಭಟರನ್ನು ಸಂಗಡ ಇಟ್ಟುಕೊಂಡು ತಿರುಗುವುದು ಉತ್ತಮವೆಂತಲೂ, ಆಲೋಚನೆ ಹೇಳಿದರು. ರಾಮಮೋಹನನು ನಿರ್ಭಯನಾಗಿ ಪಟ್ಟಣದ ಬೀದಿಗಳಲ್ಲಿ ಸಂಚರಿಸುತ್ತಲೇ ಇದ್ದನು. ಆದರೂ

"ಲೆಬ್‌ಳ" ಎಂಬ ಹೆಸರಿನ ಆಯುಧವನ್ನು ಮಾತ್ರ ಗುಟ್ಟಾಗಿ ತನ್ನ ಬಳಿಯಲ್ಲಿ ಇಟ್ಟು ಕೊಂಡೇ ಇದ್ದನು.

ಈಗ ರಾಮಮೋಹನನಿಗೆ ಒಂದು ಚಿಂತೆಯುಂಟಾಯಿತು. ಇಲ್ಲಿ ಇಂಡಿಯಾ ಸರ್ಕಾರದವರು ಪ್ರಕಟಿಸಿದ ಸಹಗಮನ ನಿಷೇಧದ ಕಾನೂನು ಪ್ರಜೆಗಳ ಗದ್ದಲದಿಂದ ತಿರುಗಿ ರದ್ದಾಗದಹಾಗೆ ಸರ್ಕಾರದವರು ದೃಢಸಂಕಲ್ಪವುಳ್ಳವರಾಗಿರುವುದಕ್ಕೂ, ವಿಲಾಯಿತಿಯಲ್ಲಿ ಪ್ರತಿಪಕ್ಷದವರಿಂದಲಾಗಲಿ ಸ್ವತಃ ಅವರ ಊಹೆಗಳಿಂದಲಾಗಲಿ, ಯಾವದಾದರೂ ಭಿನ್ನಾಭಿಪ್ರಾಯವುಂಟಾಗದೆ ಇರುವುದಕ್ಕೂ "ಈ ಶಾಸನವು ನಮ್ಮೆಲ್ಲರಿಗೂ ಸಂತೋಷಕರವಾಗುದೇ" ಎಂದು ಹಿಂದೂ ಜನರಿಂದ ಒಂದು ಕೃತಜ್ಞತೆಯ ಮನವಿಯನ್ನು ಬರೆಯಿಸಿ ಅದನ್ನು ರಾಜಪ್ರತಿನಿಧಿಯ ಸಮ್ಮುಖಕ್ಕೆ ಒಪ್ಪಿಸಬೇಕೆಂದು ಯೋಚಿಸಿದನು. ಮತ್ತೊಂದುಕಡೆ ದೊಡ್ಡ, ದೊಡ್ಡ ಜಮೀನುದಾರರು, ಧನವಂತರು, ವರ್ತಕರು, ಪಂಡಿತರು, ಮೊದಲಾದವರಿಂದ ಕೂಡಿರುವ ಧರ್ಮಸಭೆಯವರು ಈ ಶಾಸನಕ್ಕೆ ವಿರೋಧವಾಗಿ ಮತ್ತೊಂದು ವಿಜ್ಞಾಪನಪತ್ರವನ್ನು ಬರೆದು ಒಪ್ಪಿಸಲು ಪ್ರಯತ್ನಿಸುತ್ತಿದ್ದರು. ಅವರ ಅದೃಷ್ಟವಶದಿಂದ ಆ ವರ್ಷ ಆ ಪಟ್ಟಣದ ಪ್ರಜೆಗಳ ಪರವಾಗಿ "ಬೇಥೀ" ಎಂಬ ಯೂರೋಪ್ಸಿಯನ್ ಪ್ರತಿನಿಧಿ (ಶೆರೀಫ್) ಯಾಗಿರಲು ತಟಸ್ಥವಾಯಿತು. ಆತನು ಇವರ ವಿಜ್ಞಾನಪತ್ರವನ್ನು ಬರೆಯಲಿಕ್ಕೆ ಆವಶ್ಯಕವಾದ ವ್ಯವಹಾರಿಕ ವಿಷಯವನ್ನು ಕೊಟ್ಟು ಸಹಾಯಮಾಡಿದನು. ಈತನೂ ಹಿಂದೆ ಹೇಳಿದಂತೆ ಹಿಂದುಗಳು ಪವಿತ್ರಕಾರ್ಯವೆಂದು ತಿಳಿದಿರುವ ಮತಾಚಾರಗಳಲ್ಲಿ ಕೈ ಹಾಕಬಾರದೆಂದು ವಾದಿಸುವ ಸ್ವಭಾವವುಳ್ಳ ಮತ್ತಿಬ್ಬರು ಯೂರೋಪಿಯನ್ರೂ ಹೊರತು ಉಳಿದ ಕಲ್ಕತ್ತೆಯಲ್ಲಿದ್ದ ಬ್ಯಾರಿಸ್ಟರುಗಳಾಗಿಯೂ ನ್ಯಾಯವಾದಿಗಳಾಗಿಯೂ ಇರುವ ಆಂಗ್ಲೇಯರೊಬ್ಬರಾದರೂ ಇವರಿಗೆ ಸಹಾಯಕರವಾಗಿರಲಿಲ್ಲ.

ತಮ್ಮ ಬಿನ್ನವತ್ತಳೆಯಲ್ಲಿ ಸಹಿಮಾಡುವುದಕ್ಕೂ, ರಾಮಮೋಹನನ ಕೃತಜ್ಞತಾಪತ್ರದಲ್ಲಿ ಯಾರೂ ರುಜುಮಾಡದೆ ಇರುವುದಕ್ಕೂ ದೊಡ್ಡ ದೊಡ್ಡ ಪ್ರಯತ್ನಗಳು ಮಾಡಲ್ಪಡುತ್ತಲಿದ್ದುವು. ಆ ಕಾಲದ ಗದ್ದಲಗಳನ್ನು ಪ್ರತ್ಯಕ್ಷವಾಗಿ ನೋಡಿದ ಒಬ್ಬ ಇಂಗ್ಲಿಷ್ ಗ್ರಂಥಕರ್ತನು ಒಂದುಕಡೆಯಲ್ಲಿ "ಕೆಲವು ವಾರಗಳತನಕ ಕಲ್ಕತ್ತೆಯ ಪುರನಿವಾಸಿಗಳ ಗುಂಪಿನಲ್ಲಿ ಉಂಟಾದ ಸಹಗಮನ ನಿಷೇಧಶಾಸನದ ಖಂಡನೆಯನ್ನು ಕುರಿತ ಕಳವಳಗಳ ಇಂಗ್ಲಿಷ್ ರಾಜ್ಯದಲ್ಲಿ ಯಾವದಾದರೂ ರಾಜ್ಯಾಂಗದ ಚರ್ಚೆಯು ಸಂಭವಿಸಿದಾಗ ಉಂಟಾಗುವ ಕಲ್ಲೋಲಗಳಿಗೆ ಹೋಲಿಸತಕ್ಕವುಗಳಾಗಿದ್ದುವು" ಎಂದು ಬರೆದಿರುವನು. ರಾಮಮೋಹನನು ಜನಸಮೂಹದಿಂದ ಮರ್ಯಾದೆ ಪಡೆದಿರುವ ಪಂಡಿತರನ್ನು ತನ್ನ ಕಡೆಗೆ ಸೇರಿಸಿಕೊಳ್ಳಬೇಕೆಂದು ಎಷ್ಟು ಪ್ರಯತ್ನಮಾಡಿದರೂ ಪ್ರತಿಕಕ್ಷಿಗಳ ಆರ್ಭಟಕ್ಕೆ ಹೆದರಿ, ಅದುವರೆಗೆ ರಾಮಮೋಹನನಿಗೆ ವಾಗ್ದಾನಮಾಡಿದವರು ಸುದಾ ಧರ್ಮಸಭೆಯವರ ವಿಜ್ಞಾಪನಪತ್ರಕ್ಕೇನೇ ರುಜುಮಾಡಿದರು ಪ್ರತಿಪಕ್ಷಸಂಘದಲ್ಲಿ ಮುಂದಾಳಾಗಿದ್ದವನು ರಾಮಕಮಲಸೇನನು. ಇವನು ಇದಕ್ಕೆ ಮುಂಚೆ ಏಳುವರ್ಷಗಳಿಂದಲೂ ಸಹಗಮನವು ಕೂಡದೆಂದು

ಹೇಳುವ ಪಕ್ಷಕ್ಕೆ ಸೇರಿದವನಾಗಿದ್ದರೂ, ಅನಂತರ ಹಿಂದೂ ಕಾಲೇಜಿನಲ್ಲಿ ಒಬ್ಬ ಮುಖ್ಯ ಸಭಾಸದನಾಗಿದ್ದುದರಿಂದ ಅಲ್ಲಿಯ ಪಂಡಿತರ ಅಭಿಪ್ರಾಯಕ್ಕೆ ಅನುಕೂಲನಾಗಿ ಈಗ ಅವರ ಪಕ್ಷದಲ್ಲಿಯೇ ಕೆಲಸಮಾಡತೊಡಗಿದನು. ಧರ್ಮಸಭೆಯವರು ಹೀಗೆ ಎಷ್ಟೆಷ್ಟೋ ಕಷ್ಟಪಟ್ಟು 800 ಸಹಿಗಳುಳ್ಳ ತಮ್ಮ ವಿಜ್ಞಾಪನ ಪತ್ರವನ್ನು ಜನವರಿ 14ರಲ್ಲಿ ಲಾರ್ಡ್ ವಿಲ್ಲಿಯಂ ಬೆಂಟಿಂಕನಿಗೆ ಒಪ್ಪಿಸಿದರು. ಈ ವಿಜ್ಞಾಪನೆಗೆ ಒಂದು ಕಾಗದವನ್ನು ಜಂಟಿಸಿ ಅದರಲ್ಲಿ ಸಹಗಮನವು ಆದರಣೀಯವೇ ಎಂತ ಬೋಧಿಸುವ ಶಾಸ್ತ್ರವನ್ನು ಉದಾಹರಿಸಿ ಸರ್ಕಾರದವರು ಅಕ್ರಮವಾಗಿ ಹಿಂದೂ ಮತಾಚಾರಗಳಲ್ಲಿ ಪ್ರವೇಶಿಸಿದರೆಂತಲೂ ಇದು ಪಾರ್ಲಿಮೆಂಟಿನವರ ಅಭಿಪ್ರಾಯಕ್ಕೂ ಶಾಸನಗಳಿಗೂ ಸ್ಪಷ್ಟವಾಗಿ ವಿರೋಧವಾಗಿದೆಯೆಂತಲೂ ವಿಶದಪಡಿಸಿದರು.

ಹೀಗೆ ಎಷ್ಟು ಅಟ್ಟಹಾಸಮಾಡಿದರೂ ನ್ಯಾಯಮೂರ್ತಿಯಾದ ಆ ಗವರ್ನರ್ ಜನರಲ್ಲನು ‘‘ನಾನು ಪ್ರಕಟಿಸಿದ ಅಪ್ಪಣೆಯು ಅಕ್ರಮವೆಂದು ಭಾವಿಸಿದಲ್ಲಿ ನೀವೆಲ್ಲರೂ ಸೇರಿ ಇಂಗ್ಲೆಂಡಿನ ರಾಜನಿಗೆ ಒಂದು ವಿಜ್ಞಾಪನೆಯನ್ನು ಬರೆದುಕೊಳ್ಳಿರಿ, ನಾನು ಅದನ್ನು ಸಂತೋಷಪೂರ್ವಕವಾಗಿ ಅವರಬಳಿಗೆ ಕಳುಹಿಸುವೆನು’’ ಎಂದು ಪ್ರತ್ಯುತ್ತರವಿತ್ತನು.

ಎರಡು ದಿನಗಳ ತರುವಾಯ ಜನವರಿ 16 ರಲ್ಲಿ ರಾಮಮೋಹನನ ಕೃತಜ್ಞತಾಪತ್ರವು ರಾಜಪ್ರತಿನಿಧಿಯವರಿಗೆ ಒಪ್ಪಿಸಲ್ಪಟ್ಟಿತು. ಇದು ಬಂಗಾಳೀ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಬರೆಯಲ್ಪಟ್ಟು ಲಾರ್ಡ್ ವಿಲ್ಲಿಯಂ ಬೆಂಟಿಂಕರ ಸಮ್ಮುಖದಲ್ಲಿ ಓದಲ್ಪಟ್ಟಿತು.

ಪ್ರತಿಪಕ್ಷದವರು ಎಷ್ಟು ಭಯಪಡಿಸಿದರೂ ರಾಮಮೋಹನನು ಈ ಕೃತಜ್ಞತಾಸೂಚಕಪತ್ರಿಕೆಗೆ ಮುನ್ನೂರು ಸಹಿಗಳನ್ನು ಮಾಡಿಸಿದ್ದನು. ರಾಮಮೋಹನನು ತನ್ನ ವಿದ್ಯಾಚಾತುರ್ಯವನ್ನೆಲ್ಲಾ ತೋರಿಸಿ ಬರೆದ ಈ ಪತ್ರದಲ್ಲಿ ವಂದನೆಯ ವಾಕ್ಯಗಳೆಲ್ಲವೂ ಶ್ಲಾಘನೀಯಗಳಾಗಿದ್ದರೂ ತಮ್ಮಿಂದ ಅನುಗ್ರಹಿಸಲ್ಪಟ್ಟ ಈ ಅಸಾಧಾರಣ ಕೃಪಾರೂಪವಾದ ಶಾಸನದಿಂದುಂಟಾಗುವ ಫಲವನ್ನು ಮುಂದೆ ನಾವೂ ನಮ್ಮ ಸಂತತಿಯವರೂ ಅನುಭವಿಸತಕ್ಕವರಾಗಿದ್ದರೂ ಪ್ರಕೃತದಲ್ಲಿ ಈರ್ಷ್ಯಾಭಿಪ್ರಾಯಗಳಿಂದ ಪ್ರತಿಭಟಿಸಿ ನಮ್ಮಲ್ಲಿ ಒಡಂಬಡದವರ ಲೋಪಗಳನ್ನು ಕ್ಷಮಿಸಬೇಕೆಂದು ಪ್ರಾರ್ಥಿಸುವೆವು ಎಂದು ಬರೆದ ಕೊನೆಯ ಪ್ರಾರ್ಥನಾ ವಾಕ್ಯವು ಲಾರ್ಡ್ ವಿಲ್ಲಿಯಂ ಬೆಂಟಿಂಕರವರಿಗೆ ತುಂಬ ಆನಂದದಾಯಕವಾಗಿದ್ದುದರಿಂದ ಆತನು ರಾಮಮೋಹನನ ವಿನಯಕ್ಕೂ, ಸಾಹಸಕ್ಕೂ ಸಂತೋಷಿಸಿ ಸಾಧ್ಯವಾದಮಟ್ಟಿಗೆ ಅಂತಹ ಮೃದುಪದಗಳಿಂದಲೇ ತನ್ನ ಸಂತೋಷಸೂಚನೆಯ ಪ್ರತ್ಯುತ್ತರವನ್ನಿತ್ತನು.

ಧರ್ಮಸಭೆಯವರು ರಾಜಪ್ರತಿನಿಧಿಯಿಂದ ಕೊಡಲ್ಪಟ್ಟ ಪ್ರತ್ಯುತ್ತರವನ್ನು ಕೇಳಿ ಸುಮ್ಮನೆ ಇರಲಿಲ್ಲ. ಮರುದಿನವೇ ದೊಡ್ಡ ಸಭೆ ಸೇರಿಸಿ ಅಲ್ಲಿ ರಾಜಪ್ರತಿನಿಧಿಯಿಂದ ಕೊಡಲ್ಪಟ್ಟ ಪ್ರತ್ಯುತ್ತರವನ್ನೋದಿದರು. ಬಹಳಹೊತ್ತು ಈ ವಿಷಯವಾಗಿ ಚರ್ಚೆ ನಡೆಯಿತು. ಕೊನೆಗೆ ಸೀಮೆಯಲ್ಲಿ ರಾಜನ ಬಳಿ ಮೊರೆಯಿಡಬೇಕೆಂದು ನಿಶ್ಚಯಿಸಿದರು. ಅಲ್ಲಿಗೆ ಕಳು

ಿದ ಇವರ ವಿಜ್ಞಾಪನೆಗಳನ್ನೂ ಅದರ ಪರ್ಯವಸಾನವನ್ನೂ ಮುಂದೆ ನಮ್ಮ ವಾಚಕರು ತಿಳಿಯಬಲ್ಲರು.

ರಾಜಾರಾಮಮೋಹನರಾಯನು ಹಿಂದೂ ಸ್ತ್ರೀಗಳ ವಿಷಯವಾಗಿ ಸಹಗಮನವನ್ನು ನಿಲ್ಲಿಸುವುದಕ್ಕೆ ಮಾತ್ರವಲ್ಲದೆ ಅವರಿಗೆ ಸಾಮಾನ್ಯವಾಗಿ ಇದುವರೆಗೆ ಜರುಗುತ್ತಿರುವ ಇನ್ನೂ ಕೆಲವು ಲೋಪಗಳನ್ನು ಕುರಿತು 1822ನೆಯ ವರ್ಷದಲ್ಲಿ ಒಂದು ಪುಸ್ತಕವನ್ನು ಬರೆದು ಪ್ರಕಟಿಸಿದನು. ಇದರಲ್ಲಿ ಹಣದಾಸೆಯಿಂದ ಮುಕ್ಕಾಲಿನ ಮುದುಕನಿಗಾದರೂ ಸಣ್ಣ ಕನ್ನೆಯರನ್ನು ಕಟ್ಟುವ ಕನ್ಯಾವಿಕ್ರಯವನ್ನೂ, ಒಬ್ಬ ಪುರುಷನು ಅನೇಕ ಹೆಂಡತಿಯರನ್ನು ಮದುವೆಯಾಗುವ ವಿಷಯವನ್ನೂ, ಪ್ರಕೃತದಲ್ಲಿ ಪತಿಯು ಸತ್ತಕೂಡಲೇ ತನ್ನ ಹೊಟ್ಟೆ ಹೊರೆದುಕೊಳ್ಳುವುದಕ್ಕಾಗಿ ಮಕ್ಕಳನ್ನೂ ಸೊಸೆಯರನ್ನೂ ಆಶ್ರಯಿಸಬೇಕಾಗಿ ಬರುವ ಸ್ತ್ರೀಯರ ಕಷ್ಟಗಳನ್ನೂ ಕುರಿತು ಹಲವು ದೃಷ್ಟಾಂತಗಳನ್ನು ಕೊಡುತ್ತಾ ಚರ್ಚಿಸಿ ಪ್ರತಿಪಕ್ಷದ ಕೆಲವರಿಂದ ಈ ಸ್ತ್ರೀಜಾತಿಯರಮೇಲೆ ಆರೋಪಿಸಲ್ಪಡುವ ದೋಷಗಳನ್ನು ಉದಾಹರಿಸಿ ಯುಕ್ತವಾದ ಖಂಡನೆಗಳೊಂದಿಗೆ ತನ್ನ ಅಭಿಪ್ರಾಯಗಳನ್ನು ಬರೆದನು. ಅದನ್ನು ಸ್ವಲ್ಪಮಟ್ಟಿಗೆ ತಿಳಿಸುವುದು ಯುಕ್ತವಾದುದರಿಂದ ಇದರಡಿ ಸಂಗ್ರಹವಾಗಿ ಹೇಳುವೆವು.

(1) ಹೆಂಗಸರಿಗೆ ಗಂಡಸರಿಗಿಂತ ಜ್ಞಾನವು ಕಡಿಮೆಯೆಂದು ಹೇಳುತ್ತಿರುವರು. ಅವರ ಜ್ಞಾನವು ಸ್ವಭಾವವಾಗಿ ಎಷ್ಟುಮಟ್ಟಿಗೆ ಇದೆಯೆಂದು ತಿಳಿದುಕೊಳ್ಳಲು ಅವರ ಜ್ಞಾನಾಭಿವೃದ್ಧಿಗೆ ನಾವು ಯಾವಾಗ ಅವಕಾಶ ಕೊಟ್ಟಿರುವೆವು ? ಅವಕಾಶವನ್ನೇ ಕೊಡದೆ ಇರುವಾಗ ಅವರಮೇಲೆ ಈ ಲೋಪಗಳನ್ನು ಹೇಗೆ ಹೊರಿಸಬಹುದು ? ಸ್ತ್ರೀಯರಿಗೆ ಪೂರ್ಣವಾದ ವಿದ್ಯೆಯನ್ನು ಕಲಿಸದೆ ಚಿರಕಾಲದಿಂದ ಉಪೇಕ್ಷಿಸುತ್ತ ಬಂದಿರುವುದರಿಂದಲೇ ನಿಮ್ಮ ಅಭಿಪ್ರಾಯಾನುಸಾರ ಅವರ ಜ್ಞಾನವು ನೆಲ ಹತ್ತಿಹೋಗಿರುವುದು. ಲೀಲಾವತಿ, ಭಾನುಮತಿ, ಕರ್ಣಾಟಕರಾಜನ ಹೆಂಡತಿ, ಕಾಳಿದಾಸನ ಹೆಂಡತಿ ಮೊದಲಾದ ಸ್ತ್ರೀರತ್ನಗಳು ವಿದ್ಯಾವತಿಯರಾಗಿ ಜ್ಞಾನಾಭಿವೃದ್ಧಿಯನ್ನು ಹೊಂದಿರಲಿಲ್ಲವೇ ? ಯಜುರ್ವೇದದ ಬೃಹದಾರಣ್ಯಕೋಪನಿಷತ್ತಿನಲ್ಲಿ ಯಾಜ್ಞವಲ್ಕ್ಯನು ಬಹುಕಷ್ಟತರವಾದ ಬ್ರಹ್ಮವಿದ್ಯೆಯನ್ನು ತನ್ನ ಪತ್ನಿಯಾದ ಮೈತ್ರೇಯಿ ಎಂಬಾಕೆಗೆ ಕಲಿಸಿದಹಾಗೆ ಹೇಳಲ್ಪಟ್ಟಿದೆ. ಸ್ತ್ರೀಯರು ವಿದ್ಯೆಯಿಂದ ಜ್ಞಾನಾಭಿವೃದ್ಧಿಯನ್ನು ಹೊಂದದೆ ಇದ್ದಲ್ಲಿ ಅವರು ಇಂತಹ ಸಾಮಾನ್ಯ ಜನರಿಗೆ ದುರ್ಗ್ರಾಹ್ಯವಾದ ವಿಷಯಗಳನ್ನು ತಿಳಿಯಲು ಹೇಗೆ ಸಾಧ್ಯವಾದೀತು ? ಆದುದರಿಂದ ಅವರ ಜ್ಞಾನಾಭಿವೃದ್ಧಿಗಾಗಿ ತಕ್ಕ ಸಾಧನೆಗಳನ್ನು ಏರ್ಪಡಿಸಬೇಕು.

(2) ಅವರು ಸ್ವಾತಂತ್ರ್ಯ ಪ್ರಿಯರೆಂದು ಹೇಳುವರು. ಆದರೆ ದುರಾಶಾಪೀಡಿತರೂ, ದುರಾಚಾರಪಿಶಾಚಾವಿಷ್ಟರೂ ಆದ ದುರುಳರ ಉಪದೇಶಗಳಿಗೆ ಒಳಪಟ್ಟು ಈ ಲೋಕದಲ್ಲಿ ಎಲ್ಲಾ ವಸ್ತುಗಳಿಗಿಂತಲೂ ಪ್ರಿಯವಾದ ತಮ್ಮ ಪ್ರಾಣಗಳನ್ನೇ ಒಪ್ಪಿಸಲಿಕ್ಕೆ ಅಂಗೀಕರಿಸಿದ ಸ್ತ್ರೀಯರು ಮೃತರಾದ ತಮ್ಮ ಪತಿಗಳೊಂದಿಗೆ ಸುಟ್ಟುಹೋಗುತ್ತಿರುವರು. ಮತ್ತು ಒಬ್ಬೊಬ್ಬ ಗಂಡಸು ಇಬ್ಬರು ಮೂವರು ಹೆಂಡತಿಯರನ್ನು ಮದುವೆಯಾಗಿ ಮನೆಯಲ್ಲಿ

ಕಲಹಗಳನ್ನು ಹೆಚ್ಚಿಸಿದರೂ ಆ ಬಾಧೆಗಳನ್ನು ಸಹಿಸಿ ಪತಿಯೇ ತಮಗೆ ರಕ್ಷಕನೆಂದು ನಂಬಿ, ಅವನೊಂದಿಗೆ ತಾವೂ ಸಾಯುವರು. ಸಹಗಮನ ಮಾಡದೆ ಬದುಕಿಕೊಂಡಿರುವವರು ತಾವು ಇದ್ದಷ್ಟು ದಿವಸವೂ ದುಸ್ಸಹವಾದ ಒತ್ತಾಯದ ವೈಧವ್ಯವನ್ನು ಅನುಭವಿಸುತ್ತಿರುವರು. ಅವರು ಸ್ವಾತಂತ್ರ್ಯಾಭಿಲಾಷೆಯುಳ್ಳವರಾಗಿದ್ದಲ್ಲಿ ಇಂತಹ ನಿರ್ಬಂಧಗಳಿಗೆ ಹೇಗೆ ಒಳಪಡುವರು ? ಆದುದರಿಂದ ಈ ಸಹಗಮನವೆಂಬ ಘೋರ ದುರಾಚಾರಪೀಡಿತರಾದ ಈ ಸ್ತ್ರೀಯರಲ್ಲಿ ಕನಿಕರವಿಟ್ಟು ಅವರ ಸ್ಥಿತಿಯನ್ನು ಕ್ರಮಪಡಿಸಬೇಕು.

(3) ಅವರಿಗೆ ಭಕ್ತಿ ಶ್ರದ್ಧೆಗಳು ಕಡಿಮೆಯೆಂದು ಹೇಳುವರು. ಇದು ತುಂಬ ಅನ್ಯಾಯ. ಕೆಲವು ಗಂಡಸರು ಅವರನ್ನು ಎಂತಹ ಕಷ್ಟಕ್ಕೂ ದೂಷಣೆಗೂ ಬಯ್ಗುಳಿಗೂ ಒಳಪಡಿಸಿದರೂ ಅವುಗಳನ್ನೆಲ್ಲಾ ಸೈರಿಸಿಕೊಂಡಿರುವುದು ಭಕ್ತಿಯಿಂದಲೇ ಅಲ್ಲವೇ ? ವಿವಾಹಕಾಲದಲ್ಲಿ ತನ್ನ ಅರ್ಧಾಂಗಿಯಾಗಿ ಅಂಗೀಕರಿಸಿದ ಪತ್ನಿಯನ್ನು ತನ್ನ ಮನೆಗೆ ತಂದುಕೊಂಡ ಮೇಲೆ ದಾಸಿಗಿಂತಲೂ, ಪಶುಗಳಿಗಿಂತಲೂ ನೀಚವಾಗಿ ಗಂಡನು ನೋಡುತ್ತಿರುವನು. ಮಧ್ಯಮತರಗತಿಯಲ್ಲಿ ಇರುವವರ ಮನೆಗಳಲ್ಲಿ ಬಿಸಿಲು ಮಳೆ ಚಳಿ ಎನ್ನದೆ ಎಲ್ಲರಿಗಿಂತ ಮುಂದಾಗಿ ಎದ್ದು ಮನೆಗಳನ್ನು ಸಾರಿಸಿ, ಪಾತ್ರೆಗಳನ್ನು ಬೆಳಗಿ, ಹಗಲು ರಾತ್ರಿಗಳಲ್ಲಿ ಭೋಜನಪಾನೀಯಗಳನ್ನೆಲ್ಲಾ ಸಿದ್ಧಪಡಿಸಿ ಮನೆಕೆಲಸಗಳನ್ನೆಲ್ಲಾ ಮಾಡುವ ಭಾರವು ಸ್ತ್ರೀಯರಮೇಲೆಯೇ ಬಿದ್ದಿರುವುದು. ಸಾಮಾನ್ಯ ಸ್ಥಿತಿಯಲ್ಲಿ ಇರತಕ್ಕವರ ಮನೆಗಳಲ್ಲಿ ಪರಿಚಾರಿಕೆಯರು ಮಾಡತಕ್ಕ ಕೆಲಸಗಳನ್ನೆಲ್ಲಾ ಮನೆಯ ಹೆಂಗಸರೇ ಮಾಡುವರು. ಇವೆಲ್ಲವೂ ಹಾಗಿರಲಿ. ಅನ್ಯದೇಶೀಯರಂತಲ್ಲದೆ ನಾವು ಬಹುಕಾಲದಿಂದಲೂ ಸಮಷ್ಟಿ ಕುಟುಂಬಿಗಳಾಗಿ ಸಂಸಾರ ಮಾಡುತ್ತಿರುವುದರಿಂದ ಮನೆಗಳಲ್ಲಿಯ ಪುರುಷರಿಗೆಲ್ಲಾ ಸ್ತ್ರೀಯರು ತಗ್ಗಿರಬೇಕಾದುದೂ ಅವರ ಭಾವನೆಗಳನ್ನನುಸರಿಸಿ ಮರ್ಯಾದೆಗಳನ್ನು ಸಲ್ಲಿಸಬೇಕಾದುದೂ ನಮಗೆ ತಿಳಿದ ವಿಷಯವೇ ಆಗಿದೆ. ಕೆಲವರು ಪುರುಷರು ತಮ್ಮ ಕಣ್ಣೆದುರಿಗೇನೇ ವ್ಯಭಿಚಾರಾದಿ ಅಕೃತ್ಯಗಳನ್ನು ಮಾಡುತ್ತಿದ್ದರೂ ಸ್ವತಂತ್ರವಿಹೀನೆಯರಾದ ಅವರ ಹೆಂಡಿರು ಏನೂ ಮಾಡಲಾರದೆ ಸುಮ್ಮನೆ ಇರಬೇಕಾಗಿ ಬಂದಿರುವುದು. ಇಂತಹ ಅಕ್ರಮಗಳು ಎಷ್ಟೆಷ್ಟೋ ಇರುವುವು. ಹಿಂದೂ ಕುಟುಂಬಗಳಲ್ಲಿ ಸ್ತ್ರೀಯರು ತಮ್ಮ ಪತಿಗಳಲ್ಲಿ ಪರಿಪೂರ್ಣವಾದ ಭಕ್ತಿಶ್ರದ್ಧೆಗಳುಳ್ಳವರೆಂಬುದಕ್ಕೆ ಇದಕ್ಕಿಂತಲೂ ಬೇರೊಂದು ನಿದರ್ಶನವು ಬೇಕೆ ? ಸ್ತ್ರೀಯರಲ್ಲಿ ಒಬ್ಬಳು ದುರ್ವರ್ತನೆಯುಳ್ಳವಳಾದರೆ ಇಂತಹ ದೋಷವನ್ನು ಸ್ತ್ರೀಜಾತಿಯಲ್ಲಿಯೇ ಆರೋಪಿಸುವುದು ಎಂತಹ ನ್ಯಾಯವು ?

ಅನಾಥ ಸ್ತ್ರೀಯರ ಜೀವಿತಗಳು ದುಃಖಸಮುದ್ರದಲ್ಲಿ ಮುಳುಗುವುದು ರಾಮಮೋಹನನಿಗೆ ಚೆನ್ನಾಗಿ ತಿಳಿದಿತ್ತು. ಆತನು ತನ್ನ ಗ್ರಂಥಗಳಲ್ಲಿ ಅಲ್ಲಲ್ಲಿ ಈ ವಿಷಯವನ್ನು ಸಂಕ್ಷೇಪವಾಗಿ ಬರೆದಿರುವನು. ಆದರೆ ವಿಧವಾವಿವಾಹದ ಆವಶ್ಯಕತೆಯನ್ನು ಕುರಿತು ಆಲೋಚಿಸಿದುದೂ ಇಲ್ಲದುದೂ ನಮಗೆ ಸ್ಪಷ್ಟವಾಗಿ ತಿಳಿಯದು. ರಾಮಮೋಹನನು ವಿತಂತುವಿವಾಹವು ಕರ್ತವ್ಯವೆಂದು ಭಾವಿಸುವ ಪಕ್ಷದವನೇ ಎಂತಲೂ, ಆ ವಿಷಯವನ್ನು ಕುರಿತು ಒಂದು ಗ್ರಂಥ

ವನ್ನೂ ಕೂಡ ಬರೆದು ಮೊದಮೊದಲು ಬಾಲವಿತಂತುಗಳ ವಿವಾಹವು ಜರಗಬೇಕಾದುದು ಯುಕ್ತವೆಂದು ತನ್ನ ಅಭಿಪ್ರಾಯವನ್ನು ತಿಳಿಸಿರುವನೆಂತಲೂ, ಇಂಗ್ಲೆಂಡಿನಿಂದ ಮರಳಿ ಇಂಡಿಯಾಕ್ಕೆ ಬಂದ ಕೂಡಲೆ ವಿತಂತುವಿವಾಹದ ಪ್ರಯತ್ನಗಳನ್ನೂ ಆರಂಭಿಸುವೆನೆಂದು ಅವನು ತನ್ನ ಮಿತ್ರರೊಡನೆ ಹೇಳಿದ್ದನೆಂತಲೂ ಕೆಲವರು ಹೇಳುವರು. ಆದರೆ ಇದುವರೆಗೆ ನಮಗೆ ದೊರೆತಿರುವ ಈತನ ಗ್ರಂಥಗಳಲ್ಲಿ ಈ ವಿಷಯವನ್ನು ಕುರಿತು ವಿಸ್ತಾರವಾಗಿಯಾಗಲಿ, ಸಂಕ್ಷೇಪವಾಗಿಯಾಗಲಿ ಬರೆದ ವ್ಯಾಸಗಳು ಮೃಗ್ಯಗಳಾಗಿರುವುವು.

ನಮ್ಮ ದೇಶದಲ್ಲಿ ಎಲ್ಲಾ ಬಗೆಯ ಅಭಿವೃದ್ಧಿಗಳಿಗೂ ಅಡ್ಡಿ ತರುವುವುಗಳಲ್ಲಿ ಮುಖ್ಯವಾದುದು ಮತಭೇದವು. ಆದುದರಿಂದ ಆ ವಿಷಯದ ಸಂಸ್ಕಾರಗಳನ್ನು ರಾಮಮೋಹನನು ಮರೆತಿರಲಿಲ್ಲ. ಇದನ್ನು ಕುರಿತು ಆತನು ಒಂದು ಕಡೆ ಹೀಗೆ ಬರೆದಿರುವನು. ಸುಮಾರು ೯ ಶತಮಾನಗಳಿಂದ ನಮ್ಮನ್ನು ಇದು ವೇಧಿಸುತ್ತಲೇ ಇದೆ. ನಮ್ಮಲ್ಲಿ ಮತಭೇದಗಳು ದಿನೇ ದಿನೇ ಅಭಿವೃದ್ಧಿಯಾಗುತ್ತಲಿವೆ. ಒಬ್ಬೊಬ್ಬ ಬುದ್ಧಿವಂತನು ಹುಟ್ಟಿದಾಗ ಒಂದೊಂದು ಮತಕ್ಕೆ ಅನೇಕ ಶಾಖೆಗಳು ಪ್ರಸರಿಸುತ್ತಲಿವೆ. ಇಲ್ಲಿ ಈಗ 1,000 ಕ್ಕಿಂತ ಹೆಚ್ಚಿನ ಮತಗಳಿವೆ. ಪ್ರಜೆಗಳೆಲ್ಲರೂ ಸ್ವಮತಾಭಿಮಾನದಿಂದ ಪರಸ್ಪರ ಹಗೆತನ ಮಾಡುವುದರಿಂದ ಒಬ್ಬರನ್ನೊಬ್ಬರು ಪ್ರೀತಿಸದೆ ಇದ್ದಾರೆ. ಆದುದರಿಂದ ನಮ್ಮಲ್ಲಿ ಏಕಮತ್ಯವು ಲುಪ್ತವಾಯಿತು. ಮತದಲ್ಲಿ ನಾಗರಿಕತೆ ಬೆಳೆಯುತ್ತಾ ಬಂದಹಾಗೆಲ್ಲಾ ವಿಷಜಂತುಗಳಾದ ಹಾವು, ಚೇಳು, ಮುಂತಾದುವನ್ನು ಕೊಲ್ಲುವುದು ಸಹಾ ಪಾಪವಾಗಿ ಎಣಿಸಲ್ಪಡುವುದಲ್ಲದೆ ಅವುಗಳನ್ನೂ ಭಗವಂತನ ಅವತಾರಗಳಾಗಿ ಪೂಜಿಸುವ ಯೋಗ್ಯತೆ ಕೂಡ ಬಂದಿದೆ.

ಇಷ್ಟಲ್ಲದೆ ಈತನು ಸಂಸ್ಕೃತ ಭಾಷೆಯಲ್ಲಿ ಮೃತ್ಯುಂಜಯಾಚಾರ್ಯರೆಂಬ ಪಂಡಿತರಿಂದ ಮತಭೇದವನ್ನು ಕುರಿತು ಬರೆಯಲ್ಪಟ್ಟಿರುವ ವಜ್ರಸೂಚಿಯೆಂಬ ಪುಸ್ತಕವನ್ನು ಆಧಾರವಾಗಿಟ್ಟುಕೊಂಡು ಬಹುಮತಗಳಿಂದ ಉಂಟಾಗುವ ಅನರ್ಥಗಳನ್ನು ವಿವರಿಸುವ ಪ್ರಥಮಾಧ್ಯಾಯವನ್ನು ಭಾಷಾಂತರಮಾಡಿ ಪ್ರಥಮ ನಿರ್ಣಯವೆಂಬ ಹೆಸರಿನಿಂದ ಪ್ರಕಟಿಸಿದನು. ಆದರೆ ಪ್ರತ್ಯಕ್ಷ ಸಾದೃಶ್ಯ ಹೊಂದಿರುವಾಗ ನಾವು ಇವನ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ಗ್ರಂಥಗಳನ್ನು ಶೋಧಿಸಬೇಕಾದ ಅಗತ್ಯವೇ ಇಲ್ಲ. ರಾಮಮೋಹನನು ಮತಭೇದಗಳನ್ನು ಆದರಿಸದೆ ಇರುವುದಕ್ಕೆ ಅವನಿಂದ ಸ್ಥಾಪಿಸಲ್ಪಟ್ಟ ಬ್ರಹ್ಮಮಂದಿರದಲ್ಲಿ ಉಪಾಸನಾಕಾಲದಲ್ಲಿ ಬ್ರಾಹ್ಮಣರು, ಶೂದ್ರರು, ಮ್ಲೇಚ್ಛರು, ಮೊದಲಾದ ಎಲ್ಲಾ ಜಾತಿಗಳವರೂ ಸಮಾನಾಧಿಕಾರದಿಂದ ಕಲೆತು ಧ್ಯಾನಿಸಬಹುದು ಎಂದು ನಿರ್ಣಯಿಸಿರುವುದೇ ಪ್ರಬಲವಾದ ಸಾಕ್ಷ್ಯವು. ಮತ್ತು ಸಮುದ್ರಯಾನ ಮಾಡುವುದು ಅವನಿಗೆ ಸಮ್ಮತವೆಂಬುದಕ್ಕೆ ತಾನು ಸ್ವತಃ ಸಮುದ್ರಯಾನ ಮಾಡಿದುದೇ ನಿದರ್ಶನವು. ಬ್ರಿಟಿಷಿನವರ ಪಾಲನೆಯಿಂದುಂಟಾದ ಲಾಭಗಳೆಲ್ಲಕ್ಕಿಂತಲೂ ಹಿಂದೂಗಳೆಲ್ಲರೂ ಅವರಲ್ಲಿ ಕೃತಜ್ಞತೆಯುಳ್ಳವರಾಗಿರುವಂತೆ ಮಾಡಿದುದೂ, ಇನ್ನೂ ಕೃತಜ್ಞರಾಗಿರುವಂತೆ ಮಾಡುವುದೂ ಆದ ಲಾಭವು ಪಾಶ್ಚಾತ್ಯ ವಿದ್ಯಾಬೋಧನೆಯು. ಬೌದ್ಧಮತಾಭಿವೃದ್ಧಿಯ ಕಾಲವು ಕಳೆದ

ಮೇಲೆ ಯಾವಂರಾಜನಕಾಲದಲ್ಲಿಯಾದರೂ, ನಮ್ಮ ಬ್ರಿಟಿಷಿನವರ ಕಾಲದಲ್ಲಿ ಉಂಟಾದಷ್ಟು ವಿದ್ಯಾಭಿವೃದ್ಧಿಯು ನಡೆದಿರಲಿಲ್ಲ. ತಮ್ಮ ರಾಜ್ಯಪಾಲನೆಗೆ ವಿದ್ಯಾಭಿವೃದ್ಧಿಯೇ ಮುಖ್ಯವಾದುವಾಗಿದ್ದರೂ ಆಗಿನಕಾಲದ ರಾಜರು ಪ್ರಜೆಗಳನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡುವುದು ಅಗತ್ಯವೆಂದು ತಿಳಿಯದೆಹೋದರು. ಈ ಲೋಪವು ಹಿಂದೂರಾಜರ ಕಾಲದಲ್ಲಿ ಮಾತ್ರವಲ್ಲ ; ಮಹಮ್ಮದೀಯ ಪ್ರಭುಗಳ ಕಾಲದಲ್ಲಿ ಸುದಾ ಸ್ವಲ್ಪಮಟ್ಟಿಗೆ ಹೀಗೆ ಇದ್ದಿತು. ಅವರಾದರೂ, ಇವರಾದರೂ, ತಮ್ಮ ರಾಜಕೀಯ ವ್ಯವಹಾರವನ್ನು ನಡೆಸುವುದಕ್ಕೆ ಬೇಕಾದಯೋಗ್ಯತೆಯನ್ನು ಸಂಪಾದಿಸುವುದಕ್ಕಾಗಿ ಪ್ರತ್ಯೇಕವಾದ ಕೆಲವು ಜಾತಿಯವರಿಗೆ ಮಾತ್ರ ಸ್ವಲ್ಪಮಟ್ಟಿಗೆ ವಿದ್ಯೆಯು ಅಗತ್ಯವೆಂದು ಭಾವಿಸಿದ್ದರು. ಪ್ರಕೃತದಲ್ಲಿ ನಮ್ಮ ದೇಶದ ಪ್ರಜೆಗಳಲ್ಲಿ ಕೆಲವರಾದರೂ ಇಷ್ಟುಮಾತ್ರ ಓದುವುದಕ್ಕೂ ಬರೆಯುವುದಕ್ಕೂ ಶಕ್ತಿಯುಳ್ಳವರಾಗಿರುವುದಕ್ಕೆ ನಿಜವಾಗಿಯು ಇಂಗ್ಲಿಷರ ಪಾಲನೆಯೆ ಮುಖ್ಯಕಾರಣವು. ಇತರದೇಶಗಳೊಂದಿಗೆ ಹೋಲಿಸಿ ನೋಡಿದರೆ ನಮ್ಮದೇಶದ ವಿದ್ಯಾಭಿವೃದ್ಧಿಯು, ಬಹು ಸ್ವಲ್ಪವಾಗಿಯೇ ಇದೆಯೆಂದು ಒಪ್ಪಿಕೊಳ್ಳದೆ ತೀರದು. ಆದರೂ ಪೂರ್ವಕಾಲಕ್ಕಿಂತಲೂ ಈಗ ವಿದ್ಯೆಯು ಎಷ್ಟು ಅಭಿವೃದ್ಧಿಹೊಂದಿರುವುದೆಂತಲೂ ಈಗಿನ ಜನರು ವಿದ್ಯಾವಂತರಾಗಿರುವಹಾಗೆ ಇನ್ನು ಮುಂದೆ ಇಪ್ಪತ್ತು ವರ್ಷಗಳತನಕ ನಡೆಯುತ್ತಾಬಂದಲ್ಲಿ ಹಿಂದೂ ದೇಶವು ಇತರ ದೇಶಗಳೊಂದಿಗೆ ಸತ್ಯಜ್ಞಾನ ಸಂಪತ್ತುಗಳಲ್ಲಿ ಸರಿಹೋಲಿಸಲ್ಪಡಬಹುದೆಂತಲೂ ನಂಬುವೆವು. ಪಾಶ್ಚಾತ್ಯ ವಿದ್ಯಾಭಿವೃದ್ಧಿಯಿಂದುಂಟಾದ ಲಾಭವನ್ನು ಕಣ್ಣಾರ ನೋಡಿದಮೇಲೆಯೇ ನಾವು ಈ ಅಂಶವನ್ನು ಈಗ ತಿಳಿದುಕೊಳ್ಳಲು ಶಕ್ತರಾದೆವು. ಆದರೆ ಪ್ರಭುತ್ವದವರು ನಮಗೆ ಈ ಭಾಗ್ಯವನ್ನು ಅನುಗ್ರಹಿಸಲಿಕ್ಕೆ ಯತ್ನಿಸುವುದಕ್ಕಿಂತ ಮುಂಚೆಯೇ, ಇದರಿಂದುಂಟಾಗುವ ಲಾಭವನ್ನು ದೂರದರ್ಶಿಯಾದ ರಾಮಮೋಹನನು ತಿಳಿದುಕೊಂಡು ಹಿಂದೂ ದೇಶವು ಯಾವಾಗಲಾದರೂ ಅಜ್ಞಾನಕಾರಣದಿಂದುಂಟಾದ ಮತಸಾಂಘಿಕಾದಿ ಬಂಧಗಳಿಂದ ಬಿಡುಗಡೆಯನ್ನು ಹೊಂದಬೇಕಾದರೆ ಪಾಶ್ಚಾತ್ಯ ವಿದ್ಯೆಯೇ ಅವುಗಳಿಗೆ ಸಾಧನವಾಗುವುದೆಂದು ನಿಶ್ಚಯವಾಗಿ ನಂಬಿದ್ದನು. ಈ ನಂಬಿಕೆಯಿಂದಲೇ ಇತರ ವಿಷಯಗಳಿಗೋಸ್ಕರ ಎಷ್ಟುಮಟ್ಟಿಗೆ ಪ್ರಯತ್ನಮಾಡಿದನೋ ಅಷ್ಟರ ಪ್ರಯತ್ನವನ್ನು ಇದಕ್ಕಾಗಿ ಇವನು ಮಾಡಿದನು. ಬ್ರಿಟಿಷ್ ಸರ್ಕಾರದವರಿಂದ ಹಿಂದೂ ದೇಶೀಯರಿಗೆ ಅನುಗ್ರಹಿಸಲ್ಪಟ್ಟ ಪಾಶ್ಚಾತ್ಯ ವಿದ್ಯಾದಾನದ ಚರಿತ್ರೆಯು ತುಂಬ ವಿಚಿತ್ರವಾದುದು. ಆದರೂ ಈ ಚರಿತ್ರೆಯಲ್ಲಿನ ಬಹು ಭಾಗವು ರಾಮಮೋಹನನ ಈಚಿನಕಾಲದೊಂದಿಗೆ ಸಂಬಂಧವನ್ನುಳ್ಳುದಾಗಿರುವುದು. ಆದುದರಿಂದ ಇಲ್ಲಿ ರಾಮಮೋಹನನಿಗೆ ಸಂಬಂಧಿಸಿದ ವಿಷಯವನ್ನು ಮಾತ್ರದ ವಿಶದಪಡಿಸುವೆವು.

ಈಸ್ಟಿಂಡಿಯಾ ಕಂಪೆನಿಯವರು ಇಂಗ್ಲಿಷನ್ನು ಕಲಿತ ಹಿಂದೂ ದೇಶೀಯರ ಸಹಾಯವು ತುಂಬ ಅಗತ್ಯವಾಗಿರುವುದೆಂದು ಬಹುಕಾಲದ ಹಿಂದೆಯೇ ತಿಳಿದುಕೊಂಡಿದ್ದರು. ಅವರಿಗೆ ಒಂದು ಕಡೆ, ಮುರುಷುದಾಬಾದ್ ರಾಜ್ಯದೊಂದಿಗೆ ಸಂಬಂಧವು ಹೆಚ್ಚಾಗಿದ್ದಿತು.

ಮತ್ತೊಂದು ಕಡೆ ದೇಶೀಯವರ್ತಕರೊಂದಿಗೂ, ಕೈಗೆಲಸದವರೊಂದಿಗೂ ವ್ಯವಹಾರಗಳನ್ನು ನಡಿಸಬೇಕಾಗಿ ಬಂದಿತು. ಇವೆರಡು ಕೆಲಸಗಳಿಗೂ ಅವರ ಭಾಷೆಯನ್ನೂ ದೇಶಭಾಷೆಯನ್ನೂ ಕಲಿತು ಮಧ್ಯೆ ರಾಯಭಾರ ಮಾಡತಕ್ಕಷ್ಟು ಯೋಗ್ಯತೆ ಪಡೆದ ಮನುಷ್ಯರು ಬೇಕಾಗಿದ್ದರು. ಆಕಾಲದಲ್ಲಿ ಇಂಥವರನ್ನು ದ್ವಿಭಾಷಿ ಅಥವಾ ದುಬಾಸಿಯೆಂದು ಕರೆಯುತ್ತಿದ್ದರು. ಮೊದಲು ಬ್ರಿಟಿಷ್ ವರ್ತಕರ ವ್ಯಾಪಾರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ನಮ್ಮ ದೇಶದಲ್ಲಿ ಇಂಗ್ಲಿಷ್‌ಭಾಷೆಯನ್ನು ಕಲಿಯತೊಡಗಿದವರು ಸಾಧಾರಣವಾಗಿ ಕೆಲವು ಜಾತಿಯವರು ಮಾತ್ರವೇ ಇದ್ದರು. ಅವರು ಸುದಾ ತಮ್ಮ ಕೆಲಸಕ್ಕೆ ಸಾಕಾದಮಟ್ಟಿಗೆ ಸಂಬೋಧನೆಯ ವಾಕ್ಯಗಳನ್ನು ಗ್ರಹಿಸಿ ಅಷ್ಟುಮಟ್ಟಿಗೆ ಸಾಕೆಂದು ತಿಳಿದಿದ್ದರು. ಮೊಟ್ಟಮೊದಲು ಇಂಗ್ಲಿಷು, ಬಂಗಾಳಿ ಭಾಷೆಗಳಿಗೆ ನಿಘಂಟುವನ್ನು ಬರೆದ ' ರಾಂತಮುಲ್ ಸೇನೆ ' ಎಂಬಾತನು ತನ್ನ ಗ್ರಂಥದ ಉಪೋದ್ಘಾತದಲ್ಲಿ ಕಲ್ಕತ್ತಾಪಟ್ಟಣಕ್ಕೆ ಮೊದಲು ಇಂಗ್ಲಿಷ್ ಕಪ್ತಾನ್ (ಕೇಪ್ಟನ್) ಬಂದಾಗ ದೇಶೀಯ ವರ್ತಕರೆಲ್ಲರೂ ತಮ್ಮ ವ್ಯಾಪಾರಸಾಪಾರಗಳನ್ನು ಕುರಿತು ಅವರ ಸಂಗಡ ಮಾತನಾಡಲಿಕ್ಕೆ ಹೋಗಲು ಹಡಗಿನ ಬಳಿಗೆ ಒಬ್ಬ ಅಗಸರವನನ್ನು ಕರೆದುಕೊಂಡು ಬರಲು ಅವನು ತನ್ನ ಇಂಗ್ಲಿಷ್ ಭಾಷಾಜ್ಞಾನದಿಂದ ಉಭಯದೇಶಸ್ಥರ ಕಡೆಯಿಂದಲೂ ಬಹಳ ಹಣವನ್ನು ಸಂಪಾದಿಸಿದನು. ಆದುದರಿಂದ ಅವನಿಗೆ ನಮ್ಮ ದೇಶದಲ್ಲೆಲ್ಲಾ ಮೊದಲನೆಯ ವಿದ್ವಾಂಸನೆಂಬ ಗೌರವನಾಮವನ್ನು ಕೊಡಬಹುದೆಂದು ಬರೆದಿರುವನು. ಸುಮಾರು ವಂದುನೂರು ವರ್ಷಗಳ ತನಕ ಬಂಗಾಳಾದೇಶದಲ್ಲಿ ಇಂಗ್ಲಿಷ್‌ಭಾಷಾಭಿವೃದ್ಧಿಯು ಸಾಮಾನ್ಯವಾಗಿಯೇ ಇದ್ದಿತು. ಆದರೆ 1774 ರಲ್ಲಿ ಸುಪ್ರಿಂಕೋರ್ಟು ಸ್ಥಾಪಿಸಲ್ಪಟ್ಟಮೇಲೆ ಮಾತ್ರ ಪ್ರಜೆಗಳಲ್ಲಿ ಕೆಲವರಿಗೆ ಈ ಭಾಷೆಯ ಜ್ಞಾನವನ್ನು ಸಂಪಾದಿಸುವುದರಲ್ಲಿ ಆಸಕ್ತಿ ಹುಟ್ಟಿತು. ಆದರೂ ಸರ್ಕಾರದವರು ಈ ವಿಷಯವನ್ನು ಕುರಿತು ಆದುವರಿಗೆ ಯಾವ ಶ್ರದ್ಧೆಯನ್ನೂ ತೆಗೆದುಕೊಳ್ಳಲಿಲ್ಲವಾದುದರಿಂದ ಅಂತವರು ಉದ್ಯೋಗಸ್ಥರಲ್ಲಿನ ಇತರ ಆಂಗ್ಲೇಯರಲ್ಲಿ ಒಬ್ಬೊಬ್ಬರನ್ನು ಉಪಾಧ್ಯಾಯನನ್ನಾಗಿ ನಿಯಮಿಸಿ, ಸ್ವಂತವಾದ ಶಾಲೆಗಳನ್ನೇರ್ಪಡಿಸಿಕೊಂಡು ವಿದ್ಯೆಯನ್ನು ಕಲಿಯುತ್ತಿದ್ದರು.

ಮೊಟ್ಟಮೊದಲು 1780 ರಲ್ಲಿ ಸರ್ಕಾರದವರು ಪ್ರಜೆಗಳಿಗೆ ವಿದ್ಯೆಯನ್ನು ಕಲಿಸಬೇಕೆಂದು ತಿಳಿದುಕೊಂಡರು. ಆಗ ಮೊದಲನೆಯ ರಾಜಪ್ರತಿನಿಧಿಯಾಗಿದ್ದ ವಾರನ್‌ಹೇಸ್ಟಿಂಗ್ಸನು ಮಹಮ್ಮದಿಯರಿಗೋಸ್ಕರ ಕಲ್ಕತ್ತೆಯಲ್ಲಿ 'ಕಲ್ಕತ್ತಾ ಮದ್ರಸಾ' ಎಂಬುದೊಂದು ಪಾಠಶಾಲೆಯನ್ನೇರ್ಪಡಿಸಿದನು. ನಾಲ್ಕು ವರ್ಷಗಳಾದಮೇಲೆ 'ನಾರ್ಥನ್ ಡಂಕನ್' ಎಂಬ ರೆಸಿಡೆಂಟನು ಕಾಶೀ ಪಟ್ಟಣದಲ್ಲಿ ಒಂದು ಸಂಸ್ಕೃತ ಕಾಲೇಜನ್ನು ಸ್ಥಾಪಿಸಿದನು. ಆದರೂ ಇವೆರಡು ಪಾಠಶಾಲೆಗಳನ್ನು ಏರ್ಪಡಿಸುವುದರ ಉದ್ದೇಶವು ಅವುಗಳ ಹೆಸರಿಗೆ ತಕ್ಕಂತೆ ಅರಬ್ಬಿ ಸಂಸ್ಕೃತಭಾಷೆಗಳನ್ನು ಕಲಿಸುವುದೇ ಆಗಿತ್ತು. ಲಾರ್ಡ್ ಮಿಂಟೋ ಎಂಬ ರಾಜಪ್ರತಿನಿಧಿಯು "ಹಿಂದೂ ದೇಶೀಯರ ಸ್ವಭಾಷೆಗಳೆಲ್ಲವೂ ದಿನೇದಿನೇ ಕ್ಷೀಣವಾಗಿ

ನಾಮಮಾತ್ರಾವಶಿಷ್ಟವಾಗುವ ಸ್ಥಿತಿಗೆ ಬಂದುದಕ್ಕೆ ನನ್ನ ಮನಸ್ಸಿನಲ್ಲಿ ತುಂಬಾ ವಿಚಾರವಾಗಿದೆ. ಆದುದರಿಂದ ಪ್ರಜೆಗಳ ಕ್ಷೇಮವನ್ನು ವಿಚಾರಿಸಿ ಅವರ ಮಾತೃಭಾಷೆಯಾದ ಸಂಸ್ಕೃತ ಭಾಷಾಭಿವೃದ್ಧಿಗೋಸ್ಕರ ಇದುವರೆಗೆ ಬನಾರಸಿನಲ್ಲಿರುವ ಕಾಲೇಜ್ ಮಾತ್ರವಲ್ಲದೆ ಪ್ರಸಿದ್ಧವಾದ ಮತ್ತೆರಡು ಪಟ್ಟಣಗಳಲ್ಲಿ ಎರಡು ಸಂಸ್ಕೃತ ಕಾಲೇಜುಗಳನ್ನು ಸ್ಥಾಪಿಸತಕ್ಕದ್ದು" ಎಂದು ಸರ್ಕಾರದವರಿಗೆ ಬರೆದನು. ಆದರಮೇಲೆ 1813 ರಲ್ಲಿ ಹೊರಟ ಕಂಪೆನಿಯ ಸನ್ನದಿನಲ್ಲಿ ಹಿಂದೂ ಪ್ರಜೆಗಳ ವಿದ್ಯಾಭಿವೃದ್ಧಿಗಾಗಿ ವರುಷಕ್ಕೆ ಒಂದು ಲಕ್ಷ ರೂಪಾಯಿಗಳನ್ನು ವೆಚ್ಚಮಾಡತಕ್ಕುದೆಂದು ಏರ್ಪಟ್ಟಿತು. ಆದರೆ ಇದು ದೇಶೀಯ ವಿದ್ಯಾಭಿವೃದ್ಧಿಗೆಂತಲಾಗಲಿ, ಪಾಶ್ಚಾತ್ಯ ವಿದ್ಯಾಬೋಧನೆಗೆಂತಲಾಗಲಿ ಸ್ಪಷ್ಟಪಟ್ಟಿರಲಿಲ್ಲ. 1823 ನೆಯ ವರುಷದ ತನಕ ಈ ಹಣವು ಯಾವ ವಿಧದಿಂದಲೂ ವಿನಿಯೋಗಿಸಲ್ಪಡದೆ ಹಾಗೆಯೇ ಉಳಿಸಲ್ಪಟ್ಟಿತ್ತು.

ರಾಮಮೋಹನನು ಕಲ್ಕತ್ತೆಯಲ್ಲಿ ವಾಸವನ್ನೇರ್ಪಡಿಸಿಕೊಳ್ಳುವ ಕಾಲಕ್ಕೆ ಇಂಗ್ಲಿಷ್ ವಿದ್ಯಾಸ್ಥಿತಿಯು ಸರ್ಕಾರದ ಆದರವನ್ನು ಹೊಂದದೆಯೇ ಇತ್ತು. ಆಸಕ್ತಿಯುಳ್ಳ ಕೆಲವರು ಮಾತ್ರ ಸ್ವಂತ ಪಾಠಶಾಲೆಗಳಲ್ಲಿ ಇಂಗ್ಲಿಸ್ ವಿದ್ಯಾಭ್ಯಾಸಮಾಡಿಸುತ್ತಿದ್ದರು. ಮತ್ತೆ ಕೆಲವರು ಬಗಹಾಂಪುರದಲ್ಲಿ ಪಾದರಿಗಳ ಅನುಗ್ರಹವನ್ನು ಸಂಪಾದಿಸಿ ಅವರಿಂದ ಸ್ವಲ್ಪ ಮಟ್ಟಿಗೆ ವಿದ್ಯಾಜ್ಞಾನವನ್ನು ಪಡೆಯುತ್ತಿದ್ದರು. ಆದುದರಿಂದ ಕಲ್ಕತ್ತೆಗೆ ಬಂದ ಸ್ವಲ್ಪಕಾಲದೊಳಗಾಗಿಯೇ ರಾಮಮೋಹನನಿಗೆ ಒಂದು ಹಿಂದೂಕಾಲೇಜನ್ನು ಸ್ಥಾಪಿಸಬೇಕೆಂಬ ಅಭಿಪ್ರಾಯವು ಹುಟ್ಟಿತು. ಆ ಕಾಲದಲ್ಲಿ ಸ್ಕಾಟ್ಲೆಂಡ್ ದೇಶದಲ್ಲಿ 1775 ರಲ್ಲಿ ಹುಟ್ಟಿ, ತನ್ನ ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಕಲ್ಕತ್ತೆಗೆ ಬಂದು ಗಡಿಯಾರಗಳನ್ನು ರಿಪೇರಿಮಾಡುವ ವೃತ್ತಿಯನ್ನವಲಂಬಿಸಿದ "ಡೇವಿಡ್ ಹೇರ್" ಎಂಬ ಯೂರೋಪಿಯನೊಬ್ಬನಿದ್ದನು. ಆತನ ಹೆಸರಿನ ಬೀದಿಯೊಂದು ಕಲ್ಕತ್ತಾಪಟ್ಟಣದಲ್ಲಿ ಈಗಲೂ ಪ್ರಸಿದ್ಧವಾಗಿದೆ. ಈತನು ಕೆಲವು ದಿನಗಳಾದಮೇಲೆ ತನ್ನ ಉದ್ಯೋಗವನ್ನು ಬಿಟ್ಟು ಬಿಟ್ಟು ಅಂದಿನಿಂದ ತನ್ನ ಜೀವವಿರುವತನಕ (1842ನೇ ಜೂನ್) ಹಿಂದೂದೇಶೀಯರ ಅಭಿವೃದ್ಧಿಗಾಗಿಯೇ ಶ್ರಮಿಸಿ ಕಾಲವನ್ನು ಕಳೆದನು. ತಾನು ಅಷ್ಟರ ವಿದ್ಯಾವಂತನಾಗಿದ್ದರೂ ಈತನು ಹಿಂದೂದೇಶೀಯರಲ್ಲಿ ಪಾಶ್ಚಾತ್ಯ ವಿದ್ಯಾ ನಾಗರಿಕತೆ ಮುಂತಾದುವುಗಳನ್ನು ವ್ಯಾಪನೆಗೊಳಿಸುವುದೇ ತನ್ನ ಕರ್ತವ್ಯವೆಂದು ಭಾವಿಸಿ ವಿವಾಹವನ್ನೇ ಅಪೇಕ್ಷಿಸದೆ, ಹಿಂದೂ ಬಾಲಕರನ್ನೇ ತನ್ನ ಮಕ್ಕಳೆಂದು ತಿಳಿದು, ಪ್ರೇಮದಿಂದ ಅವರಿಗೆ ವಿದ್ಯಾದಾನ ಮಾಡಿದನು. ಹಿಂದೂದೇಶಾಭಿಮಾನಿಯಾಗಿಯೂ, ಹಿಂದೂ ಜನರ ಕೃತಜ್ಞತೆಗೆ ಪಾತ್ರನಾಗಿಯೂ ಇದ್ದ ಈ ಮಹಾತ್ಮನ ಜೀವಿತ ಚರಿತ್ರೆಯನ್ನು "ಬಾಬುಪ್ಯಾರೀಚಂದ್ರಮಿತ್ರ" ಎಂಬ ಬಂಗಾಳಿಯೊಬ್ಬನು ಇಂಗ್ಲಿಷಿನಲ್ಲಿ ಬರೆದಿರುವನು. ಈ "ಡೇವಿಡ್‌ಹೇರ್" ಎಂಬಾತನು ತನ್ನ ಸಭಾರಂಭದಿಂದ ರಾಮಮೋಹನನ ಪರಿಚಿತನಾಗಿ ಸ್ನೇಹಿತನೆನಿಸಿಕೊಂಡನು. ಈ ಉಭಯರ ಅನ್ಯೋನ್ಯ ಸ್ನೇಹದಿಂದ ಉಂಟಾದ

ಪ್ರಯತ್ನಗಳೇ 1816 ರಲ್ಲಿ ಕ್ರಿಯಾರೂಪವಾಗಿ ಮಾರ್ಪಟ್ಟವು. ಆ ವರುಷದಲ್ಲಿಯೇ ಹಿಂದೂಕಾಲೇಜ್ ಸ್ಥಾಪಿಸಲ್ಪಟ್ಟಿತು.

ಈ ಕಾಲೇಜನ್ನು ಸ್ಥಾಪಿಸುವುದಕ್ಕಾಗಿ ಮಾಡಿದ ಕೃಷಿಯೆಲ್ಲವೂ ಸುಪ್ರೀಂಕೋರ್ಟಿನ ಚೀಫ್ ಜಸ್ಟಿಸರಾಗಿದ್ದ "ಸರ್ ಹೈಡ್ ಈಸ್ಟ್" ಎಂಬವರದೆಂದು ಕೆಲವರು ಹೇಳು ವರು. ನಿಜವಾಗಿ ವಿಚಾರಮಾಡಿದರೆ ಈ ಪ್ರಯತ್ನಗಳೆಲ್ಲವೂ ರಾಮಮೋಹನ ಮತ್ತು ಡೇವಿಡ್ ಹೇರ್ ಎಂಬಿವರದೇ ಎಂದು ಹೇಳತಕ್ಕದ್ದು. ಚೀಫ್‌ಜಸ್ಟಿಸ್ ಹೈಡ್‌ಯವರ ಹೆಸರು ನಿಮಿತ್ತಮಾತ್ರಕ್ಕೆ ಪ್ರಕಟಿಸಲ್ಪಟ್ಟಿತ್ತು. ಇದಕ್ಕೆ ಎರಡು ಕಾರಣಗಳುಂಟು. ಅವು ಗಳಲ್ಲಿ ಮೊದಲನೆಯದು ಇದರಲ್ಲಿ ರಾಮಮೋಹನನ ಸಂಬಂಧ ಉಂಟೆಂದು ತಿಳಿದ ಕೂಡಲೇ ತಮಗೆ ವಿದ್ಯಾಲಾಭವಿಲ್ಲದಿದ್ದರೂ ಹೋಗಲಿ, ನಾವು ಆತನ ವಿಷಯದಲ್ಲಿ ಏಕೀಭವಿಸಲಾರೆ ವೆಂದು ಆ ಪಟ್ಟಣದ ಪೂರ್ವಾಚಾರಪರಾಯಣರಾದ ಪ್ರಮುಖರೆಲ್ಲರೂ ಒಡಂಬಡದೆ ಒಗ್ಗ ಟ್ಟಾಗಿ ಪ್ರತಿಭಟಿಸುವರೆಂಬುದನ್ನು ರಾಮಮೋಹನನು ಮೊದಲೇ ತಿಳಿದು ತನ್ನ ಹೆಸರನ್ನು ಸಾಮಾಜಿಕರ ಪಟ್ಟಿಯಲ್ಲಿ ಸೇರಿಸದೆ ಗುಟ್ಟಾಗಿದ್ದನು. ಎರಡನೆಯದು, ಈಗಿನಂತೆಯೇ ಆ ಕಾಲದವರು ಸುದಾ ಕಾಲಸ್ಥಿತಿಯನ್ನರಿತು ಅದನ್ನನುಸರಿಸಿ ನಡೆಯತಕ್ಕವರೇ ಆದುದರಿಂದ ವಿಶೇಷ ದ್ರವ್ಯಸಹಾಯದಿಂದ ನೆರವೇರಿಸಬೇಕಾಗಿದ್ದ ಈ ಕೆಲಸಕ್ಕೆ ಜನವಶೀಕರಣವು ಅತ್ಯಾ ವಶ್ಯಕವಾಗಿರುವುದೆಂದು ರಾಮಮೋಹನನೂ ಡೇವಿಡ್ ಹೇರನೂ ಸೇರಿ ಆಲೋಚಿಸಿ ಸರ್ ಹೈಡ್ ಈಸ್ಟು ದೊರೆಯವರನ್ನಾಶ್ರಯಿಸಿ ಅವರ ಅಭಿಮಾನವನ್ನು ಸಂಪಾದಿಸಿ ತಮ್ಮ ಕಾರ್ಯಕ್ಕೆ ಜಯ ಸಿಕ್ಕುವುದಕ್ಕಾಗಿ ಆತನ ಹೆಸರನ್ನು ಮುಂದಿಟ್ಟರು. 1882 ನೇ ವರುಷದಲ್ಲಿ ಪೂನಾ, ಬೊಂಬೈ ನಗರಗಳಲ್ಲಿಯ ದೇಶಾಭಿಮಾನಿಗಳು ಕೆಲವರು ಸ್ತ್ರೀವೈದ್ಯಶಾಲೆಗಳನ್ನೇರ್ಪಡಿಸ ಲಿಕ್ಕೆ ಪ್ರಯತ್ನಿಸಿ ಎಷ್ಟು ಸಾಹಸಮಾಡಿದರೂ ಒಬ್ಬರಾಗಲಿ ಒಂದು ದಮ್ಮಡಿಯನ್ನಾದರೂ ಕೊಡದೆ ಹೋದರು. ಆದರೆ ಲೇಡಿ ಡಫರಿನ್‌ಯವರಿಗೆ ಅಗ್ರಾಸನಾಧಿಪತ್ಯವನ್ನು ಕೊಟ್ಟ ಕೂಡಲೆ ಬಹು ಸ್ವಲ್ಪಕಾಲದೊಳಗಾಗಿ ಲಕ್ಷಾಂತರ ರೂಪಾಯಿಗಳು ಶೇಖರವಾದುವು. ಲೋ ಕಸ್ವಭಾವವು ಹೀಗಿರುವುದರಿಂದ ರಾಮಮೋಹನನ ಹೆಸರು ಬಹಿರಂಗವಾಗಿಪ್ರಕಟಿಸ ಲ್ಪಡಲಿಲ್ಲ.

ಪ್ರಜಾಪಕ್ಷದಲ್ಲಿ ಹಿಂದೂ ಕಾಲೇಜ್ ಸ್ಥಾಪಿಸಲ್ಪಟ್ಟು ಬೋಧನೆಯ ಕೆಲಸಕ್ಕೆ ಆರಂಭ ವಾಯಿತು. ಇಂಗ್ಲಿಷ್ ಭಾಷಾಭಿವೃದ್ಧಿಗಾಗಿ ಪ್ರಜೆಗಳೆಲ್ಲರೂ ತುಂಬಾ ಪ್ರೀತಿಯಿಂದ ಸಹಾಯಮಾಡಿದರು. ಕ್ರಮಕ್ರಮವಾಗಿ ವಿದ್ಯೆಯು ಅಭಿವೃದ್ಧಿಯಾಗುತ್ತಾ ಬಂದಹಾಗೆಲ್ಲಾ ವಿದ್ಯಾರ್ಥಿಗಳ ಅಭಿಪ್ರಾಯಗಳು ಸ್ವಮತವಿರುದ್ಧಗಳಾಗುತ್ತ ಬಂದುವು. ಹೀಗಾಗಬಾರ ದೆಂದು ಆ ಪಾಠಶಾಲೆಯ ಕಾರ್ಯನಿರ್ವಾಹಕರು ಪ್ರಯತ್ನಮಾಡಿದರೂ ವ್ಯರ್ಥವಾಯಿತು. ಕೆಲವರು ಬಾಲಕರು ಕ್ರಿಸ್ತಮತವನ್ನವಲಂಬಿಸಿದರು. ಸಮಾಜಿಕರೆಲ್ಲರೂ ಇದನ್ನು ನೋಡಿ ಅಲ್ಲಿಯ ಮುಖ್ಯೋಪಾಧ್ಯಾಯನಾಗಿದ್ದ ಒಬ್ಬ ಯುರೇಷಿಯನಿನ ಮೇಲೆ ದೋಷಾರೋ ಪಣೆ ಮಾಡಿ ಅವನನ್ನು ಕೆಲಸದಿಂದ ತೊಲಗಿಸಿದರು. ಇದರಿಂದ ವಿದ್ಯಾರ್ಥಿಗಳ ಅಭಿಪ್ರಾ

ಯಗಳು ಮತ್ತಷ್ಟು ವಿರುದ್ಧಗಳಾಗಿ ಅವರೆಲ್ಲರೂ ಉಪಾಧ್ಯಾಯರೊಡನೆ ಪಾಠಶಾಲೆಯನ್ನು ಬಿಟ್ಟು ಹೊರಟುಹೋದರು. ವಿದ್ಯಾಭಿವೃದ್ಧಿಗೆ ಭಂಗವುಂಟಾಗಬಾರದೆಂದು ಸಭಿಕರು ಮಾಡಿದ ಪ್ರಯತ್ನಗಳು ಈಡೇರದೆ ವಿಘ್ನವೇರ್ಪಡಲಿಕ್ಕೆ ಸಿದ್ಧವಾಗಿರುವ ಈ ಕಾಲದಲ್ಲಿ ದೇಶವಿರೋಧಿಯೆಂದು ಭಾವಿಸಲ್ಪಟ್ಟ ರಾಮಮೋಹನರಾಯನೇ ಬಾಲಕರಿಗೆ ಹಿತೋಪದೇಶ ವನ್ನು ಮಾಡಿ ಹಿರಿಯರ ಅಭಿಪ್ರಾಯಕ್ಕೆ ವಿರೋಧವಾಗಿ ಅವರು ಮತಾಂತರದಲ್ಲಿ ಸೇರಬಾರದೆಂತಲೂ, ವಿದ್ಯಾಭಿವೃದ್ಧಿಗೆ ಭಂಗತಂದುಕೊಳ್ಳಬಾರದೆಂತಲೂ ಬೋಧಿಸಿ ಆ ವಿದ್ಯಾಶಾಲೆಯನ್ನು ಕಾಪಾಡಿದನು.

1823 ರಲ್ಲಿ ಲಾರ್ಡ್ ಅಂಹರಸ್ಟ್ ಎಂಬ ರಾಜಪ್ರತಿನಿಧಿಯು ಹತ್ತು ವರ್ಷಗಳಿಂದ ವೆಚ್ಚಿಸದೆ ವುಳಿಸಿದ್ದ ಆ ದ್ರವ್ಯವನ್ನು ಖರ್ಚುಮಾಡಿ, ಹಿಂದುಗಳ ಭಾಷಾಭಿವೃದ್ಧಿಗೋಸ್ಕರ ಒಂದು ಸಂಸ್ಕೃತ ಪಾಠಶಾಲೆಯನ್ನೇರ್ಪಡಿಸಬೇಕೆಂದು ಯೋಚಿಸಿದನು. ರಾಮಮೋಹನನಿಗೆ ಸರ್ಕಾರದವರ ಅಭಿಪ್ರಾಯ ತಿಳಿದು ಆ ಕಾಲೇಜನ್ನು ಇಂಗ್ಲಿಷ್ ಪಾಠಶಾಲೆಯಾಗಿ ಮಾರ್ಪಡಿಸುವುದು ಉತ್ತಮವೆಂಬ ತನ್ನ ಅಭಿಪ್ರಾಯವನ್ನು ತಿಳಿಸುವ ಒಂದು ವಿಜ್ಞಾಪನ ಪತ್ರವನ್ನು ಎಳೆಂಟು ಪುಟಗಳಲ್ಲಿ "ಸಂಸ್ಕೃತ ಭಾಷಾಭಿವೃದ್ಧಿಗಾಗಿ ಬೇಕಾದ ಸಾಧನಗಳೂ ಆ ಭಾಷೆಯನ್ನು ಬೋಧಿಸುವ ಪಂಡಿತರೂ ಇಂಡಿಯಾದ ಎಲ್ಲಾ ಭಾಗಗಳಲ್ಲಿಯೂ ಇರುವರೆಂತಲೂ, ದೇಹವು ಅನಿತ್ಯವಾದುದರಿಂದ ದೇಹಸಂಬಂಧಿಗಳಲ್ಲಿ ಮಮತೆಯನ್ನು ಬಿಡಬೇಕೆಂತಲೂ ದೃಶ್ಯಪದಾರ್ಥಗಳೆಲ್ಲವೂ ಮಿಥ್ಯೆಯೆಂತ ಬೋಧಿಸುವ ವೇದಾಂತಶಾಸ್ತ್ರಗಳಿಂದಲೂ, ಪಶ್ವಾದಿ ಯಜ್ಞಗಳ ಯುಕ್ತಾಯುಕ್ತತೆಗಳನ್ನು ನಿರ್ಣಯಿಸುವ ಮೀಮಾಂಸಾದಿ ಗ್ರಂಥಗಳಿಂದಲೂ, ಮೂಗುಮೋರೆಗಳನ್ನು ಬಣ್ಣಿಸುವ ಶೃಂಗಾರ ಪ್ರಬಂಧಗಳಿಂದಲೂ ಲೋಕವ್ಯವಹಾರಕ್ಕೆ ಉಪಯೋಗಿಸುವ ಜ್ಞಾನವು ಅಭಿವೃದ್ಧಿಯಾಗಲಾರದೆಂತಲೂ ಹಿಂದೂದೇಶದವರು ವಿದ್ಯೆಯ ಪ್ರಯೋಜನಗಳನ್ನು ಹೊಂದಿ ನೆಟ್ಟಗಾಗಬೇಕೆಂಬ ಅಭಿಪ್ರಾಯವೇ ಸರ್ಕಾರದವರಿಗೆ ನಿಜವಾಗಿ ಇದ್ದಲ್ಲಿ ಶಾರೀರ, ರಸಾಯನ, ಭೂಗರ್ಭಶೋಧನಾದಿ ಪ್ರಕೃತಿಶಾಸ್ತ್ರ ಬೋಧಕರನ್ನು ಇಂಗ್ಲೆಂಡಿನಿಂದ ಕರೆಸಿ ಪ್ರಜೆಗಳಲ್ಲಿ ಪಾಶ್ಚಾತ್ಯರ ನಾಗರಿಕತೆಯು ವ್ಯಾಪಿಸುವುದಕ್ಕೆ ಅನುಕೂಲವಾಗುವಹಾಗೆ ಇದನ್ನು ಇಂಗ್ಲಿಷ್ ಕಾಲೇಜಾಗಿ ಮಾರ್ಪಡಿಸಬೇಕೆಂತಲೂ" ಪ್ರಾರ್ಥಿಸಿ, ತನ್ನ ವಿದ್ಯಾಚಾತುರ್ಯವನ್ನೆಲ್ಲಾ ಉಪಯೋಗಿಸಿ ಚರ್ಚಿಸಿ ಹಲವು ಕಾರಣಗಳನ್ನು ಬರೆದು ರಾಜಪ್ರತಿನಿಧಿಯ ಬಳಿಗೆ ಕಳುಹಿಸಿದನು. ಆ ಪ್ರಾರ್ಥನೆಯು ಆಸ್ಥಾನದಲ್ಲಿಯ ಸಭಿಕರಲ್ಲಿ ವಿದ್ಯಾವಂತರಾಗಿಯೂ ಪ್ರಜೆಗಳ ಹಿತಚಿಂತಕರಾಗಿಯೂ ಇರುವ ಕೆಲವು ಇಂಗ್ಲಿಷರಿಗೆ ತುಂಬ ಸಂತೋಷಕರವಾಗಿದ್ದುದರಿಂದ ಅವರು ಇದಕ್ಕಾಗಿ ತುಂಬ ವ್ಯವಸಾಯಮಾಡಿದರು. ಆದರೂ ಸರ್ಕಾರದವರು ಅದಕ್ಕೆ ಮುಂಚೆಯೇ ಮಾಡಿದ ಏರ್ಪಾಡುಗಳನ್ನು ಅಷ್ಟು ತ್ವರೆಯಲ್ಲಿ ಬದಲಾಯಿಸುವುದು ರಾಜ್ಯಾಂಗಪದ್ಧತಿಗೆ ವಿರೋಧವಾಗಿರುವುದೆಂದು ಭಾವಿಸಿ ಅದನ್ನು ಪೂರ್ತಿಯಾಗಿ ಅಂಗೀಕರಿಸದಿದ್ದರೂ ಪ್ರಜೆಗಳ ಪಕ್ಷದಲ್ಲಿ ಸ್ಥಾಪಿಸಲ್ಪಟ್ಟಿರುವ ಹಿಂದೂಕಾಲೇಜನ್ನು ಪ್ರಸ್ತುತದಲ್ಲಿ ಸಂಸ್ಕೃತಕಾಲೇಜಿ

ಗಾಗಿ ಕಟ್ಟಲ್ಪಡುವ ಕಟ್ಟಡದಲ್ಲಿ ಒಂದು ಭಾಗವಾಗಿರಿಸುವುದಕ್ಕೂ ಆದರ ಹೆಚ್ಚು ಕುಂದುಗಳನ್ನು ವಿಮರ್ಶಿಸುವುದಕ್ಕೂ ಮಾತ್ರ ಒಪ್ಪಿಕೊಂಡರು.

ಇಂಗ್ಲಿಷ್ ಮತಬೋಧಕರು ತಮ್ಮ ಮತಪ್ರಾಬಲ್ಯವನ್ನು ಅಪೇಕ್ಷಿಸಿದಲ್ಲಿ ಮೊತ್ತ ಮೊದಲು ಇಂಗ್ಲಿಷ್ ಸ್ಕೂಲುಗಳನ್ನು ಸ್ಥಾಪಿಸಿ ಪ್ರಜೆಗಳಲ್ಲಿ ಪಾಶ್ಚಾತ್ಯ ವಿದ್ಯಾವ್ಯಾಪನೆಯಾಗುವಂತೆ ಮಾಡುವುದು ಆಗತ್ಯವೆಂದು ತನ್ನ ಅಭಿಪ್ರಾಯವನ್ನು ರಾಮಮೋಹನನು ತಿಳಿಸಿರುವನೆಂದು ಹಿಂದೆ ಹೇಳಿದ್ದೇವೆ. ಈ ಅಭಿಪ್ರಾಯವನ್ನನುಸರಿಸಿ ಕೆಲವರು ಪಾದರಿಗಳು ಅಲ್ಲಲ್ಲಿ ಸಣ್ಣಸಣ್ಣ ಪಾಠಶಾಲೆಗಳನ್ನೇರ್ಪಡಿಸಿದರು. ಶ್ರೀರಾಮಪುರದಲ್ಲಿ ಕೂಡ ಒಂದು ಪಾಠಶಾಲೆ ಸ್ಥಾಪಿತವಾಯಿತು. ಆದರೂ ಈ ಪಾಠಶಾಲೆಗಳಲ್ಲಿ ಹಿಂದೂ ಬಾಲಕರು ಓದುವಂತೆ ಪ್ರೋತ್ಸಾಹ ಕೊಡತಕ್ಕ ಸ್ವದೇಶೀಯರು ಯಾರೂ ಅವರಿಗೆ ಸಹಾಯಕರಾಗದೆ ಇದ್ದುದರಿಂದ ಪ್ರಜೆಗಳು ಆ ಪಾಠಶಾಲೆಯನ್ನಾದರಿಸದೆ ಅವುಗಳೆಲ್ಲವೂ ಪ್ರಾರಂಭದೆಶೆಯಲ್ಲಿಯೇ ಇದ್ದುವು. ಹೀಗಿರುವಲ್ಲಿ 1830 ರಲ್ಲಿ ಡಾಕ್ಟರ್ ಡಫ್ ಎಂಬ ಅಪಾರ ಸುಜ್ಞಾನಪಂಡಿತನಾದ ಪಾದರಿಯೊಬ್ಬನು ಕಲ್ಕತ್ತಾ ಪಟ್ಟಣಕ್ಕೆ ಬಂದನು. ಈತನು ಹಿಂದೂದೇಶಕ್ಕೆ ಬರುವಾಗ್ಗೆ ಹಿಂದೂಮತನಿರ್ಮೂಲನವನ್ನೂ ಕ್ರೈಸ್ತಮತವ್ಯಾಪನೆಯನ್ನೂ ಮಾಡತಕ್ಕುದೇ ತನ್ನ ಜೀವಿತದ ಪರಮಾರ್ಥವೆಂದು ದೃಢಪಡಿಸಿಕೊಂಡು ಏನೇನೋ ಮಾಡಬೇಕೆಂದು ಯೋಚಿಸುತ್ತಿದ್ದನು. ಇಂಡಿಯಾಕ್ಕೆ ಬಂದಮೇಲೆ ಇಲ್ಲಿನ ಪಾದರಿಗಳ ಪ್ರಯತ್ನಗಳೆಲ್ಲವೂ ವ್ಯರ್ಥವಾಗುತ್ತಿರುವುದನ್ನು ನೋಡಿ ಹಿಂದುಗಳಲ್ಲಿ ಪ್ರಮುಖರಾದವರ ಸಹಾಯವಿಲ್ಲದಿದ್ದರೆ ತಾನು ಸಂಕಲ್ಪಿಸಿದ ಕಾರ್ಯವು ನೆರವೇರುವುದು ಕಷ್ಟವೆಂದು ತಿಳಿದುಕೊಂಡನು. ತರುವಾಯ ಕೆಲವು ಬೋಧಕರ ಆಲೋಚನೆಯನ್ನನುಸರಿಸಿ ಕ್ರಮಕ್ರಮವಾಗಿ ರಾಮಮೋಹನನೊಂದಿಗೆ ಸ್ನೇಹವನ್ನು ಬೆಳೆಸಿ ಕೆಲವು ದಿನಗಳಾದಮೇಲೆ ತನ್ನ ಅಭಿಪ್ರಾಯವನ್ನು ತಿಳಿಸಲು ರಾಮಮೋಹನನು ಹೇಗಾದರೂ ಹಿಂದೂಪ್ರಜೆಗಳಿಗೆ ಇಂಗ್ಲಿಷ್ ಭಾಷಾಜ್ಞಾನವುಂಟಾಗುವಂತೆ ಮಾಡಬೇಕೆಂಬ ಕೋರಿಕೆಯುಳ್ಳವನಾಗಿದ್ದುದರಿಂದ ಪಾಠಶಾಲೆಗಳನ್ನು ಸ್ಥಾಪಿಸುವ ಪದ್ಧತಿಗೆ ಆತನನ್ನು ಒಡಂಬಡಿಸಿದನು. ಆದರೆ ಬೈಬಿಲನ್ನು ಒಂದು ಪಾಠವಾಗಿ ಏರ್ಪಡಿಸಬೇಕೆಂತಲೂ, ಹತ್ತುಮಂದಿ ವಾಸಮಾಡುವ ಕಡೆಯಲ್ಲಿ ಈ ಪಾಠಶಾಲೆ ಇಡಬೇಕೆಂತಲೂ, ಹಾಗಿಲ್ಲದೆ ಇದ್ದರೆ ತನ್ನ ಮತವ್ಯಾಪನೆಯು ಉದ್ದೇಶವು ನೆರವೇರಲಾರದೆಂತಲೂ, ಆ ಪಾದರಿಯು ಸಂದೇಹಪಡುತ್ತಿದ್ದನು. ಆದರಮೇಲೆ ರಾಮಮೋಹನನು ಆತನಿಗೆ ಚಿತ್ಪೂರು ರಸ್ತೆಯಬಳಿ ಇರುವ ಬ್ರಹ್ಮಸಮಾಜಮಂದಿರವನ್ನು ಪಾಠಶಾಲೆಗಾಗಿ ಬಿಟ್ಟುಕೊಟ್ಟು, ತಾನು ಇಂಗ್ಲೆಂಡಿಗೆ ಹೊರಡುವುದಕ್ಕೆ ಮುಂಚೆ ಕಟ್ಟಿಸಿದ್ದ ಹೊಸಮನೆಯನ್ನೇ ಬ್ರಹ್ಮಸಮಾಜಮಂದಿರವಾಗಿ ಏರ್ಪಡಿಸಿದನು. ಹೀಗೆ ಪಾಠಶಾಲೆಗೆ ಸ್ಥಳನಿರ್ದೇಶ ಮಾಡಿಕೊಟ್ಟು, ತನ್ನ ಸ್ನೇಹಿತರ ಮಕ್ಕಳಲ್ಲಿ ಐದುಮಂದಿಯನ್ನು ಸೇರಿಸಿ ಪಾಠಶಾಲೆಯನ್ನೇರ್ಪಡಿಸಿದನು. ಕೆಲವು ದಿನಗಳಲ್ಲಿಯೇ 'ಇಂಗ್ಲಿಷ್ ಕಲಿಯಬೇಕೆಂದು ಆಶಿಸಿ ಅನೇಕ

ಬಾಲಕರು ಬಂದು ಸೇರಿದುದರಿಂದ ಪಾಠಶಾಲೆಯು ದಿನದಿನಕ್ಕೂ ಅಭಿವೃದ್ಧಿಯಾಗುತ್ತ ಬಂದಿತು.

ಮುಂದೆ ಬೈಬಿಲ್ಲನ್ನು ಪಾಠವಾಗಿ ಏರ್ಪಡಿಸಬೇಕಾಗಿತ್ತು. ಪಾಠಶಾಲೆಯು ಪೂರ್ತಿಯಾಗಿ ಅಭಿವೃದ್ಧಿಗೆ ಬರಲಿಕ್ಕೆ ಮುಂಚೆಯೇ ಬೈಬಿಲ್ಲನ್ನು ಇಡುವುದು ಯುಕ್ತವಲ್ಲವೆಂದು ಅದಕ್ಕೆ ಮುಂಚೆ ಸುಮ್ಮನೆ ಇದ್ದರು. ಸ್ವಲ್ಪ ಅಭಿವೃದ್ಧಿಗೆ ಬಂದಹಾಗೆಲ್ಲಾ ಡಾಕ್ಟರ್ ಡಫ್ ಎಂಬವರು ರಾಮಮೋಹನನನ್ನು ತೊಂದರೆಮಾಡುತ್ತಾ ಬಂದುದರಿಂದ ಇದಕ್ಕಾಗಿ 1830ನೇ ಜೂಲೈ 13ನೇ ತಾರೀಖನ್ನು ನಿರ್ಣಯಿಸಿದನು. ಗೊತ್ತಾದ ದಿನ ರಾಮಮೋಹನನು ಪಾಠಶಾಲೆಗೆ ಬಂದನು. ಡಾಕ್ಟರ್ ಡಫ್ ರವರು ಬಾಲಕರಿಗೆಲ್ಲಾ ಮತವಿಷಯವಾದ ಬೋಧನೆ ಮಾಡಿ ತಾನು ಮೊದಲು ಬೈಬಿಲ್ಲನಲ್ಲಿ ಸ್ವಲ್ಪಭಾಗ ಓದಿ ಅದನ್ನು ಬಾಲಕರ ಕೈಗೆ ಕೊಟ್ಟನು. ಕೂಡಲೇ ಅನ್ಯಮತಗ್ರಂಥವನ್ನು ನಾವು ಹೇಗೆ ಓದುವೆವೆಂದು ಹುಡುಗರೆಲ್ಲರೂ ಒಗ್ಗಟ್ಟಾಗಿ ಹೇಳಿ ಅವರವರು ಬೇರೆ ಬೇರೆ ಯೋಚಿಸತೊಡಗಿದರು. ಆಗ ರಾಮಮೋಹನನು ಮುಂದಕ್ಕೆ ಬಂದು ಅವರನ್ನು ಕುರಿತು, ನೀವೆಲ್ಲರೂ ಏಕೆ ತೊಂದರೆ ಪಡುತ್ತಿದ್ದೀರಿ? ಹಿಂದೂಶಾಸ್ತ್ರಗಳನ್ನು ಆಮೂಲಾಗ್ರವಾಗಿ ಶೋಧಿಸಿದ ಡಾಕ್ಟರ್ ಹೇಡಿಸ್, ಹೇಮರ್ಸ್ನ ವಿಲ್ಸನ್ ಮೊದಲಾದವರು ಹಿಂದುಗಳಾದರೆ? ನಾನು ಖುರಾನನ್ನು ಅನೇಕವೇಳೆ ಓದಿದೆನು. ಬೈಬಿಲ್ಲನ್ನು ಮೊದಲಿಂದ ಕೊನೆಯತನಕ ಶೋಧಿಸಿದೆನು. ನಾನು ಮಹಮ್ಮದೀಯಮತವನ್ನಾಗಲಿ, ಕ್ರಿಸ್ತರ ಮತವನ್ನಾಗಲಿ ಸ್ವೀಕರಿಸಿದೆನೆ? ನಿಮಗೆ ಸಂಶಯವೇತಕ್ಕೆ? ಅನೇಕಮತಗಳ ಪೂರ್ವೋತ್ತರಗಳನ್ನು ಬಲ್ಲ ಮನುಷ್ಯನು ನಾಗರಿಕತೆಯನ್ನೂ, ಸತ್ಯವಿವೇಚನಾಶಕ್ತಿಯನ್ನೂ ಕಲಿತುಕೊಳ್ಳುವನು. ಅಂತವನಿಗೆ ಒಂದೊಂದುವೇಳೆ ಆ ಮತಗಳಲ್ಲಿನ ಲೋಪಗಳನ್ನೆಲ್ಲಾ ಹೊರಪಡಿಸುವ ಶಕ್ತಿ ಕೂಡ ಉಂಟಾಗುವುದು, ಎಂದು ಹಲವು ಬಗೆಯಿಂದ ಬೋಧಿಸಿ ಅವರ ಮನಸ್ಸನ್ನು ಕುದುರಿಸಿ ಆಮೇಲೆ ಪ್ರತಿದಿನವೂ ಬೈಬಿಲ್ಲನ್ನು ಬೋಧಿಸುವ ವೇಳೆಗೆ ಸರಿಯಾಗಿ ತಾನು ಪಾಠಶಾಲೆಗೆ ಬರುತ್ತಿದ್ದನು. ರಾಮಮೋಹನನು ಇಂಗ್ಲೆಂಡಿಗೆ ಹೋದಮೇಲೆ ಅವನ ಹಿರಿಯಮಗನು ಪಾಠಶಾಲೆಯ ಅಭಿವೃದ್ಧಿಯ ವಿಷಯದಲ್ಲಿ ತುಂಬ ಶ್ರದ್ಧೆಯನ್ನು ತೆಗೆದುಕೊಳ್ಳುತ್ತಿದ್ದನು.

ರಾಮಮೋಹನನು ಇಂಗ್ಲಿಷ್ ವಿದ್ಯಾಭಿವೃದ್ಧಿಯನ್ನು ಕುರಿತು ಮೇಲೆ ಹೇಳಿದಂತೆ ಪ್ರಯತ್ನಮಾಡಿದುದಲ್ಲದೆ ತನ್ನ ಸ್ವಂತ ವೆಚ್ಚದಿಂದ ತಾನೂ ಒಂದು ಪಾಠಶಾಲೆಯನ್ನು ಸ್ಥಾಪಿಸಿ ಅದರಲ್ಲಿ ಗೌರವಸ್ಥರಾದ ಮನೆತನದವರ ಮಕ್ಕಳಿಗೆ ವಿದ್ಯೆ ಕಲಿಸಲು ಏರ್ಪಡಿಸಿದನು. ಇದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಅರುವತ್ತುಮಂದಿ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿದ್ದರು. ಇದು 1820 ರಲ್ಲಿ ಸ್ಥಾಪಿಸಲ್ಪಟ್ಟಿತೆಂದು ಕೆಲವರೂ, 1822 ರಲ್ಲಿ ಸ್ಥಾಪಿಸಲ್ಪಟ್ಟಿತೆಂದು ಕೆಲವರೂ ಹೇಳುವರು.

ಇಂಗ್ಲಿಷ್ ಭಾಷಾಭಿವೃದ್ಧಿಯನ್ನು ಕುರಿತು ಈತನು ಪ್ರಯತ್ನಪಟ್ಟಂತೆಯೇ ದೇಶೀಯ ವಿದ್ಯಾಭಿವೃದ್ಧಿಗೂ ಕೃಷಿ ಮಾಡಿದನು. ಫೋರ್ಟ್ ವಿಲ್ಲಿಯಂ ಕಾಲೇಜಿನ ಉಪಯೋಗಕ್ಕಾಗಿ

2-3 ಗದ್ಯ ಗ್ರಂಥಗಳು ಬರೆಯಲ್ಪಟ್ಟಿದ್ದವು. ಆದರೂ ಅವು ಕಠಿನಶೈಲಿಯಲ್ಲಿದ್ದುದರಿಂದ ಸರ್ವಜನ ಸಮ್ಮತವಾಗಿರಲಿಲ್ಲ. ಇದರಿಂದ ರಾಮಮೋಹನನಿಂದ ಬರೆಯಲುಪಕ್ರಮಿಸಲ್ಪಟ್ಟ ಮತಚರ್ಚೆಗಳಂತೆಯೇ ಮೊಟ್ಟಮೊದಲು ಬಂಗಾಳೀಭಾಷೆಗೆ ಒಳ್ಳೇ ವಚನಶೈಲಿಯು ಲಭಿಸಿತು. ಇಂಗ್ಲಿಷ್ ಭಾಷೆಯ ವ್ಯಾಪನೆಯನ್ನು ನೋಡಿ ಹಿಂದೂ ಕಾಲೇಜಿಗೆ ಅಭಿಮಾನಶಾಲಿಗಳಾದ ಕೆಲವರು ಸಾಮಾಜಿಕರು 1818 ರಲ್ಲಿ ದೇಶಭಾಷಾಭಿವೃದ್ಧಿಯ ಸಂಘ ಒಂದನ್ನೇರ್ಪಡಿಸಿದರು. ಇದರಲ್ಲಿ ಇಂಗ್ಲಿಷ್ ಗ್ರಂಥಗಳು ಬಹುಮಟ್ಟಿಗೆ ಪರಿವರ್ತಿಸಲ್ಪಡುತ್ತಿದ್ದುವು. 1826 ರಲ್ಲಿ ರಾಮಮೋಹನನು ಬಂಗಾಳೀ ಭಾಷೆಯನ್ನು ತಿಳಿಯದ ಇಂಗ್ಲಿಷರ ಉಪಯೋಗಕ್ಕಾಗಿ ಇಂಗ್ಲಿಷಿನಲ್ಲಿ ಒಂದು ವ್ಯಾಕರಣವನ್ನು ಬರೆದು ಕೆಲವು ದಿನಗಳಮೇಲೆ ಗೌಡ ವ್ಯಾಕರಣವೆಂಬ ಹೆಸರಿನಿಂದ ಅದನ್ನು ಸ್ವಭಾಷೆಯಲ್ಲಿ ಬರೆದನು. ಅದನ್ನು ಮುದ್ರಿಸುವುದಕ್ಕೆ ಮುಂಚೆಯೇ ಈತನು ಇಂಗ್ಲೆಂಡಿಗೆ ಹೊರಟುಹೋದದ್ದರಿಂದ ಗ್ರಂಥಕರ್ತರ ಅನುಮತಿ ಪಡೆದು ಇದನ್ನು ಪಾಠಶಾಲಾಗ್ರಂಥಸಮಾಜದವರು ಮುದ್ರಿಸಿದರು. ಆ ಕಾಲದಲ್ಲಿ ಬಂಗಾಳಿಭಾಷೆಯನ್ನು ಕಲಿಯುವವರಿಗೆ ಇದು ಮುಖ್ಯಗ್ರಂಥವಾಗಿದ್ದಿತು. ಇದು 1833 ರಲ್ಲಿ ಮೊದಲನೆಯಸಾರಿ ಮುದ್ರಿಸಲ್ಪಟ್ಟಿತು. 1851 ನೆಯ ವರ್ಷದವರೆಗೆ ಇದು ಆ ಸಮಾಜದವರಿಂದ ನಾಲ್ಕುಸಾರಿ ಅಚ್ಚು ಹಾಕಿಸಲ್ಪಟ್ಟಿತು. ಇವುಗಳಲ್ಲದೆ ರಾಮಮೋಹನನು ಭೂಗೋಳಶಾಸ್ತ್ರವನ್ನೂ, ವಸ್ತುತತ್ವಶಾಸ್ತ್ರವನ್ನೂ ಬರೆದನೆಂದೂ ಹೇಳುವರು. ಆದರೂ ಅವು ಈಗ ಎಲ್ಲಿಯೂ ಕಾಣಬರುವುದಿಲ್ಲ.

ರಾಮಮೋಹನರಾಯನು ಬಂಗಾಳೀ ಭಾಷೆಯಲ್ಲಿ "ಸಂವಾದಕೌಮುದಿ" ಎಂಬ ವಾರ್ತಾಪತ್ರಿಕೆಯೊಂದನ್ನೂ ಪ್ರಕಟಿಸುತ್ತಿದ್ದನೆಂದು ಇದಕ್ಕೆ ಮೊದಲೇ ಹೇಳಿಲ್ಪಟ್ಟಿದೆ. ಇದರಲ್ಲಿ ಮುಖ್ಯವಾಗಿ ಮತವಿಷಯಗಳು ಮಾತ್ರವಲ್ಲದೆ ರಾಜಕೀಯವಿಷಯಗಳು, ಸಂಧಿಸಂಸ್ಕರಣಗಳು, ಚರಿತ್ರೆಗಳು, ವಿದ್ಯಾವಿಷಯಗಳು ಮುಂತಾದ ಅನೇಕ ವಿಷಯಗಳು ಕೂಡ ಬರೆಯಲ್ಪಡುತ್ತಿದ್ದುವು. ಇದರಲ್ಲಿ ಪ್ರಕಟಿಸಲ್ಪಟ್ಟ ಅನೇಕ ವ್ಯಾಸಗಳನ್ನು ಈಚಿನವರು ಗ್ರಂಥರೂಪವಾಗಿ ಪ್ರಕಟಿಸಿದರು. 1854 ರಲ್ಲಿ ಪುಸ್ತಕ ಸಮಾಜದವರು "ವಂಗಪಾಠಾವಳಿ" ಎಂಬುವದೊಂದು ಪುಸ್ತಕವನ್ನು ಪಾಠಶಾಲೆಗಳಲ್ಲಿ ಪಠನೀಯಗ್ರಂಥವಾಗಿ ಏರ್ಪಡಿಸಿದರು. ಅದರಲ್ಲಿ ಸಂವಾದಕೌಮುದಿಯ ಅನೇಕ ವ್ಯಾಸಗಳು ಸಂಗ್ರಹಿಸಲ್ಪಟ್ಟಿದ್ದವು. 1874 ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಟೆಕ್ಸ್ಟ್ ಬುಕ್ಕಾಗಿ ವಿಧಿಸಲ್ಪಟ್ಟ ಬಂಗಾಳಗ್ರಂಥದಲ್ಲಿ ಕೂಡ ಈ ಪತ್ರಿಕೆಯ ಕೆಲವು ವ್ಯಾಸಗಳು ಸೇರಲ್ಪಟ್ಟಿದ್ದುವು. ಈಗ ಆ ಪತ್ರಿಕೆಗಳು ಸಿಕ್ಕುವುದು ಕಷ್ಟ. ಆದಗೂ ಬಾಬೂ ನಾರಾಯಣಬೋಸ್ ಎಂಬಾತನು ತನ್ನ ಕಾಲದಲ್ಲಿ ದೊರೆತಮಟ್ಟಿಗೆ ರಾಮಮೋಹನನಿಂದ ರಚಿಸಲ್ಪಟ್ಟ ಗ್ರಂಥಗಳನ್ನು ಸಂಗ್ರಹಿಸಿ ಒಂದು ಸಂಪುಟವಾಗಿ ಮಾಡಿರುವನು. ಅದರಿಂದ 1823ರಲ್ಲಿ ಒಂದು ಪತ್ರದಲ್ಲಿ "ವಿವಾದ ಭಂಜನ" ಎಂಬ ಶೀರ್ಷಿಕೆ ಬರೆದ ಉಪನ್ಯಾಸವನ್ನು 1824 ರಲ್ಲಿ ಪ್ರತಿಧ್ವನಿ, ಬೆಲೂನ್ (ವಿಮಾನ) ವಿವರಣೆ, ಅಸತ್ಯವಾಕ್ಯ, ದೇಶಚಾರಿತ್ರೆ, ಮೊದಲಾದ ಕೆಲವು ವ್ಯಾಸಗಳು ನಮಗೆ ಲಭಿಸಿವೆ.

1852 ನೆಯ ವರುಷದಲ್ಲಿ ಫಾದರ್ ಲಿಂಗೌ ಎಂಬಾತನು ಬಂಗಾಳೀಭಾಷೆಯಲ್ಲಿಯ ಗ್ರಂಥಗಳನ್ನೆಲ್ಲಾ ತಿಳಿಸುವ ಪುಸ್ತಕ ಒಂದನ್ನು ಬರೆದನು. ಅದರಲ್ಲಿ ಅವನು 1826 ರಲ್ಲಿ ಸಂವಾದಕೌಮುದಿಯು ಪ್ರಾರಂಭಿಸಲ್ಪಟ್ಟಿತೆಂದು ಬರೆದಿರುವನು.

ರಾಮಮೋಹನನಿಂದ ಬಂಗಾಳಿ ಭಾಷೆಗೆ ಮತ್ತೊಂದು ಸಹಾಯ ದೊರಕಿತು. ರಾಮಮೋಹನನು ಸಂಗೀತವಿದ್ಯೆಯಲ್ಲಿ ಸ್ವಲ್ಪಮಟ್ಟಿಗೆ ಪರಿಶ್ರಮವುಳ್ಳವನಾಗಿದ್ದುದರಿಂದ ಬ್ರಹ್ಮಮಂದಿರದ ಪ್ರಾರ್ಥನೆಗಳಿಗೆ ಅನುಕೂಲವಾಗುವಹಾಗೆ ಅನೇಕ ಕೀರ್ತನೆಗಳು, ಕೃತಿಗಳು, ವರ್ಣಗಳು ಮುಂತಾದುವನ್ನು ರಚಿಸಿದನು. ಈತನು ಒಂದೊಂದುವೇಳೆ ತನ್ನ ಸ್ನೇಹಿತರನ್ನು ಸಂತೋಷಪಡಿಸಲಿಕ್ಕೋಸ್ಕರ ತಾನು ರಚಿಸಿದ ಕೀರ್ತನೆಗಳನ್ನು ಹಾಡುತ್ತಿದ್ದನಂತೆ! ರಾಮಮೋಹನನ ಕಾಲದಲ್ಲಿ ಈ ಕೀರ್ತನೆಗಳೆಲ್ಲವೂ ಪುಸ್ತಕರೂಪವಾಗಿ ಎರಡು ಮೂರು ಆವೃತ್ತಿ ಪ್ರಚುರಪಡಿಸಲ್ಪಟ್ಟವು. ಆತನ ಕಾಲದಿಂದೀಚೆಗೂ ಹಲವುವೇಳೆ ಮುದ್ರಿಸಲ್ಪಟ್ಟವು. ಈಗ ಆ ಕೀರ್ತನೆಗಳೆಲ್ಲವೂ ಬಂಗಾಳೀರಾಜ್ಯದಲ್ಲಿ ಆಂಧ್ರದೇಶದಲ್ಲಿ ತ್ಯಾಗರಾಯಕೃತಿಗಳಂತೆ ಉತ್ತಮೋತ್ತಮವಾಗಿ ಪರಿಗಣಿಸಲ್ಪಡುತ್ತಿವೆ. ಅವು ಬ್ರಹ್ಮಮತಾವಲಂಬಿಗಳಲ್ಲಿ ಮಾತ್ರವಲ್ಲ; ಮಿಕ್ಕ ಹಿಂದೂ ಸಂಘಗಳಲ್ಲೆಲ್ಲಾ ಆದರಣೀಯವಾಗಿವೆ. ಭಗವಂತನ ಪ್ರಾರ್ಥನೆಗಳು, ಮರಣವಿಚಾರ, ಪ್ರಪಂಚದ ಅಸ್ಥಿರತ್ವ ಮುಂತಾದ ವಿಷಯಗಳನ್ನು ಕುರಿತು ರಚಿಸಿದ ಕೀರ್ತನೆಗಳಲ್ಲಿ ಈತನ ಅಭಿಪ್ರಾಯಗಳು ತುಂಬಾ ಶ್ಲಾಘ್ಯಗಳಾಗಿವೆ. ಬಂಗಾಳೀ ಭಾಷಾಭಿವೃದ್ಧಿಯನ್ನು ಕುರಿತು ಒಂದು ಗ್ರಂಥವನ್ನು ಬರೆದು ರಾಮಗತನ್ಯಾಯರತ್ನನೆಂಬ ಪಂಡಿತನು ತನ್ನ ಪುಸ್ತಕದಲ್ಲಿ "ರಾಮಮೋಹನರಾಯನು ಸಂಗೀತದಲ್ಲಿ ಘನವಿದ್ವಾಂಸನಾಗಿದ್ದುದು ಮಾತ್ರವಲ್ಲದೆ ಪ್ರಸಿದ್ಧಗಳಾಗಿ ಉತ್ತಮಗಳಾದ ಕೃತಿಗಳನ್ನೂ ಕೂಡ ರಚಿಸಿದನು. ಆತನ ಬ್ರಹ್ಮಪ್ರಾರ್ಥನೆಯೇ ಮೊದಲಾದ ಗೀತಗಳು ಕಲ್ಲುಗಳನ್ನಾದರೂ ಕರಗಿಸತಕ್ಕವುಗಳಾಗಿಯೂ ನಾಸ್ತಿಕರನ್ನು ಆಸ್ತಿಕರನ್ನಾಗಿ ಮಾಡಬಲ್ಲವುಗಳಾಗಿಯೂ ಇವೆ. ದೇಹಾವಸಾನದ ದಿನವನ್ನು ನೆನಪಿಗೆ ತಂದುಕೊ, ಎಂಬ ಅರ್ಥವನ್ನು ಕೊಡುವ ಪಲ್ಲವಿಯೊಂದಿಗೆ ರಚಿಸಿದ ಮನನಬೋಧೆಯ ಗೀತೆಯನ್ನು ಓದುವಾಗಲೆಲ್ಲ ನಮಗೆ ಮೃತ್ಯುಸ್ವರೂಪವು ಕಣ್ಣುಗಳ ಮುಂದೆ ನಿಂತಂತೆಯೇ ಕಾಣುವುದು, ಒಳ್ಳೇ ರಾಗ ತಾಳಗಳಿಂದ ಕೂಡಿದ ಈ ಗೀತೆಗಳು ಬಂಗಾಳದೊಳಗಿನ ಸಂಗೀತ ವಿದ್ವಾಂಸರಿಗೆ ಈಗ ಮೂಲಧನವಾಗಿವೆ," ಎಂದು ಬರೆದಿರುವನು.

ರಾಮಮೋಹನನ ಕಾಲದಲ್ಲಿ ಕಲ್ಕತ್ತೆಯಲ್ಲಿ ದೇಶಭಾಷೆಯಲ್ಲಿ ಪ್ರಕಟಿಸಲ್ಪಡತಕ್ಕ ವೃತ್ತಾಂತಪತ್ರಗಳು ನಾಲ್ಕು ಮಾತ್ರವೇ ಇದ್ದುವು. ಅವುಗಳಲ್ಲೆರಡು ಫಾರಸಿಯಲ್ಲಿಯೂ, ಎರಡು ಬಂಗಾಳೀಭಾಷೆಯಲ್ಲಿಯೂ ಹೊರಡುತ್ತಿದ್ದುವು. ಇಂಗ್ಲಿಷ್ ಪತ್ರಿಕೆಗಳೊಂದೆರಡಿದ್ದರೂ ಅವಕ್ಕೆ ಆಂಗ್ಲೇಯರೇ ಅಧಿಪತಿಗಳಾಗಿದ್ದರು. ರಾಮಮೋಹನನು "ಬೆಂಗಾಲ್ ಹೆರಲ್ಡ್" ಎಂಬ ಇಂಗ್ಲಿಷ್ ವಾರ್ತಾಪತ್ರಿಕೆಗೆ ಅಧಿಪತಿಯಾಗಿದ್ದನೆಂದು "ಎನ್‌ಸೈಕ್ಲೋಪೀಡಿಯಾ" ಎಂಬ ಪ್ರಸಿದ್ಧ ನಿಘಂಟುವಿನ ಎರಡನೆಯ ಸಂಪುಟದಲ್ಲಿ ಬರೆಯಲ್ಪಟ್ಟಿದೆ.

ಆದರೆ ಇದು ನಿಜವೆಂದು ನಂಬಲಿಕ್ಕೆ ತಕ್ಕ ಆಧಾರಗಳು ಯಾವುವೂ ಇಲ್ಲ. ಮತ ವಿಷಯಗಳಲ್ಲಿ ಮಾತ್ರವಲ್ಲ, ರಾಜಕೀಯತಂತ್ರಗಳಲ್ಲಿ ಕೂಡ ಸಂಪೂರ್ಣವಾಗಿ ಕೆಲಸಮಾಡುತ್ತಿದ್ದ ರಾಮಮೋಹನನು ಪತ್ರಿಕೆಗಳಿಂದಲಾಗುವ ಲಾಭಗಳನ್ನೂ, ಅವುಗಳಿಗೆ ಸ್ವಾತಂತ್ರ್ಯವನ್ನು ಕೊಡುವುದರಿಂದುಂಟಾಗುವ ಸತ್ಫಲಗಳನ್ನೂ ಆಗಲೇ ತಿಳಿದುಕೊಂಡು ಸರಕಾರದವರಿಂದುಂಟಾಗುವ ಲಾಭಗಳಿಗೆ ಕೃತಜ್ಞತೆಯನ್ನು ತೋರಿಸುತಿದ್ದನು. ಒಂದೊಂದುವೇಳೆ ಪ್ರಭುತ್ವದಲ್ಲಿಯ ಲೋಪಗಳನ್ನು ಕುರಿತು ಚರ್ಚಿಸುತ್ತಾ ವ್ಯಾಸಗಳನ್ನು ಬರೆಯುತ್ತಾ ಬಂದನು. ಈತನು ಇಂಗ್ಲೆಂಡಿಗೆ ಹೋದಾಗ ಅಲ್ಲಿ ಹಿಂದೂ ದೇಶದ ರಾಜ್ಯಾಂಗಸಂಸ್ಕಾರಗಳನ್ನು ಕುರಿತು ಚರ್ಚಿಸಿದ ವಿಷಯಗಳನ್ನು ಮುಂದಿನ ಪ್ರಕರಣದಲ್ಲಿ ವಿವರಿಸುವೆವು. ಈತನು ಕಲ್ಕತ್ತೆಯಲ್ಲಿದ್ದಾಗ ಒಂದುಸಾರಿ ಕಲ್ಕತ್ತಾ ಜರ್ನಲ್ ಎಂಬ ಇಂಗ್ಲಿಷ್ ಪತ್ರಿಕಾಧಿಪತಿಯಾದ ಬಕಿಂಗ್‌ಹ್ಯಾಂ ಎಂಬುವನ ಮೇಲೆ ಸರಕಾರದವರು ತಮ್ಮನ್ನು ಆಕ್ಷೇಪಿಸಿ ಬರೆದನೆಂಬ ತಪ್ಪನ್ನು ಹೊರಿಸಿ ಆತನನ್ನು ಇಂಡಿಯಾದಿಂದ ಅಟ್ಟಿಬಿಟ್ಟದ್ದಲ್ಲದೆ 1823ನೆಯ ಮಾರ್ಚಿ 11ರಲ್ಲಿ ವಿದೇಶ ಸ್ವದೇಶದಲ್ಲಿನ ವೃತ್ತಾಂತಪತ್ರಿಕೆಗಳು ಪ್ರಭುತ್ವದ ಲೋಪಗಳನ್ನು ಪ್ರಕಟಿಸಬಾರದೆಂಬ ಶಾಸನವನ್ನು ವಿಧಿಸಿ ಇದಕ್ಕೆ ಎಷ್ಟುಮಂದಿ ಆಕ್ಷೇಪಿಸಿದರೂ ವಿಶ್ವಾಸಿಸದೆ ಹೋದರು.

ಮೇಲೆ ಹೇಳಿದ ಶಾಸನವನ್ನು ನೋಡಿ ರಾಮಮೋಹನನು 27 ಪುಟಗಳುಳ್ಳ ವಿಜ್ಞಾಪನೆಯನ್ನು ಬರೆದು ಕಲ್ಕತ್ತಾ ಸರಕಾರದವರಿಗೆ ಕಳುಹಿಸಿದನು. ಅವರೆಲ್ಲರೂ ಒಂದಾಗಿ ತಮ್ಮ ಶಪಥದಂತೆ ಅದನ್ನು ಅಂಗೀಕರಿಸದೆ ಹೋಗಲು, ರಾಮಮೋಹನನು ಅದನ್ನು ಇಂಗ್ಲೆಂಡ್ ರಾಜಸ್ಥಾನಕ್ಕೆ ಕಳುಹಿಸಿದನು. ಅಧಿಕಾರಿಗಳ ವಿರುದ್ಧಾಭಿಪ್ರಾಯವನ್ನೂ, ಪತ್ರಿಕೆಗಳಿಗೆ ಸ್ವಾತಂತ್ರ್ಯವನ್ನು ಕೊಡುವುದರಿಂದ ಅವರ ದುರ್ಮಾರ್ಗಗಳಿಗೆ ಉಂಟಾಗುವ ಅಭ್ಯಂತರಗಳನ್ನೂ, ಪತ್ರಿಕಾಮೂಲಕ ಪ್ರಜೆಗಳ ಅಭಿಪ್ರಾಯಗಳನ್ನು ತಿಳಿದುಕೊಳ್ಳದೆ ಇದ್ದ ಪೂರ್ವರಾಜರ ಕಾಲದಲ್ಲಿ ಉಂಟಾಗುತ್ತಿದ್ದ ತೊಂದರೆಗಳನ್ನೂ, ಸರ್ಕಾರದವರ ಅಕ್ರಮಪ್ರವರ್ತನಗಳನ್ನು ಪತ್ರಿಕೆಯ ಮೂಲಕ ತಿಳಿಸುವುದರಿಂದ ಪ್ರಭುತ್ವದವರಿಗೆ ಉಂಟಾಗುವ ಲಾಭಗಳನ್ನೂ, ಪ್ರಜೆಗಳು ತಮ್ಮ ಕಷ್ಟ ನಿಷ್ಠುರಗಳನ್ನು ಸುಲಭವಾಗಿ ಪತ್ರಿಕಾರೂಪದಿಂದ ಹೊರಪಡಿಸುವ ಸ್ವಾತಂತ್ರ್ಯವನ್ನು ಪಡೆಯುವುದರಿಂದ ಅವರಿಗೆ ಉಂಟಾಗುವ ಲಾಭಗಳನ್ನೂ, ನ್ಯಾಯಪರಿಪಾಲನೆಗೆ ಪತ್ರಿಕೆಗಳೆಷ್ಟರಮಟ್ಟಿಗೆ ಸಾಧಕಗಳಾಗಿವೆ ಎಂಬುದನ್ನೂ, ಪಾಶ್ಚಾತ್ಯರು ತಮ್ಮ ದೇಶದಲ್ಲಿ ಪತ್ರಿಕಾ ಸ್ವಾತಂತ್ರ್ಯವನ್ನು ಪಡೆದಿರುವುದರಿಂದ ದೊರೆತನದವರ ಲೋಪಗಳನ್ನು ತಿಳಿಸಿ, ಅವರು ಹೊಂದುತ್ತಿರುವ ಮೇಲ್ಮೆಗಳನ್ನೂ, ಇದರಿಂದ ಅಲ್ಲಿಯ ಸರ್ಕಾರದವರಿಗೆ ಉಂಟಾಗುತ್ತಿರುವ ಪ್ರಜಾವಶೀಕರಣವನ್ನೂ, ಹಿಂದೂಜನರಿಗೆ ಪತ್ರಿಕಾಸ್ವಾತಂತ್ರ್ಯವನ್ನನುಗ್ರಹಿಸಿದ ಮಾರ್ಕ್ವಿಸ್ ಆಫ್ ಹೇಸ್ಟಿಂಗ್ಸ್ ಕಾಲದಲ್ಲಿ ಪ್ರಜೆಗಳು ಆತನನ್ನು ಹೇಗೆ ಪ್ರೀತಿಸುತ್ತಿದ್ದರೆಂಬುದನ್ನು ಮೊದಲಾದ ವಿಷಯಗಳನ್ನು ಕುರಿತು ತುಂಬಾ ವ್ಯವಹಾರ ಜ್ಞಾನವನ್ನುಪಯೋಗಿಸಿ ಬರೆದನು. ಇಂಗ್ಲಿಷ್ ಭಾಷಾಪಂಡಿತರು ಆತನ ಗ್ರಂಥದ

ಪ್ರಥಮಸಂಪುಟದಲ್ಲಿರುವ ಆ ವಿಜ್ಞಾಪನೆಯನ್ನು ಓದಿ, ಮಹಾತ್ಮನಾದ ರಾಜಾರಾಮಮೋಹನರಾಯನ ದೇಶಭಕ್ತಿಯನ್ನೂ, ಸ್ವಾತಂತ್ರ್ಯಾಭಿಲಾಷೆಯನ್ನೂ, ಬುದ್ಧಿವಿಶೇಷವನ್ನೂ ತಿಳಿದುಕೊಳ್ಳುವರಾಗಬೇಕೆಂದು ಅಪೇಕ್ಷಿಸಿದರು. ಬಕಿಂಗ್ಹ್ಯಾಂ ಎಂಬುವರು ಅಧಿಕಾರಿಗಳೆಲ್ಲಾ ನಿರ್ನಿಮಿತ್ತವಾಗಿ ಈತನ ಮೇಲೆ ಮತ್ಸರವನ್ನಿಡುವರೆಂಬುದಕ್ಕೆ ಒಂದು ದೃಷ್ಟಾಂತ ಕೊಟ್ಟರು. ಈತನು 1823 ನೇ ಇಸವಿ ಆಗಸ್ಟು 4ನೇ ತಾರೀಖಿನಲ್ಲಿ ಇಂಗ್ಲೆಂಡಿನಲ್ಲಿ ಪ್ರಕಟಿತವಾದ "ಕ್ರಿಶ್ಚಿಯನ್ ರೀಫಾರ್ಮರ್" ಎಂಬ ಪತ್ರದಲ್ಲಿ ಹೀಗೆ ಬರೆದನು. "ರಾಮಮೋಹನನು ಪತ್ರಿಕಾಸ್ವಾತಂತ್ರ್ಯ ವಿಷಯವಾಗಿ ಸರಕಾರದವರ ಲೋಪಗಳನ್ನು ಹೊರಪಡಿಸದೆ ಸುಮ್ಮನೆ ಇದ್ದಲ್ಲಿ ಅವರು ಅವನಿಗೆ ದೊಡ್ಡ ಬಹುಮಾನವನ್ನಾಗಲಿ, ಒಳ್ಳೆಯ ಅಧಿಕಾರವನ್ನಾಗಲಿ ಕೊಟ್ಟು ಗೌರವಿಸುತ್ತಿದ್ದರು. ತನ್ನ ಆಸ್ತಿಯಲ್ಲಿ ಸುಮಾರು ಮುಕ್ಕಾಲುಪಾಲನ್ನು ದೇಶೋಪಕಾರಕ್ಕಾಗಿ ವೆಚ್ಚಮಾಡಿದ ಈ ಉದಾರಗುಣ ಸಂಪನ್ನನಿಗೆ ಪರದ್ರವ್ಯಾಪೇಕ್ಷೆ ಹೇಗುಂಟಾಗುವದು ? ಸ್ವಾತಂತ್ರ್ಯಾಭಿಲಾಷಿಯಾದ ಇವನಿಗೆ ಎಷ್ಟು ವೇತನವನ್ನು ಕೊಟ್ಟರೆ ಏನು ? ಸೇವಾವೃತ್ತಿಗೆ ಇವನ ಮನಸ್ಸು ಹೇಗೆ ಒಡಂಬಡುವುದು !" ಮತ್ತು ಕಲ್ಕತ್ತೆಯಲ್ಲಿ 'ಟೈಂಸ್' ಎಂಬ ಪತ್ರಿಕೆಗೆ ಅಧಿಕಾರಿಯಾಗಿದ್ದ ಎಂ. ಡಿ. ಏಕಾಸ್ಟಾ. ಎಂಬ ಫ್ರೆಂಚನು ತನ್ನ ಪತ್ರಿಕೆಯಲ್ಲಿ ಹೀಗೆ ಬರೆದಿರುವನು. "ಈ ಕಾಲದಲ್ಲಿ ಹೆಸರಿಗೆಮಟ್ಟಿಗೆ ದೇಶಾಭಿಮಾನಿಗಳೆನ್ನಿಸಿಕೊಳ್ಳುವವರ ಹಾಗೆ ರಾಮಮೋಹನನು ಕೂಡ ಕಾಲಕ್ಕೆ ತಕ್ಕಂತೆ ವರ್ತಿಸುವನಾದರೆ ಅವನು ಸಾಮಾನ್ಯನಾದ ರಾಮಮೋಹನನೆಂತಲೇ ಹೇಳಬಹುದು. ಆದರೆ ಈಗ ಹಾಗೆ ಹೇಳುವುದು ಸಮಂಜಸವಲ್ಲ."

1828 ನೇ ವರ್ಷದಲ್ಲಿ, ಬಂಗಾಳಾ ಸರ್ಕಾರದವರಿಗೂ ಪ್ರಜೆಗಳಿಗೂ ಒಂದು ವಿವಾದ ಸಂಭವಿಸಿತು, ಅದು ಯಾವುದೆಂದರೆ, ಕಾರನ್ವಾಲಿಸ್ ಪ್ರಭುವು 1793 ರಲ್ಲಿ ಭೂಮಿಗಳಿಗೆ ಶಾಶ್ವತವಾದ ಕಂದಾಯಗಳನ್ನೇರ್ಪಡಿಸುವ ಪದ್ಧತಿಯನ್ನು ನೇಮಿಸಿದಾಗ ಸ್ವಾಧೀನವಲ್ಲದ ಪ್ರದೇಶಗಳನ್ನು ಯಾರಾದರೂ ಅನುಭವಿಸುತ್ತಿದ್ದರೆ ಕಲೆಕ್ಟರು ಆ ವಿಷಯವನ್ನು ಕುರಿತು ನ್ಯಾಯಸ್ಥಾನದಲ್ಲಿ ವಿವಾದವನ್ನು ಹೂಡಿ ಅಕ್ರಮವಾಗಿ ಅನುಭವಿಸುತ್ತಿರುವನೆಂದು ದೃಢಪಡಿಸಿ, ಅವರ ತೀರ್ಮಾನವನ್ನನುಸರಿಸಿ ಕೆಲಸಮಾಡುತ್ತಿರಬೇಕೆಂದು ವಿಧಿಸಿದನು. ಸರ್ಕಾರದವರು 1828 ರಲ್ಲಿ ಇವುಗಳನ್ನೆಲ್ಲಾ ರದ್ದುಪಡಿಸಿ ಇಂಥಾ ಭೂಮಿಗಳನ್ನು ವಿಮರ್ಶಿಸುವುದಕ್ಕೂ ತೆರಿಗೆಯನ್ನು ನಿರ್ಣಯಿಸುವುದಕ್ಕೂ ಅಥವಾ ಆ ಭೂಮಿಯನ್ನು ತಮ್ಮ ಸ್ವಾಧೀನಪಡಿಸಿಕೊಳ್ಳುವುದಕ್ಕೂ, ಅದು ಅಕ್ರಮವೆಂದು ಹೇಳುವವರ ಫಿರ್ಯಾದನ್ನು ಕೇಳುವುದಕ್ಕೂ, ತೀರ್ಮಾನಮಾಡುವುದಕ್ಕೂ, ಕಲೆಕ್ಟರಿಗೇನೆ ಅಧಿಕಾರಕೊಟ್ಟು ಆತನ ತೀರ್ಮಾನವನ್ನು ಒಪ್ಪದವರು ಕಮಿಷನರ ಬಳಿಯಲ್ಲಿ ಹೇಳಿಕೊಳ್ಳತಕ್ಕದ್ದೆಂತಲೂ, ಆತನ ತೀರ್ಮಾನವೇ ಕಡೆಯ ನಿರ್ಣಯವೆಂತಲೂ ಒಂದು ಹೊಸಶಾಸನವನ್ನೇರ್ಪಡಿಸಿದರು. ಇದರಿಂದ ಪ್ರಜೆಗಳಿಗೆಲ್ಲಾ ಬಹಳ ತೊಂದರೆಯಾದುದರಿಂದ ಇದನ್ನು ಬದಲಾಯಿಸಲು ಯೋಚಿಸಬೇಕೆಂದು ಬಂಗಾಳಾ, ಒರಿಸ್ಸಾ, ಬಿಹಾರ್

ಜಿಲ್ಲೆಗಳವರೂ, ಮತ್ತೆ ಕೆಲವರೂ ಸೇರಿ ಒಂದು ಸಂಘವನ್ನು ಮಾಡಿಕೊಂಡು ರಾಮಮೋಹನನನ್ನು ಆಶ್ರಯಿಸಿದರು. ಪ್ರಜಾಕ್ಷೇಮಚಿಂತನೆಯೇ ತನ್ನ ನೈಜಗುಣವಾಗಿ ತಿಳಿದ ರಾಮಮೋಹನನು ಒಡನೆಯೇ ಅದನ್ನೊಪ್ಪಿಕೊಂಡು ಸರ್ಕಾರದವರಿಗೆ ಪ್ರಜೆಗಳ ಪಕ್ಷವಾಗಿ ಒಂದು ಮನವಿಯನ್ನು ಬರೆದನು. ಅದರಲ್ಲಿ 1793 ರಿಂದ 35 ವರ್ಷಗಳ ತನಕ ಏಕರೀತಿಯಾಗಿ ನಡೆಯುತ್ತ ಬಂದ ಆಚರಣೆಯನ್ನು ತಪ್ಪಿಸುವುದು ಧರ್ಮವಲ್ಲವೆಂತಲೂ, ಇದರಲ್ಲಿ ಪ್ರಜೆಗಳಿಗೆ ಕ್ಷೇಮವಿದ್ದಲ್ಲಿ ಬದಲಾಯಿಸುವುದು ಯುಕ್ತವೆಂತಲೂ, ಹಾಗಲ್ಲದೆ ಯಾವ ಅಧಿಕಾರಿಯು ತೆರಿಗೆಯನ್ನು ವಿಧಿಸಿದನೋ ಆತನೇ ತಾನು ಮಾಡಿದ ಕೆಲಸಕ್ಕೆ ಉತ್ತರವಾದಿಯಾಗಿರುವುದಕ್ಕೆ ಬದಲಾಗಿ ವಿಚಾರಣೆ ಕರ್ತನು ಹೇಗೆ ಆಗುವನೆಂತಲೂ, ಆತನೇ ವಿಚಾರಣಾ ಕರ್ತನಾದಲ್ಲಿ ತಾನು ಇದಕ್ಕೆ ಮುಂಚೆ ವಿಧಿಸಿದ ತೆರಿಗೆಯನ್ನು ಈಗ ಅಕ್ರಮವೆಂದು ಹೇಳುವುದು ಸಾಧಾರಣವಾಗಿ ಸಂಭವಿಸಬಾರದೆಂತಲೂ, ಬಡವನಾದ ಪ್ರತಿ ಜಮೀನ್ದಾರನೂ ಕಮಿಷನರ ಬಳಿಗೆ ಹೋಗುವುದು ಸುಲಭಸಾಧ್ಯವಲ್ಲವೆಂತಲೂ ಅನೇಕ ಹೇತುಗಳನ್ನುದಾಹರಿಸಿ ಬರೆದು ರಾಜಪ್ರತಿನಿಧಿಯ ಬಳಿಗೆ ಕಳುಹಿಸಿದನು. ಅವರು ಇದರಮೇಲೆ ತತ್ಕಾಲದಲ್ಲಿ ತಮ್ಮ ಸಮ್ಮತಿಯನ್ನು ಹೊರಪಡಿಸಿ ಈ ಶಾಸನವನ್ನು ಕೆಲವುಕಾಲದತನಕ ನಿಲ್ಲಿಸಿದರೂ ಪೂರ್ತಿಯಾಗಿ ತೆಗದು ಹಾಕಲಿಲ್ಲ. ರಾಮಮೋಹನನು ಇಂಗ್ಲೆಂಡಿಗೆ ಹೋದಾಗಕೂಡ ಅಲ್ಲಿನ ಪ್ರಮುಖರ ಸಂಗಡಲೂ ರಾಜ್ಯಾಂಗ ಸ್ಥಳಗಳಲ್ಲಿಯೂ ಈ ವಿಷಯವಾಗಿ ಬಹಳವಾಗಿ ಉಪನ್ಯಾಸಮಾಡಿ ಈ ಅಕ್ರಮವನ್ನು ತೊಲಗಿಸಲಿಕ್ಕಾಗಿ ತುಂಬಾ ಕೃಷಿಮಾಡಿದನು. ಆದರೂ ಸರ್ಕಾರದವರು ಆ ಶಾಸನವನ್ನು ತೆಗೆದುಹಾಕಲಿಲ್ಲ. ಆ ಕಾನೂನೇ ಇದುವರೆಗೂ ಆಚರಣೆಯಲ್ಲಿರುವುದೆಂದೂ ತಿಳಿಯಬರುತ್ತದೆ.

**1829** ನೆಯ ವರ್ಷದಲ್ಲಿ ಚೀನಾ ಮತ್ತು ಹಿಂದೂ ದೇಶಗಳಿಗೆ ಜರುಗುವ ವ್ಯಾಪಾರವೆಲ್ಲವೂ ಈಸ್ಟಿಂಡಿಯಾ ಕಂಪೆನಿಯವರ ವಶದಲ್ಲಿಯೇ ಇರುವುದು ಧರ್ಮವಲ್ಲವೆಂತಲೂ, ಪಶ್ಚಿಮಖಂಡವಾಸಿಗಳಿಗೆ ಹಿಂದೂದೇಶದಲ್ಲಿ ಒಕ್ಕಲುತನ ಮಾಡಲಿಕ್ಕೆ ಅಪ್ಪಣೆ ಕೊಡಬೇಕೆಂತಲೂ ಒಂದು ಚರ್ಚೆ ಆರಂಭಿಸಲ್ಪಟ್ಟಿತು. ಈ ವಿಷಯವಾಗಿ ರಾಜರ ಸನ್ನಿಧಿಗೆ ಒಂದು ಬಿನ್ನವತ್ತಳೆಯನ್ನು ಬರೆದು ಕಳುಹುವುದಕ್ಕೆ 1829 ನೇ ಜನವರಿ ಹದಿನೈದರಲ್ಲಿ ಕಲ್ಕತ್ತೆಯ ಟೌನ್‌ಹಾಲಿನಲ್ಲಿ ಬಹಿರಂಗವಾಗಿ ಒಂದು ಸಭೆ ಕೂಡಿತು. ಅದರಲ್ಲಿ ರಾಮಮೋಹನನು ಕೂಡ ಇದ್ದು ಯೂರೋಪಿನವರು ವಸತಿಗಳನ್ನು ಮಾಡಿಕೊಂಡು ಹಿಂದೂ ದೇಶವನ್ನು ಮಾತೃಭೂಮಿಯಾಗಿ ಮಾಡಿಕೊಂಡಲ್ಲಿ ಹಿಂದೂ ಪ್ರಜೆಗಳಿಗೆ ಎಲ್ಲಾ ವಿಷಯಗಳಲ್ಲಿಯೂ ಲಾಭವೇ ಹೊರತು ಯಾವ ನಷ್ಟವೂ ಇಲ್ಲವೆಂದು ಸಂಕ್ಷೇಪವಾಗಿ ಉಪನ್ಯಾಸಮಾಡಿದನು. ಮತ್ತು ಇಂಗ್ಲೆಂಡಿನಲ್ಲಿ ಇದನ್ನು ಕುರಿತು ಸರ್ಕಾರದವರು ರಾಮಮೋಹನನಿಂದ ಒಂದು ಸಾಕ್ಷ್ಯವನ್ನು ತೆಗೆದುಕೊಂಡರು. ಆ ವಿವರಣೆಯನ್ನು ಮುಂದಿನ ಪ್ರಕರಣದಲ್ಲಿ ತಿಳಿಯಬಹುದು.

1829-1830 ನೆಯ ವರ್ಷಗಳಲ್ಲಿ ಹಿಂದುಗಳ ದಾಯಭಾಗಕ್ಕೆ ಸಂಬಂಧಪಟ್ಟ ಧರ್ಮಶಾಸ್ತ್ರವನ್ನು ಕುರಿತ ವಿವಾದ ಒಂದುಂಟಾಯಿತು. ಅದು ಮಕ್ಕಳ ಮತ್ತು ಮೊಮ್ಮಕ್ಕಳ ಸಂಮತವಿಲ್ಲದೆಯೇ ತಂದೆಯು ತನ್ನ ಆಸ್ತಿಯನ್ನು ಮತ್ತಾವ ವಿಧವಲ್ಲಿಯಾದರೂ ವಿನಿಯೋಗಿಸಬಹುದೇ ? ಕೂಡದೇ ? ಎಂಬ ವಿಷಯವು 1816 ನೇ ವರ್ಷದ ತನಕ ಎಲ್ಲಾ ನ್ಯಾಯಸ್ಥಾನದವರೂ ತಂದೆಯ ಅಧಿಕಾರವನ್ನೇ ಒಪ್ಪಿಕೊಳ್ಳುತ್ತಿದ್ದರು. ಆದರೂ 1829-1830 ನೆಯ ವರ್ಷಗಳಲ್ಲಿ ಸುಪ್ರಿಂ ಕೋರ್ಟಿಗೆ ಪ್ರಧಾನ ನ್ಯಾಯಾಧಿಕಾರಿಯಾಗಿದ್ದ 'ಸರ್ ಚಾರ್ಲೆಸ್ ಎಡ್ವರ್ಡ್ ಗ್ರೇ' ಎಂಬಾತನು ಪೂರ್ವದ ಸಿದ್ಧಾಂತಗಳನ್ನೆಲ್ಲಾ ಖಂಡಿಸಿ ತಂದೆಯ ಸ್ವಾತಂತ್ರ್ಯಕ್ಕೆ ವಿರೋಧವಾಗಿ ಒಂದು ತೀರ್ಮಾನವನ್ನು ಬರೆದನು. ಅದರಮೇಲೆ ರಾಮಮೋಹನನನ್ನು ನಾಯಕನನ್ನಾಗಿಮಾಡಿಕೊಂಡು ಹಿಂದುಗಳೆಲ್ಲರೂ ಆ ತೀರ್ಮಾನವು ತುಂಬ ಅನ್ಯಾಯವಾದುದೆಂತಲೂ, ಹಿಂದೂ ಶಾಸ್ತ್ರಗಳಿಗೆ ವಿರೋಧವಾದುದೆಂತಲೂ, ವಾದಿಸತೊಡಗಿದರು. ರಾಮಮೋಹನನು ಇದರಿಂದ ಉಂಟಾಗುವ ಅನರ್ಥಗಳನ್ನು ವಿಶದಪಡಿಸಿ ಹಲವು ಗ್ರಂಥಗಳ ದೃಷ್ಟಾಂತಗಳಿಂದ ಒಂದು ಗ್ರಂಥವನ್ನು ಬರೆದು ಪ್ರಚುರಿಸಿದನು. ಆ ಕಲ್ಲೋಲವನ್ನು ನೋಡಿ ಸರ್ಕಾರದವರು ಮರಳಿ ಪೂರ್ವದ ವಿಧಿಯನ್ನೇ ಆಚರಣೆಗೆ ತಂದರು.

ರಾಮಮೋಹನನು ಅದಕ್ಕೆ ಮುಂಚೆ ಮಾಡಿದ ದೇಶೋಪಕಾರ ಕಾರ್ಯಗಳಿಂದಲೂ, ಇನ್ನುಮುಂದೆ ಇಂಗ್ಲೆಂಡಿನಲ್ಲಿ ಮಾಡುವ ಕಾರ್ಯಗಳಿಂದಲೂ ಆತನಿಗೆ ರಾಜಕೀಯ ವ್ಯವಹಾರಗಳಲ್ಲಿಯೂ, ದೇಶೋನ್ನತಿಗೆ ಸಂಬಂಧಿಸಿದ ವಿಷಯಗಳಲ್ಲಿಯೂ, ತುಂಬಾ ಅನುಭವವಿತ್ತೆಂದು ಸ್ಪಷ್ಟವಾಗುವುದು. ಆದರೆ ಆ ಮಹಾತ್ಮನ ಬುದ್ಧಿಯನ್ನೂ ಲೌಕಿಕ ಜ್ಞಾನವನ್ನೂ, ರಾಜತಂತ್ರ ನೈಪುಣ್ಯವನ್ನೂ ಪೂರ್ತಿಯಾಗಿ ತೋರಿಸಲಿಕ್ಕೆ ಆ ಕಾಲದಲ್ಲಿ ಸಾಕಾದಷ್ಟು ಅವಕಾಶಗಳು ಇರಲಿಲ್ಲ. ಎಂತಹ ರಾಜತಂತ್ರ ಪ್ರವೀಣನಿಗಾದರೂ ತನ್ನ ಯೋಗ್ಯತೆಯನ್ನು ಪ್ರಕಾಶಪಡಿಸಲಿಕ್ಕೆ ಸ್ವಲ್ಪಮಟ್ಟಿಗೆ ಕಾಲದ ಸಹಾಯವು ಅಗತ್ಯವಾಗಿರುವುದು. ರಾಮಮೋಹನನಿಗೆ ಆಗ ಇಂತಹ ಅವಕಾಶವು ದೊರೆತಿದ್ದರೆ ಇನ್ನೂ ಎಂತಹ ಕಾರ್ಯಗಳನ್ನು ಮಾಡಿತೋರುತಿದ್ದನೋ ಊಹಿಸಲಾರೆವು. ರಾಮಮೋಹನನು ಒಳ್ಳೇ ರಾಜತಂತ್ರಪ್ರವೀಣನೆಂಬುದಕ್ಕೆ ಆ ಕಾಲದಲ್ಲಿ ಜರಗುತ್ತಿದ್ದ ವಿದೇಶರಾಜ್ಯ ತಂತ್ರಗಳಲ್ಲಿ ಆತನು ತೋರಿಸಿದ ಆಸಕ್ತಿಯೇ ದೃಷ್ಟಾಂತವಾಗಿದೆ. ರಾಮಮೋಹನನು 1821 ರಲ್ಲಿ ಸ್ಪೇನ್ ದೇಶದಲ್ಲಿ ಪ್ರಜಾಪ್ರತಿನಿಧಿಸಭೆ ಸ್ಥಾಪಿಸಲ್ಪಟ್ಟ ಸುದ್ದಿಯನ್ನು ತಿಳಿದ ಕೂಡಲೆ ತುಂಬ ಸಂತೋಷಿಸಿ ಕಲ್ಕತ್ತೆಯ ಟೌನ್‌ಹಾಲಿನಲ್ಲಿ ತನ್ನ ಸ್ನೇಹಿತರಿಗೆಲ್ಲ ಒಂದು ಔತನವನ್ನು ಮಾಡಿಸಿದನು. ಪೋರ್ಚುಗಲ್ಲಿನಲ್ಲಿ ಪಾರ್ಲಿಮೆಂಟ್ ಏರ್ಪಟ್ಟಿತೆಂದು ಕೇಳಿದಾಗ ಸುದಾ ಹಾಗೆಯೇ ಮಾಡಿದನು. ತುರ್ಕಿಯವರಿಗೂ, ಗ್ರೀಕರಿಗೂ, ಯುದ್ಧವು ನಡೆಯುತ್ತಿರುವಾಗ ಆ ಯುದ್ಧವರ್ತಮಾನಗಳನ್ನು ಆಗಾಗ್ಗೆ ತಿಳಿದುಕೊಳ್ಳುತ್ತಾ 'ಗ್ರೀಕರು ಸ್ವಾತಂತ್ರ್ಯವನ್ನು ಪಡೆಯಲಿ'; ಎಂದು ಕೋರುತ್ತಿದ್ದನು. 1821 ರಲ್ಲಿ ನೇಪಲ್ಸಿನವರು ಸ್ವಾತಂತ್ರ್ಯ

ಕ್ಕೋಸ್ಕರ ಹೊಡೆದಾಡುತ್ತಿದ್ದರು. ಆ ಸಂದರ್ಭದಲ್ಲಿ ಒಂದು ದಿನ ರಾಮಮೋಹನನು ಬಕಿಂಗ್‌ಹ್ಯಾಂ ಎಂಬ ಸ್ನೇಹಿತನ ಬಳಿಗೆ ಹೋಗುತ್ತಿರುವಾಗ ಸ್ವಾತಂತ್ರ್ಯಪಕ್ಷದವರಿಗೆ ಅಪಜಯವಾಯಿತೆಂಬ ವರ್ತಮಾನವು ತಿಳಿಯಿತು. ಆದಕ್ಕೆ ಆತನು ಬಹುಚಿಂತಿಸಿ 'ಈ ಸುದ್ದಿಯು ನನಗೆ ಬಹಳ ವ್ಯಸನಕರವಾಗಿದೆ' ಎಂದು ಒಂದು ಪತ್ರವನ್ನು ಬಕಿಂಗ್‌ಹ್ಯಾಂರವರಿಗೆ ಬರೆದು ಕಳುಹಿ ವಿಚಾರಮಾಡುತ್ತಾ ಕುಳಿತನು. ಈ ಅಕ್ಷರಗಳನ್ನು ಬರೆಯುತ್ತಿದ್ದಾಗ ಆತನ ಮನಸ್ಸಿನಲ್ಲಿ ಎಂತಹ ಯೋಚನೆಗಳು ಸಮುದ್ರದ ಅಲೆಗಳಂತೆ ಹೊರಳಿ ಹೊರಳಿ ಪ್ರವಹಿಸುತ್ತಿದ್ದುವೋ ನಾವು ಹೇಳಲಾರೆವು. 1830 ರಲ್ಲಿ ಫ್ರಾನ್ಸ್‌ರಾಜ್ಯದ ಪ್ರಭುತ್ವವು ಮಾರ್ಪಟ್ಟಾಗ ತುಂಬಾ ಸಂತೋಷಿಸಿದನು. ಆ ಸುದ್ದಿಯನ್ನು ಕೇಳುವಾಗ ಇವನು ಇಂಗ್ಲೆಂಡಿಗೆ ಹೊರಡುವ ಹೊಗೆಯ ಹಡಗಿನಲ್ಲಿದ್ದನು. ಹಡಗು ನೆಟಾಲ್ ಎಂಬ ರೇವಿನ ಬಳಿಗೆ ಸೇರಿದ ಕೂಡಲೆ ಅಲ್ಲಿದ್ದ ಫ್ರಾನ್ಸಿನ ಒಂದು ಹೊಗೆಯ ಹಡಗಿನ ಮೇಲೆ ಸ್ವಾತಂತ್ರ್ಯವನ್ನು ತಿಳಿಸುವ ಗುರುತಿನ ಧ್ವಜಪಟವನ್ನು ನೋಡಿ ಅದರಲ್ಲಿದ್ದವರಿಗೆ ತನ್ನ ಸಂತೋಷವನ್ನು ತಿಳಿಸಿ ಶುಭವಾದನವನ್ನು ಹೇಳುವುದಕ್ಕಾಗಿ ಆ ಹಡಗಿನೊಳಕ್ಕೆ ಹೊರಡುವಾಗ ಆತನ ಕಾಲು ಒಂದು ಹಲಗೆಗೆ ತಗಲಿ ಬಲವಾದ ಗಾಯ ಆಯಿತು. ಆಕಾಲದಲ್ಲಿ ಇಂಗ್ಲೆಂಡಿನಲ್ಲಿ ರೋಮನ್ ಕ್ಯಾಥೊಲಿಕ್ ಸಂಘದವರ ಮೇಲೆ ರಾಜಶಾಸನಗಳು ಬಹು ಕ್ರೂರಗಳಾಗಿದ್ದುವು. ಅವರನ್ನು ಸರ್ಕಾರದ ಉದ್ಯೋಗಗಳಲ್ಲಿ ಸೇರಿಸಿಕೊಳ್ಳುತ್ತಿರಲಿಲ್ಲ. ಪ್ರಜಾಪಕ್ಷದವರು ಪ್ರತಿನಿಧಿಗಳಾಗಿ ಸೇರಕೂಡದು. ಇಂತಹ ಇನ್ನೂ ಕೆಲವು ಇಕ್ಕಟ್ಟುಗಳಿದ್ದುವು. ರಾಮಮೋಹನನು ಇವುಗಳಿಗಾಗಿ ಬಹಳ ಚಿಂತಿಸುತ್ತಿದ್ದನು. ಕೆಲವು ದಿನಗಳಮೇಲೆ ಈ ಕಾನೂನು ರದ್ದು ಮಾಡಲ್ಪಟ್ಟಕೂಡಲೆ ಬಹು ಸಂತೋಷಗೊಂಡನು. ಹೀಗೆಯೇ ಇಂಗ್ಲೆಂಡಿನ ರಿಫಾರಂ ಬಿಲ್ಲನ್ನು ಕುರಿತು ತನ್ನ ಮನಃಪೂರ್ವಕವಾದ ಪ್ರೀತಿಯನ್ನು ತಿಳಿಸಿದನು. ಇವುಗಳನ್ನೆಲ್ಲ ಯೋಚಿಸಿ ನೋಡಿದರೆ ರಾಮಮೋಹನನಿಗೆ ರಾಜತಂತ್ರಜ್ಞಾನವು ಅಸಾಧಾರಣವಾಗಿತ್ತೆಂದು ಹೇಳಬೇಕು.

1817 ರಲ್ಲಿ 'ಅರಲ್ ಆಫ್ ಮಿನಿಸ್ಟರ'' ಎಂಬ ಬಿರುದನ್ನು ಹೊಂದಿದ ಫಿಟ್‌ಮಾರ್ಸ್ ಎಂಬ ಸೇನಾಪತಿಯೊಬ್ಬನು ಹಿಂದೂ ದೇಶವನ್ನು ನೋಡಬೇಕೆಂದು ಬಂದಾಗ ರಾಮಮೋಹನನ ಪರಿಚಯ ಪಡೆದನು. ಇದರಿಂದ ಈತನು ತನ್ನ ಪಯಣದ ಚರಿತ್ರೆಯಲ್ಲಿ ಹೀಗೆ ಬರೆದಿರುವನು. ''ರಾಮಮೋಹನನು ನಮ್ಮ ಭಾಷೆಯಲ್ಲಿ ಬಹು ಸ್ಪಷ್ಟವಾಗಿ ಮಾತನಾಡಿದನು, ಮತ್ತು ತನಗೆ ಅರಬ್ಬೀ ಭಾಷೆಯಲ್ಲಿಯೂ ಫಾರಸಿಯಲ್ಲಿಯೂ ಕೂಡ ಒಳ್ಳೇ ಜ್ಞಾನ ಉಂಟೆಂದು ಹೇಳಿದನು. ಆತನಿಗೆ ಯೂರೋಪ್‌ಖಂಡದ ಎಲ್ಲಾ ದೇಶಗಳ ವಿಷಯವಾದ ಮುಖ್ಯವಾಗಿ ಇಂಗ್ಲೆಂಡಿನ ವಿಷಯವಾದ ರಾಜತಂತ್ರಗಳು ಚೆನ್ನಾಗಿ ತಿಳಿದಿವೆ. ಸ್ವತಂತ್ರರಾಜ್ಯಗಳಲ್ಲಿ ಸೈನ್ಯವನ್ನಿರಿಸುವ ವಿಷಯಕ್ಕೆ ವಿರೋಧವಾಗಿ ಅಲ್ಲಿ ಪ್ರತಿಪಕ್ಷದವರು ಹೇಳಿದಂತೆಯೇ ಅನೇಕ ಕಾರಣಗಳನ್ನು ತೋರಿಸಿ ನನ್ನೊಂದಿಗೆ ವಾದಿಸಿದನು. ಇವುಗಳಿಂದ ಈತನು ಅಸಾಧಾರಣ ಪುರುಷನೆಂದು ನಾನು ಭಾವಿಸಿದೆನು.''

ರಾಮಮೋಹನನಿಗೆ ಇಂಗ್ಲೆಂಡಿಗೆ ಹೊರಡಬೇಕೆಂಬ ಆಸೆಯು 1817 ರಲ್ಲಿಯೇ ಹುಟ್ಟಿತು. ಆದರೆ ಆ ಕೋರಿಕೆಯು ಆಗ ನೆರವೇರದೆ ಹೋದುದರಿಂದ 1830ನೆಯ ವರ್ಷದಲ್ಲಿ ಪ್ರಯಾಣಕ್ಕೆ ಬೇಕಾದ ಪ್ರಯತ್ನಗಳನ್ನು ಮಾಡಿದನು. ಇವನಿಗೆ ಅಷ್ಟು ದಿನಗಳ ತನಕ ಪ್ರಯಾಣಕ್ಕೆ ಅನುಕೂಲಿಸದೆ ಏತರಿಂದ ಅಡ್ಡಿಯುಂಟಾಯಿತೋ ಅದನ್ನು ರಾಮಮೋಹನನು ಒಂದು ಕಡೆ ಸಂಕ್ಷೇಪವಾಗಿ ಹೀಗೆ ಬರೆದಿರುವನು ; "ನಾನು ಆಗಾಗ್ಗೆ ಯೂರೋಪ್ ಖಂಡಕ್ಕೆ ಸಂಬಂಧಿಸಿದ ವ್ಯವಹಾರಗಳನ್ನು ಕುರಿತು ಬರೆಯಲ್ಪಟ್ಟ ಪತ್ರಿಕೆಗಳನ್ನೂ ವಿದ್ಯಾವಿಷಯದ ವ್ಯಾಸಗಳನ್ನೂ ಓದುತ್ತಾ ಅವುಗಳನ್ನು ಓದುವಾಗಲೆಲ್ಲ ಆ ದೇಶದ ಪ್ರಜೆಗಳಿಗೆ ರಾಜನೀತಿಯು ಚೆನ್ನಾಗಿ ತಿಳಿಯುವುದೆಂತಲೂ, ಅವರಲ್ಲಿ ವಿದ್ಯಾನಾಗರಿಕಾದಿಗಳು ವಿಶೇಷವಾಗಿ ವೃದ್ಧಿಯನ್ನು ಹೊಂದುತ್ತಿರುವುವೆಂತಲೂ, ಶಾಸ್ತ್ರಶೋಧನೆಯಲ್ಲಿ ಆ ದೇಶವು ದಿನದಿನಕ್ಕೂ ಒಂದೊಂದು ಹೊಸ ಸಂಗತಿಯನ್ನು ಕಂಡುಹಿಡಿಯುತ್ತಲೇ ಇರುವುದೆಂತಲೂ ಅವರು ತುಂಬಾ ಭಾಗ್ಯವಂತರಾಗಿದ್ದಾರೆಂತಲೂ ತಿಳಿದುಕೊಳ್ಳುತ್ತಲಿರುವುದರಿಂದ ಅಂತಹ ಮಹೋನ್ನತಪದವಿಯಲ್ಲಿರುವ ರಾಜ್ಯವನ್ನು ಒಂದುಸಾರಿ ನೋಡಬೇಕೆಂಬ ಆಸೆ ಹುಟ್ಟಿ, ದಿನದಿನಕ್ಕೆ ಬೆಳೆದು, ನನ್ನ ಹೃದಯದಲ್ಲಿ ಬಲವಾಗಿ ಬೇರೂರಿತು. ಆದರೆ ಕೆಲವು ಅಭ್ಯಂತರಗಳಿಂದಲೂ ನನ್ನ ಸ್ವಂತ ತೊಂದರೆಗಳಿಂದಲೂ ಕೆಲವು ವರ್ಷಗಳವರೆಗೆ ನನ್ನ ಕೋರಿಕೆಯು ಈಡೇರದೆ ಹೋದರೂ ಕೊನೆಗೆ 1830 ನೆಯ ನವಂಬರು 19ನೆಯ ದಿನ ನಾನು ಕಲ್ಕತ್ತೆಯಿಂದ ಮುಂದಕ್ಕೆ ಪ್ರಯಾಣಮಾಡಿದೆನು."

ರಾಮಮೋಹನನು ಹೇಳಿದ ಸ್ವಂತ ತೊಂದರೆಗಳು ಎರಡು ವಿಧಗಳಾದುವು. ಅವುಗಳಲ್ಲಿ ಮೊದಲನೆಯದು, ಇದುವರೆಗೆ ಬರೆದಿರುವಂತೆ ಇವನ ಅಣ್ಣನ ಮಕ್ಕಳು ಇವನಿಗೆ ಪಿತ್ರಾರ್ಜಿತವಾದ ಆಸ್ತಿ ಸಿಕ್ಕದಂತೆ ಮಾಡಬೇಕೆಂಬ ದುರುದ್ದೇಶದಿಂದ ಹೂಡಿದ ವ್ಯಾಜ್ಯ. ಈ ವ್ಯವಹಾರವು ಕೆಲವು ವರ್ಷಗಳ ತನಕ ನಡೆಯುತ್ತಲೇ ಇದ್ದು, ರಾಮಮೋಹನನು ಇಂಗ್ಲೆಂಡಿಗೆ ಹೊರಡುವುದಕ್ಕೆ ಕೆಲವು ದಿನಗಳ ಮುಂಚೆ ಇವನ ಪಕ್ಷವಾಗಿ ತೀರ್ಮಾನವಾಯಿತು. ಆಗ ಇವನ ತಾಯಿಯು ಉಳಿದಿದ್ದ ಪಿತ್ರಾರ್ಜಿತವಾದ ಆಸ್ತಿಯನ್ನೆಲ್ಲಾ ರಾಮಮೋಹನನಿಗೂ ಅವನ ಅಣ್ಣನ ಮಕ್ಕಳಿಗೂ ಹಂಚಿಕೊಟ್ಟು, ತಾನು ಜಗನ್ನಾಥಕ್ಕೆ ಹೋಗಿ ಅಲ್ಲಿಯೇ ಕಾಲಧರ್ಮವನ್ನು ಹೊಂದಿದಳು. ಎರಡನೆಯ ತೊಂದರೆ ಯಾವುದೆಂದರೆ, ತನ್ನಲ್ಲಿ ಪ್ರಯಾಣಕ್ಕೆ ಸಾಕಾದಷ್ಟು ದ್ರವ್ಯವಿಲ್ಲದಿರುವಿಕೆ? ಇವನು ಸಂಪಾದಿಸಿದ ಹಣದಲ್ಲಿ ಸುಮಾರು ಮೂರುಪಾಲೆಲ್ಲವೂ ದೇಶೋಪಕಾರಕ್ಕಾಗಿಯೇ ವೆಚ್ಚಿಸಲ್ಪಟ್ಟು, ಉಳಿದ ಹಣವು ತನ್ನ ಕುಟುಂಬಪೋಷಣೆಗೆ ಸಾಲದೆ ಇದ್ದಿತು. ಆದರೆ ಭಗವಂತನು ಈ ಮಹಾತ್ಮನ ಚಿಂತೆಯನ್ನು ಸುಲಭವಾಗಿ ಪರಿಹರಿಸಿದನು. ಆ ಕಾಲದಲ್ಲಿ ದೆಹಲಿಗೆ ರಾಜನಾಗಿದ್ದ ಎರಡನೆಯ ಅಕ್ಬರನೆಂಬುವನು ಕಂಪೆನಿಯವರು ತನಗೆ ವಿರೋಧವಾಗಿ ಅನೇಕ ಅಕ್ರಮಗಳನ್ನು ನಡೆಸಿದುದರಿಂದ ಆ ವಿಷಯವನ್ನು ಇಂಗ್ಲೆಂಡ್ ರಾಜನಿಗೆ ಬಿನ್ನವಿಸಬೇಕೆಂದು ಯೋಚಿಸಿದ್ದನು. ಆದುದರಿಂದ ಆ ಕೆಲಸವನ್ನು ನಿರ್ವಹಿಸಲು ರಾಮಮೋಹನನನ್ನೇ ತನಗೆ ಪ್ರತಿನಿಧಿಯಾಗಿ

ಏರ್ಪಡಿಸಿಕೊಂಡು ಆತನನ್ನು ಇಂಗ್ಲೆಂಡಿಗೆ ಕಳುಹಿಸಿದನು. ಈ ಡಿಲ್ಲೀಶ್ವರನ ಸಹಾಯವೇ ರಾಮಮೋಹನನು ಇಂಗ್ಲೆಂಡಿಗೆ ಹೊರಡಲು ಅನುಕೂಲಪಡಿಸಿತು. ಅಂತಹ ಸಹಾಯವು ಕಷ್ಟ ಸಾಧ್ಯವಾಗಿದ್ದಿತು.

ಮೊದಲು ಹೇಳಿದ ಆತಂಕಗಳಲ್ಲದೆ ಆತನು ಪ್ರಯಾಣವನ್ನು ನಿಲ್ಲಿಸುವುದಕ್ಕೆ ಮತ್ತೊಂದು ಕಾರಣವಿದ್ದಿತು. ತಾನು ಪ್ರಯತ್ನಪಟ್ಟು ಮಾಡುತ್ತಲಿದ್ದ ಸಂಘ ಮತ್ತು ಮತ ಸಂಸ್ಕರಣಗಳು ಕ್ರಮವಾದ ಆಚರಣೆಗೆ ಬರುವುದಕ್ಕೆ ಮುಂಚೆ ತಾನು ಅವುಗಳನ್ನು ಬಿಟ್ಟು ದೂರ ದೇಶಕ್ಕೆ ಹೋದರೆ ಅದುವರೆಗೆ ತಾನುಮಾಡಿದ ಕೃಷಿಯೆಲ್ಲವೂ ವ್ಯರ್ಥವಾಗುವುದೋ ಏನೋ ಎಂಬ ವಿಚಾರವು ಮತ್ತೊಂದು. ಈ ವಿಚಾರವು ಈ ವರ್ಷ ತೊಲಗಿ ಹೋಯಿತು. ತಾನು ಸಂಕಲ್ಪಿಸಿದ ಕಾರ್ಯಗಳು ಬಹುಮಟ್ಟಿಗೆ ಜಯವನ್ನು ಪಡೆದುವು. ಮತ್ತು ಬ್ರಹ್ಮಸಮಾಜದಲ್ಲಿ ಅನೇಕ ಪ್ರಮುಖ ಜನರು ಮನಸ್ಸಿಟ್ಟು ಸೇರಿ ಯಥಾವಿಧಿಯಾಗಿ ಕಾರ್ಯಗಳನ್ನು ಜರುಗಿಸುತ್ತಿದ್ದರು. ವಿದ್ಯಾವಂತರಿಗೆಲ್ಲಾ ಈ ಕಾರ್ಯದಲ್ಲಿ ಅಭಿಮಾನವುಂಟಾಯಿತು. ಸಮಾಜವು ಯಾವಾಗಲೂ ಕೆಡದಂತೆ ನಡೆಯುವ ಪದ್ಧತಿಗಳು ಏರ್ಪಟ್ಟವು. ಆದುದರಿಂದ ರಾಮಮೋಹನನಿಗೆ ಮುಂದೆ ತಾನು ಎಲ್ಲಿದ್ದರೂ ಆ ಸಮಾಜಕ್ಕೆ ಯಾವ ಆತಂಕವೂ ಬರಲಾರದೆಂಬ ನಂಬಿಕೆಯುಂಟಾಯಿತು.

ರಾಮಮೋಹನನು ಇಂಗ್ಲೆಂಡಿಗೆ ಹೊರಡಲಪೇಕ್ಷಿಸಿದುದು ಅಲ್ಲಿದ್ದ ವಿನೋದಗಳನ್ನೂ ಆಶ್ಚರ್ಯಗಳನ್ನೂ ನೋಡುವುದಕ್ಕೆ ಮಾತ್ರವಲ್ಲ. ಆತನು ಅದಕ್ಕೆ ಮೊದಲು ಯಾರಿಗೂ ಸಾಧ್ಯವಾಗದೆ ಇದ್ದ ದೊಡ್ಡ ರಾಜ್ಯತಂತ್ರವಿಷಯವಾಗಿ ದೇಶಹಿತವನ್ನು ಬಯಸಿ ಕೆಲಸ ಮಾಡಬೇಕೆಂದು ಯೋಚಿಸಿದನು. ಅದಾವುದೆಂದರೆ—1833 ರಲ್ಲಿ ಕಂಪನಿಯವರ ಸನ್ನದಿನ ಅವಧಿಯು ಮುಗಿದು ಹೋಗುತ್ತಿದ್ದುದರಿಂದ ಆಗ ಅವರಿಗೆ ಹೊಸಸನ್ನದು ಕೊಡಬೇಕಾಗಿತ್ತು. ಆ ಸಂದರ್ಭದಲ್ಲಿ ನಮ್ಮ ದೇಶವನ್ನು ಕುರಿತು ಹಲವು ಸಂಗತಿಗಳು ಚರ್ಚಿಸಲ್ಪಡತಕ್ಕವುಗಳಾಗಿವೆಯೆಂತಲೂ ಅಂತಹ ಮುಖ್ಯ ಸಮಯದಲ್ಲಿ ತಾನು ಅಲ್ಲಿ ಇದ್ದರೆ ಈ ದೇಶಕ್ಕೆ ಸ್ವಲ್ಪ ಲಾಭಕರವಾಗಿರುವುದೆಂತಲೂ ಆತನು ದೃಢವಾಗಿ ನಂಬಿದ್ದನು.

ಇದೂ ಅಲ್ಲದೆ ಧರ್ಮಸಭೆಯವರೆಲ್ಲರೂ ಸೇರಿ ಸಹಗಮನವನ್ನು ನಿಷೇಧಿಸಿದ ಶಾಸನಕ್ಕೆ ವಿರೋಧವಾಗಿ ಇಂಗ್ಲೆಂಡಿನಲ್ಲಿ ಜನ್ನವಿಸಿಕೊಳ್ಳುವುದಕ್ಕೆ "ಬಿಥೀ" ಎಂಬವನನ್ನು ಕಾರ್ಯನಿರ್ವಾಹಕನನ್ನಾಗಿ ನಿಯಮಿಸಿ ಅವನಿಗೆ ತಕ್ಕ ಪ್ರತಿಫಲವನ್ನೂ, ಪಯಣದ ವೆಚ್ಚಕ್ಕೆ ಬೇಕಾದ ಹಣವನ್ನೂ ಕೊಟ್ಟು, ಅದಕ್ಕೆ ಸ್ವಲ್ಪ ದಿನಗಳ ಮುಂಚೆಯೇ ಇಂಗ್ಲೆಂಡಿಗೆ ಕಳುಹಿಸಿದ್ದರು. ಆದುದರಿಂದ ಅಲ್ಲಿ ಅವರ ಪ್ರಯತ್ನಗಳು ಸಫಲವಾಗದಂತೆ ಮಾಡಬೇಕೆಂಬ ಉದ್ದೇಶವೂ ಒಂದಾಗಿತ್ತು. ಆ ಬಿಥೀಯವರು ಇಂಗ್ಲೆಂಡಿಗೆ ಹೊರಡುವುದಕ್ಕೆ ಮುಂಚೆ ಒಂದು ವಿಚಿತ್ರವು ನಡೆಯಿತು. ಅದೇನೆಂದರೆ: ಆತನು ಧರ್ಮಸಭೆಯವರ ಪಕ್ಷದಲ್ಲಿ ಪ್ರತಿನಿಧಿಯಾಗಿ, ಭಗವಂತನ ಸಾಕ್ಷಿಯಾಗಿ ಅವರ ವಿಜ್ಞಾಪನೆಯು ಅಂಗೀಕರಿಸಲ್ಪಡಲಿಕ್ಕೆ ತನ್ನ ಕೈಯಲ್ಲಾದಮಟ್ಟಿಗೂ ವ್ಯವಸಾಯ ಮಾಡುವೆನೆಂದು ಅವರಿಗೆ ವಾಗ್ದಾನ ಮಾಡಿ ಹೊರ

ಟನು. ಆದರೆ ತಾನು ಹಣಕೊಟ್ಟು ಅದುವರೆಗೆ ತೆಗೆದುಕೊಂಡಿದ್ದ ಟಿಕೆಟ್ಟನ್ನು ತೆಗೆದುಕೊಂಡಿರುವ ವರ್ತಕಸಂಘದವರ ಹೊಗೆಯ ಹಡಗು ಕಲ್ಕತ್ತೆಯ ದಕ್ಷಿಣದಲ್ಲಿ ನಾಲ್ವತ್ತು ಹರಿದಾರಿ ದೂರದಲ್ಲಿರುವ ಕೇಪ್‌ಗಿರಿ ಎಂಬ ಪ್ರದೇಶಕ್ಕೆ ಹೋಗಿ ಅಲ್ಲಿಂದಲೇ ವಿಲಾಯಿತಿಗೆ ಹೊರಡುವುದೆಂಬ ವರ್ತಮಾನ ತಿಳಿದುದರಿಂದ ಈತನು ಅಲ್ಲಿಗೆ ಹೋಗಿಯೇ ಹಡಗನ್ನು ಹತ್ತಬೇಕಾಗಿ ಬಂದಿತು. ಆದುದರಿಂದ ಜಾಗ್ರತೆಯಲ್ಲಿ ಹೊರಟು, ಆ ಸ್ಥಳಕ್ಕೆ ಹೋಗಿ ಹಡಗನ್ನೇರಿದನು. ಅದು ಹೊರಟ ಕೆಲವು ನಿಮಿಷಗಳಲ್ಲಿಯೇ ಆ ಹಡಗಿನ ತಳದಲ್ಲಿ ಒಂದು ಸಣ್ಣ ರಂಧ್ರ ಬಿದ್ದು ಕ್ರಮಕ್ರಮವಾಗಿ ಒಳಭಾಗವೆಲ್ಲಾ ಜಲಮಯವಾಗುತ್ತಾ ಬಂದಿತು. ಹಡಗುನಡೆಯಿಸುವವರು ಈ ಅಪಾಯಸ್ಥಿತಿಯನ್ನು ತಕ್ಷಣವೇ ಕಂಡುಹಿಡಿದು ಪ್ರಯಾಣವನ್ನು ನಿಲ್ಲಿಸಿ ದಡಕ್ಕೆ ಬಂದು ನೀರು ಬಾರದಂತೆ ತತ್ಕಾಲಕ್ಕೆ ತಕ್ಕ ಉಪಾಯವನ್ನು ಯೋಚಿಸಿ, ಆ ರಂಧ್ರವನ್ನು ಪೂರ್ತಿಯಾಗಿ ಮುಚ್ಚಿ ಅದನ್ನು ನೆಟ್ಟಗೆ ಮಾಡಿಸುವುದಕ್ಕೋಸ್ಕರ ಪುನಃ ಕಲ್ಕತ್ತೆಗೆ ಹೊರಟರು. ಕಲ್ಕತ್ತೆಯನ್ನು ಸೇರಿದಕೂಡಲೇ ಬಿಥೀಯವರು ವಿಜ್ಞಾಪನೆಯನ್ನು ತೆಗೆದುಕೊಂಡು ಧರ್ಮಸಭೆಯವರ ಹತ್ತಿರಕ್ಕೆ ಬಂದು ನಡೆದ ವೃತ್ತಾಂತವನ್ನೆಲ್ಲಾ ವಿವರಿಸಿ ತನಗೆ ಅಕಾಲದಲ್ಲಿ ಜಲಗಂಡವು ಬರತಕ್ಕುದಾಗಿದ್ದರೂ ಹಿಂದೂಸಹಗಮನ ಸದಾಚಾರವುನ ದುದ್ಧಾರಣೆಯ ಧರ್ಮಪತ್ರವು ತನ್ನ ಕೈಯಲ್ಲಿದ್ದುದರಿಂದ ತನಗೆ ಆ ಅಪಮೃತ್ಯುವು ತಪ್ಪಿಹೋಯಿತೆಂದು ಹೇಳಿದನು.

ಇದಕ್ಕೆ ಪ್ರತ್ಯುತ್ತರವಾಗಿ ಕಲ್ಕತ್ತೆಯಲ್ಲಿನ ಒಂದು ವೃತ್ತಾಂತಪತ್ರದಲ್ಲಿ ಹೀಗೆ ಬರೆಯಲ್ಪಟ್ಟಿತು. “ಬಿಥೀಯವರ ಅಭಿಪ್ರಾಯವು ಸರಿಯಾದುದಲ್ಲ. ತುಂಬಿದ ಪ್ರಾಣಿಗಳನ್ನು ಕೊಂದುಹಾಕುವುದಕ್ಕೆ ಅಂಗೀಕರಿಸುವ ವಿಜ್ಞಾಪನೆಯು ತನ್ನ ಹತ್ತಿರ ಇದ್ದುದರಿಂದಲೇ ಹಡಗಿನಲ್ಲಿದ್ದವರೆಲ್ಲರ ಪ್ರಾಣಗಳಿಗೂ ಅಪಾಯವು ತಟಸ್ಥವಾಯಿತು.” ಮತ್ತೊಂದು ವರ್ತಮಾನಪತ್ರದಲ್ಲಿ “ಬಿಥೀಯವರ ಅಭಿಪ್ರಾಯವು ಯೋಗ್ಯವಾದುದಲ್ಲ. ಹಿಂದೂದೇಶದಲ್ಲಿನ ಅನಾಥ ಯುವತಿಯರ ಪಕ್ಷದಲ್ಲಿ ತೋರಿಸಬೇಕಾದ ನ್ಯಾಯವೇ ಆತನನ್ನು ಮರಳಿ ಕಲ್ಕತ್ತೆಗೆ ಹಿಂದಿರುಗಿಸಿತು” ಎಂದು ಬರೆಯಲ್ಪಟ್ಟಿತು.

ರಾಮಮೋಹನನು ಇಂಗ್ಲೆಂಡಿಗೆ ಹೊರಡುತ್ತಾನೆಂಬ ಸುದ್ದಿ ಪಟ್ಟಣದಲ್ಲೆಲ್ಲಾ ಹರಡಿತು. ಹಿಂದೂದೇಶದಲ್ಲಿ ಉತ್ತಮ ಕುಲದಲ್ಲಿ ಹುಟ್ಟಿದ ಪ್ರಮುಖರಲ್ಲಿ ಯಾರೂ ಅದಕ್ಕೆ ಮುಂಚೆ ಇಂಗ್ಲೆಂಡಿಗೆ ಹೋಗಿರಲಿಲ್ಲವಾದುದರಿಂದ ಈ ಮಹಾಕಾರ್ಯಕ್ಕೆ ನಮ್ಮವರಿಗೆಲ್ಲ ಮೊದಲು ಮಾರ್ಗದರ್ಶಿಯಾದವನು ಈ ಮಹನೀಯನಾದ ರಾಮಮೋಹನನೇ. ಈತನ ಸಮುದ್ರಯಾನದ ಸುದ್ದಿಯನ್ನು ಕೇಳಿದವರೆಲ್ಲರೂ ಆಶ್ಚರ್ಯಪಡತೊಡಗಿದರು. ದಯಾಮಯರಾದ ಕೆಲವರು, “ಅಯ್ಯೋ ಪಾಪ! ಇವನು ಸಮುದ್ರಕ್ಕೆ ಆಚೆ ಅನೇಕ ಸಾವಿರ ಗಾವುದಗಳ ದೂರದಲ್ಲಿರುವ ದೇಶಕ್ಕೆ ಹೋಗುವನಲ್ಲಾ” ಎಂದು ವಿಚಾರಗೊಂಡರು. ಪೂರ್ವಾಚಾರಪರಾಯಣರಾದ ಕೆಲವರು ಮೂರ್ಖಬ್ರಾಹ್ಮಣರು ಗೋಮಾಂಸಭಕ್ಷಕರಿರುವ ದೇಶಕ್ಕೆ ಹೋಗಬಾರದೆಂತಲೂ, ಸಮುದ್ರಯಾನವು ನಿಷಿದ್ಧಕಾರ್ಯವೆಂತಲೂ ವ್ಯಾಸ

ಮಹಾಮುನಿಯು ಹೇಳಿರುವಂತೆ ಕಲಿಯುಗದಲ್ಲಿ ವರ್ಣಸಂಕರಕ್ಕೆ ಆರಂಭವಾಗಿದೆ ಎಂತಲೂ ಹಲವು ವಿಧವಾಗಿ ಹೇಳಿಕೊಳ್ಳುತ್ತಿದ್ದರು. ಯಾರ ಬಾಯಲ್ಲಿ ನೋಡಿದರೂ ರಾಮಮೋಹನನು ವಿಲಾಯಿತಿಗೆ ಹೋಗುತ್ತಾನಂತೆ! ಎಂಬ ಮಾತುಗಳೇ ಕೇಳಬರುತ್ತಿದ್ದುವು. ಮನೆಯಲ್ಲಿದ್ದವರೆಲ್ಲರೂ ಆತನು ಪ್ರಯಾಣವನ್ನು ನಿಲ್ಲಿಸಿಬಿಡಬೇಕೆಂತಲೂ ಇಲ್ಲದಿದ್ದರೆ ಮತವನ್ನೂ ಪಿತ್ರಾರ್ಜಿತ ಸ್ವತ್ತಿನಲ್ಲಿ ಅಧಿಕಾರವನ್ನೂ ಕಳೆದುಕೊಳ್ಳಬೇಕಾಗುವುದೆಂತಲೂ ಪಟ್ಟು ಹಿಡಿದರು. ಕೆಲವರು ವೃದ್ಧರಾದ ಸ್ನೇಹಿತರು "ತಮ್ಮಾ! ಇಂತಹ ಕೆಲಸಗಳನ್ನು ಮಾಡಬೇಡ" ಎಂದು ಬೋಧಿಸಿದರು. ಆದರೆ ಬಾಲ್ಯದಿಂದಲೂ ಬಹಳ ಕಷ್ಟಗಳನ್ನು ಸಹಿಸುವ ಅಭ್ಯಾಸಗೊಂಡು ಬ್ರಹ್ಮಪ್ರಚಾರವು ಆರಂಭಿಸಿದಮೇಲೆ ಪ್ರತಿಪಕ್ಷದವರಿಂದ ಮಾಡಲ್ಪಡುವ ದುರಾಗತಗಳನ್ನೆಲ್ಲಾ ಸೈರಿಸಿ ತನ್ನ ಅಂತರಾತ್ಮನು ನ್ಯಾಯವೆಂದು ಗ್ರಹಿಸಿದ ವಿಷಯದಲ್ಲಿ ಮುಖ್ಯ ದೀಕ್ಷೆಯನ್ನು ವಹಿಸಿರುವ ಸ್ವಭಾವವನ್ನುಳ್ಳ ರಾಮಮೋಹನನಿಗೆ ಯಾವ ಆಸ್ತಿಯಲ್ಲಿಯಾದರೂ ತನಗೆ ಇರುವ ಹಕ್ಕು ತಪ್ಪುವುದೆಂಬ ಭಯವಾಗಲಿ, ಮತಭ್ರಷ್ಟನಾಗುವೆನೆಂಬ ವಿಚಾರವಾಗಲಿ, ಮನೆಯವರ ಗೋಳಾಟವಾಗಲಿ ಹೇಗೆ ಪ್ರತಿಬಂಧಕಗಳಾದಾವು? ಆತನು ಇವುಗಳೊಂದನ್ನೂ ಲೆಕ್ಕಿಸದೆ ಹಿಂದೂದೇಶದ ಅದೃಷ್ಟ, ನಾಗರಿಕತೆ, ಸ್ವಾತಂತ್ರ್ಯ ಮುಂತಾದುವು ಯಾವ ದೇಶದವರ ದಯೆಯಿಂದ ಅಭಿವೃದ್ಧಿ ಹೊಂದಬೇಕಾಗಿವೆಯೋ ಯಾವದೇಶದ ಪ್ರಸಿದ್ಧಿಯನ್ನು ನ್ಯೂಟನ್, ಬೇಕನ್, ಷೇಕ್ಸ್ಪಿಯರ್, ಮಿಲ್ಟನ್ ಎಂಬ ಲೋಕವಿಖ್ಯಾತರಾದ ಕವಿವರ್ಯರು ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ವ್ಯಾಪನೆಗೊಳಿಸಿದರೋ, ಯಾವುದರ ಸುಸ್ಥಿತೌನ್ನತ್ಯವನ್ನು ಕಣ್ಣಾರ ನೋಡಬೇಕೆಂದು ತಾನು ಬಹುಕಾಲದಿಂದ ಆತುರಗೊಂಡನೋ ಆ ದೇಶವನ್ನು ನೋಡುವುದಕ್ಕೆ ಸಿದ್ಧನಾದನು.

ರಾಮಮೋಹನನು ಪ್ರಯಾಣಪ್ರಯತ್ನಗಳನ್ನೆಲ್ಲಾ ಜತೆಗೊಳಿಸಿಕೊಂಡು, 'ಆಲ್ಬೈನ್' ಎಂಬ ಹೊಗೆಯ ಹಡಗನ್ನೇರಿ ಹೊರಡುವುದಕ್ಕೆ ಏರ್ಪಡಿಸಿಕೊಂಡನು. ಈ ಪ್ರಯಾಣದಲ್ಲಿ ತನ್ನ ಜತೆಯಲ್ಲಿ ಮೂವರನ್ನು ಕರೆದುಕೊಂಡನು. ಅವರಲ್ಲಿ ರಾಮರತ್ನಮುಖರ್ಜಿ, ರಾಮಹರಿಮುಖರ್ಜಿ ಎಂಬವರಿಬ್ಬರು ಪರಿಚಾರಕರು, ಮೂರನೆಯವನು ರಾಮಮೋಹನನು ಬಾಲ್ಯದಿಂದಲೂ ಸಾಕುತ್ತಿದ್ದ ರಾಜಾರಾಂ ಎಂಬ ಹುಡುಗನು. ಇವನು ಹರಿದ್ವಾರದಲ್ಲಿ ಎದೆಹಾಲನ್ನು ಕುಡಿಯುವ ವಯಸ್ಸಿನಲ್ಲಿಯೇ ತಾಯಿತಂದೆಗಳನ್ನು ಕಳೆದುಕೊಂಡು ದಿಕ್ಕಿಲ್ಲದವನಾಗಿದ್ದುದನ್ನು ಡಫ್ ಎಂಬ ಇಂಗ್ಲಿಷನು ನೋಡಿ ಬಹಳ ಕರುಣಾಳುವಾಗಿದ್ದುದರಿಂದ ಆ ಮಗುವಿನ ಅವಸ್ಥೆಗಾಗಿ ಚಿಂತಿಸಿ ಅವನನ್ನು ಕಲ್ಕತ್ತೆಗೆ ಕರೆದುತಂದು ತನ್ನ ಬಳಿಯಲ್ಲಿಟ್ಟುಕೊಂಡು ಸಲಹುತಿದ್ದನು. ಕೆಲವು ದಿನಗಳಲ್ಲಿಯೇ ಈತನು ಇಂಗ್ಲೆಂಡಿಗೆ ಹೊರಡಬೇಕಾಗಿ ಬಂದುದರಿಂದ ಈತನು ರಾಮಮೋಹನನ ಬಳಿಗೆ ಬಂದು, ಸ್ನೇಹಸ್ವಾತಂತ್ರ್ಯದಿಂದ ಈ ಮಗುವನ್ನು ನಿನ್ನ ವಶದಲ್ಲಿಟ್ಟುಕೊಂಡು ಪೋಷಿಸು, ಎಂದು ಹೇಳಿ ಒಪ್ಪಿಸಿದನು. ದಿಕ್ಕಿಲ್ಲದ ಬಾಲರಲ್ಲಿ ವಿದೇಶೀಯರಿಗೇನೆ ಇಷ್ಟು ದಾಕ್ಷಿಣ್ಯವಿರುವಲ್ಲಿ ಸ್ವದೇಶಸ್ಥರಾದ ನಾವು ಅಷ್ಟುಮಟ್ಟಿಗೆ ದಯೆ ತೋರದೆ ಇರುವೆವೇ? ಎಂದು ಹೇಳಿ ರಾಮಮೋಹನನು ಅವನನ್ನು ತನ್ನವಶಕ್ಕೆ ತೆಗೆ

ದುಕೊಂಡನು. ಆದರೆ ಡಫ್ ದೊರೆ ತಿರುಗಿ ಬಾರದೆಹೋದುದರಿಂದ ರಾಮಮೋಹನನ ಹತ್ತಿರದಲ್ಲಿಯೇ ಆ ಬಾಲಕನಿದ್ದುಬಿಟ್ಟನು. ಕ್ರಮಕ್ರಮವಾಗಿ ರಾಮಮೋಹನನಿಗೆ ಈ ಬಾಲಕನಮೇಲೆ ಪುತ್ರವಾತ್ಸಲ್ಯವುಂಟಾಯಿತು. ಒಂದೊಂದುವೇಳೆ ಮಲಗಿದ್ದಾಗ ಇವನ ಮೇಲೆ ಬಿದ್ದು ಧುಮುಕುತ್ತಿದ್ದರೂ ಸ್ವಲವೂ ಕೋಪಿಸದೆ, ಯಾವಾಗಲೂ ರಾಜಾ ರಾಜಾ ಎಂದು ಕರೆಯುತ್ತಾ, ಅವನನ್ನೆತ್ತಿಕೊಂಡು ತಿರುಗುತ್ತಿದ್ದನು. ಒಂದುಸಾರಿ ಧರ್ಮ ಸಭೆ ಯವರು ವಿರೋಧಭಾವದಿಂದ ಈ ಹುಡುಗನು ಮ್ಲೇಚ್ಛನೆಂಬ ವರ್ತಮಾನವನ್ನು ಹುಟ್ಟಿಸಿ, ಈ ಕಾರಣದಿಂದ ರಾಮಮೋಹನನು ಪಂಕ್ತಿಬಾಹ್ಯನೆಂದು ನಿಷೇಧಿಸಿದರು. ನಮ್ಮ ಕಥಾ ನಾಯಕನು ಈ ಮೂವರನ್ನೂ ಸಂಗಡ ಕರೆದುಕೊಂಡು 1830 ನೆಯ ನವಂಬರು 19 ರಲ್ಲಿ ಹೂಗ್ಲಿಯ ಬಳಿ ಹೊಗೆಯ ಹಡಗನ್ನು ಹತ್ತಿದನು. ಈತನು ಹೊರಡುವುದಕ್ಕೆ ಮುಂಚೆ ತನ್ನ ಪ್ರಾಣಾಪ್ತನಾದ ದ್ವಾರಕಾನಾಥಠಾಕೂರನ ಮನೆಗೆ ಹೋದನು. ಆಗಿನ ಸ್ಥಿತಿಯನ್ನು ಕುರಿತು ಮಹರ್ಷಿಯಾದ ದೇವೇಂದ್ರನಾಥ ಠಾಕೂರರವರು ಹೀಗೆ ಬರೆದಿರುವರು : "ಆ ವೇಳೆ ಯಲ್ಲಿ ರಾಮಮೋಹನನನ್ನು ನೋಡಲಿಕ್ಕಾಗಿ ಬಂದ ಜನರ ಸಂಖ್ಯೆಯನ್ನು ಸುಲಭವಾಗಿ ಲೆಖ್ಖ ಮಾಡಲು ಸಾಧ್ಯವಾಗಿರಲಿಲ್ಲ. ವಿಶಾಲವಾದ ದ್ವಾರಕಾನಾಥನ ಮನೆಯ ಅಂಗ ಳವೂ ಸೋಪಾನಗಳೂ ಜನರಿಂದ ತುಂಬಿದ್ದವು. ಕೆಲವರು ಸ್ಥಳವಿಲ್ಲದುದರಿಂದ ಬೀದಿಯಲ್ಲಿ ಕಿಕ್ಕಿರಿದು ನಿಂತಿದ್ದರು."

ತನ್ನಯ ಲಾಭವನೆಳಸದೆ |
ಸನ್ನುತಮತಿಯಾಗಿ ಲೋಕಹಿತವೊಡರಿಸುತಂ ||
ಮನ್ನಣೆಯನಾಂತ ಸದ್ಗುಣಿ |
ಗಿನ್ನೆಣೆಯಾರ್ಜಗದೆ ಸುಗುಣಸಾಗರ ನಾತಂ ||

---

# ಐದನೆಯ ಪ್ರಕರಣ.

ಯೂರೋಪ್ ಖಂಡದಲ್ಲಿ ರಾಜಾ ರಾಮಮೋಹನರಾಯರ ಪ್ರಸಿದ್ಧಿಯು ಆತನು ಇಂಗ್ಲೆಂಡಿಗೆ ಹೊರಡಬೇಕೆಂಬ ಕೋರಿಕೆ ಹುಟ್ಟುವುದಕ್ಕೆ ಮುಂಚೆಯೇ ವ್ಯಾಪಿಸಿತ್ತು. ಮೊತ್ತ ಮೊದಲು ಈತನ ಹೆಸರನ್ನು ಅಲ್ಲಿ ಪ್ರಸಿದ್ಧಿಗೆ ತಂದವರು ಮತಬೋಧಕರು. ರಾಮಮೋಹ ನನು ಸಹಗಮನವನ್ನು ನಿಲ್ಲಿಸಲಿಕ್ಕೆ ಮಾಡಿದ ಪ್ರಯತ್ನಗಳನ್ನು ನೋಡಿ, ಆತನಿಂದ ಬರೆಯ ಲ್ಪಟ್ಟ ಗ್ರಂಥಗಳನ್ನೋದಿ, ಆತನನ್ನು ಬಹಳವಾಗಿ ಹೊಗಳಿ, ಅವನ ಪ್ರಶಂಸೆಯನ್ನು ಸೀಮೆಗೆ ಬರೆದು ಕಳುಹುತ್ತ ಬಂದರು. ಅಲ್ಲಿನವರು ಆ ವರ್ಣನೆಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕ ಟಿಸುತ್ತಾ ಬಂದರು. ತರುವಾಯ ಕ್ರಮಕ್ರಮವಾಗಿ ಕ್ರಿಸ್ತಮತದಲ್ಲಿ ಗಮನವಿತ್ತು,

“ವರ ಸಮಾಜದಲ್ಲಿ ಸೇರಿತು ವರ್ತಿಸಿಗ ಮೊದಲು ಆತನ ಪ್ರಭಾವವು ಅಮೇರಿಕಾ ಖಂಡದ ತನಕ ವ್ಯಾಪಿಸಿತು. ಇರಾಂಪುರದಲ್ಲಿನ ಮತೋಪದೇಶಿಗಳ ಸಂಗಡ ಮತವಿಷಯವಾದ ಚರ್ಚೆಗಳನ್ನು ಮಾಡುತ್ತಿರುವಾಗ ಅಮೇರಿಕಾದಲ್ಲಿನ ಯೂನಿಟೇರಿಯನ್ ಮತಸಂಘದವರು ತಮ್ಮ ಮನಃಪೂರ್ವಕವಾದ ಸಂತೋಷವನ್ನು ತೋರಿಸಿದರು ಮತ್ತು ಆ ಚರ್ಚಾಗ್ರಂಥಗಳು ಅಮೇರಿಕಾದಲ್ಲಿನ ಸಂಯುಕ್ತ ಸಂಸ್ಥಾನಗಳಲ್ಲಿ ಹಲವುವೇಳೆ ಮುದ್ರಿಸಲ್ಪಟ್ಟವು. ಉಭಯರಾಷ್ಟ್ರಗಳಲ್ಲಿನ ವಿದ್ಯಾವಂತರೂ ಉತ್ತರಪ್ರತ್ಯುತ್ತರಗಳ ಮೂಲಕ ಈತನ ಪರಿಚಯವನ್ನು ಪಡೆಯುತ್ತಿದ್ದರು. ರಾಮಮೋಹನನ ಇತಿಹಾಸವನ್ನು ಬರೆದ ಮಿಸ್ ಮೇರಿ ಕಾರ್ಪೆಂಟರ್ ಎಂಬಾಕೆಯು ತನ್ನ ಗ್ರಂಥದಲ್ಲಿ ಈತನು ಇಂಗ್ಲೆಂಡಿಗೆ ಹೊರಡಲಿಕ್ಕೆ ಮುಂಚೆ ಅಲ್ಲಿ ಹರಡಿದ್ದ ಪ್ರಸಿದ್ಧಿಯನ್ನು ದೃಢಪಡಿಸುವುದಕ್ಕೆ ಆ ಕಾಲದಲ್ಲಿ ದೊಡ್ಡ ದೊಡ್ಡ ವಿದ್ವಾಂಸರಿಂದ ಬರೆಯಲ್ಪಟ್ಟ ವ್ಯಾಸಗಳನ್ನು ಉದಾಹರಿಸಿರುವಳು. ಅವುಗಳಲ್ಲಿ ಕೆಲವನ್ನು ಇಲ್ಲಿ ಸಂಗ್ರಹಿಸಿ ಹೇಳುವೆವು. ಬ್ಯಾಪ್ಟಿಸ್ಟ್ ಮತಸಂಘದವರ 1816 ನೆಯ ವರ್ಷದ ರಿಪೋರ್ಟಿನಲ್ಲಿ ರಾಮಮೋಹನನ ವಿಷಯದಲ್ಲಿ ದೊಡ್ಡ ವ್ಯಾಸವನ್ನು ಬರೆದು ಹೊಗಳಿರುವರು. ಮತ್ತು ಅದೇ ವರ್ಷದಲ್ಲಿ ಹೊರಪಟ್ಟ ಚರ್ಚ್ ಆಫ್ ಇಂಗ್ಲೆಂಡಿನ ಸೆಪ್ಟಂಬರು ತಿಂಗಳಿನ ಮಿಷನೆರಿ ರಿಜಿಸ್ಟರಿನಲ್ಲಿ ಈತನ ವಿದ್ಯಾನೈಪುಣ್ಯವನ್ನೂ, ಗ್ರಂಥರಚನೆಗಳನ್ನೂ, ಹಿಂದೂ ಕ್ರೈಸ್ತಮತ ಚರ್ಚೆಗಳನ್ನೂ, ದೇಶೋಪಕಾರ ಕಾರ್ಯಗಳನ್ನೂ ಕುರಿತು ಬಹು ಮನೋಹರವಾದ ಪದಗಳಿಂದ ವಿಸ್ತಾರವಾಗಿ ಬರೆದರು. ಮದ್ರಾಸಿನ ಪಾದರಿಗಳು ಅನೇಕಸಾರಿ ಈತನ ಯೋಗ್ಯತಾ ವಿಶೇಷವನ್ನು ಬರೆದು ಇಂಗ್ಲೆಂಡಿನ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿದರು. ಅಮೇರಿಕದ ಸಂಯುಕ್ತರಾಷ್ಟ್ರಗಳಲ್ಲಿರುವ ಪಾದರಿ ವೀರ್ ಎಂಬಾತನು ಈ ಮಹಾತ್ಮನ ಗ್ರಂಥಗಳನ್ನು ಓದಿ ಉತ್ತರಪ್ರತ್ಯುತ್ತರಗಳ ಮೂಲಕ ಪರಿಚಯವನ್ನು ಸಂಪಾದಿಸಿ ತನ್ನ ಸಂತೋಷವನ್ನೂ, ರಾಮಮೋಹನನ ವಿದ್ಯಾ ಬುದ್ಧಿ ಜ್ಞಾನಗಳನ್ನೂ ಪತ್ರಿಕಾಮುಖದಿಂದ ಪ್ರಕಟಿಸುತ್ತಿದ್ದನು. ಹಿಂದೂ ದೇಶವನ್ನು ನೋಡಲಿಕ್ಕೆ ಬಂದ, ಲೆಫ್ಟಿನೆಂಟ್ ಕರ್ನಲ್ ಫಿಡ್ಜ್‌ಕ್ಲೆರೆನ್ಸ್ ಎಂಬ ಸೇನಾಪತಿಯು ತನ್ನ ಪ್ರಯಾಣದ ಚರಿತ್ರೆಯಲ್ಲಿ ಈತನ ವಿಪುಲವಾದ ಜ್ಞಾನವನ್ನು ಬಹಳವಾಗಿ ಹೊಗಳಿ ಬರೆದಿರುವನು. ಪ್ರಸಿದ್ಧಪತ್ರಿಕಾಧಿಪತಿಯಾದ ಬಕಿಂಗ್‌ಹ್ಯಾಂ ಎಂಬವನು ಅನೇಕವರ್ಷಗಳ ತನಕ ತನ್ನ ಪತ್ರಿಕೆಯಲ್ಲಿ ಇವನಿಂದ ಮಾಡಲ್ಪಡುವ ಕಾರ್ಯಗಳನ್ನು ವಿವರಿಸಿ ಹೇಳುತ್ತಾಬಂದನು. ಕಲ್ಕತ್ತೆಯಲ್ಲಿ ಒಂದು ಇಂಗ್ಲಿಷ್ ಪತ್ರಿಕಾಧಿಪನಾದ ಎಂ ಡಿ ಎಕಾಸ್ತಾ ಎಂಬವನು ರಾಮಮೋಹನನ ಚರಿತ್ರೆಯನ್ನು ವಿವರವಾಗಿ ಬರೆದು ತನ್ನ ಸ್ವದೇಶವಾದ ಫ್ರ್ಯಾನ್ಸಿಗೆ ಕಳುಹಿಸಿದನು. ಅಲ್ಲಿ ಅದನ್ನು A. B. ಗ್ರೇಗರಿ ಎಂಬ ಪಂಡಿತನು ಫ್ರೆಂಚ್ ಭಾಷೆಯಲ್ಲಿ ಗ್ರಂಥರೂಪವಾಗಿ ಮುದ್ರಿಸಿದನು. ಇದರಿಂದ ಫ್ರ್ಯಾನ್ಸ್ ದೇಶದಲ್ಲೆಲ್ಲ ಈತನ ಹೆಸರು ವ್ಯಾಪಿಸಿತು. ಅದು 1820 ರಲ್ಲಿ ಇಂಗ್ಲಿಷಿನಲ್ಲಿ ಬರೆಯಲ್ಪಟ್ಟು “ಮಂತ್ಲಿ ರಿಪಾಜಿಟರಿ ಎಂಬ ಮಾಸಪತ್ರಿಕೆಯಲ್ಲಿ ಇಂಗ್ಲೆಂಡಿನಲ್ಲಿ ಪ್ರಕಟಿಸಲ್ಪಟ್ಟಿತು. ಹೀಗೆ ವಾರ್ತಾಪತ್ರಿಕೆಗಳ ಮೂಲಕ ಯೂರೋಪಿಯನರೆಲ್ಲರೂ ಈತನ ಪವಿತ್ರಧರ್ಮಗಳನ್ನೂ, ದಿವ್ಯನಾಮವನ್ನೂ,

ತಿಳಿದುಕೊಂಡು ಸಂತೋಷಿಸುತ್ತಿದ್ದುದಲ್ಲದೆ ಅನೇಕ ಸಾರಿ ಆತನಲ್ಲಿ ತಮಗೆ ಇರುವ ಗೌರವವನ್ನು ಹೊರಪಡಿಸುತ್ತಿದ್ದರು. 1820 ರಲ್ಲಿ "ಬ್ರಿಟಿಷ್ ಅಂಡ್ ಫಾರೆನ್ ಯುನಿಟೇರಿಯನ್ ಅಸೋಸಿಯೇಷನ್" ನವರು ತಮ್ಮ ಸಂವತ್ಸರೋತ್ಸವದ ವೇಳೆ ಒಂದು ದೊಡ್ಡ ಸಭೆಯಲ್ಲಿ ಈತನ ಶ್ರೇಯೋಭಿವೃದ್ಧಿಯನ್ನು ಬಯಸಿ, ಅವರ ದೇಶಸಂಪ್ರದಾಯದಂತೆ ದ್ರಾಕ್ಷಾ ಪಾನಕವನ್ನು ತೆಗೆದುಕೊಂಡು ಆ ಸಭೆಯಲ್ಲಿ ಆರ್. ನಾಟ್. ಎಂಬ ವಾಗ್ಮಿಯು ರಾಮಮೋಹನನ ಅಸದೃಶ ಶಕ್ತಿಯುಕ್ತಿಗಳನ್ನು ಕುರಿತು ಬಹಳಹೊತ್ತು ಉಪನ್ಯಾಸಮಾಡಿ, ಇಂಥಾ ಯೋಗ್ಯತಾವಿಶೇಷವನ್ನುಳ್ಳ ಪುರುಷನು ಇಂಗ್ಲೆಂಡಿನಲ್ಲಿಯೇ ಅಲ್ಲ, ಯೂರೋಪ್‌ಖಂಡದಲ್ಲಿ ಎಲ್ಲಿಯೂ ಜನ್ಮಿಸಲಿಲ್ಲವೆಂದು ಹೇಳಲಿಕ್ಕೆ ಸಾಹಸಗೊಳ್ಳುತ್ತಿರುವೆನೆಂದು ನುಡಿದನು.

ಯೂರೋಪ್ ಖಂಡದಲ್ಲಿ ಅಷ್ಟರ ಪ್ರಸಿದ್ಧಿಯನ್ನು ಸಂಪಾದಿಸಿದ ಮಹಾ ಕೀರ್ತಿಶಾಲಿಯಾದ ರಾಮಮೋಹನನು ಇಂಗ್ಲೆಂಡಿಗೆ ಬರುತ್ತಿರುವನೆಂಬ ಸುದ್ದಿಯು ಅಂತಹ ಮಹಾನುಭಾವನನ್ನು ತಮ್ಮ ಜೀವಿತಕಾಲದಲ್ಲಿ ಒಂದುಸಾರಿ ಕಣ್ಣಿನಿಂದ ನೋಡಬೇಕೆಂಬ ಕುತೂಹಲದಿಂದ ಕಾದಿದ್ದ ಅಲ್ಲಿಯ ಜನರಿಗೆ ತಿಳಿದಕೂಡಲೆ ಅವರಿಗೆ ಉಂಟಾದ ಸಂತೋಷವು ಅಷ್ಟಿಷ್ಟೆಂದು ಹೇಳಕೂಡದಿದ್ದಾಗಿತ್ತು. ಅವರು ತುಂಬ ಪ್ರೇಮದಿಂದ ಈತನನ್ನು ನೋಡುವ ಮಾರ್ಗವನ್ನು ಎದುರುನೋಡುತ್ತಿದ್ದರು. ಆ ಕಾಲದಲ್ಲಿ ಇಂಗ್ಲೆಂಡಿಗೆ ಹೋಗುವುದು ಈಗಿನಂತೆ ಸುಲಭಸಾಧ್ಯವಾಗಿರಲಿಲ್ಲ. ಆ ಕಾಲದಲ್ಲಿ ಆಫ್ರಿಕಾಖಂಡವನ್ನು ಬಳಸಿಕೊಂಡು ಯೂರೋಪಿಗೆ ಹೋಗಬೇಕಾಗಿದ್ದುದರಿಂದ ಇದಕ್ಕೆ ನಾಲ್ಕು ತಿಂಗಳಿಗಿಂತ ಹೆಚ್ಚಾದ ಕಾಲವು ಹಿಡಿಯುತ್ತಿತ್ತು. ಆದುದರಿಂದ ರಾಮಮೋಹನನು ನಾಲ್ಕುತಿಂಗಳೂ ಇಪ್ಪತ್ತು ದಿನಗಳು ಹೊಗೆಯ ಹಡಗಿನಲ್ಲಿದ್ದು 1831 ನೇ ಏಪ್ರಿಲ್ 3 ನೇ ದಿನ ಲಿವರ್‌ಪೂಲ್ ಪಟ್ಟಣವನ್ನು ಸೇರಿದನು.

ಇಷ್ಟು ದೊಡ್ಡ ಪ್ರಯಾಣಕ್ಕಾಗಿ ಮೊಟ್ಟಮೊದಲು ಹಡಗಿನ ಮೇಲೆ ಕಾಲಿಟ್ಟ ಈ ಹಿಂದೂ ಬ್ರಾಹ್ಮಣನಿಗೆ ಸಮುದ್ರದಲ್ಲಿ ಪ್ರಯಾಣಮಾಡುತ್ತಿದ್ದಾಗ ಯಾವಯಾವ ಆಶ್ಚರ್ಯಗಳು ಕಾಣಬಂದವೋ ಅವುಗಳನ್ನೆಲ್ಲಾ ರಾಮಮೋಹನನ ಅವಸಾನವು ಇನ್ನೂ ಸ್ವಲ್ಪ ಅವಕಾಶವನ್ನು ಕೊಟ್ಟಿದ್ದರೆ ನಾವೆಲ್ಲರೂ ತಿಳಿದುಕೊಳ್ಳಬಹುದಾಗಿತ್ತು. ತನ್ನ ದಿನಚರಿಯ (ಡೈರಿ) ವಹಿಯಲ್ಲಿ ಇಂತಹ ಅಸಂಭವಗಳನ್ನು ತಾನು ಬರೆದಿಟ್ಟಿರುವಂತೆ ರಾಮಮೋಹನನು ಒಂದು ಕಡೆಯಲ್ಲಿ ಬರೆದಿರುವನು. ಆದರೆ ಆತನ ಅಕಾಲಮರಣದಿಂದ ಈ ಚರಿತ್ರೆಯು ನಮಗೆ ಸಿಕ್ಕಲಿಲ್ಲ. ಮರಣಕಾಲದಲ್ಲಿ ಆತನ ಕಾಗದಗಳನ್ನು ಯಾರಾದರೂ ತಕ್ಕಷ್ಟು ಎಚ್ಚರದಿಂದ ಕಾಪಾಡದೆ ಹೋದುದರಿಂದ ಆ ಡೈರಿ ಪುಸ್ತಕವು ಸುದಾ ಈಗ ನಮಗೆ ಸಿಕ್ಕದಂತೆ ನಶಿಸಿತು. ಆದರೂ ರಾಮಮೋಹನನು ಹಡಗಿನಲ್ಲಿದ್ದಕಾಲದ ಕೆಲವು ವಿಷಯಗಳು ಮಾತ್ರ ಬೇರೆ ಆಧಾರಗಳಿಂದ ತಿಳಿಯಬಂದಿವೆ. ಸಮುದ್ರದಲ್ಲಿ ಪ್ರಯಾಣಮಾಡುತ್ತಿದ್ದಾಗ ಆ ಹಡಗಿನಲ್ಲಿಯೇ ಇದ್ದ ಇನ್ನೊಬ್ಬ ಆಂಗ್ಲೇಯ ವಿದ್ವಾಂಸನು ರಾಮಮೋಹನನಿಗೆ ಪರಿಚಿತನಾದನು. ಆದುದರಿಂದ ಆತನು ತನ್ನ ಯಾತ್ರಾಗ್ರಂಥದಲ್ಲಿ ರಾಮಮೋಹನನನ್ನು ಕುರಿತು

ಹೀಗೆ ಬರೆದಿರುವನು : ‘‘ಹೊಗೆ ಹಡಗಿನಲ್ಲಿ ನಾವು ಇದ್ದ ಕೊಠಡಿಯ ಪಕ್ಕದಲ್ಲಿ ರಾಮಮೋಹನರಾಯನೆಂಬ ಹಿಂದೂ ಬ್ರಾಹ್ಮಣನೊಬ್ಬನಿದ್ದನು. ಆತನ ಅಡಿಗೆಗೆ ಬೇರೆ ಒಲೆ ಸಿಕ್ಕುವುದು ಕಷ್ಟವಾಗಿದ್ದುದರಿಂದ ಮೊಟ್ಟಮೊದಲು ಆತನು ಸ್ವಲ್ಪ ಶ್ರಮಪಟ್ಟನು. ಆತನು ತನ್ನ ಭೃತ್ಯರೊಂದಿಗೆ ತಾನೂ ಆ ಕೋಣೆಯಲ್ಲಿಯೇ ಭೋಜನಮಾಡುತ್ತಾ ಹೊರಕ್ಕೆ ಬಾರದೆ ಯಾವಾಗಲೂ ಅಲ್ಲಿಯೇ ಇರುತ್ತಿದ್ದನು. ಗಾಳಿ ಬೀಸಿದಾಗ ದೊಡ್ಡದೊಡ್ಡ ಅಲೆಗಳದ್ದು ಬರುವಾಗ ಆತನು ಒಂದುಸಾರಿ ಹೊರಕ್ಕೆ ಬಂದು ಅವುಗಳ ಶಬ್ದವನ್ನು ಕೇಳುತ್ತ ಆನಂದಪಡುತ್ತಿದ್ದನು. ತಾನಿರುವ ಕೋಣೆಯು ಬಹು ಇಕ್ಕಟ್ಟಾಗಿಯೇ ಇದೆಯೆಂದು ಒಂದುಸಾರಿ ಹೇಳಿದನು. ಹಾಗೆ ಇದ್ದ ಆ ಚಿಕ್ಕ ಕೊಠಡಿಯಲ್ಲಿಯೇ ಸವರಿಸಿಕೊಂಡು ಇದ್ದುದನ್ನು ನೋಡಿ ಆತನಿಗೆ ಭೃತ್ಯರಲ್ಲಿ ತುಂಬಾ ಆದರವಿರುವುದೆಂದು ತಿಳಿದೆನು. ಪ್ರತಿದಿನವೂ ಹಗಲಲ್ಲಿ ನಮ್ಮ ದೇಶದ ಪ್ರಯಾಣಿಕರೆಲ್ಲರೂ ಒಂದೇ ಪಙ್ಕ್ತಿಯಲ್ಲಿ ಕುಳಿತು ಭೋಜನ ಮಾಡುತ್ತಿದ್ದಾಗ ಈತನು ಅಲ್ಲಿಗೆ ಬಂದು ಕೇಳಲಿಕ್ಕೆ ಹಿತವಾಗುವಂತೆ ಲೋಕದ ವಾರ್ತೆಗಳನ್ನು ಹೇಳುತ್ತಾ ಬರುವನು. ಆತನು ಸಂತೋಷಪ್ರಿಯನೂ, ವಿದ್ಯಾವಿಶಾರದನೂ ಮಾತ್ರವಲ್ಲದೆ ಬುದ್ಧಿವಂತನಾಗಿದ್ದುದರಿಂದ ಜತೆಯಲ್ಲಿ ಪ್ರಯಾಣಮಾಡುತ್ತಿದ್ದ ನಮ್ಮೆಲ್ಲರಿಗೂ ಆತನಲ್ಲಿ ತುಂಬಾ ಗೌರವವುಂಟಾಯಿತು. ಆತನು ತನ್ನ ಸಂಗಡ ಒಂದು ಆಕಳನ್ನೂ ತಂದಿದ್ದನು. ನೆಟಾಲಿನಲ್ಲಿ ಆತನು ಫ್ರಾನ್ಸಿನವರ ಹಡಗಿನಮೇಲೆ ಇದ್ದ ಸ್ವಾತಂತ್ರ್ಯದ ಧ್ವಜವನ್ನು ನೋಡಿ ಅವರಿಗೆ ಸ್ವಾಗತವನ್ನು ಕೊಡಲಿಕ್ಕೆ ಹೋದಾಗ ಆತನ ಕಾಲಿಗೆ ಸ್ವಲ್ಪ ಪೆಟ್ಟಾಗಿ ಗಾಯವಾಯಿತು. ಪಾಪ! ಅದು ಆತನನ್ನು ಬಹುಕಾಲ ಬಾಧಿಸಿರಬಹುದೆಂದು ತಿಳಿಯುವೆನು.’’

ಸುಪ್ರಸಿದ್ಧನಾದ ರಾಮಮೋಹನನು ಈದಿನ ಹೊಗೆ ಹಡಗಿನಲ್ಲಿ ಲಿವರ್ಪೂಲಲ್ಲಿ ಇಳಿಯುವನೆಂಬ ವರ್ತಮಾನವು ದಿನಂಪ್ರತಿಯೂ ಹೊರಡುವ ವಾರ್ತಾಪತ್ರದಲ್ಲಿ ಅದುವರೆಗೆ ಪ್ರಕಟಿಸಲ್ಪಟ್ಟಿತ್ತು. ಅದನ್ನು ನೋಡಿ ವಿಲ್ಲಿಯಂ ರಾತ್‌ಬೂನ್ ಎಂಬ ಒಬ್ಬ ದೊಡ್ಡಮನುಷ್ಯನು ರಾಮಮೋಹನನನ್ನು ತನ್ನ ‘‘ಗ್ರೀನ್‌ಬ್ಯಾಕ್’’ ಎಂಬ ವಿಶಾಲಭವನದಲ್ಲಿ ಬಿಡಾರ ಮಾಡಲು ಪ್ರಾರ್ಥಿಸುವೆನೆಂದು ಆತನಿಗೆ ಒಂದು ಪತ್ರ ಬರೆದನು. ಆದರೆ ಸ್ವಾತಂತ್ರ್ಯಪ್ರಿಯನಾದ ರಾಮಮೋಹನನು ಅದನ್ನು ಅಂಗೀಕರಿಸದೆ ‘‘ಡೆಲ್ಲಿ’’ ಎಂಬ ಸತ್ರದಲ್ಲಿ ಇಳಿದುಕೊಂಡನು. ಪಟ್ಟಣವಾಸಿಗಳಲ್ಲಿ ಅನೇಕರು ಆತನನ್ನು ನೋಡಲಿಕ್ಕೆ ಅಲ್ಲಿಗೆ ಹೊರಟು ಬಂದರು. ಅವರಲ್ಲಿ ಬಾಲ್ಯದಲ್ಲಿ ಒಂದು ಹೊಗೇಹಡಗಿನ ಉದ್ಯೋಗಸ್ಥನಾಗಿದ್ದು, ಕಲ್ಕತ್ತೆಗೆ ಬಂದು ಅಲ್ಲಿ ರಾಮಮೋಹನನ ಕೀರ್ತಿಪ್ರತಿಷ್ಠೆಗಳನ್ನು ಕೇಳಿ ಆತನನ್ನು ನೋಡಲಿಕ್ಕೆ ಬಂದ ಯೌವ್ವನ ಪುರುಷನೊಬ್ಬನಿದ್ದನು. ಆತನು ಮುಂದಕ್ಕೆ ಬಂದು, ತಾನು ಕಲ್ಕತ್ತೆಯಲ್ಲಿ ಆತನನ್ನು ನೋಡಿದ ಸಂಗತಿಯನ್ನೂ, ತಾನು ಕಂಡ ಕೆಲವು ಗುರುತುಗಳನ್ನೂ ವಿವರಿಸಿ ಹೇಳಿದನು. ರಾಮಮೋಹನನು ಆತನ ಪ್ರೇಮಕ್ಕೆ ತುಂಬ ಕೃತಜ್ಞತೆಯನ್ನು ತೋರಿಸಿ, ಪ್ರಮುಖರನ್ನು ಗೌರವಿಸಿದಹಾಗೆ ಆತನಿಗೆ ಕೂಡ ಮರ್ಯಾದೆಯನ್ನು ತೋರಿಸಿದನು.

ಲಿವರ್ಪೂಲಿನಲ್ಲಿ ರಾಮಮೋಹನನ ವಿಷಯದಲ್ಲಿ ನಡೆದ ಮರ್ಯಾದೆಗಳಲ್ಲಿ ವಿಲ್ಲಿಯಂ ರಾಸ್ಕೋ ಎಂಬವರು ಮೈತ್ರಿಯನ್ನು ಬೆಳೆಸಿದುದು ಮುಖ್ಯವಾದುದು. ಈತನು ರಸಾಯನ ಶಾಸ್ತ್ರದಲ್ಲಿ ಒಳ್ಳೇ ಪಂಡಿತನು. ಈಗಲೂ ಈತನ ಹೆಸರನ್ನು ಪ್ರತಿಯೊಬ್ಬ ರಸಾಯನ ಶಾಸ್ತ್ರಪಂಡಿತನೂ ತಿಳಿದೇ ಇರುವನು. ಆ ಕಾಲದಲ್ಲಿ ಈತನು ತನ್ನ ವಿದ್ಯಾತಿಶಯದಿಂದ ತುಂಬ ಹೆಸರುಗೊಂಡಿದ್ದನು. ನಮ್ಮ ಅದೃಷ್ಟ ವಿಶೇಷದಿಂದ ಇವನ ಜೀವನ ಚರಿತ್ರೆಯನ್ನು ಬರೆದವರು ಅದರಲ್ಲಿ ರಾಮಮೋಹನನ ಸಾಂಗತ್ಯವನ್ನು ಕುರಿತು ಸ್ವಲ್ಪಮಟ್ಟಿಗೆ ಬರೆದಿರುವರು. ರಾಮಮೋಹನನನ್ನು ಕುರಿತ ಕೆಲವು ವಿಷಯಗಳು ಅದರಿಂದಲೂ ತಿಳಿಯಬರುತ್ತವೆ. ಈತನು ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ಜೀಸಸ್ ಹೇಳಿದ ನೀತಿಗಳನ್ನೆಲ್ಲ ಸೇರಿಸಿ ಒಂದು ಗ್ರಂಥವಾಗಿ ಬರೆಯಲಾರಂಭಿಸಿ, ಯಾವ ಕಾರಣದಿಂದಲೋ ಅದನ್ನು ಪೂರ್ತಿ ಮಾಡದೆ ನಿಲ್ಲಿಸಿದ್ದನು. ಆದರೆ ಆತನು ಕಲ್ಕತ್ತೆಯಲ್ಲಿ ರಾಮಮೋಹನನಿಂದ ಪ್ರಚುರಪಡಿಸಲ್ಪಟ್ಟ ಜೀಸಸ್ಸಿನ ನೀತಿಗಳು, ಎಂಬ ಗ್ರಂಥಗಳನ್ನೂ, ಮತ್ತು ಕೆಲವು ಗ್ರಂಥಗಳನ್ನೂ ರಾಮಮೋಹನನು ಯೂರೋಪಿಗೆ ಸೇರುವುದಕ್ಕೆ ಒಂದೆರಡು ವರುಷಗಳ ಮುಂಚೆ ಓದಿ, ಆತನ ಅಸಾಧಾರಣ ಪಾಂಡಿತ್ಯಕ್ಕೆ ಆಶ್ಚರ್ಯಪಟ್ಟು ವಿಶೇಷ ನಾಗರಿಕತೆಯುಳ್ಳ ರಾಜ್ಯಗಳಲ್ಲಿ ಸುದಾ ಇಂತಹ ವಿದ್ಯಾವಂತನಿರುವುದು ಅಪರೂಪವೆಂದು ತಿಳಿದನು.

ಅಂದಿನಿಂದ ಅವನ ಮನಸ್ಸಿನಲ್ಲಿ ಈ ಸುಪ್ರಸಿದ್ಧನನ್ನು ಕಂಡು ಮಾತನಾಡಬೇಕೆಂಬ ಆಶೆಯು ಹೆಚ್ಚುತ್ತ ಬಂದಿತು. ಆದರೆ ವೃದ್ಧಾಪ್ಯದ ದೆಸೆಯಿಂದ ತನಗೆ ಅಸಾಧ್ಯವಾಗಿದ್ದುದರಿಂದ ಕೆಲವು ದಿನಗಳ ತರುವಾಯ ತನ್ನಿಂದ ರಚಿಸಲ್ಪಟ್ಟ ಗ್ರಂಥಗಳನ್ನೆಲ್ಲ ಕೊಟ್ಟು ಒಂದು ಪತ್ರವನ್ನು ಬರೆದು ತನ್ನ ಸ್ನೇಹಿತನ ಮೂಲಕ ಕಲ್ಕತ್ತೆಯಲ್ಲಿರುವ ರಾಮಮೋಹನನ ಬಳಿಗೆ ಕಳುಹಿ ಆ ಪತ್ರದ ಕೊನೆಯಲ್ಲಿ ಈ ವಾಕ್ಯಗಳನ್ನು ಬರೆದನು : "ಕೆಲವು ದಿನಗಳಿಂದ ತಮ್ಮ ಪವಿತ್ರಸಾದವು ಪಶ್ಚಿಮರಾಜ್ಯಗಳಮೇಲೆ ಬಿಜಯಮಾಡಿಸುವುದೆಂಬ ಸುವಾರ್ತೆಯನ್ನು ಕೇಳುತ್ತಲಿದ್ದೇನೆ. ಆದರೆ ಆ ಸುದಿನವು ಇನ್ನೆಷ್ಟು ದಿನಗಳಿಗೆ ಬರಬಲ್ಲದೋ ? ಅದುವರೆಗೆ ಬದುಕಿದ್ದು ಆ ಮಹದಾನಂದವನ್ನು ಅನುಭವಿಸುವ ಭಾಗ್ಯವು ನನಗೆ ಲಭಿಸದೆಂದು ತಿಳಿಯುವೆನು. ಈ ದುಃಖಭೂಯಿಷ್ಟವಾದ ಮುಪ್ಪು ನನ್ನನ್ನು ಬಲವಾದ ರೋಗಗಳಿಂದ ಪೀಡಿಸದೆ ಇದ್ದಲ್ಲಿ ನಾನು ಇದುವರೆಗೆ ಕಲ್ಕತ್ತೆಗೆ ಬಂದು ತಮ್ಮ ಸಂದರ್ಶನವನ್ನು ಎಷ್ಟೋ ವೇಳೆ ತೆಗೆದುಕೊಳ್ಳುತ್ತಿದ್ದೆನು. ನೆರವೇರಲಾರದ ಹಲವು ಕೋರಿಕೆಗಳನ್ನು ಬಯಸಿದರೆ ಫಲವೇನು ? ಲೋಕೋಪಕಾರಾರ್ಥವಾಗಿ ಕಳುಹಿಸಿದ ಈ ಗ್ರಂಥಗಳು ಸೇರಿದಂತೆ ತಮ್ಮಿಂದ ಕೇಳಿ ಸಂತೋಷಗೊಂಡು ನನ್ನ ಪ್ರಕೃತದ ದೆಶೆಯನ್ನನುಸರಿಸಿ ಅಷ್ಟುಮಾತ್ರದಿಂದಲೇ ತೃಪ್ತಿಹೊಂದಿರುವೆನು.''

ಹೀಗೆ ರಾಮಮೋಹನನನ್ನು ನೋಡಬೇಕೆಂದು ತುಂಬಾ ಆಶಿಸುತ್ತಾ ಅತಿಶಯಪ್ರೇಮವನ್ನು ತೋರಿಸಿದ ವಿಲಿಯಂ ರಾಸ್ಕೋಯವರಿಗೆ ರಾಮಮೋಹನನು ಇಂಗ್ಲೆಂಡನ್ನು ಸೇರಿ, ಈ ದಿನ ನಮ್ಮ ಲಿವರ್‌ಪೂಲ್ ಪಟ್ಟಣದ ಸತ್ರದಲ್ಲಿ ಇಳಿದಿರುವನೆಂಬ ಸುದ್ದಿಯು ಕಿವಿಗೆ ಬಿತ್ತು.

೪೩ ವರುಷಗಳು ಮೀರಿದ ಆ ಮುದುಕನಿಗೆ ಈ ವಾರ್ತೆಯು ಎಷ್ಟರ ಆನಂದವನ್ನುಂಟುಮಾಡಿತೋ ಅದನ್ನು ವಿವರಿಸುವುದು ಸುಲಭವಲ್ಲ. ರಾಮಮೋಹನನ ಸಂತೋಷವು ಸುದಾ ಹೀಗೆಯೇ ಇದ್ದಿತು. ರಾಸ್ಕೋಯವರು ನೋಡಬಂದಾಗ ರಾಮಮೋಹನನು ಯೂರೋಪಿನಲ್ಲಿ ಮಾತ್ರವಲ್ಲದೆ, ಪ್ರಪಂಚದಲ್ಲೆಲ್ಲಾ ಸ್ತೋತ್ರಪಾತ್ರರಾದ ನಿಮ್ಮನ್ನು ನೋಡಿದ್ದರಿಂದ ನನಗೆ ತುಂಬಾ ಸಂತೋಷವಾಯಿತೆಂದು ನುಡಿಯುತ್ತಾ ಸವಿನಯವಾಗಿ ವಂದನೆಯನ್ನು ಮಾಡಿದನು. ಈ ಮಾತಿಗೆ ರಾಸ್ಕೋವು ತುಂಬಾ ಸಂತೋಷಮಗ್ನಮಾನಸರಾಗಿ ಅವರ ದೇಶಾಚಾರದಂತೆ ವಂದನಾದಿಸತ್ಕಾರಗಳನ್ನಾಚರಿಸಿ, ಈ ಸುದಿನವನ್ನು ನೋಡಲಿಕ್ಕೆ ಇಂದಿನ ತನಕ ನನ್ನನ್ನು ಬದುಕಿಸಿರುವ ಈಶ್ವರನ ಪರಿಪೂರ್ಣಾನುಗ್ರಹಕ್ಕೆ ನಾನು ತುಂಬ ಕೃತಜ್ಞನಾಗಿರುವೆನೆಂದು ಹೇಳಿದನು. ಹೀಗೆ ಇವರಿಬ್ಬರೂ ಸೇರಿದ ತರುವಾಯ ರಾಮಮೋಹನನು ಯಾವ ರಾಜಕಾರ್ಯಗಳ ನಿಮಿತ್ತವಾಗಿ ಇಂಗ್ಲೆಂಡಿಗೆ ಬಂದನೋ ಅವುಗಳನ್ನು ಕುರಿತು ಬಹಳ ಹೊತ್ತು ಮಾತನಾಡುತ್ತಿದ್ದರು. ಆ ಸಂಭಾಷಣೆಯಲ್ಲಿ ರಾಸ್ಕೋಯವರು ಈತನ ಅಸಾಧಾರಣವಾದ ರಾಜ್ಯತಂತ್ರ ನಿಪುಣತೆಗೆ ತುಂಬಾ ಸಂತೋಷಪಟ್ಟರು. ರಾಸ್ಕೋಯವರೂ ಅವರ ಹೆಂಡತಿಯೂ ರಾಮಮೋಹನನಲ್ಲಿ ತೋರಿದ ಗೌರವವು ಮಹತ್ತರವಾಗಿದ್ದಿತು. ಆತನ ಅತ್ಯದ್ಭುತಬುದ್ಧಿವಿಶೇಷಕ್ಕೆ ಆಶ್ಚರ್ಯಗೊಂಡು, ಇತರ ಸ್ನೇಹಿತರೂ ಕೂಡ ಆತನಿಗೆ ಹೀಗೆಯೇ ಮರ್ಯಾದೆಮಾಡಿದರು. ಒಂದುದಿನ ರಾಮಮೋಹನನು ಆ ಪಟ್ಟಣದಲ್ಲಿನ ಯೂನಿಟೇರಿಯನ್ ಮಂದಿರಕ್ಕೆ ಹೋಗಿ, ಅಲ್ಲಿ ತುಂಬ ಗೌರವವನ್ನು ಪಡೆದನು. ಮತ್ತು ಅಲ್ಲಿ ಸ್ಪರ್ಜಂ ಎಂಬ ಪಂಡಿತನೊಂದಿಗೆ ಸ್ವಲ್ಪಹೊತ್ತು ಸಂಭಾಷಿಸಿದನು. ಲಿವರ್ಪೂಲಿನಲ್ಲಿರುವ ಸ್ತ್ರೀ ಸಮಾಜದವರು ಸ್ತ್ರೀಜಾತಿಯ ಅಭಿಮಾನಿಯಾದ ಈತನನ್ನು ಗೌರವಿಸುವುದಕ್ಕೆ ಒಂದು ಸಭೆ ಕೂಡಿಸಿ, ಔತನಮಾಡಲೆಣಿಸಿ ಆ ವಿಷಯವನ್ನು ತಿಳಿಸಿದರು. ಆದರೆ ಈತನು ತಾನು ಲಂಡನ್ನಿಗೆ ಹೊರಡುವುದು ಬಹು ಅವಸರವಾಗಿರುವುದರಿಂದ ಕ್ಷಮಿಸಬೇಕೆಂದು ವಿನಯಪೂರ್ವಕ ಪ್ರಾರ್ಥಿಸಿದನು. ಹೀಗೆಯೇ ಲಿವರ್ಪೂಲಿನಲ್ಲಿ ಕೆಲವು ದಿನಗಳಿದ್ದು ರಾಸ್ಕೋಯವರಿಂದ ಲಂಡನ್ನಲ್ಲಿರುವ ಲಾರ್ಡ್ ಬ್ರೂಹಂ ಎಂಬ ಪ್ರಮುಖನ ಹೆಸರಿಗೆ ತಾನು ಪಾರ್ಲಿಮೆಂಟು ಸಭೆ ನೆರೆದಿರುವಾಗ ಗ್ಯಾಲರಿ ಕೆಳಗೆ ಕುಳಿತುಕೊಳ್ಳಲಿಕ್ಕೆ ಏರ್ಪಾಡು ಮಾಡಲಿಕ್ಕೆ ಒಂದು ಪತ್ರವನ್ನು ಬರೆಯಿಸಿ ತೆಗೆದುಕೊಂಡು, ಎಲ್ಲಾ ಮಿತ್ರರಿಂದಲೂ ಅಪ್ಪಣೆ ತೆಗೆದುಕೊಂಡು ಪ್ರಯಾಣಸನ್ನದ್ಧನಾಗಿ ಹೊರಟನು.

ರಾಮಮೋಹನನು ಲಿವರ್ಪೂಲಿನಿಂದ ಲಂಡನ್ ಪಟ್ಟಣಕ್ಕೆ ಹೊರಡುವ ಹೊಗೇಬಂಡಿಯಲ್ಲಿದ್ದು ಅದರ ಉಭಯಪಾರ್ಶ್ವಗಳಲ್ಲಿ ಕಾಣಬರುವ ಇಂಗ್ಲೆಂಡಿನವರ ಐಶ್ವರ್ಯಕ್ಕೂ ಅವರ ನಾಗರಿಕತೆಗೂ, ಜಾಣ್ಮೆಗೂ, ಆಶ್ಚರ್ಯಭರಿತಮಾನಸನಾಗುತ್ತಿದ್ದನು. ಅನೇಕ ಅಂತಸ್ತುಗಳಿಂದ ಕಟ್ಟಲ್ಪಟ್ಟ ದಿವ್ಯಮಂದಿರಗಳನ್ನೂ ಅವುಗಳ ಇಕ್ಕೆಡೆಗಳಲ್ಲಿಯೂ ಸುಂದರ ತರುಗಳಿಂದ ಅಲಂಕರಿಸಲ್ಪಟ್ಟ ಬೀದಿಗಳನ್ನೂ ದೊಡ್ಡದೊಡ್ಡ ಕಾಲ್ವೆಗಳನ್ನೂ ಕಣ್ಣುಗಳಿಗೆ ಹಬ್ಬವನ್ನುಂಟುಮಾಡುವಂತೆ ಚಿತ್ರವಿಚಿತ್ರವಾಗಿ ಕಟ್ಟಲ್ಪಟ್ಟಿರುವ ಸೇತುವೆಗಳನ್ನೂ ದೃಷ್ಟಿ

ಯಿಟ್ಟು ನೋಡುತ್ತಿದ್ದಷ್ಟೂ ಆತನಿಗೆ ಬೇಸರ ತೋರದೆ ಇತ್ತು. ಆಗ ಅವನ ಮನಸ್ಸಿಗೆ ಇಂಗ್ಲೆಂಡಿನವರ ಐಶ್ವರ್ಯವೂ, ಹಿಂದೂದೇಶೀಯರ ಬಡತನವೂ ಚೆನ್ನಾಗಿ ಗೊತ್ತಾದುವು.

ಈತನು ಮಾರ್ಗಮಧ್ಯದಲ್ಲಿ ಮಾಂಚೆಸ್ಟರ್ ಪಟ್ಟಣದಲ್ಲಿಳಿದು ವಸ್ತ್ರನಿರ್ಮಾಣವೇ ಮೊದಲಾದ ಕೆಲಸಗಳನ್ನು ಮಾಡುವ ದೊಡ್ಡ ದೊಡ್ಡ ಯಂತ್ರಶಾಲೆಗಳನ್ನು ನೋಡಿದನು. ಅಲ್ಲಿನ ಅಧ್ಯಕ್ಷರು ಮರ್ಯಾದೆಯಿಂದ ರಾಮಮೋಹನನನ್ನು ಕರೆದುಕೊಂಡುಹೋಗಿ, ಪ್ರತಿಯೊಂದು ಯಂತ್ರವನ್ನೂ ತೋರಿಸಿ ಅವುಗಳ ಉಪಯೋಗವನ್ನು ವಿವರಿಸಿದರು. ಯಂತ್ರಶಾಲೆಗಳಲ್ಲಿಯೂ, ಕರ್ಮಶಾಲೆಯಲ್ಲಿಯೂ, ಕೆಲಸಮಾಡುವ ಸಾವಿರಾರು ಮಂದಿ ಕೆಲಸಗಾರರು ಹಿಂದೂದೇಶದಿಂದ ಒಬ್ಬ ರಾಜನು ಬಂದಿರುವನೆಂದು ಹೇಳಿಕೊಳ್ಳುತ್ತಾ ಗುಂಪು ಕೂಡಿ ನೋಡಲಿಕ್ಕೆ ಬಂದರು. ಅವರಲ್ಲಿ ಕೆಲವರಿಗೆ ಕೈಕೊಟ್ಟು (ಪಾಶ್ಚಾತ್ಯರಲ್ಲಿ ಇದೊಂದು ಮರ್ಯಾದೆ) ರಾಮಮೋಹನನು ತುಂಬಾ ಗೌರವಿಸಿದನು. ಈ ಪ್ರಕಾರ ಅಲ್ಲಿ ಒಂದು ದಿನವಿದ್ದು, ಮರುದಿನ ಲಂಡನ್ ಪಟ್ಟಣವನ್ನು ಪ್ರವೇಶಿಸಿದನು.

ರಾಮಮೋಹನನು ಲಂಡನ್ ಪಟ್ಟಣವನ್ನು ಪ್ರವೇಶಿಸುವ ವೇಳೆಗೆ ರಾತ್ರಿ ಬಹಳ ಹೊತ್ತಾದುದರಿಂದ ಆ ಪಟ್ಟಣದ ಒಂದು ಮೂಲೆಯಲ್ಲಿದ್ದ ಹೋಟಲ್‌ನಲ್ಲಿ ಇಳಿದನು. ಆದರೆ ಆ ಹೋಟಲ್‌ನಲ್ಲಿನ ಕೋಣೆಗಳೆಲ್ಲವೂ ಬಹು ದುರ್ಗಂಧಮಯವಾಗಿದ್ದುದರಿಂದ ಅಲ್ಲಿ ಇರಲೊಪ್ಪದೆ, ಊಟಮಾಡುವುದಕ್ಕೆ ಮಾತ್ರ ಸ್ವಲ್ಪಹೊತ್ತು ತಂಗಿದ್ದು ಒಡನೆಯೇ ಒಂದು ಬಾಡಿಗೆ ಬಂಡಿಯಮೇಲೆ ಹತ್ತಿ "ಎಡಲ್‌ಫಿ" ಎಂಬ ಹೋಟೆಲಿಗೆ ಹೋಗಿ ಅಲ್ಲಿ ಬಿಡಾರ ಮಾಡಿದನು.

ಹೀಗೆ ಮೊಟ್ಟಮೊದಲು ರಾಮಮೋಹನನು ಯಾವವಿಧವಾದ ಅಟ್ಟಹಾಸವೂ, ಆರ್ಭಟವೂ ಇಲ್ಲದೆ ದೇಶಸಂಚಾರಮಾಡುವ ಸಾಮಾನ್ಯಪುರುಷನಂತೆ ಲಂಡನ್ ಪಟ್ಟಣವನ್ನು ಪ್ರವೇಶಿಸಿದನು. ಅಲ್ಲಿನ ಪ್ರಜೆಗಳು, ಸರ್ಕಾರದ ದೊಡ್ಡ ಅಧಿಕಾರಿ ಬಂದಾಗ ಮಾಡತಕ್ಕ ಮರ್ಯಾದೆಗಳನ್ನೆಲ್ಲಾ ಆತನಿಗೆ ಮಾಡಿ ಗೌರವಿಸಿದರು. ಈತನು ಲಂಡನ್ ಸೇರಿದನೆಂಬ ಸುದ್ದಿ ಕೇಳಿದಕೂಡಲೆ ಪ್ರಜೆಗಳಲ್ಲಿ ಪ್ರಮುಖರಾದವರೂ ಸರ್ಕಾರದಲ್ಲಿ ದೊಡ್ಡದೊಡ್ಡ ಅಧಿಕಾರಗಳಲ್ಲಿದ್ದು ಈತನ ಹೆಸರನ್ನಿದುವರೆಗೆ ಕೇಳಿರುವವರೂ ಬಂದು ಈತನನ್ನು ನೋಡುತ್ತಿದ್ದರು. ಈತನು ತಂಗಿದ್ದ ರೀಜಂಟೆಂಬ ಬೀದಿಯೆಲ್ಲವೂ ಬೆಳಗ್ಗೆ 11 ಗಂಟೆಯಿಂದ ಸಾಯಂಕಾಲ 4 ಗಂಟೆಯತನಕ ಬಂಡಿಗಳಿಂದ ತುಂಬಿಹೋಗಿತ್ತು. ಇಂಗ್ಲೀಷರು ರಾಮಮೋಹನನೊಂದಿಗೆ ಸೇರಿ ಮಾತನಾಡುವುದೆಂಬುದೊಂದು ಗೌರವವಾಗಿ ಭಾವಿಸುತ್ತಿದ್ದರು. ಅಲ್ಲಿಗೆ ಬಂದವರೆಲ್ಲರೂ ಆತನ ಧೈರ್ಯವನ್ನೂ ಲೋಕಾನುಭವವನ್ನೂ, ಬುದ್ಧಿವಿಶೇಷವನ್ನೂ, ಪ್ರತಿಭಾಪ್ರಭಾವವನ್ನೂ, ಮೃದುಮಧುರ ಪದಗುಂಭನವನ್ನೂ ಕೊಂಡಾಡಿ ಹೋಗುತ್ತಿದ್ದರು. ದೊಡ್ಡ ತತ್ವಶಾಸ್ತ್ರಜ್ಞನೊಬ್ಬನು ಇವರೊಡನೆ ಬಹಳ ಹೊತ್ತಿನತನಕ ಮಾತನಾಡಿ "ನಿಮ್ಮಿಂದ ಬರೆಯಲ್ಪಟ್ಟ ಕೆಲವು ಗ್ರಂಥಗಳನ್ನು ಓದಿ ನೋಡಿದೆನು. ಅವುಗಳನ್ನು ಒಬ್ಬ ಹಿಂದುವು ಬರೆದನೆಂದು ಅವುಗಳ ಮೇಲೆ ಬರೆಯಲ್ಪಡದೆ ಹೋಗಿದ್ದರೆ ಅವು ಇಂಗ್ಲಿಷ್ ಭಾಷೆಯಲ್ಲಿ ಅಷ

ರಿಮಿತ ಪ್ರಜ್ಞೆಯನ್ನು ಸಂಪಾದಿಸಿದ ಒಬ್ಬ ಇಂಗ್ಲಿಷರವನೇ ಬರೆದಿರುವನೆಂದು ತಿಳಿಯುತ್ತಿದ್ದೆನು'' ಎಂದು ಹೇಳಿದನು.

ಸ್ವಲ್ಪ ದಿನಗಳಲ್ಲಿಯೇ ಲಂಡನ್ ಯೂನಿಟೇರಿಯನ್ ಸಂಘದವರು ನೂತನವಾಗಿ ತಮ್ಮ ನಗರಕ್ಕೆ ಬಂದ ಆ ಮಹನೀಯನಿಗೆ ಸ್ವಾಗತವನ್ನು ಕೊಡಲಿಕ್ಕೆ ಒಂದು ಸಭೆಯನ್ನು ಕೂಡಿಸಿದರು. ರಾಮಮೋಹನನು ಡಾಕ್ಟರ್ ಕಾರ್ಪೆಂಟರ್ ಎಂಬ ಸ್ನೇಹಿತನೊಡಗೂಡಿ ಅಲ್ಲಿಗೆ ಬಂದನು. ಈತನು ಲಂಡನ್ನಿನಲ್ಲಿ ಒಬ್ಬ ಮತಬೋಧಕನು, ಬ್ರಿಷ್ಟಲ್ ನಗರವಾಸಿ, ರಾಮಮೋಹನನು ಕಲ್ಕತ್ತೆಯಲ್ಲಿ ಇದ್ದಂದಿನಿಂದಲೂ ಆತನ ಪ್ರಸಿದ್ಧಿಯನ್ನು ತಿಳಿದಿದ್ದನು. ಈಗ ರಾಮಮೋಹನನು ಲಂಡನ್ನಿಗೆ ಬಂದ ಮೊದಲುಗೊಂಡು ಆತನಿಗೆ ಬಹಳ ಆಪ್ತನಾದನು. ''ಲ್ಯಾಸ್ಟ್‌ಡೇಸ್ ಆಫ್ ರಾಮಮೋಹನರಾಯ್ ಇನ್ ಇಂಗ್ಲೆಂಡ್'' ಎಂಬ ಚರಿತ್ರೆಯನ್ನು ಬರೆದ ''ಮಿಸ್ ಮೇರಿ ಕಾರ್ಪೆಂಟರ್'' ಎಂಬ ಸಾಧ್ವೀಮಣಿಯು ಈತನ ಮಗಳೇ. ಸಭಿಕರೆಲ್ಲರೂ ಅತ್ಯುತ್ಸಾಹದಿಂದ ರಾಮಮೋಹನನನ್ನು ಎದುರುಗೊಂಡರು. ಈ ವಿಷಯವೆಲ್ಲವೂ 1831 ನೇ ಜೂನ್ ತಿಂಗಳ 'ಮಂತ್ಲಿ ರಿಪಾಜಿಟರಿ' ಎಂಬ ಮಾಸಪತ್ರಿಕೆಯಲ್ಲಿ ವಿಶದವಾಗಿ ಪ್ರಕಟಿಸಲ್ಪಟ್ಟಿದೆ. ಮತ್ತು ಮಿಸ್ ಮೇರಿ ಕಾರ್ಪೆಂಟರ್ ಎಂಬ ಯುವತೀಮಣಿಯು ತನ್ನ ಪುಸ್ತಕದಲ್ಲಿಯೂ ಸ್ವಲ್ಪಮಟ್ಟಿಗೆ ಬರೆದಿರುವಳು. ಅದರಲ್ಲಿನ ಅಂಶಗಳನ್ನಿಲ್ಲಿ ಸಂಗ್ರಹವಾಗಿ ತಿಳಿಸುವೆವು.

'' ರಾಮಮೋಹನನು ಸಭಾದ್ವಾರದ (Plat Form) ಹತ್ತಿರಕ್ಕೆ ಬಂದಕೂಡಲೇ ಸಾವಿರಾರುಮಂದಿ ಸಭಿಕರು '' ರಾಮಮೋಹನನಿಗೆ ವಿಜಯವಾಗಲಿ '' ಎಂದು ಹೇಳಿ ಕರತಾಳಧ್ವನಿಮಾಡಿದರು. ಆಗ ಪ್ರಮುಖರಾದವರು ಎದುರಾಗಿಬಂದು ರಾಮಮೋಹನನನ್ನು ಒಳಕ್ಕೆ ಕರೆದುಕೊಂಡುಹೋಗಿ, ಉನ್ನತ ಪೀಠದಲ್ಲಿ ಕುಳ್ಳಿರಿಸಿದ ತರುವಾಯ, ಅಗ್ರಾಸನಾಧಿಪತಿಯು ಎದ್ದುನಿಂತು, '' ನಮ್ಮೆಲ್ಲರ ಆತ್ಮಗಳಿಗೆ ಪ್ರಿಯಮಿತ್ರನಾದ ಒಬ್ಬ ಸುಪ್ರಸಿದ್ಧನನ್ನು ಗೌರವಿಸುವುದಕ್ಕೆ ಈದಿನ ಸಭೆಗೂಡಿಸಲ್ಪಟ್ಟಿದೆ. ಸ್ನೇಹಿತನೆಂದು ಹೇಳುವುದಕ್ಕೆ ಈ ಮಹಾತ್ಮನು ಅಪ್ಪಣೆ ಕೊಡದೆ ಇರನು '' ಎಂಬ ಮಾತಿನಿಂದ ಉಪಕ್ರಮಿಸಿ, ಆತನ ಗುಣಗಳನ್ನು ವರ್ಣಿಸಿ ಬಹಳಹೊತ್ತು ಉಪನ್ಯಾಸ ಮಾಡಿದನು. ಈ ಉಪನ್ಯಾಸ ಮುಗಿದ ಮೇಲೆ ''ವೆಸ್ಟ್ ಮಿನಿಸ್ಟರ್ ರಿವ್ಯೂ'' ಎಂಬ ಪತ್ರಿಕಾಧಿಪತಿಯಾದ ಸರ್ ಜಾನ್ ಬೋರಿಂಗ್ ಎಂಬಾತನು, ಎದ್ದು ನಿಂತು ಮೃದುವಾಕ್ಯಗಳಿಂದ ರಾಮಮೋಹನನು ಮಾಡಿದ ಸಹಗಮನನಿಷೇಧಾದಿ ಲೋಕೋಪಕಾರಕ ಕಾರ್ಯಗಳನ್ನೂ ಸಂಧಿಸಂಸ್ಕಾರವನ್ನೂ ಕುರಿತು ಈತನಿಂದ ರಚಿಸಲ್ಪಟ್ಟ ಗ್ರಂಥಗಳನ್ನೂ, ಯೂನಿಟೇರಿಯನ್ ಮತದಲ್ಲಿ ಆತನು ತೋರಿಸಿದ ಅಭಿಮಾನವನ್ನೂ, ಇಂಗ್ಲೆಂಡಿನಲ್ಲಿ ಆತನಿಗೆ ಉಂಟಾಗಿರುವ ಪ್ರಸಿದ್ಧಿಯನ್ನೂ ಕುರಿತು, ಯುಕ್ತಿಯುಕ್ತವಾಗಿ ಬಹಳ ಹೊತ್ತಿನ ತನಕ ಉಪನ್ಯಾಸಮಾಡಿ, ಇಂತಹ ಸುಗುಣ ಸಂಪನ್ನನನ್ನು ನಾವು ಈಗ ಕಣ್ಣುತುಂಬ ನೋಡುವ ಭಾಗ್ಯವನ್ನೂ, ಮನಃಪೂರ್ತಿಯಾಗಿ ಆತನಿಗೆ ಸ್ವಾಗತವನ್ನೂ ಕೊಡುವ ಅದೃಷ್ಟವನ್ನೂ ಪಡೆದುದಕ್ಕೆ ತುಂಬ ಸಂತೋಷಪಡಬೇಕಾಗಿದೆ ಎಂದು ನುಡಿದನು.

ತರುವಾಯ ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿನ ಹಾರ್ವಾಡ್ ಯೂನಿವರ್ಸಿ ಟಿಗೆ ಪ್ರಸಿಡೆಂಟರಾಗಿದ್ದ ಡಾಕ್ಟರ್ ಕಾರ್ಕ್ ಲೇಡ್ ಎಂಬ ಪಂಡಿತರು ಎದ್ದು ನಿಂತು ಹೇಳಿದ ಉಪನ್ಯಾಸಗಳ ಅಂಶಗಳನ್ನು ದೃಢಪಡಿಸುತ್ತಾ, ಕೊನೆಯಲ್ಲಿ “ ಅಮೇರಿಕಾಖಂಡದಲ್ಲಿ ಈ ರಾಯರವರ ಪ್ರಸಿದ್ಧಿಯು ಎಲ್ಲಾ ಕಡೆಯಲ್ಲಿಯೂ ಹಬ್ಬಿಕೊಂಡಿರುವ ಸಂಗತಿಯನ್ನು ಅವರು ಈ ಮಹಾತ್ಮನ ದರ್ಶನವನ್ನಪೇಕ್ಷಿಸಿ, ಎದುರುನೋಡುತ್ತಲಿರುವ ಅಂಶವನ್ನೂ ನೀವೆಲ್ಲರೂ ತಿಳಿದೇ ಇರುವಿರಿ, ಆದುದರಿಂದ ನೀವೆಲ್ಲರ ಪಕ್ಷವಾಗಿ ಒಂದು ಸಾರಿ ಆ ಖಂಡಕ್ಕೆ ಬಿಜಯಮಾಡಿಸಬೇಕು ಎಂದು ಸವಿನಯದಿಂದ ಈ ಮಹಾತ್ಮನಾದ ರಾಜಾ ರಾಮಮೋಹನರಾಯನನ್ನು ಪ್ರಾರ್ಥಿಸುತ್ತೇನೆ ” ಎಂದು ನುಡಿದನು. ಈ ಉಪನ್ಯಾಸಕ್ಕೆ ಉಪಬಲವಾಗಿ ಫಾದಿರಿ ಫಾಕ್ಸ್ ಎಂಬಾತನು ಮಾತನಾಡಿದನು.

ಹೀಗೆಲ್ಲರೂ ಹೇಳಿದ ಬಳಿಕ ಅಗ್ರಾಸನಾಧಿಪತಿಯು ಸಭೆಯಲ್ಲಿದ್ದವರನ್ನೆಲ್ಲ ನೋಡಿ, “ನಾವೆಲ್ಲರೂ ಆತನ ಗೌರವಾರ್ಥವಾಗಿ ಒಂದುಸಾರಿ ಎದ್ದು ನಿಲ್ಲಬೇಕೆಂದು ಕೋರುತ್ತೇನೆ” ಎಂದು ಹೇಳಿದನು. ಆ ಪ್ರಾರ್ಥನೆಯನ್ನು ಎಲ್ಲರೂ ಮನಃಪೂರ್ವಕವಾಗಿ ಅಂಗೀಕರಿಸಿ, ಎದ್ದು ನಿಂತುಕೊಂಡುದಲ್ಲದೆ ರಾಮಮೋಹನರಾಯನಿಗೆ ಈಶ್ವರನು ದೀರ್ಘಾಯುವನ್ನು ದಯಪಾಲಿಸಿ ! ಜಯವನ್ನೀಯಲಿ ! ಎಂದು ದಿಕ್ಕುಗಳು ಪ್ರತಿಧ್ವನಿ ಕೊಡುವಂತೆ ಧ್ವನಿಮಾಡಿ ಕೈತಪ್ಪಾಳೆಯನ್ನು ಮೊಳಗಿಸಿದರು.

ಆಗ ರಾಮಮೋಹನನು ಎದ್ದು “ನನ್ನ ದೇಹಕ್ಕೆ ಸ್ವಲ್ಪ ಅಸ್ವಸ್ಥವಾಗಿರುವುದರಿಂದ ಹೆಚ್ಚು ಸಂಗತಿಗಳನ್ನು ಹೇಳಲಾರದೆ ಹೋದುದಕ್ಕಾಗಿ ನಿಮ್ಮಗಳ ಕ್ಷಮೆ ಬೇಡುವೆನು. ನೀವೆಲ್ಲರೂ ನನ್ನನ್ನು ಇಷ್ಟುಮಟ್ಟಿಗೆ ಗೌರವಿಸಿದುದಕ್ಕೂ ವಿದೇಶೀಯನಾದ ನನ್ನನ್ನು ನಿಮ್ಮ ಸಮಾಜದವನಾಗಿ ಭಾವಿಸಿ ಸ್ನೇಹಿತನೆಂತಲೂ, ಆಪ್ತನೆಂತಲೂ, ಸಹೋದರನೆಂತಲೂ ಸಂಬೋಧಿಸಿ ಹೇಳಿದುದಕ್ಕೂ ನಿಮ್ಮೆಲ್ಲರಿಗೂ ಮನಃಪೂರ್ವಕವಾಗಿ ಕೃತಜ್ಞತಾಸೂಚಕವಾದ ವಂದನೆಗಳನ್ನು ಅರ್ಪಿಸುವೆನು. ಆದರೆ ನಿಮ್ಮಿಂದ ಏತಕ್ಕೋಸ್ಕರ ನಾನು ಇಷ್ಟರಮಟ್ಟಿಗೆ ಗೌರವಿಸಲ್ಪಟ್ಟೆನೋ ಮತ್ತು ಯಾವ ಕಾರಣದಿಂದ ನಿಮ್ಮೆಲ್ಲರಿಂದಲೂ ಹೀಗೆ ಸೌಹೃದವನ್ನು ಪಡೆದೆನೋ ಆ ಹೇತುವನ್ನು ಮಾತ್ರ ತಿಳಿಯಲಾರದೆ ಚಿಂತಿಸುತ್ತ, ನಿಮ್ಮಗಳನ್ನೇ ಕೇಳಬೇಕೆಂದು ಅಪೇಕ್ಷಿಸಿರುವೆನು. ನಾನು ಒಬ್ಬ ದೇವನನ್ನೇ ನಂಬತಕ್ಕವನು ಮತ್ತು ನಿಮ್ಮೆಲ್ಲರಿಂದ ಅನುಷ್ಠಿಸಲ್ಪಡುವ ಪ್ರಾರ್ಥನ ಪದ್ಧತಿಗಳನ್ನು ಸ್ವಲ್ಪ ಹೆಚ್ಚು ಕಡಿಮೆ ನಾನೂ ಒಪ್ಪಿಕೊಳ್ಳುವೆನು. ಆದರೆ ಅವುಗಳನ್ನೆಲ್ಲ ಕೇವಲ ಮುಕ್ತಿಗೆ ಸಾಧನಗಳೆಂತಲೂ, ಅವುಗಳನ್ನು ನನ್ನ ಸೌಖ್ಯಕ್ಕಾಗಿ ಮಾತ್ರವೇ ಆಚರಿಸುತ್ತಿರುವೆನೆಂತಲೂ ನನ್ನ ಅಭಿಪ್ರಾಯವು. ಇಷ್ಟುಮಾತ್ರವಲ್ಲದೆ ನಿಮ್ಮ ಸಮಾಜಕ್ಕೆ ಸಹಾಯಕರಗಳಾಗಿರುವ ಕಾರ್ಯಗಳು ಯಾವುದನ್ನಾದರೂ ಮಾಡಿ, ನಿಮ್ಮಿಂದ ಸ್ತೋತ್ರಾರ್ಹನೆನಿಸಿಕೊಳ್ಳಲಿಕ್ಕೆ ತಕ್ಕ ಯೋಗ್ಯತೆಯು ನನ್ನಲ್ಲಿ ಯಾವುದೂ ಇಲ್ಲವೆಂದೂ ಒಪ್ಪಿಕೊಳ್ಳುತ್ತೇನೆ. ನಾನು ಹಿಂದೂ ದೇಶದಲ್ಲಿದ್ದು, ಯೂನಿಟೇರಿಯನ್ ಮತದಲ್ಲಿ ಅಭಿಮಾನವನ್ನು ತೋರಿಸುತ್ತಾ, ಬ್ರಹ್ಮಸಮಾಜಸ್ಥಾಪನೆ ಮಾಡಿದಾಗ ಹಿಂದೂಜನರೂ ಕ್ರಿಸ್ತ

ಯರೂ ನನಗೆ ಹಗೆಗಳಾದರು ನನ್ನ ಕೆಲಸಗಳಿಗೆ ಹಲವುಬಗೆಗಳಿಂದ ವಿಘ್ನವನ್ನು ಕಲ್ಪಿಸಿದರು. ಆದರೆ ಯಾರು ಎಷ್ಟುವಿಧಗಳಿಂದ ಪ್ರಯತ್ನಿಸಿದರೂ ಸತ್ಯವು ಯಾವ ಪಕ್ಷದಲ್ಲಿರುವುದೋ, ಆಕಡೆಗೆ ಅಪಜಯವುಂಟಾಗಲಾರದೆಂದು ನನಗೆ ಪೂರ್ಣವಾದ ನಂಬಿಕೆ ಇತ್ತು. ಪವಿತ್ರಗ್ರಂಥಗಳು ನಿಮ್ಮ ಪಕ್ಷದಲ್ಲಿ ಬಲೀಯವಾಗಿವೆ ಎಂದು ನನ್ನ ಅಂತರಾತ್ಮಕ್ಕೆ ತೋರಿತು. ಹೀಗೆ ಜ್ಞಾನವೂ ಪವಿತ್ರಗ್ರಂಥಗಳೂ ಒಂದು ಕಡೆಯಲ್ಲಿಯೂ, ಐಶ್ವರ್ಯವೂ, ಪ್ರಜಾಬಲವೂ ಮತ್ತೊಂದು ಕಡೆಯಲ್ಲಿಯೂ ಇದ್ದು ಕೆಲವು ಕಾಲದ ತನಕ ಹೋರಾಡಿದರೂ ಶೀಘ್ರದಿಂದಲೋ ಸಾವಕಾಶದಿಂದಲೋ ಜ್ಞಾನಪಕ್ಷವೇ ಜಯವನ್ನು ಪಡೆಯುವದೆಂಬುದೇ ನನ್ನ ಅಭಿಪ್ರಾಯವಾಗಿದೆ '' ಎಂದು ಆತನು ಉಪನ್ಯಾಸ ಮಾಡಿದ ತರುವಾಯ ಬಹುಸಂತೋಷದಿಂದ ಸಭೆಯು ಮುಗಿಯಿತು.

ಹೀಗೆ ಕ್ರಮವಾಗಿ ರಾಮಮೋಹನನು ಲಂಡರ್ನನಲ್ಲಿಯೂ, ಅದರ ಸುತ್ತಣ ಪಟ್ಟಣಗಳಲ್ಲಿಯೂ ಇರುವ ಯೂನಿಟೇರಿಯನ್ ಮಂದಿರಗಳನ್ನೆಲ್ಲ ನೋಡಿ, ಅವುಗಳಲ್ಲೆಲ್ಲ ಒಂದೇ ವಿಧವಾದ ಗೌರವವನ್ನು ಪಡೆದನು. ಮತ್ತು ಕೆಲವು ಸಭೆಗಳಲ್ಲಿ ನಡೆದ ಸಂವತ್ಸರೋತ್ಸವಗಳಿಗೂ ಹೋಗಿ ಬರುತ್ತಿದ್ದನು.

ವಿಶಾಲಜ್ಞಾನದಿಂದ ಕೂಡಿದ ನಾಗರಿಕರಲ್ಲಿ ಅಗ್ರಗಣ್ಯರಾದ ಪಾಶ್ಚಾತ್ಯರಲ್ಲಿ ರಾಮಮೋಹನನು ಈರೀತಿಯಾಗಿ ವರ್ಣನೀಯನಾಗಿಯೂ, ಗೌರವ್ಯನಾಗಿಯೂ ಹೆಸರುಗೊಂಡುದಕ್ಕೆ ಆತನ ಮತವ್ಯಾಪನೆಯಲ್ಲಿಯ ಶ್ರದ್ಧೆಯೂ ಗ್ರಂಥರಚನೆಯೂ, ಜ್ಞಾನವೂ ಮಾತ್ರವೇ ಕಾರಣಗಳಾಗಿರಲಿಲ್ಲ. ಅವುಗಳ ಜತೆಗೆ ಆತನ ಸುಗುಣಸಂಪತ್ತಿಯೂ ಮುಖ್ಯಕಾರಣವಾಗಿದ್ದಿತು. ಪ್ರತಿಯೊಬ್ಬರ ಸಂಗಡಲೂ ನಗೆಮೊಗದಿಂದ ಮಾತನಾಡುವಿಕೆಯೂ, ಮಾತನಾಡುವಾಗ ಎದುರಾಗಿರುವವರ ಮನಸ್ಸನ್ನು ಮೆಚ್ಚಿಸುವುದಕ್ಕಾಗಿ ಪ್ರಯತ್ನಿಸುವಿಕೆಯು, ಅವರ ಮನಸ್ಸಿಗೆ ಅಹಿತವನ್ನಾಗಲಿ ಬಿಡಾಸೆಯನ್ನಾಗಲಿ ಉಂಟುಮಾಡುವ ಮಾತುಗಳನ್ನು ಉಚ್ಚರಿಸದೆ ಇರುವಿಕೆಯು, ಅವರೊಡನೆ ಸಂಭಾಷಿಸುತ್ತಿರುವಿಕೆಯು, ತನ್ನ ಮನಸ್ಸಿನ ಯೋಚನೆಗಳನ್ನು ಹೊರಕ್ಕೆ ಕಾಣಬರದಂತೆ ಇಟ್ಟಿರುವಿಕೆಯು, ಎಂಬೀಸುಗುಣಗಳಿಂದ ಬಹು ಸ್ವಲ್ಪಕಾಲದಲ್ಲಿಯೇ ಆತನಿಗೆ ಅನೇಕರು ಸ್ನೇಹಿತರಾದರು. ಇದರಿಂದ ಈತನು ವಿದ್ವಾಂಸರಲ್ಲಿಯೂ ಮತಸಮಾಜಗಳಲ್ಲಿಯೂ ಮಾತ್ರವಲ್ಲದೆ ಸಾಂಘಿಕ ಸಭೆಗಳಲ್ಲಿಯೂ ಕೂಡ ಸರ್ವಜನಪ್ರಿಯನೆಂತಲೂ, ನಿಗರ್ವಿಯೆಂತಲೂ, ಸ್ನೇಹಪಾತ್ರನೆಂತಲೂ, ಹೊಗಳಲ್ಪಡುತ್ತಿದ್ದನು. ಮತ್ತು ಆ ಕಾಲದಲ್ಲಿ ಪ್ರತ್ಯಕ್ಷವಾಗಿ ನೋಡಿದವರು ದೊಡ್ಡ ಸ್ಥಳಗಳಲ್ಲಿದ್ದ ತಮ್ಮ ಸ್ನೇಹಿತರಿಗೆ ಈತನ ಒಳ್ಳೇ ನಡತೆಯನ್ನೂ ವಿದ್ಯಾವಿಶೇಷಗಳನ್ನೂ ಕುರಿತು ಬರೆದ ಪತ್ರಿಕೆಗಳೂ ತನಗೆ ಹೊಸದಾಗಿ ಸ್ನೇಹಿತರಾದವರಿಗೆ ರಾಮಮೋಹನನು ಬರೆದ ಪತ್ರಗಳೂ ಈ ವಿಷಯವನ್ನು ದೃಢಪಡಿಸುತ್ತವೆ.

ರಾಮಮೋಹನನು ತನ್ನ ಸಾಕುಮಗನಾದ ರಾಜಾರಾಮನು ತನ್ನ ಬಳಿಯಲ್ಲಿದ್ದರೆ ಕ್ರಮವಾದ ವಿದ್ಯಾಭಿವೃದ್ಧಿ ಪಡೆಯಲಾರನೆಂದು ತಿಳಿದು ಡೇವಿಸ್ ಎಂಬ ತನ್ನ ಸ್ನೇಹಿತ

ನಿಗೆ ಅವನನ್ನು ಒಪ್ಪಿಸಿದನು. ಆತನು ಇವನನ್ನು ತನ್ನ ಮಕ್ಕಳಲ್ಲಿ ಒಬ್ಬನಂತೆ ತಿಳಿದು ತುಂಬ ಪ್ರೇಮದಿಂದ ನೋಡುತ್ತಿದ್ದನು. ವಿರಾಮ ದೊರೆತಾಗ ರಾಮಮೋಹನನು ತಾನೇ ಹೋಗಿ ಆ ಹುಡುಗನನ್ನು ವಿಚಾರಿಸುತ್ತಾ ಉಳಿದ ಕಾಲಗಳಲ್ಲಿ ಪತ್ರಗಳಿಂದ ಅವನ ಕ್ಷೇಮ ಸಮಾಚಾರವನ್ನು ತಿಳಿದುಕೊಳ್ಳುತ್ತಾ ಇದ್ದನು. ಇದರಿಂದ ಅವನ ಮನೆಯವರೆಲ್ಲರಿಗೂ ಈತನಲ್ಲಿ ತುಂಬಾ ವಿಶ್ವಾಸವುಂಟಾಯಿತು.

ಡೇವಿಸ್‌ರವರಿಗೆ ಆ ಕಾಲದಲ್ಲಿಯೇ ಒಬ್ಬ ಮಗ ಹುಟ್ಟಿದನು. ಆ ಹುಡುಗನಿಗೆ ನಾಮಕರಣಮಾಡುವ ಸಂದರ್ಭದಲ್ಲಿ ರಾಮಮೋಹನನನ್ನು ಕೂಡ ಕರೆಯಿಸಿ ತಮ್ಮನ್ನು ಎಂದಿಗೂ ಮರೆಯದಂತೆ ಈ ನನ್ನ ಮಗನಿಗೆ ತಮ್ಮ ಪವಿತ್ರನಾಮವನ್ನು ದಯಪಾಲಿಸಬೇಕೆಂದು ಡೇವಿಸ್ ಪ್ರಾರ್ಥಿಸಿದನು. ಅದನ್ನು ಆತನು ಅಂಗೀಕರಿಸಿ ಆ ಶಿಶುವಿಗೆ ರಾಮಮೋಹನರಾಯ ಎಂಬ ತನ್ನ ಹೆಸರನ್ನು ಇಟ್ಟನು. ಡೇವಿಸನ್ನಿನ ಸತೀಮಣಿಯೂ ತನ್ನ ಡೈರಿಯಲ್ಲಿ ಹೀಗೆ ಬರೆದಿಟ್ಟಿರುವಳು: "ಆತನು ನನ್ನ ಮಗನನ್ನು ತುಂಬಾ ಪ್ರೇಮದಿಂದ ನೋಡುತ್ತಿದ್ದನು. ಒಂದೊಂದುವೇಳೆ ನಾನು ಮನೆಯಲ್ಲಿ ಎಷ್ಟರ ಒಳಭಾಗದಲ್ಲಿದ್ದರೂ ಅಲ್ಲಿಗೆ ಬಂದು ಆ ಮಗುವನ್ನೆತ್ತಿಕೊಂಡು ಮುದ್ದಿಟ್ಟು ತೂಗುತ್ತಿದ್ದನು. ಆತನು ನನ್ನಲ್ಲಿ ತೋರಿಸಿದ ಭಕ್ತಿವಿನಯಗಳನ್ನು ರಾಜ್ಯವನ್ನಾಳುವ ರಾಣಿಯರಲ್ಲಿ ಸುದಾ ಯಾರೂ ತೋರಿಸಲಾರರೆಂದು ತಿಳಿಯುವೆನು. ಒಂದುಸಾರಿ ಆ ಮಹಾತ್ಮನು ಬಂದ ವೇಳೆಯಲ್ಲಿ ನನ್ನ ಮುದ್ದು ಕುವರನು ಆಡಿಕೊಳ್ಳಲಿಕ್ಕೆ ಎಲ್ಲಿಗೋ ಹೋಗಿದ್ದನು. ಆದರಿಂದ ತಾನು ಅವಸರದಿಂದ ಹೊರಡಬೇಕಾದವನಾಗಿದ್ದರೂ ಆ ಬಾಲಕನನ್ನು ಕರೆದುಕೊಂಡು ಬರುವತನಕ ತಡೆದು ನಿಂತನು. ಪಾಪ! ಆಗಲೇ ಆತನು ತನ್ನ ರುದ್ರಭೂಮಿಯಾದ ಬ್ರಿಸ್ಟಲ್ಲಿಗೆ ಹೊರಟಿದ್ದನು."

ರಾಮಮೋಹನನು ಕಲ್ಕತ್ತೆಯಿಂದ ಹೊರಡುವಾಗ್ಗೆ ಆತನಿಗೆ ಪ್ರಾಣಮಿತ್ರನಾದ ಡೇವಿಡ್ ಹೇರ್ ಎಂಬವನು ತನ್ನ ಸಹೋದರರಿಗೆ ಒಂದು ಪತ್ರವನ್ನು ಬರೆದಿದ್ದನು. ಅದರಲ್ಲಿ ನಿಮ್ಮ ಕೈಯಿಂದಲಾದಮಟ್ಟಿಗೆ ರಾಮಮೋಹನನಿಗೆ ಮರ್ಯಾದೆಮಾಡುವುದರಲ್ಲಿ ಸ್ವಲ್ಪವೂ ಲೋಪವಿಲ್ಲದಂತೆ ನೋಡಿಕೊಳ್ಳಬೇಕೆಂತಲೂ, ಪರದೇಶಸ್ಥರಿಗೆ ಪರಸ್ಥಳಗಳಲ್ಲಿ ತೋರುವ ಕಷ್ಟಗಳು ಯಾವುವೂ ಈತನಿಗೆ ಸಂಭವಿಸದಂತೆ ಮಾಡತಕ್ಕದ್ದೆಂತಲೂ, ಅವರಿಗೆ ತಿಳಿಹಿಸಿದ್ದುದರಿಂದ ಬೆಡ್‌ಫರ್ಡು ಸ್ಕ್ವಯರ್ ಎಂಬ ಬೀದಿಯಲ್ಲಿ ದೊಡ್ಡ ವರ್ತಕರಾಗಿದ್ದ ಆತನ ಸೋದರರು ರಾಮಮೋಹನನು ಲಂಡನ್ ನಗರವನ್ನು ಪ್ರವೇಶಿಸಿರುವನೆಂಬ ಸುದ್ದಿಯನ್ನು ಕೇಳಿದ ಕೂಡಲೆ ಆತನ ಬಳಿಗೆ ಬಂದು ತಾವು ನಮ್ಮ ಮನೆಗೆ ದಯಮಾಡಿ ಅಲ್ಲಿಯೇ ವಾಸಮಾಡುತ್ತಿರಬೇಕೆಂತಲೂ, ನಾವೆಲ್ಲರೂ ಸೇವಕರಂತೆ ತಮ್ಮ ಕೆಲಸಗಳನ್ನು ನಡೆಸುತ್ತಿರುವೆವೆಂತಲೂ, ಹಲವು ಬಗೆಯಿಂದ ಬೇಡಿಕೊಂಡರು. ಆದರೆ ಅದರಿಂದ ಅವರಿಗೆ ತೊಂದರೆಯುಂಟಾಗುವುದೆಂದು ತಿಳಿದು ಆತನು ಒಡಂಬಡದೆ ಇದ್ದನು. ಆದುದರಿಂದಲೇ ತಾನು ರೀಜಂಟ್ ಬೀದಿಯಲ್ಲಿ ಪ್ರತ್ಯೇಕವಾಗಿ ಕೆಲವು ತಿಂಗಳತನಕ ವಾಸಮಾಡುತ್ತಿದ್ದನು. ಆದರೆ ಬುದ್ಧಿಶಾಲಿಗಳಾದ ಡೇವಿಡ್ ಹೇರನ ಸಹೋದರರು ಆತನನ್ನು ತಮ್ಮ ಮನೆಯಲ್ಲಿ ವಾಸಮಾಡಲಿಕ್ಕೆ ಬರುವ

ತನಕ ನಿತ್ಯವೂ ಬಿಡದೆ ಪ್ರಾರ್ಥಿಸುತ್ತಿದ್ದರು. ಕೊನೆಗೆ ರಾಮಮೋಹನನು ಅವರ ಕೋರಿಕೆಯನ್ನು ತಿರಸ್ಕರಿಸಲಾರದೆ ತನ್ನ ನಿವಾಸವನ್ನು ಅಲ್ಲಿಗೆ ಬದಲಾಯಿಸಿದನು. ತರುವಾಯ ಈ ಸತ್ಪುರುಷರು ರಾಮಮೋಹನನಿಗೆ ಹಲವು ಬಗೆಗಳಲ್ಲಿ ಸಹಾಯಕರಾದರು. ಹೆತ್ತ ಮಕ್ಕಳಂತೆ ಸೇವೆಮಾಡುತ್ತಿದ್ದರು. ಆತನು ಎಲ್ಲಿಗೆ ಹೊರಟರೂ ತಪ್ಪದೆ ಅವರಲ್ಲಿ ಒಬ್ಬನು ಅವನ ಹಿಂದೆ ಹೊರಡುತ್ತಿದ್ದನು. ಕಡೆಗೆ ಮರಣವು ಸಮೀಪಿಸಿದಾಗ ಕೂಡಾ ಇವರೇ ಎಲ್ಲರಿಗಿಂತ ಹೆಚ್ಚಾಗಿ ಸೇವೆಮಾಡುತ್ತಿದ್ದರು. ಸಾವಿರ ಮಾತುಗಳೇಕೆ ? ಯಾರಾದರೂ ತಮ್ಮ ಪ್ರಿಯ ಬಾಂಧವರಲ್ಲಿ ಸಹಿತ ಇವರು ರಾಮಮೋಹನನ ವಿಷಯದಲ್ಲಿ ಪಟ್ಟಷ್ಟು ಶ್ರಮವನ್ನು ಪಟ್ಟಿರಲಾರರೆಂದು ಹೇಳಬಹುದು. ವಾಸ್ತವವಾಗಿ ಇಂತಹ ಸದಯಹೃದಯವೂ, ಸೌಮನಸ್ಯವೂ ಉಳ್ಳ ಜನರು ಯಾವ ಕುಲದಲ್ಲಿ ಹುಟ್ಟಿದರೋ ಅದೇ ಪವಿತ್ರವಾದ ಕುಲವು. ಇಂತಹ ಯೋಗ್ಯಪುರುಷರನ್ನುಳ್ಳದೇ ಪವಿತ್ರವಾದ ದೇಶವು. ರಾಮಮೋಹನರಾಯನು ಇಂಗ್ಲಿಷರ ಮಂಡಲಿಯಲ್ಲಿ ಹೇಗೆ ಮಿಳಿತನಾಗಿದ್ದನೆಂಬ ವಿವರವು ಆತನು ಅವರ ಸ್ವಂತ ಶುಭಕಾರ್ಯಗಳಲ್ಲಿ ಸೇರುತ್ತಿದ್ದನೆಂಬುದರಿಂದಲೇ ವಿಶದವಾಗುವುದು. ಈತನಿಗೆ ವಿನೋದಗಳಲ್ಲಿ ಕೂಡ ಶ್ರದ್ಧೆಯಿದ್ದಿತೆಂಬುದು ಒಂದು ಪತ್ರದಿಂದ ತಿಳಿಯಬರುವುದು. ಆತನು ಈ ಪತ್ರದಲ್ಲಿ ಮಿಸ್ ಕೇಡಲ್ ಎಂಬಾಕೆಗೆ 'ನಾನು ಈ ಸಾಯಂಕಾಲ ಐದು ಘಂಟೆಗೆ ಈಸ್ಟ್ಲೇ ಎಂಬ ನಾಟಕಶಾಲೆಗೆ ಹೊರಡುವುದಕ್ಕೆ ನಿಮ್ಮನ್ನೂ ನಿಮ್ಮ ಮಿತ್ರರನ್ನೂ ಕರೆಯುವುದಕ್ಕಾಗಿ ಬರುವೆನು' ಎಂದು ತಿಳಿಸಿದನು.

ಇಂಗ್ಲಿಷ್ ಪ್ರಜೆಗಳು ರಾಮಮೋಹನನಲ್ಲಿ ತೋರಿದ ಮರ್‍ಯಾದೆಗಳನ್ನೂ ಗೌರವವನ್ನೂ ಕುರಿತು ಇದುವರೆಗೆ ಹೇಳಿದ ವಿಷಯಗಳೇ ಸಾಕೆಂದು ತಿಳಿಯುವೆವು. ಮುಂದೆಯೂ ಸಂದರ್ಭಾನುಸಾರ ಆ ವಿಷಯವನ್ನು ಹೇಳುವೆವು. ಇನ್ನು ಸರ್ಕಾರದವರು ಈತನನ್ನು ಗೌರವಿಸುವುದಕ್ಕೆ ಮಾಡಿದ ಕಾರ್ಯಗಳನ್ನು ಕುರಿತು ನಾವು ತಿಳಿಸಬೇಕಾಗಿದೆ. ಈಸ್ಟಿಂಡಿಯಾ ಕಂಪೆನಿಯವರು ಮೊದಲು ರಾಮಮೋಹನನು "ರಾಜಾ" ಎಂಬ ಬಿರುದನ್ನು ಪಡೆಯುವುದಕ್ಕೂ, ದೆಹಲಿಯ ರಾಜನಿಗೆ ಪ್ರತಿನಿಧಿಯಾಗಿ ಮಾತನಾಡುವುದಕ್ಕೂ ಅಭ್ಯಂತರವನ್ನು ತೋರಿಸಿದರೂ ಕೂಡ ಒಬ್ಬ ದೊಡ್ಡ ಮನುಷ್ಯನಲ್ಲಿ ತೋರಿಸಬೇಕಾದ ಮರ್‍ಯಾದೆಗಳನ್ನೆಲ್ಲ ಈತನಲ್ಲಿ ಮಾಡಿ ತೋರಿಸಿದರು. ಆದರೆ ಇಂಗ್ಲೆಂಡ್ ಸರಕಾರದವರು ರಾಮಮೋಹನನು ಆ ಬಿರುದನ್ನು ಧರಿಸುವುದಕ್ಕೆ ಅಂಗೀಕರಿಸಿ "ಬೋರ್ಡ್ ಆಫ್ ಕಂಟ್ರೋಲ್" ನಲ್ಲಿ ಪ್ರಸಿಡೆಂಟರಾಗಿದ್ದ ಸರ್. ಜೆ. ಪಿ. ಹೌಸಾಯಿಸ್ ಎಂಬ ಪ್ರಮುಖನ ಮೂಲಕ ಇವನನ್ನು ತಮ್ಮ ಬಳಿಗೆ ಕರೆಯಿಸಿಕೊಂಡರು. ಮತ್ತು ರಾಜಕಿರೀಟಧಾರಣ ಮಹೋತ್ಸವದ ದಿನ ಇತರ ರಾಜ್ಯಗಳಿಂದ ಬಂದ ರಾಯಭಾರಿಗಳ ಸಂಗಡ ಸಮಾನವಾಗಿ ಆಸನವನ್ನಿತ್ತು ಈತನನ್ನು ಗೌರವಿಸಿದರು. ಮರಳಿ ಲಂಡನ್ ಪಟ್ಟಣದಲ್ಲಿ ಕಟ್ಟಿಸತೊಡಗಿದ ಸೇತುವೆಯ ಪ್ರಾರಂಭಮಹೋತ್ಸವದ ದಿನ ಕೂಡಿದ ಮಹಾಸಭೆಯಲ್ಲಿ ಪ್ರಭುಪಕ್ಷವಾಗಿ ಒಂದು ಪತ್ರದ ಮೂಲಕ ಇವನಿಗೆ ಆಮಂತ್ರಣ ಕೊಟ್ಟರು.

ಇವುಗಳಲ್ಲದೆ ಸರಕಾರದವರು ರಾಮಮೋಹನರಾಯನು ತನ್ನ ದೇಶೀಯರ ಪಕ್ಷವಾಗಿ ಅವರ ಕ್ಷೇಮವಿಷಯದಲ್ಲಿ ಕೆಲವು ಸಂಗತಿಗಳನ್ನು ತಿಳಿಸಲು ಅವಕಾಶಕೊಟ್ಟರು. ಇದಕ್ಕೋಸ್ಕರವಾಗಿಯೇ ಅನೇಕ ಶ್ರಮಗಳನ್ನು ಸಹಿಸಿ ತಾನು ಇಷ್ಟುದೂರ ಬಂದಿದ್ದನು. ಆದುದರಿಂದ ಇದು ತನ್ನಲ್ಲಿ ತೋರಿದ ಮರ್‍ಯಾದೆಗಳೆಲ್ಲಕ್ಕಿಂತಲೂ ಹೆಚ್ಚಾದುದೆಂದು ಆತನು ಭಾವಿಸಿದನು. 1831 ರಲ್ಲಿ ಹಿಂದುದೇಶದ ಸ್ಥಿತಿಗಳನ್ನು ಕುರಿತು ಒಂದು ಶಾಸನವನ್ನು ಏರ್ಪಡಿಸುವುದಕ್ಕೆ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟಿನ ಪ್ರಜಾಪ್ರತಿನಿಧಿಸಭೆಯವರು ಪ್ರಾರಂಭಿಸಿ, 1832 ನೆಯ ವರುಷದ ಕೊನೆಯತನಕ ಮಸೂದೆಗಳನ್ನು ಬರೆದು, ಪಾರ್ಲಿಮೆಂಟಿನಲ್ಲಿ ಹೌಸ್ ಆಫ್ ಲಾರ್ಡ್ಸ್ ಪ್ರಭುಗಳ ಸಭೆಯಲ್ಲಿ 1833 ನೆಯ ವರುಷದಲ್ಲಿ ಅಂಗೀಕಾರಕ್ಕೋಸ್ಕರ ಇಟ್ಟರು. ಶಾಸನದಲ್ಲಿನ ಚಿತ್ತುಗಳನ್ನು ಬರೆಯುವಾಗ ಆಗತ್ಯವಾದ ಸಾಕ್ಷ್ಯಗಳನ್ನು ಆ ಸಭೆಯವರು ಹಿಂದೂದೇಶದ ಸ್ಥಿತಿಗತಿಗಳನ್ನು ಸ್ವಾನುಭವದಿಂದ ತಿಳಿದಿದ್ದವರಿಂದ ತೆಗೆದು ತಿಳಿದುಕೊಳ್ಳುತ್ತಲಿದ್ದರು. ಅಂತವರಲ್ಲಿ ಹಿಂದೂದೇಶನಿವಾಸಿಯಾಗಿ ಸ್ವದೇಶವನ್ನುದ್ಧರಿಸಲಿಕ್ಕೆ ಬದ್ಧಕಂಕಣನಾಗಿ ಆ ಕಾರ್ಯವು ಮುಗಿಯುವತನಕ ಅದೇ ಕೆಲಸಕ್ಕೋಸ್ಕರ ಅಲ್ಲಿಯೇ ವಾಸಮಾಡಿಕೊಂಡಿದ್ದವನು ರಾಮಮೋಹನನೊಬ್ಬನೇ ಆ ಕಾಲದಲ್ಲಿ ಆ ಶಾಸನ ನಿರ್ಮಾಣಕ್ಕಾಗಿ ಚರ್ಚಿಸುತಿದ್ದ ಎಲ್ಲಾ ವಿಷಯಗಳಲ್ಲಿಯೂ ಈತನ ಸಂಗಡ ಆಲೋಚಿಸುತ್ತಿದ್ದರು. ಮತ್ತು ಆ ದಿನಗಳಲ್ಲಿ ಪಾರ್ಲಿಮೆಂಟಿನ ಎರಡು ಸಭೆಗಳಲ್ಲಿರುವ ಪ್ರಮುಖರಾದ ಸಭಿಕರೆಲ್ಲರೂ ಈತನನ್ನು ಯಾವಾಗಲೂ ನೋಡುತ್ತಲೇ ಇದ್ದರು. ನ್ಯಾಯಸ್ಥಾನಗಳ ಮಾರ್ಪುಗಳನ್ನು, ಸ್ವದೇಶೀಯರಾದ ನ್ಯಾಯಾಧಿಕಾರಿಗಳಿಗೆ ಯೂರೋಪ್ ಖಂಡದವರ ಮೇಲಿರುವ ಅಧಿಕಾರವ್ಯಾಪ್ತಿ, ಜೂರೀಪದ್ಧತಿ, ಎಗ್ಜಿಕ್ಯುಟಿವ್ ಮತ್ತು ಜುಡಿಷಿಯಲ್ ಕೆಲಸಗಳ ವಿಭಜನೆ, ಸರ್ಕಾರದವರ ಆಜ್ಞೆಗಳನ್ನು ಗ್ರಂಥರೂಪವಾಗಿ ಪ್ರಕಟಿಸುವುದು, ಆಕ್ಟುಗಳನ್ನೇರ್ಪಡಿಸುವಾಗ ದೇಶೀಯರ ಅಭಿಪ್ರಾಯಗಳನ್ನು ಪಡೆಯುವುದು, ಸ್ವದೇಶಸೈನ್ಯಗಳನ್ನೇರ್ಪಡಿಸುವುದು, ದೇಶೀಯರಾದವರಿಗೆ ಸರ್ಕಾರದಲ್ಲಿ ದೊಡ್ಡ ದೊಡ್ಡ ಅಧಿಕಾರಗಳನ್ನು ಕೊಡುವುದು, ಸಿವಿಲ್ ಸರ್ವಿಸ್ಸಿಗೆ ಸೇರತಕ್ಕವರ ವಯಸ್ಸಿನ ಪರಿಮಾಣ, ಜಮೀನ್ದಾರರ ಸ್ಥಿತಿಯಲ್ಲಿ ಸುಧಾರಣೆ, ಅವರ ರಕ್ಷಣೆಗಾಗಿ ಒಂದು ಕಾನೂನನ್ನು ಏರ್ಪಡಿಸುವುದು, ಭೂಮಿಯ ಕಂದಾಯವನ್ನು ಶಾಶ್ವತಗೊಳಿಸುವುದು, ಇವೇ ಮೊದಲಾದ ದೊಡ್ಡ ದೊಡ್ಡ ವಿಷಯಗಳಲ್ಲಿ ರಾಮಮೋಹನನು ಕೊಟ್ಟ ಅಭಿಪ್ರಾಯಗಳು ಅಮೋಘಗಳಾಗಿವೆ. ಈತನು ಎಷ್ಟುದೂರ ಆಲೋಚಿಸಿ, ಎಂತಹ ರಾಜತಂತ್ರಾನುಭವವನ್ನು ಈ ಸಾಕ್ಷ್ಯಗಳಲ್ಲಿ ತೋರಿಸಿದನೋ ಅದನ್ನು ತಿಳಿದುಕೊಳ್ಳುವುದಕ್ಕೂ, ಅದರಲ್ಲಿನ ಪ್ರತಿಯೊಂದು ಶಬ್ದವೂ, ರಾಜ್ಯಾಂಗವಿಷಯದಲ್ಲಿ ಎಷ್ಟು ಮತಭೇದಗಳಿದ್ದರೂ ಎಲ್ಲರಿಂದಲೂ ನೋಡಲ್ಪಡತಕ್ಕದ್ದಾಗಿದೆ.

ಆತನು ಭೂಮಿಯ ಕಂದಾಯದ ನಿರ್ಣಯವನ್ನು ಕುರಿತು ಬರೆದುಕೊಟ್ಟ ಸಾಕ್ಷ್ಯವು 1831 ನೆಯ ಇಸವಿ ಆಗಸ್ಟು 19 ರಲ್ಲಿ ಬರೆದನು. ಜುಡಿಷಿಯಲ್ ಏರ್ಪಾಡುಗಳ ಸಾಕ್ಷ್ಯವು 1831 ನೆಯ ಸೆಪ್ಟಂಬರು 19 ರಲ್ಲಿ ಕೊಟ್ಟದ್ದು. ಈತನು 1831 ನೆಯ ಸೆಪ್ಟಂಬರ್

28 ರಲ್ಲಿ ಹಿಂದೂ ದೇಶದ ಸ್ಥಿತಿಗಳನ್ನು ಕುರಿತು ಕೇಳಲ್ಪಟ್ಟ ಪ್ರಶ್ನೆಗಳಿಗೆ ಸದುತ್ತರವನ್ನು ಬರೆದನು. ಈ ವಿಷಯಗಳನ್ನೂ ಕುರಿತ ಆಕ್ಷೇಪಣೆಗಳನ್ನೆಲ್ಲಾ ಕ್ರಮವಾಗಿ ಉದಾಹರಿಸಿ ಅವುಗಳಿಗೆ ಈತನು ಕೊಟ್ಟ ಅಭಿಪ್ರಾಯಗಳನ್ನು ಎಷ್ಟು ಸಂಕ್ಷೇಪವಾಗಿ ಬರೆಯುತ್ತಾ ಬಂದರೂ ಪ್ರತ್ಯೇಕವಾಗಿ ಒಂದು ಪುಸ್ತಕವಾಗದೇ ಇರದು. ಆದುದರಿಂದ ಈ ಸಣ್ಣ ಪುಸ್ತಕದಲ್ಲಿ ಅವುಗಳನ್ನೆಲ್ಲಾ ಬರೆಯಲಿಕ್ಕೆ ಅವಕಾಶವಿಲ್ಲದೆ ನಿದರ್ಶನಕ್ಕಾಗಿ ಕೆಲವನ್ನು ಮಾತ್ರ ಇಲ್ಲಿ ಸಂಗ್ರಹವಾಗಿ ತಿಳಿಸುವೆವು:-

1 ಭೂಮಿಯ ಕಂದಾಯವನ್ನು ಕುರಿತು ಜಮೀನ್‍ದಾರರಿಗೆ ಶಾಶ್ವತವಾದ ತೆರಿಗೆಯನ್ನು ನಿರ್ಣಯಿಸಿದುದು ಬಹು ಉತ್ತಮವಾಗಿದೆ. ಭೂಮಿಗಳ ವ್ಯವಸಾಯಗಾರರಿಗೆ ಒಂದು ಕಾನೂನು ಇಲ್ಲದೆ ಇರುವುದರಿಂದ ಜಮೀನುದಾರರು ಆಗಾಗ್ಗೆ ಅನೇಕ ಬದಲಾವಣೆಗಳನ್ನು ಮಾಡುತ್ತಾ ಬರುವುದರಿಂದ ರೈತರು ಹಲವುಬಗೆಯ ತೊಂದರೆಗಳನ್ನು ಅನುಭವಿಸಬೇಕಾಗಿ ಬರುವುದು. ಆದುದರಿಂದ ಅವರಿಗೆ ಇಂತಹ ಸಂಕಟಗಳು ಉಂಟಾಗದಂತೆ ಬದಲಾಯಿಸಲ್ಪಡದೆಯೂ, ನ್ಯಾಯವಾಗಿ ಭೂಸ್ಥಿತಿಗೆ ತಕ್ಕುದಾಗಿಯೂ ಇರುವಂತೆ ಅವರು ತೆರಿಗೆಯನ್ನು ಸಲ್ಲಿಸಬೇಕಾದಂತೆ ಏರ್ಪಡಿಸುವುದು ಕರ್ತವ್ಯವಾಗಿರುವುದು. ಬಂಗಾಳಾ ರಾಜ್ಯದಲ್ಲಿ ಮಾಡಿದಂತೆ ದೇಶಗಳಲ್ಲೆಲ್ಲಾ ಶಾಶ್ವತವಾದ ಸಿಸ್ತುಗಳನ್ನೇರ್ಪಡಿಸಿ ಬಡರೈತರಿಗೆ ಹಿತವನ್ನುಂಟುಮಾಡತಕ್ಕದು.

2. ಭೂಮಿಯ ಕಂದಾಯವನ್ನೂ ಇತರರೂಪಗಳಲ್ಲಿ ಬರುವ ಆದಾಯಗಳನ್ನೂ ಒರಮಾಡಿಕೊಳ್ಳಲು ಏರ್ಪಟ್ಟಿರುವ ಉದ್ಯೋಗಸ್ಥರಿಗೆ ದಂಡನಾಧಿಕಾರವನ್ನು ಕೊಡಕೂಡದು. ಅವರಿಗೆ ಈ ಅಧಿಕಾರವನ್ನು ಕೊಟ್ಟರೆ ತಮ್ಮ ಕೆಲಸಗಳನ್ನು ತಾವೇ ವಿಮರ್ಶೆಮಾಡಬೇಕಾಗಿ ಬರುವುದು. ಆದುದರಿಂದ ಅವರು ತಾವು ಮಾಡಿದುದನ್ನು ಬದಲಾಯಿಸದೆ ನ್ಯಾಯವನ್ನು ಅಲಕ್ಷ್ಯಮಾಡುವರು. ಇವರ ಅನ್ಯಾಯಗಳನ್ನು ಕುರಿತು ಹೇಳಿಕೊಳ್ಳುವ ನ್ಯಾಯಸ್ಥಾನಗಳಲ್ಲ ಇವರು ಯಾವಾಗಲೂ, ಪ್ರತಿಕಕ್ಷಿಗಳಾಗಿಯೂ, ಉತ್ತರವಾದಿಗಳಾಗಿಯೂ ಇರತಕ್ಕದು. ಹೀಗಾದರೆ ಪ್ರತಿಮನುಷ್ಯನೂ ತನ್ನ ಮೇಲೆ ಯಾವ ಅನ್ಯಾಯ ನಡೆಸಿದರೂ ನಿರ್ಭಯವಾಗಿ ನ್ಯಾಯಸ್ಥಾನಗಳವರಿಗೆ ಹೇಳಿಕೊಳ್ಳುವ ಸ್ವಾತಂತ್ರ್ಯವುಳ್ಳವನಾಗುವನು.

3. ಸಾವಿರಾರು ರೂಪಾಯಿಗಳ ಸಂಬಳ ಕೊಟ್ಟು ಸರ್ವಾಧಿಕಾರಿಗಳನ್ನು ಕಲೆಕ್ಟರ್‌ಗಳ ವಶಮಾಡುವುದು ಅಕ್ರಮವಾಗಿಯೂ ಅನಾವಶ್ಯಕವಾಗಿಯೂ ಇದೆ. ಅವರಿಗೆ ದಂಡನಾಧಿಕಾರವನ್ನು ತಪ್ಪಿಸಿದರೆ ಮುನ್ನೂರು ನಾನೂರು ರೂಪಾಯಿಗಳ ವೇತನದಿಂದಲೇ ದೇಶೀಯರಿಂದ ಆ ಕೆಲಸಗಳನ್ನು ತುಂಬ ನಂಬಿಕೆಯಿಂದ ನಡೆಸಬಹುದು.

4 ನ್ಯಾಯಸಭೆಗಳ ನಿರ್ಮಾಣವನ್ನು ಕುರಿತು ಮಾಡಿರುವ ಏರ್ಪಾಡುಗಳು ಚೆನ್ನಾಗಿಯೇ ಇವೆ. ಆದರೆ ಇಷ್ಟು ವಿಸ್ತಾರವಾದ ದೇಶಕ್ಕೆ ಬಹು ಸ್ವಲ್ಪ ಸಂಖ್ಯೆಯ ನ್ಯಾಯಾಧಿಕಾರಿಗಳು ಸಾಲದು. ಸಾಧ್ಯವಾದಮಟ್ಟಿಗೆ ಪ್ರಜೆಗಳ ನಿವಾಸಕ್ಕೆ ನ್ಯಾಯಸ್ಥಾನಗಳು ಸಮೀಪದಲ್ಲಿದ್ದರೆ ಅವರು ತಮ್ಮ ಕಷ್ಟನಿಷ್ಠುರಗಳನ್ನು ಹೇಳಿಕೊಳ್ಳಲಿಕ್ಕೆ ಅನುಕೂಲವುಂಟಾಗುವುದು.

5 ಅಧಿಕಾರಿಗಳಲ್ಲಿ ಬಹು ಮಂದಿ ದೇಶಭಾಷೆಯನ್ನು ತಿಳಿಯದವರಾಗಿರುವುದರಿಂದ ಅವರು ತಮ್ಮ ವಿಧಾಯಕ ಕೃತ್ಯಗಳನ್ನು ಕ್ರಮವಾಗಿ ನಡೆಸಲು ಅಶಕ್ತರಾಗಿರುವರು. ಪ್ರಜೆಗಳು ತಮ್ಮ ಸ್ಥಿತಿಗಳನ್ನು ಸ್ವಂತವಾಗಿ ಹೇಳಿಕೊಳ್ಳಲಿಕ್ಕೆ ಅವಕಾಶವಿಲ್ಲದೆ ತೊಂದರೆಯಾಗಿರುವುದು. ಆದುದರಿಂದ ಪಾಲನಾಧಿಕಾರಿಗಳಿಗೆ ದೇಶಭಾಷೆಯ ಜ್ಞಾನವು ಅಗತ್ಯ

6 ನ್ಯಾಯನಿರ್ಣಯಗಳನ್ನೂ, ಶಿಕ್ಷೆಗಳನ್ನೂ, ಅಧಿಕಾರಿಗಳ ಇತರ ಕರ್ತವ್ಯಗಳನ್ನೂ ಕುರಿತು ಆಗಾಗ್ಗೆ ಸರ್ಕಾರದವರು ಪ್ರಚುರಿಸುವ ಅಪ್ಪಣೆಗಳೆಲ್ಲವೂ ಬಹಿರಂಗವಾಗಿ ಗ್ರಂಥಗಳಲ್ಲಿ ಪ್ರಕಟಿಸಲ್ಪಡತಕ್ಕದ್ದು.

7 ನ್ಯಾಯಸ್ಥಾನಗಳಲ್ಲಿ ಬಳಕೆಯಲ್ಲಿರುವ ಪಾರಸಿ ಬರಹವು ಈಗಿನ ನ್ಯಾಯಾಧಿಕಾರಿಗಳಿಗೂ ನ್ಯಾಯವನ್ನು ಕೋರತಕ್ಕವರಿಗೂ ಕೂಡ ತಿಳಿಯದೆ ಇದೆ. ಇದರಿಂದ ಆ ಭಾಷಾಪ್ರಯೋಗವನ್ನು ತಗ್ಗಿಸಿ, ಇಂಗ್ಲಿಷ್ ಭಾಷೆಯಲ್ಲಿ ಬರೆಯುವಂತೆ ಏರ್ಪಡಿಸಿದರೆ ಅಧಿಕಾರಿಗಳಿಗೆ ತಿಳಿದಿರುವುದಲ್ಲದೆ ಕ್ರಮಕ್ರಮವಾಗಿ ಪ್ರಜೆಗಳಿಗೆ ಕೂಡ ಆ ಭಾಷಾ ಜ್ಞಾನಾಭಿವೃದ್ಧಿಯನ್ನು ಪಡೆಯಬೇಕೆಂಬ ಕೋರಿಕೆ ಹೆಚ್ಚುವುದು.

8 ಪ್ರಜಾಪಕ್ಷದಲ್ಲಿ ಕೆಲಸಮಾಡತಕ್ಕ ನ್ಯಾಯವಾದಿಗಳ (ವಕೀಲರ) ವೃತ್ತಿಯಲ್ಲಿ ಸಾಕಾದಷ್ಟು ವಿದ್ಯೆಯನ್ನು ಕಲಿತವನಾಗಿದ್ದರೆ ಹಿಂದುವಾಗಲಿ, ಮಹಮ್ಮದೀಯನಾಗಲಿ ಸಮವಾಗಿಯೇ ಕೆಲಸ ಮಾಡಬಹುದು. ಆದರೆ ಪ್ರಜೆಗಳಿಗೆ ಬಹುಮಟ್ಟಿಗೆ ಹಿಂದೂಗಳಲ್ಲಿಯೇ ನಂಬಿಕೆ ಹೆಚ್ಚಾಗಿರುವುದು.

9 ನ್ಯಾಯಾಧಿಕಾರಿಗಳ ಕೈಕೆಳಗಿರುವ ಉದ್ಯೋಗಸ್ಥರ ವೇತನಗಳು ಪಟ್ಟಣಗಳಲ್ಲಿ ತಮ್ಮ ಕುಟುಂಬದ ವೆಚ್ಚಕ್ಕೆ ಸಾಕಾದಮಟ್ಟಿಗೂ ಇಲ್ಲದೆ ಅತ್ಯಲ್ಪವಾಗಿರುವುದರಿಂದ ಅವರು ಆ ವೆಚ್ಚವನ್ನು ಸಂಪಾದಿಸಿಕೊಳ್ಳುವುದಕ್ಕೆ ತಮ್ಮ ಅಧಿಕಾರವನ್ನು ದುರುಪಯೋಗಪಡಿಸುವರು. ಆದುದರಿಂದ ಅವರ ಸ್ಥಿತಿಗಳಿಗೂ ಅಧಿಕಾರಗಳಿಗೂ ಅನುಕೂಲವಾದ ವೇತನವನ್ನು ಕೊಡಬೇಕು.

10 ನ್ಯಾಯವಿಧಿಗಳಿಗೆ ಏರ್ಪಡಿಸಿರುವ ಕಾನೂನುಗಳೆಲ್ಲವೂ ತ.ಂಬಾ ವಿದ್ಯಾವಂತರಿಗೆ ಹೊರತು ಉಳಿದವರಿಗೆಲ್ಲರಿಗೂ ತಿಳಿಯದೆ ಇರುವುದು ದೊಡ್ಡ ಕೊರತೆಯಾಗಿದೆ. ಆದುದರಿಂದ ಸಾಮಾನ್ಯವಾಗಿ ಹಳ್ಳಿಗಳಲ್ಲಿರುವವರಿಗೆಲ್ಲ ಅನುಕೂಲಿಸುವಂತೆ ಪ್ರತಿ ಒಂದು ಕಾನೂನೂ ದೇಶಭಾಷೆಗಳಲ್ಲಿ ಬರೆಯಿಸಲ್ಪಡತಕ್ಕದ್ದು. ದೊಡ್ಡ ದೊಡ್ಡ ಗ್ರಾಮಗಳ ಚಾವಡಿಗಳಲ್ಲಿ ಆ ಶಾಸನಗಳನ್ನಿರಿಸಿ, ಅವುಗಳ ಕಾವಲಿಗಾಗಿ ಅಲ್ಪ ವೇತನದ ಒಬ್ಬ ಆಳನ್ನು ನಿಯಮಿಸಿ, ಯಾರಾದರೂ ಅವುಗಳನ್ನು ನೋಡಿಕೊಳ್ಳುವುದಕ್ಕೂ, ಅಗತ್ಯವಾದರೆ ಪ್ರತಿಗಳನ್ನು ಬರೆದುಕೊಳ್ಳುವುದಕ್ಕೂ ಅವಕಾಶ ಕೊಡತಕ್ಕದ್ದು.

11 ಕೆಲವು ಸಂದರ್ಭಗಳಲ್ಲಿ ನ್ಯಾಯವನ್ನು ತಿಳಿದುಕೊಳ್ಳುವುದು ಕಷ್ಟವಾಗಿರುವುದು. ಆದುದರಿಂದ ಒಂದೊಂದು ವಿಷಯದಲ್ಲಿಯೂ ಬುದ್ಧಿಯನ್ನು ಬಹು ಸೂಕ್ಷ್ಮವಾಗಿ ವಿನಿಯೋಗಿಸಬೇಕಾಗಿರುವುದು. ಈ ಸೂಕ್ಷ್ಮವಿಚಾರವನ್ನು ಒಬ್ಬೊಬ್ಬನೇ ಮಾಡ

ಬೇಕಾದರೆ ಒಂದಾನೊಂದುವೇಳೆ ಅವನ ಬುದ್ಧಿಗೆ ಭ್ರಾಂತಿಯುಂಟಾಗಬಹುದು. ಆದುದರಿಂದನ್ಯಾಯಾಧಿಪತಿಗೆ ಸಹಾಯಕರಾಗಿ ಕೆಲವರು ಆಲೋಚನೆ ಹೇಳತಕ್ಕವರು ಅಗತ್ಯ. ಮುಖ್ಯವಾಗಿ ದೊಡ್ಡ ದೊಡ್ಡ ನ್ಯಾಯಸ್ಥಾನಗಳಲ್ಲಿ ಇಂತಹ ಪದ್ಧತಿಯನ್ನವಲಂಬಿಸುವುದು ಅತ್ಯಾವಶ್ಯಕವಾದುದು.

12 ಒಂದು ಕಾನೂನು ಸರಕಾರದವರಿಂದ ಮಂಜೂರಾಗಿ ಪ್ರಕಟಿಸಲ್ಪಡಲಿಕ್ಕೆ ಮುಂಚೆ ಅದರ ಚಿತ್ತು ಪ್ರತಿ (ಡ್ರಾಫ್ಟ್) ಯನ್ನು ಪ್ರಜೆಗಳು ತಮಗೆ ಇರುವ ಅಭ್ಯಂತರಗಳನ್ನು ತಿಳಿಸಿಕೊಳ್ಳುವುದಕ್ಕಾಗಿ ಅವರಿಗೆ ಸ್ವಲ್ಪ ಅವಧಿಯನ್ನು ಕೊಟ್ಟು ಪ್ರಚುರಪಡಿಸಬೇಕು. ತರುವಾಯ ಆ ಶಾಸನದ ವಿಷಯಗಳಿಗೆ ಸಂಬಂಧಿಸಿದ ಪ್ರಜೆಗಳಲ್ಲಿ ಮುಖ್ಯರಾದವರ ಅಭಿಪ್ರಾಯಗಳನ್ನು ಅಗತ್ಯವಾಗಿ ತೆಗೆದುಕೊಂಡು, ಸಾಧ್ಯವಾದಮಟ್ಟಿಗೂ ಅವರ ಯೋಗಕ್ಷೇಮಗಳನ್ನು ಆಲೋಚಿಸತಕ್ಕದ್ದು. ಹೀಗೆ ಏರ್ಪಾಡಾದರೆ ಪ್ರತಿ ಒಂದು ಸಂಗಡದವರಿಗೂ ಸರ್ಕಾರದವರ ವಿಷಯದಲ್ಲಿ ತುಂಬ ಪ್ರೀತಿ ಹುಟ್ಟುವುದು.

13 ಸಣ್ಣ ವಯಸ್ಸಿನವರು ಸಿವಿಲ್‌ಸರ್ವಿಸ್ ಅಧಿಕಾರಗಳನ್ನು ವಹಿಸುತ್ತಿರುವುದರಿಂದ ಅವರಿಗೆ ದೇಶಭಾಷೆಯು ಸ್ವಲ್ಪವೂ ತಿಳಿಯದೆ ಇರುವುದು. ಆದುದರಿಂದ ಹಿಂದೂದೇಶದಲ್ಲಿ ಸ್ವಲ್ಪ ಕಾಲವಿದ್ದು ಅಲ್ಲಿನ ಭಾಷಾಜ್ಞಾನವನ್ನು ಪಡೆದು ದೇಶಾಚಾರಗಳನ್ನು ಅನುಭವದಿಂದ ತಿಳಿದುಕೊಂಡವರಿಗೆ ಮಾತ್ರವೇ ಈ ಅಧಿಕಾರಗಳನ್ನು ಕೊಡುತ್ತ ಬರಬೇಕು.

14 ಹಿಂದೂದೇಶೀಯರಿಗೆ ಮಾತ್ರವೇ ಈ ಅಧಿಕಾರಗಳನ್ನು ಕೊಡುತ್ತ ಬರತಕ್ಕದ್ದು. ಈ ಕೆಲಸಗಳಿಗೆ ಈಗ ಕೊಡಲ್ಪಡುತ್ತಿರುವಷ್ಟು ವೇತನ ಕೊಡಬೇಕಾಗಿಲ್ಲವು. ನ್ಯಾಯಾಧಿಪತಿಗಳಲ್ಲಿ ಯೂರೋಪಿಯನರಿಬ್ಬರೂ ಕೆಲವರು ಹಿಂದೂಗಳೂ ಇರುವುದು ಧರ್ಮವು. ಮತ್ತು ಉನ್ನತಸ್ಥಾನಗಳಲ್ಲಿ ಒಬ್ಬರಿಗಿಂತ ಹೆಚ್ಚಾಗಿ ಅಧಿಕಾರಿಗಳಿರಬೇಕಾದರೆ ಅಲ್ಲಿ ಯೂರೋಪಿಯನರೊಂದಿಗೆ ಸಮಸಂಖ್ಯೆಯ ಹಿಂದೂ ಅಧಿಕಾರಿಗಳೂ ಇರತಕ್ಕದ್ದು. ಹಿಂದೂಜನರಿಗೆ ದೊಡ್ಡ ಅಧಿಕಾರಗಳನ್ನು ಕೊಡುವುದು ನಷ್ಟಕರವೆಂಬ ತಪ್ಪು ತಿಳಿವಳಿಕೆಯು ಸರಕಾರದವರಿಗೆ ಇರಕೂಡದು. ಅವರನ್ನು ದೂರದಲ್ಲ ಇರಿಸುವುದರಿಂದ ಉಂಟಾಗುವ ವ್ಯತಿರೇಕಭಾವಕ್ಕಿಂತಲೂ ಹತ್ತಿರಕ್ಕೆ ತೆಗೆದುಕೊಂಡು, ಸಮಾನವಾದ ಗೌರವವನ್ನಿತ್ತು, ಅವರನ್ನು ಅಭಿವೃದ್ಧಿಗೊಳಿಸುವುದರಿಂದ ಉಂಟಾಗುವ ಸುಹೃದ್ಭಾವವು ತುಂಬ ಶ್ರೇಯಸ್ಕರವಾದದ್ದು.

ಈ ಅಭಿಪ್ರಾಯಗಳೆಲ್ಲವೂ ನಿಶ್ಚಯವಾಗಿ ನನ್ನ ಅಂತರಾತ್ಮನಿಂದ ಪ್ರೇರೇಪಿಸಲ್ಪಟ್ಟವುಗಳು. ಇದರಿಂದ ಪ್ರಭುಗಳಿಗೂ ಪ್ರಜೆಗಳಿಗೂ ಕೂಡ ಲಾಭವುಂಟಾಗುವುದು. ಈ ವಿಧದಿಂದ ಹಿಂದೂದೇಶಕ್ಕೆ ಮೇಲುಂಟಾಗುವುದೆಂದು ತೋರಿದ ಪ್ರತಿಯೊಂದು ವಿಷಯದಲ್ಲಿಯೂ ತನ್ನ ಅಸದೃಶವಾದ ಬುದ್ಧಿಯನ್ನು ಪ್ರಕಟಿಸಿ, ಶಾಸನನಿರ್ಮಾಣಸಭಿಕರೆಲ್ಲರೂ ಆಶ್ಚರ್ಯಪಡುವಂತೆ ಮಾಡಿ, ತನ್ನ ಸಾಕ್ಷ್ಯಗಳನ್ನೆಲ್ಲಾ ಸಂಗ್ರಹಿಸಿ, ಅವುಗಳೊಂದಿಗೆ ಮತ್ತೆ ಕೆಲವು ಅಂಶಗಳನ್ನು ಸೇರಿಸಿ ಗ್ರಂಥರೂಪವಾಗಿ ಪ್ರಕಟಿಸಿದನು. ಆದಕ್ಕೆ ಮುಂಚೆ ಕೆಲವು ಆ

ಸಾಕ್ಷ್ಯಗಳಲ್ಲಿ ಕೆಲವು ಅಂಶಗಳನ್ನು ಆಕ್ಷೇಪಿಸಿದ್ದುದರಿಂದ ರಾಮಮೋಹನನು ಅವುಗಳಿಗೆ ಪ್ರತ್ಯುತ್ತರಗಳನ್ನು ಕೂಡ ಬರೆದು ಆ ಗ್ರಂಥಗಳಲ್ಲಿ ಸೇರಿಸಿದನು.

ಈತನು ಲಂಡನ್ ಪಟ್ಟಣದಲ್ಲಿ ಇದ್ದಷ್ಟು ದಿನಗಳೂ ಹಿಂದೂದೇಶದ ಸ್ಥಿತಿಗಳನ್ನು ಕುರಿತೇ ತುಂಬಾ ಶ್ರದ್ಧೆಯಿಂದ ಕೆಲಸಮಾಡಿದರೂ, ಮಧ್ಯ ಮಧ್ಯದಲ್ಲಿ ಅಲ್ಲಿನ ಕೆಲವು ಸಾಮಾಜಿಕ ವಿಷಯದ ಗ್ರಂಥಗಳನ್ನು ಕೂಡ ಬರೆಯುತ್ತಾ, ತನಗೆ ಪರಮಸಂತೋಷಕರವಾದ ವಿಷಯಗಳನ್ನು ಮರೆಯದೆಯೇ ಇದ್ದನು. ಶಾಸನನಿರ್ಮಾಣಕ್ಕೆ ತಾನುಕೊಟ್ಟ ಸಾಕ್ಷ್ಯಗಳನ್ನು ಹೀಗೂಹಾಗೂ ಪ್ರಚಾರಮಾಡುತ್ತ, ಹೇಳಿ ಬರೆಯಿಸುತ್ತಿದ್ದನೆಂದು ಹೇರ್ ದೊರೆ ಹೇಳಿರುವನು. ಕುಶಾಗ್ರಬುದ್ಧಿಯುಳ್ಳ ಈ ಮಹನೀಯನಿಗೆ ಶಬ್ದಗಳನ್ನು ಹುಡುಕಿಕೊಳ್ಳುವುದಕ್ಕೂ, ಅವುಗಳನ್ನು ಮರಳಿ ತಿದ್ದಿಕೊಳ್ಳುವುದಕ್ಕೂ ಅವಕಾಶವಿರಲಿಲ್ಲ. ಇಂತಹ ಅಪ್ರತಿಮಾನಪ್ರತಿಭಾಪ್ರಭಾವನಾದ ಈ ಮಹಾತ್ಮನು ಅವಕಾಶವಿದ್ದಷ್ಟು ಕೆಲಸಗಳನ್ನು ಮಾಡುತ್ತಿದ್ದಾಗ ಸುದಾ ಗ್ರಂಥಗಳನ್ನು ಬರೆಯುತ್ತಲಿದ್ದದ್ದು ಆಶ್ಚರ್ಯಕರವಲ್ಲ.

ರಾಮಮೋಹನನು ಮುಖ್ಯವಾಗಿ ಸ್ವತಂತ್ರಾಭಿಪ್ರಾಯಗಳನ್ನೇ ಉಳ್ಳವನಾಗಿದ್ದರೂ ಆತನು ತನ್ನ ಸದಾಚಾರಣೆಗಳಿಂದಲೂ, ಒಳ್ಳೇ ಮನಸ್ಸಿನಿಂದಲೂ, ಅಲ್ಲಿನ ಭಿನ್ನಾಭಿಪ್ರಾಯ ಸಮಾಜಗಳವರಿಗೆಲ್ಲ ತಲೆಯಲ್ಲಿ ನಾಲಗೆಯಂತೆ ಇದ್ದನು. ಇದರಿಂದ ಶಾಸನನಿರ್ಮಾಣ ಕಾಲದಲ್ಲಿ ಕನ್‌ಸರ್ವೇಟಿವ್ ಸಂಘದವರೂ, ಲಿಬರಲ್ ಸಂಘದವರೂ, ಈತನಲ್ಲಿ ಸಮಾನವಾದ ಗೌರವವನ್ನೂ ಸುಹೃದ್ಭಾವವನ್ನೂ ಪಡೆದಿದ್ದುದರಿಂದ ಇಂಗ್ಲೆಂಡಿನಲ್ಲಿ ತಾನು ನೆರವೇರಿಸಬೇಕಾಗಿದ್ದ ಮುಖ್ಯ ಕಾರ್ಯವೊಂದನ್ನು ಆತನು ಜಯಪ್ರದವಾಗಿ ನಡೆಸಿದನು. ಸತ್ಯಕ್ಕೆ ದೈವಬಲವಿರುವುದೆಂದು ಆತನ ಮನಸ್ಸಿನಲ್ಲಿ ಯಾವಾಗಲೂ ಬೇರೂರಿರುವ ನಂಬುಗೆಯನ್ನನುಸರಿಸಿ ಉಳಿದ ಮುಖ್ಯಕಾರ್ಯಗಳಲ್ಲಿ ಕೂಡ ಆತನು ಹಾಗೆಯೇ ಜಯವನ್ನು ಪಡೆದನು. ಧರ್ಮಸಭೆಯವರ ಪಕ್ಷದಲ್ಲಿ ಅದಕ್ಕೆ ಮುಂಚೆ ಬೀದಿಯವರಿಂದ ಒಪ್ಪಿಸಲ್ಪಟ್ಟು, ಪಾರ್ಲಿಮೆಂಟಿನವರಿಂದ ಚರ್ಚಿಸಲ್ಪಡುತ್ತಿದ್ದ ವಿಜ್ಞಾಪನೆಯನ್ನು ಸರಕಾರದವರು ಅಂಗೀಕರಿಸದೆ, 1832 ನೇ ಜುಲೈ 11 ರಲ್ಲಿ ಅದನ್ನು ತಳ್ಳಿ ಹಾಕಿದ್ದೇವೆಂಬ ತೀರ್ಮಾನವನ್ನು ಹೇಳಿದರು. ಆಗ ರಾಮಮೋಹನನು ಅಲ್ಲಿಯೇ ಇದ್ದನು. ಮತ್ತು ಡಿಲ್ಲೀಶ್ವರನ ಪ್ರತಿನಿಧಿತ್ವವನ್ನು ಅಂಗೀಕರಿಸಿ, ಆತನ ವಿಜ್ಞಾಪನೆಯಂತೆ ಪ್ರತಿವರ್ಷದಲ್ಲಿಯೂ ಮೂರುಲಕ್ಷ ರೂಪಾಯಿಗಳ ವೇತನವನ್ನು ಹೆಚ್ಚಿಸಿದರು.

ಮೇಲಿನ ವ್ಯವಹಾರವು ಮುಗಿದ ಕೆಲವು ದಿನಗಳ ಮೇಲೆ ಪಾರ್ಲಿಮೆಂಟಿನವರು ಇದುವರಿಗೆ ಯೂರೋಪಿಯನರು ಹಿಂದೂದೇಶದಲ್ಲಿ ಒಕ್ಕಲುತನವನ್ನು ಏರ್ಪಡಿಸಿಕೊಳ್ಳುವುದಕ್ಕೆ ಅಪ್ಪಣೆ ಕೊಡಬಹುದೆ ? ಕೂಡದೆ ! ಎಂಬ ಅಂಶವು ಚರ್ಚೆಗೆ ಬಂತು. ಅದರಲ್ಲಿ ರಾಮಮೋಹನನ ಅಭಿಪ್ರಾಯವೂ ತೆಗೆದುಕೊಳ್ಳಲ್ಪಟ್ಟಿತು. ಈತನು ಇದರಿಂದ ಉಂಟಾಗುವ ಲಾಭನಷ್ಟಗಳನ್ನೆಲ್ಲ ವಿವರವಾಗಿ ತೋರಿಸಿ, ನಷ್ಟಗಳಿಗಿಂತ ಲಾಭಗಳೇ ಹೆಚ್ಚಾಗಿರುವುವೆಂದು ನಿರೂಪಿಸಿದನು. ಅವುಗಳನ್ನಿಲ್ಲಿ ಸಂಗ್ರಹವಾಗಿ ತಿಳಿಸುವೆವು.

(1) ಯೂರೋಪಿಯನರು ಹಿಂದೂದೇಶದಲ್ಲಿ ಹಿಂದುಗಳ ಜತೆಯಲ್ಲಿ ನಿವಾಸವನ್ನು ಏರ್ಪಡಿಸಿಕೊಂಡಲ್ಲಿ ಅವರಿಂದ ವ್ಯವಸಾಯವೂ, ಬೆಳೆಗಳೂ, ಅಭಿವೃದ್ಧಿಗೆ ಬರುವ ಮಾರ್ಗಗಳನ್ನು ಬೋಧಿಸುವ ಶಾಸ್ತ್ರಗಳೂ, ಈ ದೇಶದಲ್ಲಿ ಚೆನ್ನಾಗಿ ವ್ಯಾಪಿಸುವುದು ಮಾತ್ರವಲ್ಲದೆ ವ್ಯಾಪಾರಗಳೂ ಕೂಡ ಅನೇಕ ಮಾರ್ಗಗಳಲ್ಲಿ ಅಭಿವೃದ್ಧಿಗೆ ಬರುವುವು.

(2) ಯೂರೋಪಿಯನರು ಹಿಂದೂ ದೇಶದ ಹಲವು ಪಂಗಡದ ಜನರೊಂದಿಗೆ ಬೆರತು ಕೆಲಸಮಾಡುವ ಅಭ್ಯಾಸ ಬೀಳುವುದರಿಂದ ಅವರ ಸ್ನೇಹದಿಂದ ಹಿಂದುಗಳ ಅಭಿವೃದ್ಧಿಗೆ ವಿಘ್ನಗಳಾಗಿರುವ ಮತವಿಷಯವಾದ ಅನೇಕ ಮೂಢಾಚಾರಗಳೂ ಹಟಗಳೂ ತೊಲಗಿ ಹೋಗುವುವು.

(3) ಯೂರೋಪಿಯನರ ಆಗತ್ಯಕ್ಕೋಸ್ಕರ ಸರ್ಕಾರದವರು ತಮ್ಮ ಪ್ರಸ್ತುತ ರಾಜ್ಯಾಂಗದ ನಿರ್ಬಂಧಗಳನ್ನೆಲ್ಲ ತೊಲಗಿಸಿ, ದೊರೆಗಳಿಗೆ ಸೌಖ್ಯಗಳನ್ನೀಯುವ ಅನೇಕ ಸಂಸ್ಕಾರಗಳನ್ನು ಮಾಡಬೇಕಾಗಿ ಬರುವುದು. ಅದರಿಂದ ಹಿಂದುಗಳಿಗೆ ಕೂಡ ಸ್ವಲ್ಪಮಟ್ಟಿಗೆ ಲಾಭವುಂಟಾಗುವುದು.

(4) ಯೂರೋಪಿಯನರು ಕೂಡ ತಮ್ಮ ಜತೆಯಾಗಿರುವುದರಿಂದ ಜಮೀನುದಾರರಿಂದ ವ್ಯವಸಾಯಗಾರರಿಗೆ ಉಂಟಾಗುವ ಬಾಧೆಗಳು ತೊಲಗಿಹೋಗುವುದಲ್ಲದೆ ಅಧಿಕಾರಗಳೂ ಕೂಡ ತಮ್ಮ ಅಧಿಕಾರಗಳನ್ನು ಅಕ್ರಮವಾಗಿ ಉಪಯೋಗಿಸಿ ಜನರಿಗೆ ತೊಂದರೆಯನ್ನುಂಟುಮಾಡದಹಾಗೆ ಎಚ್ಚರದಿಂದ ಇರುವರು.

(5) ಯೂರೋಪಿಯನರ ಔದಾರ್ಯದಿಂದಲೂ, ಹಿಂದೂದೇಶದವರ ಸಹವಾಸದಿಂದಲೂ ಆ ದೇಶದಲ್ಲಿ ಪಶ್ಚಿಮದೇಶದವರ ನಾಗರಿಕತೆಯ ಅಭಿವೃದ್ಧಿಗೂ, ಪಾಶ್ಚಾತ್ಯವಿದ್ಯಾಭಿವೃದ್ಧಿಗೂ ತಕ್ಕ ಅನೇಕ ಸಾಧನಗಳು ಉಂಟಾಗುವುವು.

(6) ಯೂರೋಪಿಯನರ ನಿವಾಸಕಾರಣದಿಂದ ಇಂಗ್ಲೆಂಡಿಗೆ ಉತ್ತರಪ್ರತ್ಯುತ್ತರಗಳ ವ್ಯವಹಾರವು ವೃದ್ಧಿ ಹೊಂದುವುದು ಇದರಿಂದ ಸರಕಾರದವರಿಗೆ ಕೆಲವರಿಂದಮಾತ್ರವೇ ತಿಳಿದು ಬರತಕ್ಕ ಆ ದೇಶದ ಸ್ಥಿತಿಗಳು ಬಹುಮಂದಿಯ ಮೂಲಕ ವಿಶದವಾಗಿ ತಿಳಿಯಬರುವುವು. ಸತ್ಯವನ್ನು ಗ್ರಹಿಸುವುದಕ್ಕೆ ಅವಕಾಶವುಂಟಾಗುವುದು. ಅವಶ್ಯಕವಾದ ಬದಲಾವಣೆಗಳನ್ನು ಮಾಡಲು ಅವಕಾಶ ಸಿಕ್ಕುವುದು.

ಹೀಗೆಯೇ ನಷ್ಟಗಳನ್ನು ಕೂಡ ವಿವರಿಸಿ, ಅವುಗಳ ಪರಿಹಾರ ಮಾರ್ಗಗಳನ್ನು ತೋರಿಸಿದನು. ಅವುಗಳನ್ನು ಸಂಕ್ಷೇಪವಾಗಿ ತಿಳಿಸುವೆವು.

(1) ತಾವು ದೊರೆತನದವರ ಜಾತಿಯವರೆಂಬ ಭಾವನೆಯಿಂದ ಅಲ್ಲಿನವರಿಗೆ ಇಲ್ಲದ ಅನೇಕ ಅನುಕೂಲಗಳನ್ನುಂಟುಮಾಡಿಕೊಂಡು ಅವರ ಮತಾಚಾರಗಳನ್ನು ತಿರಸ್ಕರಿಸಬಹುದೆಂದು ಕೆಲವರು ಹೇಳಬಹುದು. ಆದರೆ ಇವುಗಳನ್ನೆಲ್ಲ ಎರಡೇ ಉಪಾಯಗಳಿಂದ ನಿವಾರಿಸಿಕೊಳ್ಳಬಹುದು. ಇವುಗಳಲ್ಲಿ ಮೊದಲನೆಯದು, ಮೊದಲು ಮೊದಲು, ಸಮಾನರಾದ ಸಹೋದರರೆಂಬ ಅಭಿಪ್ರಾಯವುಳ್ಳ ವಿದ್ಯಾವಂತರನ್ನೇ ತಂದು ಸೇರಿಸುವುದು ಎರಡನೆ

ಯದು, ಸರ್ಕಾರದ ಕಾನೂನುಗಳನ್ನೆಲ್ಲಾ ಎಲ್ಲರಿಗೂ ಸಮಾನವಾಗಿ ಏರ್ಪಡಿಸುವುದು. ಶಾಸನಗಳನ್ನೇರ್ಪಡಿಸುವಾಗ ಉಭಯ ಜಾತಿಗಳಲ್ಲಿಯೂ ಮುಖ್ಯರಾದವರೊಂದಿಗೆ ಆಲೋಚಿಸಿ ನಿರ್ಮಿಸುತ್ತಿರುವುದು.

(2) ಯೂರೋಪಿಯನರು ಸ್ವಜಾತಿಯವರಾಗಿರುವುದರಿಂದ ಅವರು ಅಧಿಕಾರವನ್ನು ಹೊಂದುವುದಕ್ಕೆ ಹೆಚ್ಚಾದ ಅರ್ಹತೆಯುಳ್ಳವರಾಗಿದ್ದರೆ ರಾಜಧಾನಿಗಳಲ್ಲಿರುವಂತೆಯೇ ಮಂಡಲಸ್ಥಾನ ಡಿಸ್ಟ್ರಿಕ್ಟು (ಹೆಡ್‌ಕ್ವಾರ್ಟರ್) ಗಳಲ್ಲಿ ಕೂಡ ಯೂರೋಪಿಯನ್ ನ್ಯಾಯವಾದಿಗಳೇ ಇದ್ದಲ್ಲಿ ಅವುಗಳಿಗೆ ನಿವಾರಣೆಯ ಸಾಧನ ಒದಗುವುದು.

(3) ಈಗ ಅಧಿಕಾರಗಳಲ್ಲಿ ವಿಶೇಷವಾಗಿ, ಯೂರೋಪಿಯನರು ಮಾತ್ರವೇ ಇರುವಂತೆ ಕಾಣಬರುವುದರಿಂದ ಪ್ರಜೆಗಳು ಅವರಿಗೆ ಭಯಪಟ್ಟು ನಡೆದುಕೊಳ್ಳುತ್ತಿರುವರು. ಇನ್ನು ಮುಂದೆ ವ್ಯವಸಾಯಗಾರರು ಸುದಾ ಅವರೇ ಆಗುವುದರಿಂದ ಆ ಭಯವು ಕ್ರಮವಾಗಿ ತೊಲಗಿ, ವೃತ್ತಿಗಳ ವರ್ತನದಲ್ಲ ಸ್ನೇಹವು ತಪ್ಪಬಹುದೋ ಎಂದು ಸಂದೇಹವಾದರೆ ಅಧಿಕ ವಿದ್ಯಾವಂತರನ್ನೇ ಪ್ರಥಮದಲ್ಲ ತರುವುದು ಇದರ ನಿವಾರಣೋಪಾಯವಾಗುವುದು.

(4) ಯೂರೋಪಿಯನರ ನಿವಾಸದಿಂದ ದೇಶವು ಅಭಿವೃದ್ಧಿಹೊಂದಿ, ವಿದ್ಯೆಯೂ, ಜ್ಞಾನವೂ, ಹೆಚ್ಚುವುದರಿಂದ ಯಾವಾಗಲಾದರೂ ಒಂದಾನೊಂದು ಕಾಲದಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನಗಳವರಂತೆ ಪ್ರಜೆಗಳು ಪರತಂತ್ರದಲ್ಲಿರಲು ಒಪ್ಪದೆ ಹೋಗಲಿಕ್ಕೆ ಆಸ್ಪದವಾಗುವುದೆಂದು ಯಾರಾದರೂ ಭಾವಿಸಬಹುದು. ಆದರೆ ಈ ಹೋಲಿಕೆ ಸರಿಯಲ್ಲವೆಂದು ಹೇಳಬೇಕಾಗಿದೆ. ಸಂಯುಕ್ತರಾಜ್ಯಗಳು ತಮ್ಮ ಪಾಲಿನ ದೊರೆತನಗಳೇ ಇರಲಿಕ್ಕೆ ಅವಕಾಶ ಪಡೆದಿದ್ದವು. ಆದರೆ ಈ ಇಂಗ್ಲೆಂಡ್ ಸರಕಾರದವರು ಹಿಂದೂದೇಶದ ಮೇಲೆ ನ್ಯಾಯವಾದ ಪ್ರಭುತ್ವವನ್ನು ಮಾಡುತ್ತಿರುವಾಗ ಅಂತಹ ಭಯಕ್ಕೆ ಅವಕಾಶವಿಲ್ಲ. ಈ ವಿಷಯದಲ್ಲಿ ಕನ್ನಡ ರಾಜ್ಯವನ್ನು ದೃಷ್ಟಾಂತವಾಗಿ ತೆಗೆದುಕೊಳ್ಳಬಹುದು. ಒಂದು ವೇಳೆ ಎಂದಿಗಾದರೂ ದೈವಯೋಗದಿಂದ ಇಂಗ್ಲೆಂಡ್ ಮತ್ತು ಇಂಡಿಯಾಗಳಿಗೆ ಇರುವ ಪ್ರಸ್ತುತ ಸಂಬಂಧದ ರೂಪವು ಮಾರ್ಪಟ್ಟರೂ ಉಭಯದೇಶಗಳಿಗೂ ವ್ಯಾಪಾರಸಂಬಂಧವೂ, ಆ ದೇಶೀಯರ ಪರಸ್ಪರ ಸ್ನೇಹವೂ ಇನ್ನೂ ವೃದ್ಧಿಯಾಗುವುದು.

(5) ಯೂರೋಪಿಯನರ ಶರೀರ ಪ್ರಕೃತಿಗಳಿಗೆ ಹಿಂದೂ ದೇಶದ ಹವಾ, ನೀರು, ಇವುಗಳು ಅನುಕೂಲವಾಗಿ ಇರಲಾರವೆಂದು ಒಂದು ಸಂಶಯವಿರುವುದು. ಹಾಗಿದ್ದಲ್ಲಿ ಅವರಿಗೆ ತಂಪಾದ ಪ್ರದೇಶಗಳನ್ನೇ ವಾಸಸ್ಥಾನವಾಗಿ ಕೊಡಬೇಕು.

ರಾಮಮೋಹನನಿಗೆ ಇಂಗ್ಲೆಂಡ್ ಒಂದನ್ನು ಮಾತ್ರವಲ್ಲದೆ ಯೂರೋಪ್‌ಖಂಡದ ಇತರ ರಾಜ್ಯಗಳನ್ನೂ ಕೂಡ ನೋಡಬೇಕೆಂಬ ಕುತೂಹಲವು ಹೆಚ್ಚಾಗಿದ್ದಿತು. ತನ್ನ ಉದ್ದೇಶಗಳು ನೆರವೇರಬೇಕಾದುದೇ ಈತನ ಅಭಿಪ್ರಾಯವಾಗಿ ಇದ್ದುದರಿಂದ ಅದುವರೆಗೂ ಇಂಗ್ಲೆಂಡ್ ರಾಜ್ಯವನ್ನು ಕೂಡ ಚೆನ್ನಾಗಿ ತಿರುಗಿ ನೋಡಲಿಕ್ಕೆ ಅವನಿಗೆ ಅವಕಾಶ ದೊರೆಯದೆ ಇತ್ತು. ಹಲವು ಪ್ರದೇಶದವರು ಈತನ ಆಗಮನವನ್ನು ನಿರೀಕ್ಷಿಸುತ್ತಿದ್ದರು. ಐರ್ಲೆಂಡಿ

ನವರಿಂದ ಆಹ್ವಾನಪತ್ರಿಕೆಗಳು ಬರುತ್ತಲಿದ್ದರೂ, ಕಾರ್ಯಗೌರವದಿಂದ ಪ್ರಯಾಣಗಳನ್ನೆಲ್ಲಾ ನಿಲ್ಲಿಸಬೇಕಾಗಿ ಬಂತು. ಆದರೆ 1832 ನೆಯ ವರುಷದ ಬೇಸಗೆಯ ವಿರಾಮಕಾಲದಲ್ಲಿ ಪಾರ್ಲಿಮೆಂಟು ಸಭೆ ಸೇರಲ್ಪಡದೆ ಇದ್ದುದರಿಂದ ಅವನಿಗೆ ಸ್ವಲ್ಪ ಅವಕಾಶ ಸಿಕ್ಕಿತು. ಆದುದರಿಂದ ಈ ವ್ಯವಧಿಯನ್ನು ಫ್ರಾನ್ಸ್ ದೇಶದಲ್ಲಿ ಕಳೆದನು. ಈ ಪ್ರಯಾಣದಲ್ಲಿ ಡೇವಿಡ್ ಹೇರ್ ಎಂಬವನ ಸಹೋದರನೊಬ್ಬನು ಈತನ ಸಂಗಡ ಇದ್ದನು. ಫ್ರಾನ್ಸಿನಲ್ಲಿ ಕೂಡ ಇಂಗ್ಲೆಂಡಿನಂತೆಯೆ ಪ್ರತಿಯೊಂದು ಸಮಾಜದಲ್ಲಿಯೂ ಆತನು ತುಂಬಾ ಗೌರವಿಸಲ್ಪಟ್ಟನು. "ಲ್ಯೂಯಿಫಿಲಿಪ್ಸ್" ಎಂಬ ಅಲ್ಲಿನ ದೇಶಾಧಿಪತಿಯು ಹಲವು ಸಾರಿ ಈತನಿಗೆ ಔತನಗಳನ್ನು ಮಾಡಿಸಿ, ಸಹ ಪಙ್ಕ್ತಿಯನ್ನು ಕೊಟ್ಟನು. ಫ್ರಾನ್ಸಿನಲ್ಲಿಯೂ, ಏಷ್ಯಾಟಿಕ್ ಸೊಸೈಟಿಯವರು ಅಲ್ಲಿರುವಾಗ ಈತನನ್ನು ಗೌರವಸಭ್ಯನನ್ನಾಗಿ ಮಾಡಿ ಗೌರವಿಸಿದರು. ಅಲ್ಲಿನ ವಿದ್ವಾಂಸರೆಲ್ಲರಿಗೂ ರಾಮಮೋಹನನು ಪರಿಚಿತನೂ ಸ್ನೇಹಿತನೂ ಆದನು. ಅಲ್ಲಿಯೇ ಈತನಿಗೆ "ಟಾಮ್ಸ್‌ಮೋರ್" ಎಂಬ ಪ್ರಸಿದ್ಧ ಕವೀಶ್ವರನ ದರ್ಶನವೂ ಅವನ ಸಂಗಡ ಒಂದೇ ಕಡೆ ಸೇರಿ ಭುಜಿಸುವಿಕೆಯೂ ಲಭಿಸಿದವು. ಈ ವಿಷಯದಲ್ಲಿ ಆ ಕವೀಶ್ವರನು ತನ್ನ ದಿನಚರಿಯಲ್ಲಿ ಕೂಡ ಬರೆದುಕೊಂಡಿರುವನು.

ಈತನು ಫ್ರಾನ್ಸ್ ದೇಶಕ್ಕೆ ಹೊರಟಿರುವುದಾಗಿಯೂ, ಇನ್ನೂ ಇತರ ರಾಜ್ಯಗಳನ್ನು ನೋಡಲಿಕ್ಕೆ ಅಪೇಕ್ಷಿಸುವುದಾಗಿಯೂ, ತನ್ನ ಸ್ನೇಹಿತನೊಬ್ಬನಿಗೆ ಬರೆದ 1832 ಜನವರಿ 31 ನೇ ತಾರೀಖಿನ ಕಾಗದದಿಂದ ತಿಳಿಯಬರುವುದು. ಅದರಲ್ಲಿ ಬರೆದ ಕೆಲವು ರಾಜ್ಯಗಳಲ್ಲದೆ ಇಟಲಿ, ಆಸ್ಟ್ರಿಯ, ಮೊದಲಾದ ಇತರ ರಾಷ್ಟ್ರಗಳಲ್ಲಿ ತಿರುಗುವಾಗ ಫ್ರೆಂಚ್‌ಭಾಷಾ ಜ್ಞಾನವಿಲ್ಲದಿದ್ದರೆ ಮನಃಪೂರ್ತಿಯಾಗಿ ಅಲ್ಲಿನ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಅವಕಾಶ ದೊರೆಯಲಾರದೆಂದು ಯೋಚಿಸಿ, ಫ್ರಾನ್ಸಿನಿಂದ ಹಿಂದಿರುಗಿ ಬರುವಾಗ ಒಬ್ಬ ಸ್ನೇಹಿತನನ್ನು ಅವನ ಸಂಗಡ ಕರೆದುಕೊಂಡು ಬಂದು ಆ ಭಾಷೆಯನ್ನು ಕಲಿಯುತ್ತಿದ್ದೇನೆಂದು ಬರೆದನು.

ರಾಮಮೋಹನನು ಫ್ರಾನ್ಸ್‌ರಾಜ್ಯದಿಂದ ಮರಳಿ ಲಂಡನ್ನಿಗೆ ಬಂದಾಗಲೇ ಹಿಂದೂ ದೇಶದ ಸ್ಥಿತಿಗಳನ್ನು ಕುರಿತು ಸಂಸ್ಕರಿಸಿ, ನಿರ್ಮಿಸಿದ ಕಾನೂನಿನ ಮಸೂದೆಯು ಪಾರ್ಲಿಮೆಂಟಿನ ಸಭಿಕರ ವಿಮರ್ಶೆಗಾಗಿ ಇಡಲ್ಪಟ್ಟಿತ್ತು.

ಇದರಿಂದ ಅಲ್ಲಿ ಆ ಮಸೂದೆಯಲ್ಲಿ ಹಿಂದುಗಳಿಗೆ ಉಪಯೋಗಕರವಾಗಿರುವ ವಿಷಯಗಳನ್ನು ಸ್ವಲ್ಪವೂ ಬದಲಾಯಿಸದೆ, ಅಂಗೀಕರಿಸಿದರೆಂಬ ಶುಭವಾರ್ತೆಯನ್ನು ಕೇಳುವುದಕ್ಕಾಗಿ ಸುಮಾರು ಎಂಟು ತಿಂಗಳತನಕ ಕಾದಿದ್ದು ತಕ್ಕ ಪ್ರಯತ್ನಗಳನ್ನು ಮಾಡುತ್ತಿದ್ದನು. ಈ ಅಂಶವು ಬ್ರಿಸ್ಟಲಿನಲ್ಲಿರುವ ಮಿತ್ರಮಂಡಲಿಗೆ ಈ ಮಧ್ಯಕಾಲದಲ್ಲಿ ಬರೆದ 1833 ನೇ ಫೆಬ್ರುವರಿ 17, ಜುಲೈ 24, 31 ನೇ ಮೇ, 24 ನೇ ಮತ್ತು 19 ಜುಲೈ ಈ ತಾರೀಖುಗಳಲ್ಲಿ ಬರೆದ ಪತ್ರಗಳಿಂದ ಸ್ಪಷ್ಟವಾಗಿ ತಿಳಿಯಬರುವುದು. ಬ್ರಿಸ್ಟಲ್ ಪಟ್ಟಣದವರಿಗೆ ಡಾಕ್ಟರ್ ಕಾರ್ಪೆಂಟರಿನ ಮೂಲಕ ರಾಮಮೋಹನನು ಸ್ನೇಹಿತನಾದನು. ಬ್ರಿಸ್ಟಲ್ ನಿವಾಸಿಯಾದ

ಕಾರ್ಪೆಂಟರವರು ಲಂಡನ್ ನಗರದಲ್ಲಿದ್ದುದರಿಂದ ರಾಮಮೋಹನನಿಗೆ ಪ್ರಾಣಾಪ್ತರಾದರೆಂದು ಮೊದಲೇ ತಿಳಿಸಿರುವೆವು. ಇದರಿಂದ ಡಾಕ್ಟರ್ ಕಾರ್ಪೆಂಟರನಿಗೂ ಬ್ರಿಸ್ಟಲಿನಲ್ಲಿರುವ ಇತರ ಸ್ನೇಹಿತರಿಗೂ ತಮ್ಮ ಪಟ್ಟಣದಲ್ಲಿ ರಾಮಮೋಹನನಿಗೆ ಸ್ವಾಗತವನ್ನಿತ್ತು ಗೌರವಿಸಬೇಕೆಂಬ ಕೋರಿಕೆಯು ಬಲವಾಗಿದ್ದುದರಿಂದ ಅವರು ಅನೇಕ ಸಾರಿ ತಾವು ನಮ್ಮ ಪಟ್ಟಣಕ್ಕೆ ದಯ ಮಾಡಿಸಬೇಕೆಂದು ಪ್ರಾರ್ಥಿಸುತ್ತಾ ಬಂದರು. ಅವರ ಅಭಿಪ್ರಾಯವನ್ನನುಸರಿಸಿ, ಅಲ್ಲಿಗೆ ಒಂದು ವೇಳೆ ಹೋಗಿ ಬರಲಿಕ್ಕೆ ಆತನ ಇಷ್ಟವೂ ಇತ್ತು. ಆದರೆ ತನ್ನ ದೇಶದ ಹಿತವನ್ನು ಕುರಿತ ಕಾರ್ಯಗಳು ಮಿಕ್ಕ ಎಲ್ಲಾ ಕೆಲಸಗಳಿಗಿಂತಲೂ, ಬಹು ಮುಖ್ಯವಾಗಿಯೂ ಅಗತ್ಯ ವಾಗಿ ಮಾಡಬೇಕಾದುವುಗಳಾಗಿಯೂ, ಇದ್ದುದರಿಂದ ವಿಧಿ ಇಲ್ಲದೆ ಅವರ ಕೋರಿಕೆಗಳನ್ನು ಒಡನೆಯೇ ನೆರವೇರಿಸಲಾರದೆ ಹೋದನು. ಈ ಕಾರಣದಿಂದಲೇ ಅವರು ಸುದಾ ಈತನನ್ನು ಬಲವಂತಪಡಿಸಲಾರದೆ ಇದ್ದರು. ಆದುದರಿಂದ ತನ್ನ ಪ್ರಯತ್ನಗಳಿಗೆ ಜತೆಯಾದ ದೈವ ಸಹಾಯದಿಂದ ಆಗಬೇಕಾದ ಕಾರ್ಯಗಳೆಲ್ಲವೂ ನೆರವೇರಿದ ಕೂಡಲೆ "ನನಗೆ ಇಲ್ಲಿಯ ಕೆಲಸ ಗಳೆಲ್ಲವೂ ನೆರವೇರಿದುವು. ಆದುದರಿಂದ ತಪ್ಪದೆ ಈ ತಿಂಗಳ ಕೊನೆಯಲ್ಲಿ ನಿಮ್ಮೆಲ್ಲರ ಸಾನ್ನಿ ಧ್ಯಕ್ಕೆ ಬರುವೆನು. ನನ್ನ ದೇಶಕ್ಕೆ ಪತ್ರಗಳನ್ನು ಬರೆಯತಕ್ಕದ್ದೆಂಬ ಎರಡನೇ ಕೆಲಸವು ಇನ್ನೂ ಉಳಿದಿರುವುದು. ಆದರಿಂದ ಇಷ್ಟು ಸಂಕ್ಷೇಪವಾಗಿ ಬರೆದು ಮುಗಿಸಿದ್ದಕ್ಕೆ ನಿಮ್ಮ ಕ್ಷಮೆಯನ್ನು ಬೇಡುವೆನು" ಎಂದು 1833 ನೇ ಆಗಸ್ಟ್ 14 ರಲ್ಲಿ ಬ್ರಿಸ್ಟಲ್ ನಗರವಾಸಿ ಗಳಿಗೆ ಒಂದು ಪತ್ರವನ್ನು ಬರೆದನು.

ನನ್ನ ಕೆಲಸಗಳೆಲ್ಲವೂ ಸಂತೋಷವಾಗಿ ನೆರವೇರಿದುವೆಂದು ರಾಮಮೋಹನನು ಯಾವ ದಿನದಲ್ಲಿ ಬರೆದನೋ ಆ ದಿನದಲ್ಲಿಯೇ ಹಿಂದೂದೇಶವನ್ನು ಕುರಿತು ಬರೆದ ನೂತನ ತೀರ್ಮಾನವು ಹೌಸ್ ಆಫ್ ಲಾರ್ಡ್ಸ್ ಸಭೆಯವರ ಅಂಗೀಕಾರವನ್ನು ಹೊಂದಿ, ತರುವಾಯ ಆಗಸ್ಟ್ 28ನೆ ತಾರೀಖಿನಲ್ಲಿ ರಾಜನ ಅನುಮತಿಯನ್ನು ಪಡೆದು ಕಾನೂನಿನ ರೂಪವಾಗಿ ಪ್ರಕಟಿಸಲ್ಪಟ್ಟಿತು.

ಆ ಕಾಲದ ಹಿಂದೂದೇಶದ ಇತಿಹಾಸವನ್ನೋದಿದವರಿಗೆ 1833 ರಲ್ಲಿ ಪ್ರಕಟಿಸ ಲ್ಪಟ್ಟ ಕಾನೂನಿನಿಂದ ಹಿಂದೂದೇಶದ ರಾಜ್ಯಾಂಗವಿಷಯದಲ್ಲಿ ಎಷ್ಟು ಘನವಾದ ಮಾ ರ್ಪಾಡುಗಳು ಉಂಟಾದುವೆಂದು ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವಿರುವುದಿಲ್ಲ. ಆ ಸಂವತ್ಸರದಲ್ಲಿಯೇ ಈಸ್ಟಿಂಡಿಯಾ ಕಂಪೆನಿಯವರ ವರ್ತಕ ಸಂಬಂಧವು ತೊಲಗಿತು. ಹಿಂದು ಸ್ಥಾನ, ಚೀನಾ, ಮೊದಲಾದ ಪ್ರದೇಶಗಳೊಂದಿಗೆ ವ್ಯಾಪಾರಮಾಡಲಿಕ್ಕೆ ಎಲ್ಲರಿಗೂ ಸ್ವಾತಂ ತ್ರ್ಯವು ಕೊಡಲ್ಪಟ್ಟಿತು. ದೇಶೀಯರಿಗೆದೊಡ್ಡ ದೊಡ್ಡ ಅಧಿಕಾರಗಳನ್ನು ಕೊಡಬಹುದೆಂದು ಪಾರ್ಲಿಮೆಂಟಿನವರು ಅಂಗೀಕರಿಸಿದರು. ಸಾವಿರ ಹೇಳಲೇಕೆ? ಅಂದಿನಿಂದಲೇ ಹಿಂದೂದೇಶದ ಇತಿಹಾಸದಲ್ಲಿ ಬ್ರಿಟಿಷರ ಪ್ರಭುತ್ವಭಾಗಕ್ಕೆ ಒಂದು ಹೊಸ ಶಕೆ ಏರ್ಪಟ್ಟಿತು, ಆದರೆ ಈ ನೂತನ ಶಕಾರಂಭಕ್ಕೆಲ್ಲವೂ ರಾಮಮೋಹನರಾಯನ ಪ್ರಬಲವಾದ ಪ್ರಯತ್ನವೇ ಕಾರಣವೆಂ ತಲೂ, ಇದಕ್ಕಾಗಿ ಆತನು ತನ್ನ ಭಾಗ್ಯವನ್ನೂ, ತನ್ನ ಜೀವಿತವನ್ನೂ, ಪ್ರಪಂಚದಲ್ಲೆಲ್ಲಾ ತನಗೆ ತುಂಬಾ ಪ್ರಿಯವಾದ ಪದಾರ್ಥ ಯಾವುದೋ ಅದನ್ನೂ (ದೇಹವನ್ನು) ಕೂಡ ಧಾರೆ

ಯೆರೆದನೆಂಬುದನ್ನೂ ಬಲ್ಲವರು ಕೆಲವರು ಮಾತ್ರವೇ ಇರುವರು, ನಮಗೋಸ್ಕರ ಇಷ್ಟು ಶ್ರಮೆಯನ್ನು ಹೊಂದಿದ ಈ ಮಹಾನುಭಾವನ ಋಣವನ್ನು ಎಷ್ಟು ಜನ್ಮಗಳಿಗಾದರೂ ನಾವು ತೀರಿಸಲಾರೆವಷ್ಟೆ ?

## ಆರನೆಯ ಪ್ರಕರಣ.

ಸೆಪ್ಟಂಬರ್ ತಿಂಗಳ ಆರಂಭದಲ್ಲಿಯೇ ರಾಮಮೋಹನನು ಲಂಡನ್ನಿನಿಂದ ಸ್ಟೇಪಲ್ ಟರ್ಗ್ರೋವಿಗೆ ಸೇರಿದನು. ಡೇವಿಡ್ ಹೇರನ ತಮ್ಮನ ಮಗಳಾದ ಮಿಸ್ ಹೇರ್ ಎಂಬುವಳೂ ರಾಮರತ್ನಮುಕರ್ಜಿ, ರಾಮಹರಿಮುಕರ್ಜಿ ಎಂಬ ಭೃತ್ಯರಿಬ್ಬರೂ ಈತನ ಜತೆಯಲ್ಲಿದ್ದರು. ರಾಜಾರಾಂ ಎಂಬ ಹುಡುಗನನ್ನು ಇದುವರೆಗೇ ಒಂದುಸಾರಿ ಮಿಸ್ ಕೇಡಲ್ ಎಂಬ ಸಾಧ್ವಿಯು ತನ್ನ ಬಳಿಯಲ್ಲಿಟ್ಟುಕೊಂಡಿದ್ದಳು.

ಸ್ಟೇಪಲ್‌ಟರ್ಗ್ರೋವ್ ಎಂಬುದು ಬ್ರಿಸ್ಟಲ್‌ಪಟ್ಟಣಕ್ಕೆ ಹೊಂದಿಕೆಯಾಗಿ ಕಟ್ಟಲ್ಪಟ್ಟು, ವಿಹಾರಯೋಗ್ಯವಾಗಿಯೂ, ಅಂದವಾಗಿಯೂ ಇರುವ ದಿವ್ಯಭವನವು. ಬ್ರಿಸ್ಟಲ್‌ನಗರದಲ್ಲಿ ಒಂದಾನೊಂದು ಕಾಲದಲ್ಲಿ ತುಂಬಾ ಘನತೆಪಡೆದ ಪ್ರಸಿದ್ಧವರ್ತಕನಾದ ಮಿಸ್ಟರ್ ಮೆಕಾಯಿಲ್‌ಕ್ಯಾಸಲ್ ಎಂಬಾತನು ಅದನ್ನು ಕಟ್ಟಿಸಿದನು. ಆದರೆ ಕ್ಯಾಸಲ್ಲಿನ ಮರಣಾನಂತರದಲ್ಲಿ ಈ ಭವನಗಳು ಆತನ ಮಗಳಾದ ಮಿಸ್ ಕ್ಯಾಸಲ್ ಎಂಬವಳ ಸ್ವಾಧೀನಕ್ಕೆ ಬಂದುವು. ಮಿಸ್ ಕೇಡಲ್ ಎಂಬಾಕೆಯು ಮಿಸ್ ಕ್ಯಾಸಲ್ ಎಂಬವಳ ದೊಡ್ಡಮ್ಮನ ದಾದಿಯು. ಈಕೆಯೇ ಮಿಸ್ ಕ್ಯಾಸಲ್ಲಳ ಪೋಷಕಳಾಗಿದ್ದಳು ಇವರಿಬ್ಬರೂ ಡಾಕ್ಟರ್ ಕಾರ್ಪೆಂಟರಿನ ರಕ್ಷಣೆಯಲ್ಲಿದ್ದರು.

ರಾಜಾ ರಾಮಮೋಹನರಾಯನು ಲಂಡನ್‌ಪಟ್ಟಣಕ್ಕೆ ಬಂದ ಕೆಲವು ದಿವಸಗಳಲ್ಲಿಯೇ ಡಾಕ್ಟರ್ ಕಾರ್ಪೆಂಟರು, ಈತನು ಯಾವಾಗಲಾದರೂ ಬ್ರಿಸ್ಟಲ್ ಪಟ್ಟಣಕ್ಕೆ ಬಂದಲ್ಲಿ ತನ್ನ ಮನೆಯು ವಿಶಾಲವಾಗಿಯೂ, ಸೌಖ್ಯಪ್ರದವಾಗಿಯೂ ಇರಲಾರದೆಂದು ತಿಳಿದು ಮಿಸ್ ಕ್ಯಾಸಲ್ಲಳ ಭವನದಲ್ಲಿ ಇಳಿದುಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದನು ಲಂಡನ್ನಿನಲ್ಲಿ ಕಾರ್ಪೆಂಟರವರ ಮೂಲಕ ಪರಿಚಿತರಾದ ಮಿಸ್ ಕೇಡಲ್, ಮಿಸ್ ಕ್ಯಾಸಲ್ ಎಂಬುವರು ತಮ್ಮ ಮನೆಯಲ್ಲಿ ಈ ಮಹನೀಯನು ವಾಸಮಾಡುವುದರಿಂದ ತಮಗೆ ತುಂಬ ಸಂತೋಷವೂ, ಘನತೆಯೂ ಉಂಟಾಗುವುದೆಂದು ಯಾವಾಗಲೂ ಯೋಚಿಸುತ್ತಿದ್ದರು. ಇದಲ್ಲದೆ ಅವರಿಗೂ ರಾಮಮೋಹನನಿಗೂ ಉತ್ತರಪ್ರತ್ಯುತ್ತರಗಳಮೂಲಕ ಅನ್ಯೋನ್ಯಪರಿಚಯ ಹೆಚ್ಚಾಗಿತ್ತು.

ರಾಮಮೋಹನನು ಬ್ರಿಸ್ಟಲ್ ನಗರಕ್ಕೆ ಬಂದುದು ತನ್ನ ಸ್ನೇಹಿತರ ಇಷ್ಟವನ್ನು ನೆರವೇರಿಸುವುದರ ಉದ್ದೇಶದಿಂದಲೇ. ಆದರೂ, ಲಂಡನ್‌ಪಟ್ಟಣಗಲ್ಲಿ ಇದ್ದಷ್ಟು ದಿನಗಳು

ಅಲ್ಲಿಯು ಕೆಲಸಗಳಲ್ಲಿ ರಾತ್ರಿಯೆನ್ನದೆ, ಹಗಲೆನ್ನದೆ ಯಾವಾಗಲೂ ಅತ್ಯಾಸಕ್ತಿಯಿಂದ ಕೆಲಸ ಮಾಡುತ್ತ ಬಂದುದರಿಂದ ಆತನು ಸ್ವಲ್ಪಮಟ್ಟಿಗೆ ವಿಶ್ರಾಂತಿಯನ್ನು ಪಡೆಯುವುದು ಅಗತ್ಯವಾಗಿದ್ದಿತು. ಅದುದರಿಂದ ಈ ಪ್ರದೇಶಕ್ಕೆ ಬಂದಮೇಲೆ ಕೆಲವು ದಿನಗಳ ತನಕ ಹಾಗೆಯೇ ನಡೆಯಿತು. ಅಷ್ಟರಲ್ಲಿ ಆತನಿಗೆ ನಿತ್ಯದ ಸೌಖ್ಯಸ್ಥಾನಕ್ಕೆ ಸೇರುವ ದಿನಗಳು ಸನ್ನಿಹಿತವಾದುವು. ಪರಮೇಶ್ವರನು ಆತನನ್ನು ಯಾವ ಯಾವ ಕಾರ್ಯಗಳನ್ನೆಸಗುವುದಕ್ಕಾಗಿ ಸೃಷ್ಟಿಸಿದನೋ ಆ ಕಾರ್ಯಗಳೆಲ್ಲವೂ ನೆರವೇರಿ ಆತನ ಕಷ್ಟಗಳು ಸಫಲವಾದುದರಿಂದ ಈ ಮಹಾತ್ಮನಿಗೆ ಮುಂದೆ ಶಾಶ್ವತ ಸೌಖ್ಯವೇ ಶರಣವಾಗಿದ್ದಿತು. ಆದುದರಿಂದ ಬ್ರಿಸ್ಟಲ್ ನಗರಕ್ಕೆ ಬರುವುದಕ್ಕೆ ತನ್ನ ಮಿತ್ರರನ್ನು ನೋಡುವುದೆಂಬುದು ನಿಮಿತ್ತಮಾತ್ರವಾಗಿ, ಪುನರಾವೃತ್ತಿ ರಹಿತವಾದ ದಿವ್ಯ ಲೋಕಕ್ಕೆ ಅವರಿಂದ ಕಳುಹಲ್ಪಡುವುದೇ ಮುಖ್ಯಕಾರ್ಯವಾಗಿದ್ದಿತು.

ಬ್ರಿಸಲ್ ನಗರವನ್ನು ಪ್ರವೇಶಿಸಿದ ಮೊದಲುಗೊಂಡು ಪ್ರತಿನಿತ್ಯವೂ ಡಾಕ್ಟರ್ ಕಾರ್ಪೆಂಟರು ರಾಮಮೋಹನನ ಬಳಿಗೆ ಬಂದು ಸ್ವಲ್ಪ ಹೊತ್ತು ಮಾತನಾಡಿಕೊಂಡು ಹೋಗುತ್ತಲಿದ್ದನು. ಒಂದೊಂದುವೇಳೆ ರಾಮಮೋಹನನು ಕಾರ್ಪೆಂಟರವರ ಮನೆಗೆ ಹೋಗುತ್ತಲಿದ್ದನು. ಪ್ರತಿದಿನವೂ ಸಾಯಂಕಾಲದ ವೇಳೆಯಲ್ಲಿ ಇವರಿಬ್ಬರೂ ತಂಗಾಳಿಗಾಗಿ ಊರಹೊರಗಣ ವ್ಯೆವಾಸಕ್ಕೆ ಹೋಗಿ ಬರುತ್ತಿದ್ದರು. ರಾಮಮೋಹನನು ಎರಡುವೇಳೆ ಡಾಕ್ಟರ್ ಕಾರ್ಪೆಂಟರವರ ಪ್ರಾರ್ಥನಾಮಂದಿರಕ್ಕೆ ಹೋಗಿ ಬಂದನು. ಮಿಸ್ ಕ್ಯಾಸ್ಸಲ್ಳ ಮನೆಯಲ್ಲಿ ಒಂದು ಭಾಗವನ್ನು ಬಾಡಿಗೆಗೆ ತೆಗೆದುಕೊಂಡು, ಉಪನ್ಯಾಸಗಳನ್ನೆಲ್ಲ ಬರೆಯುವುದರಲ್ಲಿ ಅತ್ಯು ತ್ಸಪ್ರಜ್ಞೆಯುಳ್ಳ ಜಾರ್ಜ್ ಫಾಸ್ಟರ್ ಎಂಬ ಫಾದಿರಿಯೊಬ್ಬನು ವಾಸಮಾಡುತ್ತಿದ್ದನು. ಮೊದಲುಮೊದಲು ಆತನಿಗೆ ರಾಮಮೋಹನನನ್ನು ಹೊಗಳುವವರಲ್ಲಿ ಸ್ವಲ್ಪಮಟ್ಟಿಗೆ ಈರ್ಷ್ಯೆಯುಂಟಾದರೂ ಆತನೊಂದಿಗೆ ಒಂದೆರಡುವೇಳೆ ಕಲೆತು ಮಾತನಾಡಿದ ಕೂಡಲೇ ಈ ಅಭಿಪ್ರಾಯವು ಮಾರ್ಪಟ್ಟಿತು. ಕೆಲವು ದಿನಗಳಲ್ಲಿಯೇ ಇವರಿಬ್ಬರೂ ಪರಮಮಿತ್ರರಾದರು. ಈ ಅಂಶವು ಈತನು ತನ್ನ ಸ್ನೇಹಿತನಿಗೆ ಬರೆದ ಪತ್ರದಿಂದ ವ್ಯಕ್ತವಾಗುವುದು.

ಡಿಸೆಂಬರು 11 ನೆ ತಾರೀಖಿನಲ್ಲಿ ರಾಮಮೋಹನನನ್ನು ಸತ್ಕರಿಸುವುದಕ್ಕಾಗಿ ಒಂದು ಸಭೆಕೂಡಿತು. ರಾಮಮೋಹನನ ನಿವಾಸಭವನವೇ ವಿಶಾಲವಾಗಿಯೂ,ಸೌಖ್ಯಪ್ರದವಾಗಿಯೂ ಇದ್ದುದರಿಂದ ಸಭೆಗೂಡುವುದಕ್ಕೆ ಆ ಸ್ಥಳವೇ ಏರ್ಪಡಿಸಲ್ಪಟ್ಟಿತು. ಈ ಸಭೆಗೆ ಹಲವರು ಬಂದು ಸೇರಿದರು. ಅವರಲ್ಲಿ ಮನುಷ್ಯನ ಜ್ಞಾನವನ್ನು ಪೂರ್ತಿಯಾಗಿ ತೂಗಿದಂತೆ ತಿಳಿದುಕೊಳ್ಳಲಿಕ್ಕೆ ಸಮರ್ಥರಾದ ವಿದ್ವಾಂಸರು ಕೆಲವರಿದ್ದರು. ಅವರೆಲ್ಲರೂ ಯೂನಿಟೇರಿಯನ್ ಸಭೆಯಲ್ಲಿ ನಡೆಯುವಂತೆಯೇ ಕ್ರಮಾನುಸಾರವಾಗಿ ಸ್ವಲ್ಪಸ್ವಲ್ಪ ಹೊತ್ತು ರಾಮಮೋಹನನ ಯೋಗ್ಯತಾದಿ ವಿಶೇಷಗಳನ್ನು ಕುರಿತು ಪ್ರಶಂಸಿಸಿದರು. ತರುವಾಯ ಈತನು ಅವರು ತೋರಿಸಿದ ಗೌರವಕ್ಕೆ ಪ್ರತ್ಯುಪಕೃತಿಯಾಗಿ ತನ್ನ ಕೃತಜ್ಞತಾಸೂಚಕ ವಂದನೆಗಳನ್ನು ಉಪನ್ಯಾಸರೂಪವಾಗಿ ಅರ್ಪಿಸಿದನು. ಆ ಸಭೆಯಲ್ಲಿದ್ದವರೆಲ್ಲರೂ ಆತನ ವಾಗ್ವೈಖರಿಗೂ, ಹೇತುನಿರ್ಮಾಣಕ್ಕೂ, ಮೃದುಭಾಷಣಕ್ಕೂ ತುಂಬ ಸಂತೋಷಪಟ್ಟರು. ಸೆಪ್ಟಂಬರ್ 16ನೇ ತಾರೀ

ಖಿನಲ್ಲಿ ಮರಳಿ ಅಲ್ಲಿಯೇ ಎರಡನೆಯ ಸಭೆಕೂಡಿತು. ಆದರಲ್ಲಿ ಆತನು ತನ್ನ ಕೊನೆಯ ಉಪನ್ಯಾಸವನ್ನು ಕೊಟ್ಟನು. ಆದಿನ ಮೊದಲು ನಡೆದ ಸಭೆಯ ಸ್ಥಿತಿಯನ್ನು ತಿಳಿದವರೆಲ್ಲರೂ ಗುಂಪುಗುಂಪಾಗಿ ಬಂದು ಸಭಾಭವನದಲ್ಲೆಲ್ಲಾ ತುಂಬಿಹೋಗಿದ್ದರು. ಸ್ಥಳಸಾಲದೆ ಹೋದ್ದುದರಿಂದ ಬಹುಮಂದಿ ನಿಂತುಕೊಂಡೇ ನೋಡುತ್ತಿದ್ದರು. ಆಗ ರಾಮಮೋಹನನು ಪರಮ ಸಂತೋಷದಿಂದ ಹಿಂದೂದೇಶದ ಪೂರ್ವಕಾಲದ ಔನ್ನತ್ಯವನ್ನು ಕುರಿತು ಮೂರು ತಾಸುಗಳತನಕ ಎದ್ದು ನಿಂತು ಉಪನ್ಯಾಸ ಮಾಡಿದನು. ಆ ಉಪನ್ಯಾಸ ಮಾಡುತ್ತಿದ್ದಾಗ ಆತನ ಮುಖದಲ್ಲಿ ತೋರಿಬರುತ್ತಿದ್ದ ಶೋಕ, ವೀರ, ಶೌರ್ಯ, ಅದ್ಭುತರಸಗಳಿಗೆ ಸಭೆಯಲ್ಲಿದ್ದವರೆಲ್ಲರೂ ಆಶ್ಚರ್ಯಪಟ್ಟು ಈತನು ಅಪ್ರತಿಮನೆಂದು ಹೊಗಳಿದರು.

ಅಕಟಾ ! ನಮ್ಮ ರಾಮಮೋಹನನ ಆರೋಗ್ಯದಶೆಗೆ ಅದೇ ಕೊನೆಯದಿನವಾಗಿದ್ದಿತು. ಮರುದಿನ ಅಂದರೆ ಸೆಪ್ಟಂಬರ್ 17 ರಲ್ಲಿ ಆತನು ಮಧ್ಯಾಹ್ನದ ಊಟವನ್ನು ಸ್ವಲ್ಪ ಆಲಸ್ಯದಿಂದ ಮಾಡಿದನು. ಹಿಂದಿನ ದಿನ ಕೊಟ್ಟ ಉಪನ್ಯಾಸದಿಂದ ದೇಹವು ಬಳಲಿರಬಹುದೆಂದು ತಿಳಿದು, ಆತನ ಸ್ನೇಹಿತರು ಈದಿನವೆಲ್ಲವೂ ಯಾವ ಕೆಲಸವನ್ನೂ ಮಾಡದೆ ವಿಶ್ರಾಂತಿಯನ್ನು ಪಡೆಯಬೇಕೆಂದು ಹೇಳಿದರು. ಆದರೂ ಆತನಿಗೆ ಸಂಪೂರ್ಣವಾದ ವಿಶ್ರಾಂತಿಕಾಲವು ಸಿದ್ಧವಾಗಿರುವುದೆಂದು ಯಾರಿಗೂ ತಿಳಿಯದು ಆ ಮಹಾತ್ಮನ ಮನಸ್ಸಿಗೆ ಏನಾದರೂ ತಿಳಿದಿತ್ತೋ ಏನೋ ! ಆದರೂ ತನ್ನ ಮನೋಬಲವು ತಗ್ಗುತ್ತಿರುವುದೆಂಬುದನ್ನು ಯಾರಿಗೂ ತಿಳಿಸದೆ ಆ ದಿನವೆಲ್ಲಾ ಮಲಗಿದ್ದರೂ ತನ್ನನ್ನು ನೋಡಲಿಕ್ಕೆ ಬಂದ ಸ್ನೇಹಿತರೊಂದಿಗೆಲ್ಲಾ ಸಂಭಾಷಣೆ ಮಾಡುತ್ತಲೇ ಇದ್ದನು.

ಆ ಮರುದಿನ ಸಹಾ ಹಾಗೆಯೇ ನಡಿಸಿದನು. ಆದರೆ ಸೆಪ್ಟಂಬರ್ 19ನೇ ಗುರುವಾರದ ದಿನ ಜ್ವರವು ಪ್ರಾರಂಭಿಸಿ ಕ್ರಮಕ್ರಮವಾಗಿ ಅಭಿವೃದ್ಧಿ ಹೊಂದಿ ಅನಿವಾರ್ಯವಾಗಿ ಕೊನೆಗೆ ಸೆಪ್ಟಂಬರ್ 27 ನೇ ಶುಕ್ರವಾರ ರಾತ್ರಿ 2 ಗಂಟೆ 25 ನಿಮಿಷಗಳಿಗೆ ಆತನ ಪರಿಶುದ್ಧಾತ್ಮವು ಸತ್ಯದುಃಖಹೇತುಕಗಳಾದ ಪ್ರಕೃತಿಬಂಧಗಳ ದೆಸೆಯಿಂದ ವಿಮುಕ್ತಿಯನ್ನು ಪಡೆಯಿತು. ಮಿಸ್. ಮೇರಿ ಕಾರ್ಪೆಂಟರು ಬರೆದ ಜೀವಚರಿತ್ರೆಯಲ್ಲಿ ರಾಮಮೋಹನನ ದೇಹಜಾಡ್ಯದ ವಿಷಯವಾಗಿಯೂ, ಮರಣದ ವಿಷಯವಾಗಿಯೂ, ನಿಜಸ್ಥಿತಿಯನ್ನು ವಿವರವಾಗಿ ತಿಳಿಯುವುದಕ್ಕಾಗಿ ಆತನಿಗೆ ವೈದ್ಯನಾಗಿದ್ದ ಈಸ್ಟ್‌ಲಿನ್ ಎಂಬುವರ ದಿನಚರ್ಯದ (Diary) ಪುಸ್ತಕದಿಂದ ಪ್ರಸ್ತುತಾಂಶಗಳಿಗೆ ಅಗತ್ಯವಾದ ವಿಷಯಗಳು ಉದ್ಧರಿಸಿ ಬರೆಯಲ್ಪಟ್ಟಿವೆ. ಅವುಗಳಿಂದ ರಾಮಮೋಹನನ ಮರಣವೃತ್ತಾಂತವನ್ನೂ, ರಾಮಮೋಹನನು ಬ್ರಿಸ್ಟಲ್‌ನಗರದಲ್ಲಿದ್ದಾಗ ಜರುಗಿದ ಇತರ ಸಂಗತಿಗಳನ್ನೂ ತಿಳಿಯಬಹುದು. ಆದುದರಿಂದ ಅವನ್ನು ಭಾಷಾಂತರಿಸಿ ಇಲ್ಲಿ ಬರೆದಿರುವೆನು.

ಈಸ್ಟ್‌ಲಿನ್‌ಯವರ ಡೈರಿ- ಬ್ರಿಸ್ಟಲ್ 1833 ನೆ ಇಸವಿ ಸೆಪ್ಟಂಬರ್ 9ನೇ ಸೋಮವಾರ—ನಾನು ರಾಮಮೋಹನರಾಯರನ್ನು ನೋಡುವುದಕ್ಕೆ ಸ್ಟೇಪಲ್‌ಟನ್‌ಗ್ರೋವಿಗೆ ಹೋದೆನು. ಆತನ ಸಂಗಡ ಬಹಳ ಹೊತ್ತಿನತನಕ ಒಳ್ಳೇ ಸಂಭಾಷಣೆ ಮಾಡಿದೆನು. ಆ ಸಂಭಾಷಣೆಯಲ್ಲಿ ಆತನು ಕ್ರಿಸ್ತಮತದ ನೂತನ ನಿಬಂಧನೆಗಳಲ್ಲಿ ಚರಿತ್ರಭಾಗದ ಸಾಕ್ಷ್ಯಕ್ಕಿಂತ

ಲೂ ಹೆಚ್ಚಾಗಿ ನಂಬಿಕೆಗಳನ್ನು ಕೊಡುವ ದೃಷ್ಟಾಂತಗಳುಂಟೆಂತಲೂ ಜೀಸಸ್ ದೇವರ ಮಗನೆಂದು ಹೇಳುವುದಕ್ಕಿಂತಲೂ ಆತನು ದೇವರ ದಿವ್ಯಮತವನ್ನು ಬೋಧಿಸಲಿಕ್ಕೆ ಹುಟ್ಟಿದ ಒಬ್ಬ ಮಹಾತ್ಮನೆಂದು ಒಪ್ಪಿಕೊಳ್ಳುವುದು ಯುಕ್ತವೆಂತಲೂ ಹೇಳಿ ನನಗೆ ಹಿಂದೀಭಾಷೆಯಿಂದ ಇಂಗ್ಲಿಷಿಗೆ ಭಾಷಾಂತರಿಸಿ ಬರೆದ ಒಂದು ಗ್ರಂಥವನ್ನು ಕೊಟ್ಟನು.

1833 ನೇ ಬುಧವಾರ—ಡಾಕ್ಟರ್ ಕಾರ್ಪೆಂಟರವರೊಡನೆ ನಾನು ಸ್ಟೇಪಲ್ಟನ್‌ಗ್ರೋವಿಗೆ ಭೋಜನಕ್ಕಾಗಿ ಹೋದೆನು. ಅಲ್ಲಿ ಡಾಕ್ಟರ್ ಜೇರಾರ್ಡ್, ಡಾಕ್ಟರ್ ಸೀವರ್ಡ್, ಫಾಸ್ಟರ್, ಬ್ರೋಸ್, ಏರ್ಮಿಲೀ ಮತ್ತು ಇಸ್ಟ್ಲಿಂಟ್ ಇವರುಗಳನ್ನು ದರ್ಶಿಸಿದೆನು. ಊಟ ಮಾಡುತ್ತಿದ್ದಾಗ ಸಂತೋಷಕರವಾದ ಸಂಭಾಷಣೆಗಳು ಜರುಗಿದುವು. ರಾಜಾ ರಾಮಮೋಹನರಾಯರು ತನ್ನ ಪ್ರಸ್ತುತ ಮತಪರ್ಯವಸಾನಕ್ಕಾಗಿ ಎಷ್ಟೆಷ್ಟು ಅಭ್ಯಂತರಗಳನ್ನು ಎದುರಿಸಿ ದಾಟಬೇಕಾಗಿ ಬಂದುದೆಂಬುದನ್ನು ಸಾವಕಾಶವಾಗಿ ಹೇಳಿದರು. ಜೀಸಸ್ಸನು ಮರಳಿ ಬದುಕಿದನೆಂತಲೂ, ಪ್ರಜೆಗಳೆಲ್ಲರೂ ಕೂಡ ಒಂದಾನೊಂದು ಕಾಲದಲ್ಲಿ ಬದುಕಿ ಏಳುವರೆಂತಲೂ, ನಂಬುವುದೇ ಕ್ರೈಸ್ತರ ಮತವೆಂದು ತಿಳಿಯುತ್ತೇನೆಂದು ಹೇಳಿದರು.

ಸೆಪ್ಟಂಬರ್ 12ನೇ ಗುರುವಾರ—ನಾನು ಅಲ್ಲಿಯೇ ಮಲಗಿಕೊಂಡೆನು ಫಲಾಹಾರದ ಕಾಲದಲ್ಲಿ ಮನಸ್ಸನ್ನು ಸಂತೋಷಗೊಳಿಸುವ ಸಂಭಾಷಣೆಗಳು ನಡೆದುವು. ನಾನು ರಾಮಮೋಹನನಿಗೆ ಹಿಂದು, ಅರೇಬಿಯ, ಮಹಾಸಮುದ್ರಗಳಲ್ಲಿನ ದ್ವೀಪಗಳಲ್ಲಿ ವಾಸಗವಾಡುವ ಸಿದ್ದೀಜನರ ಚರಿತ್ರೆಯನ್ನು ಹೇಳಿದೆನು. ಆದರೆ ಆತನು ಅವರ ಸ್ಥಿತಿಯನ್ನು ಇದುವರಿಗೇನೇ ಮಿಷನೆರಿಗಳಿಂದ ಕೇಳಿದ್ದುದರಿಂದ ಈಗ ಅಷ್ಟರ ಅಕ್ಕರೆಯಿಂದ ಅದನ್ನು ಕೇಳಲಿಲ್ಲ. ಮಿಸ್ ಕೇಡಲ್, ಮಿಸ್ ಕ್ಯಾಸಲ್, ರಾಮಮೋಹನರಾಯ, ನಾನು ಸೇರಿ ಅವರ ಬಂಡಿಯಲ್ಲಿ ಬ್ರಿಸ್ಟಲ್‌ಗೆ ಬಂದೆವು.

ಸೆಪ್ಟಂಬರ್ 13ನೇ ಶುಕ್ರವಾರ—2 ಗಂಟೆಗೆ ರೋಗಿಗಳನ್ನು ನೋಡಿ 4 ಗಂಟೆ ಹೊತ್ತಿಗೆ ಸ್ನೇಹಿತರನ್ನೆಲ್ಲ ಭೋಜನಕ್ಕೆ ಬರಬೇಕೆಂದು ಆಮಂತ್ರಣ ಪತ್ರಗಳನ್ನು ಕಳುಹಿಸಿದೆನು. ರಾಜಾ ರಾಮಮೋಹನರಾಯರು, ಮಿಸ್ ಕೇಡಲ್, ಮಿಸ್ ಕ್ಯಾಸಲ್, ಡಾಕ್ಟರ್ ಜೆರಾರ್ಡ್, ಡಬ್ಲಿನ್ ನಿವಾಸಿಯಾದ ಮಿಸ್ಟರ್ ಪ್ರೇ, ಮಿಸ್ಟರ್ ಬ್ರೋಸ್, ಜೋಕೋಟ್ಸ್ ಮೊದಲಾದವರೆಲ್ಲರೂ ಬಂದರು. ರಾಜತಂತ್ರಗಳನ್ನು ಕುರಿತು ಸಂಭಾಷಣೆ ಜರುಗಿತು. ಅದರಲ್ಲಿ ರಾಮಮೋಹನನು ಲಿಬರಲ್ ಕಕ್ಷಿಯವರ ಪಕ್ಷವಾಗಿ ವಾದಿಸಿದನು.

ಸೆಪ್ಟಂಬರ್ 14ನೇ ಶನಿವಾರ—ನಾನು ಸ್ಟೇಪಲ್‌ಟನ್‌ಗ್ರೋವಿಗೆ ಹೋದೆನು. ಅಲ್ಲಿ ಡಾಕ್ಟರ್ ಕಾರ್ಪೆಂಟರನ್ನು ನೋಡಿದೆನು. ರಾಮಮೋಹನನ ಸಂಗಡ ಒಳ್ಳೇ ಹಿತವಾದ ಸಂಭಾಷಣೆ ಜರುಗಿತು.

ಸೆಪ್ಟಂಬರ್ 15ನೇ ಭಾನುವಾರ—ರಾಜಾ ರಾಮಮೋಹನರಾಯರು ಮಿಸ್ ಕೇಡಲ್ ಎಂಬುವಳ ಬಂಡಿಯಲ್ಲಿ ಕುಳಿತು ಹೋಗುತ್ತಾ, ನನ್ನನ್ನೂ, ನನ್ನ ಹೆಂಡತಿಯನ್ನೂ ಪ್ರಾರ್ಥನಾಮಂದಿರದ ತನಕ ಕರೆದುಕೊಂಡು ಹೋದರು. ಡಾಕ್ಟರ್ ಪ್ರೊಪೆಡ್ ಎಂಬು

ವರನ್ನು ಬೇಡಿ ತಂದ "ಫಿಜಿಕಲ್ ಹಿಸ್ಟರಿ ಆಫ್ ಮೆನ್" ಎಂಬ ಪುಸ್ತಕವನ್ನು ರಾಮಮೋಹನನಿಗೆ ಓದಿ ಕೊಡಲಿಕ್ಕಾಗಿ ಕೊಟ್ಟೆನು.

ಸೆಪ್ಟಂಬರ್ 17ನೇ ಮಂಗಳವಾರ—ನನ್ನ ತಾಯಿಯು ರಾಮಮೋಹನನೊಂದಿಗೆ ಒಂದೆರಡು ದಿನಗಳತನಕ ಇರಬೇಕೆಂದು ಸ್ಟೇಪಲ್‌ಟನ್‌ಗ್ರೋವಿಗೆ ಹೋದಳು.

ಸೆಪ್ಟಂಬರ್ 19ನೇ ಗುರುವಾರ—ನಾನು ಕುದುರೆಯನ್ನು ಹತ್ತಿ ನನ್ನ ತಾಯಿಯನ್ನೂ ಸ್ನೇಹಿತರನ್ನೂ ನೋಡಲಿಕ್ಕೆ ಸ್ಟೇಪಲ್‌ಟನ್‌ಗ್ರೋವಿಗೆ ಹೊರಟೆನು. ರಾಜಾ ರಾಮಮೋಹನರಾಯನು ಜ್ವರದಿಂದ ಬಾಧೆಪಡುತ್ತಿದ್ದನು. ಆತನು ನನ್ನನ್ನು ನೋಡಿ ಬಹಳ ಸಂತೋಷಗೊಂಡನು. ನಾನು ಅವನಿಗೆ ಔಷಧವನ್ನು ಕೊಟ್ಟೆನು. ರಾತ್ರಿ 3 ಗಂಟೆಗಳ ಹೊತ್ತಿಗೆ ನನ್ನನ್ನು ಕರೆದೊಯ್ಯಲು ರಾಜಾ ರಾಮಮೋಹನರಾಯರ ಕಡೆಯಿಂದ ಗಾಡಿ ಬಂದಿತು. ನಾನು ಹೋಗಿ ನೋಡುವಲ್ಲಿ ಜ್ವರವಿನ್ನೂ ದೇಹವನ್ನು ಆಶ್ರಯಿಸಿದ್ದರೂ ಶರೀರ ಸ್ಥಿತಿ ಮಾತ್ರ ಮೊದಲಿಗಿಂತ ಸ್ವಲ್ಪ ಉತ್ತಮವಾಗಿದ್ದಿತು. ರಾಜಾ ರಾಮಮೋಹನನನ್ನು ನೋಡಲಿಕ್ಕೆ ಬಂದ ಲಂಡನ್ ಸ್ನೇಹಿತನಾದ ಮಿಸ್ಟರ್ ಜಾರ್ನ್‌ಹೇರ್ (ಡೇವಿಡ್‌ಹೇರನ ಸಹೋದರನು) ಮತ್ತು ಅವನ ಮಗಳಾದ ಮಿಸ್ ಹೇರ್ ಇವರಿಬ್ಬರೂ ಅಲ್ಲಿಯೇ ಇದ್ದರು. ನಾನು ಅಲ್ಲಿಯೇ ಮಲಗಿದ್ದೆನು.

ಸೆಪ್ಟಂಬರ್ 20ನೇ ಶುಕ್ರವಾರ—ರಾಜಾ ರಾಮಮೋಹನರಾಯನ ದೇಹಸ್ಥಿತಿಯು ಸ್ವಲ್ಪವೂ ನೆಟ್ಟಗಿರಲಿಲ್ಲ. ನಾನು 2 ಗಂಟೆಯ ವೇಳೆಗೆ ಅವರ ಗಾಡಿಯಿಂದಲೇ ಮನೆಗೆ ಬಂದೆನು. ರಾತ್ರಿಯ ಊಟಕ್ಕೆ ಮರಳಿ ಅಲ್ಲಿಗೇನೇ ಹೋದೆನು. ರಾಮಮೋಹನನಿಗೆ ತಲೆನೋವು ಹುಟ್ಟಿದ್ದು ಔಷಧದಿಂದ ಶಮನವಾಯಿತು. ಆಗ ಆತನು ಮಲಗಿದನು. ಆದರೂ ನಿದ್ರೆ ಹತ್ತಲಿಲ್ಲ. ರಾತ್ರಿ 11 ಗಂಟೆಗೇನೇ ಎಚ್ಚತ್ತನು. ಆಗ ಆತನ ಮೈ ತಣ್ಣಗಿತ್ತು. ತುಂಬ ಬಲಹೀನನಾಗಿ ಕಾಣುತ್ತಿದ್ದನು. ಉಷ್ಣದ್ರಾವಕದಿಂದ ಸ್ವಲ್ಪಮಟ್ಟಿಗೆ ಲಾಭ ಕಾಣಿಸಿತು. ಆದರೂ ತಾಪವು ಹೆಚ್ಚಾಗಿದ್ದಿತು. ಸ್ವಲ್ಪ ಹೊತ್ತು ನೆಲದಮೇಲೆ ಮಲಗುತ್ತ ಬಂದನು. ಹೇರ್ ಎಂಬುವರ ಮಗಳಾದ ಮಿಸ್ ಹೇರ್ ಎಂಬಾಕೆಯು ಹತ್ತಿರದಲ್ಲಿಯೇ ಕುಳಿತಿದ್ದು ಉಪಚರಿಸುತ್ತಿರಲಿಕ್ಕೆ ಅಂಗೀಕರಿಸಬೇಕೆಂದು ನಾನು ಪ್ರಾರ್ಥಿಸಿದೆನು. ಆದರೆ ಇದು ದೋಷಾವಹವೆಂದು ಆತನು ಸಮ್ಮತಿಸದೆ ಹೋದನು. ನಮ್ಮ ದೇಶದಲ್ಲಿ ಹೀಗೆ ಪರಿಚರ್ಯಮಾಡುವುದು ಸ್ವಲ್ಪವೂ ದೋಷಾವಹವಲ್ಲವೆಂದು ಮರಳಿ ನಾನು ಹಲವು ಬಗೆಗಳಿಂದ ಸಮ್ಮತಿ ಹೇಳಲು ಆತನು ಅದನ್ನೊಪ್ಪಿಕೊಂಡನು. ನಾನು ಆಗ ಮಿಸ್ ಹೇರ್ ಎಂಬಾಕೆಯನ್ನು ನಿದ್ರೆಯಿಂದ ಎಬ್ಬಿಸಿ ಕರೆದುಕೊಂಡು ಬಂದೆನು. ನನ್ನ ಶ್ರದ್ಧೆಗೆ ಆತನು ತುಂಬ ಸಂತೋಷಿಸಿ, ನನ್ನನ್ನು ತನ್ನ ಹತ್ತಿರದಲ್ಲಿಯೇ ಮಲಗಿಸಿಕೊಂಡನು. ಆತನ ವಿಷಯದ ವಿಚಾರದಲ್ಲಿಯೇ ಆ ರಾತ್ರಿಯನ್ನೆಲ್ಲಾ ಕಳೆದೆನು. ಬೆಳಗಾಗುವವರೆಗೆ ಸ್ವಲ್ಪವೂ ಗುಣ ತೋರದಿದ್ದರೆ ಡಾಕ್ಟರ್ ಪ್ರೀಚೆಟ್‌ನ್ ಎಂಬವರನ್ನು ಕರೆದು ತರುವೆನೆಂದು ನಮ್ಮ ತಾಯಿಯೊಂದಿಗೆ ಹೇಳಿದೆನು.

ಸೆಪ್ಟಂಬರ್ 21 ನೇ ಶನಿವಾರ—ಮಿಸ್ ಹೇರಳು ರಾಜಾ ರಾಮಮೋಹನನ ಬಳಿಯಲ್ಲಿ ಕುಳಿತುಕೊಂಡಿದ್ದಳು. ಆಕೆಯು ಹಿಂದಿನ ರಾತ್ರಿ ಆಗಾಗ್ಗೆ "ಈಗ ಹೇಗಿದೆ, ಈಗ ಹೇಗಿದೆ," ಎಂದು ಕೇಳುತ್ತಲೇ ಇದ್ದಳು. ಈದಿನ ಪ್ರಾತಃಕಾಲದಲ್ಲಿ ನಾನು ಆತನ ನಾಡಿಗಳನ್ನು ಪರೀಕ್ಷಿಸಿದ್ದರಲ್ಲಿ ಸ್ವಲ್ಪ ಉತ್ತಮವಾಗಿರುವಂತೆ ಕಾಣಬಂದಿತು, ಆದರೂ ಆತನು ಮಾತನಾಡಲಾರದೆ ಇದ್ದನು. ನಾನು ಮಿಸ್ ಕೇಸಲ್ ಮೊದಲಾದವರ ಅಭಿಪ್ರಾಯದಂತೆ ಡಾಕ್ಟರ್ ಪ್ರಿಚೆರ್ಡ್ ಎಂಬವರನ್ನು ಕರೆದು ತರಲು ಬ್ರಿಸ್ಟಲ್ಲಿಗೆ ಹೊರಟು, ಎರಡುಘಂಟೆಗಳ ತನಕ ಕೆಲವರು ರೋಗಿಗಳನ್ನು ಪರೀಕ್ಷಿಸಿ, ಸಾಯಂಕಾಲ ಐದು ಗಂಟೆಗಳ ಭೋಜನವೇಳೆಗೆ ಪ್ರಿಚೆರ್ಡರನ್ನು ಕರೆದುಕೊಂಡು ಸ್ಟೇಪಲ್‌ಟನ್‌ಗ್ರೋವಿಗೆ ಬಂದು ಸೇರಿದೆನು. ನಾನು ಆದುವರೆಗೆ ಈ ವಿಷಯವನ್ನು ರಾಜಾ ರಾಮಮೋಹನರೊಂದಿಗೆ ಹೇಳಲಿಲ್ಲ. ಆಗಲಾತನು ತುಂಬ ಸಂತೋಷಿಸಿ ನನ್ನನ್ನು ಹತ್ತಿರಕ್ಕೆ ಕರೆದು, ಡಾಕ್ಟರ್ ಪ್ರಿಚೆರ್ಡರ ಮುಖವು ತುಂಬ ಕಳೆಗೊಂಡಿದೆಯಲ್ಲವೇ ಎಂದನು. ಹೇರರೂ ಪ್ರಿಚೆರ್ಡರ ಆಗಮನಕ್ಕಾಗಿ ಸಂತೋಷಪಟ್ಟರು. ರಾತ್ರಿ 11 ಗಂಟೆ ಹೊತ್ತಿಗೆ ನಾನು ಸ್ವಲ್ಪ ನಿದ್ರಿಸಿದೆನು. ಮಿಸ್ ಹೇರ್ ಎಂಬಾಕೆಯು ಹತ್ತಿರದಲ್ಲಿ ಕುಳಿತುಕೊಂಡೇ ಇದ್ದಳು.

ಸೆಪ್ಟಂಬರ್ 22 ನೆ ಭಾನುವಾರ—ಬೆಳಗಾಗುವ ಹೊತ್ತಿಗೆ ರಾಮಮೋಹನರಾಯನು ಬಹಳ ಬಳಲಿದ್ದನು. ಆದರೆ ಆಮೇಲೆ ಆತನಿಗೆ ಸ್ವಲ್ಪ ನಿದ್ರೆ ಹತ್ತಿತು. ಅದಾದರೋ ಕನವರಿಕೆಯಿಂದ ಕೂಡಿದ ನಿದ್ರೆಯಾಗಿತ್ತು. ಹನ್ನೊಂದುಗಂಟೆ ಮೂವತ್ತು ನಿಮಿಷಗಳ ಹೊತ್ತಿಗೆ ಪ್ರಿಚೆರ್ಡ್ ಬಂದನು. ನಾನು ಆತನೊಂದಿಗೆ ಒಳಕ್ಕೆ ಹೋಗಿ ಮೂರುಗಂಟೆ ಹೊತ್ತಿಗೆ ಈಚೆಗೆ ಬಂದೆನು. ಹೇರರವರು ಕೂಡ ಹೊರಕ್ಕೆ ಬಂದರು. ಸಂಜೆಯವರೆಗೆ ರಾಮಮೋಹನರಾಯನ ಸ್ಥಿತಿಯು ಸ್ವಲ್ಪ ಸುಮುಖವಾಗಿ ಕಾಣಬಂದುದರಿಂದ ನನಗೆ ಸ್ವಲ್ಪ ನಂಬುಗೆಯುಂಟಾಯಿತು. ಆಗಲಾತನು "ನೀವೂ, ಪ್ರಿಚೆರ್ಡರೂ, ಹೇರರೂ ನನ್ನ ಬಳಿಯಲ್ಲಿದ್ದರೆ ಮೃತ್ಯುವು ಬಂದು ತನ್ನ ಕೆಲಸವನ್ನು ನೆರವೇರಿಸಿಕೊಂಡು ಹೋದರೂ ನನಗೆ ಸಮ್ಮತವಾಗಿದೆ. ಈ ಬ್ರಿಸ್ಟಲಿನಲ್ಲಿ ನನ್ನ ದೇಹರಕ್ಷಣೆಗಾಗಿ ಮಾಡಬೇಕಾದ ಉಪಚಾರಗಳಲ್ಲಿ ಯಾವುದೊಂದು ಕೊರತೆಯೂ ಉಂಟಾಗಿಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ" ಎಂದು ನನ್ನೊಂದಿಗೆ ಹೇಳಿದನು. ನನ್ನ ಹೆಂಡತಿಯೂ, ನನ್ನ ತಾಯಿಯೂ ಮಿಸ್ ಕೇಸಲ್ಲಳ ಬಂಡಿಯನ್ನು ಹತ್ತಿ ಸಭೆಗೆ ಹೊರಟುಹೋದರು. ಮಿಸ್ ಹೇರಳು ರಾಮಮೋಹನನಿಗೆ ಬಹು ಜಾಗ್ರತೆಯಿಂದ ಉಪಚಾರಗಳನ್ನು ಮಾಡುತ್ತಲಿದ್ದಾಳೆ; ಆಕೆಯು ಔಷಧಗಳನ್ನು ಕೊಡಬೇಕಾದ ವೇಳೆಯಲ್ಲಿ ತಪ್ಪದೆ ಕೊಡುತ್ತಾ ಹಲವು ಬಗೆಗಳಿಂದ ರೋಗಿಯನ್ನು ಕಾಪಾಡುತ್ತಲಿರುವಳು. ನಾನು ಸುದಾ ಅಷ್ಟರ ಮಟ್ಟಿಗೆ ಮಾಡಲಾರೆನು. ರಾಮಮೋಹನನು ಕೂಡ ಆಕೆಯನ್ನು ತನ್ನ ಮಗಳಂತೆಯೇ ಪ್ರೀತಿಸುತ್ತಿರುವನು.

ಸೆಪ್ಟಂಬರ್ 23 ನೆ ಸೋಮವಾರ—ನಾನು ಐದು ಗಂಟೆಗಳಿಗಿಂತ ಮುಂಚಿತವಾಗಿಯೇ ಎಚ್ಚತ್ತೆನು. ರಾತ್ರಿಯಲ್ಲೆಲ್ಲ ರಾಮಮೋಹನನು ತುಂಬ ತಾಪದಲ್ಲಿದ್ದನು. ಆತನು

ಆಗಾಗ್ಗೆ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಲಿದ್ದನು. ಈ ದಿನದ ಹಗಲೆಲ್ಲವೂ ಆತನಿಗೆ ಕಷ್ಟ ವಾಗಿಯೇ ಇದ್ದಿತು. ತನ್ನ ಬಳಿಯಲ್ಲಿ ಇಂಥವರಿರುವರೆಂಬುದೇ ಆತನಿಗೆ ತಿಳಿಯದು. ಆದರೂ ಕೂಗಿ ಹೇಳಿದಾಗ ಮಾತ್ರ ಜ್ಞಾನವನ್ನು ತಂದುಕೊಳ್ಳುತ್ತಿದ್ದನು. ಇದು ನನಗೆ ಭಯಾವ ಹವಾಗಿ ತೋರಿದ್ದರಿಂದ ನನ್ನ ಮನಸ್ಸಿನಲ್ಲಿ ಒಂದೊಂದು ವೇಳೆ ಆತನಿಗೆ ಆರೋಗ್ಯವುಂಟಾಗ ಬಹುದೆಂಬ ಆಶೆಯೂ, ಒಂದುವೇಳೆ ಮರಣವು ಸಂಭವಿಸುವುದೇನೋ ಎಂಬ ಭಯವೂ ಉಂ ಟಾಗುತ್ತಿದ್ದುವು. ಮುಂದೆ ವೈದ್ಯನನ್ನು ಕರೆಯಿಸಿದರೆ ಒಳ್ಳೇದೆಂದು ಉದಯದಲ್ಲಿಯೇ ಹೇರ್‌ರವರು ನನ್ನೊಡನೆ ಹೇಳಲು, ಆ ಮಾತು ನನಗೂ ಸಮ್ಮತವಾಗಿದ್ದುದರಿಂದ ಡಾಕ್ಟರ್ ಕೀತ್‌ಳ ಎಂಬ ವೈದ್ಯನನ್ನು ಡಾಕ್ಟರ್ ಪ್ರೀಚೆಟ್‌ಳ ಎಂಬಾತನ ಸಂಗಡ ಕರೆದುಕೊಂಡು ಬಂದೆನು. ಆ ದಿನ ಶರೀರದಲ್ಲಿದ್ದ ಎಲ್ಲಾ ಯಾತನೆಗಳಿಗಿಂತಲೂ ತಲೆನೋವು ತುಂಬ ಬಾಧೆ ಪಡಿಸುತ್ತಲಿದ್ದಿತು. ತಲೆಗೆ ಪಟ್ಟು ಹಾಕಿದ್ದರಿಂದ ರಾತ್ರಿಯ ವೇಳೆಗೆ ಅದು ಶಮನವಾಯಿತು. ನಾನು ಇಷ್ಟು ಶ್ರದ್ಧೆ ತೆಗೆದುಕೊಳ್ಳುತ್ತಿರುವುದಕ್ಕಾಗಿ ರಾಜಾರಾಮಮೋಹನರಾಯರು ನನ್ನನ್ನು ಕೊಂಡಾಡಿ ಬಾರಿಬಾರಿಗೂ ನನ್ನ ಕೈಯನ್ನು ಮುದ್ದಿಡುತ್ತಿದ್ದರು. ಪ್ರಾತಃಕಾ ಲದಲ್ಲಿಯೇ ಆತನ ಶರೀರವನ್ನು ಬಿಸಿನೀರಿನಿಂದ ಶುಭ್ರವಾಗಿ ತೊಳೆಯಿಸಿದೆನು. ಆ ರಾತ್ರಿ ಸ್ವಲ್ಪ ಸೌಖ್ಯವಾಗಿ ಕಳೆಯಿತೆಂದು ತಿಳಿದೆನು.

ಸೆಪ್ಟಂಬರ್ 24 ನೆ ಮಂಗಳವಾರ—ಕಳೆದ ರಾತ್ರಿ ಹೇರ್‌ರವರು, ಮಿಸ್ ಹೇರ್, ರಾಜಾರಾಮ್, ಈ ಮೂವರೂ ರಾಮಮೋಹನನ ಹತ್ತಿರ ಕುಳಿತುಕೊಂಡರು. ನಾನು 11 ಘಂಟೆಯ ಹೊತ್ತಿಗೆ ಆತನನ್ನು ಅಗಲಿ ಹೋಗಿದ್ದು ಮರಳಿ ಪ್ರಾತಃಕಾಲ ಐದುಘಂಟೆಗ ಳಲ್ಲಿಯೇ ಬಂದು ಸೇರಿದೆನು. ನೆನ್ನೆಯ ರಾತ್ರಿಗಿಂತ ಸ್ವಲ್ಪ ಉತ್ತಮವಾಗಿದೆ. ಕೀತ್‌ಳ, ಪ್ರೀಚೆಟ್‌ಳ ಇವರು ಹನ್ನೆರಡುಗಂಟೆಯ ಹೊತ್ತಿಗೆ ಬಂದರು. ಈ ಹಗಲಿನಲ್ಲಿ ಅಷ್ಟು ಕಷ್ಟ ವಾಗಿರಲಿಲ್ಲ. ಸ್ವಲ್ಪಮಟ್ಟಿಗೆ ನಿದ್ರೆಯೂ ಹತ್ತಿತ್ತು. ಆತನಿಗೆ ಮರಳಿ ಮುನ್ನಿನಂತೆ ಸ್ವಲ್ಪ ಬಾಧೆ ಹೆಚ್ಚುತ್ತ ಬಂದಿತು.

ಸೆಪ್ಟಂಬರ್ 25 ನೆ ಬುಧವಾರ—ರಾಮಮೋಹನನು ಬಹಳ ಹೊತ್ತು ನಿದ್ರಿಸಿದನು. ನಿನ್ನೆಯರಾತ್ರಿಗಿಂತ ಈ ರಾತ್ರಿಯಲ್ಲಿ ರಾಮಮೋಹನನಿಗೆ ಆರೋಗ್ಯವಾಗಿದೆ. ನಾಡಿಯು ನಿಮಿಷಕ್ಕೆ 10-12 ಸಾರಿಯಂತೆ ಬಲಹೀನವಾಗಿ ಹೊಡೆದುಕೊಳ್ಳುತ್ತಲಿದೆ. ಹೇರ್ ಎಂಬಾ ತನು ಹತ್ತಿರದಲ್ಲಿಯೇ ಕಾದಿದ್ದು ಬೆಳಗಾಗಲಿಕ್ಕೆ ಮುಂಚೆ 3-4 ಗಂಟೆಗಳ ನಡುವೆ ನನಗೆ ರೋಗಿಯ ವಿವರವನ್ನು ಹೇಳಿ, ನಾಡಿಯಲ್ಲಿ ಕ್ಷಣೇ ಕ್ಷಣೇ ಬಲವು ತಗ್ಗುತ್ತಿರುವುದನ್ನು ಕುರಿತು ಸಂದೇಹಗೊಂಡನು. ಮೈತಣ್ಣಗಾಗುತ್ತಲಿತ್ತು ; ಆದರೂ ಕೊಂಚ ಉಣ್ಣೆಯ ಬಟ್ಟೆಗಳನ್ನು ಹೊದ್ದಿಸಿದ ಕೂಡಲೇ ಶಾಖವುಂಟಾಗುತ್ತ ಬಂದಿತು. ಆತನು ಮಾತನಾಡ ಲಾರದೆ ಇದ್ದನು. ಆದರೂ ಕರೆದಾಗ ಕಣ್ಣುತೆರೆದು ನೋಡುತ್ತಿದ್ದನು. ನಾನು 12 ಗಂ ಟೆಗೆ ಬ್ರಿಸ್ಟಲ್ಲಿಗೆ ಬಂದು, ರಾತ್ರಿಯ ಊಟಕ್ಕೆ ಸ್ಟೇಪಲ್‌ಟನ್‌ಗ್ರೋವಿಗೆ ಬಂದೆನು. ಅಷ್ಟು ಹೊತ್ತಿಗೆ ರಾಜಾ ರಾಮಮೋಹನನ ಸ್ಥಿತಿಯು ತುಂಬ ಅಲಕ್ಷ್ಯವಾಗಿದ್ದಿತು. ನೆಲದಮೇಲೆ

ಹಾಸಿಗೆ ಹಾಸಲ್ಪಟ್ಟಿದ್ದರೂ ಹೊರಳಲಾರದೆ ಇದ್ದನು. ಆದರೂ ಒಂದೊಂದುಸಾರಿ ಹೀನ ಸ್ವರದಿಂದ ಮಾತನಾಡುತ್ತಲಿದ್ದನು.

ಸೆಪ್ಟಂಬರ 26 ನೇ ಗುರುವಾರ—ಕಳೆದರಾತ್ರಿ ಬಹಳ ಹೊತ್ತಿನ ತನಕ ಹೇರರವರು ಆತನ ಬಳಿಯಲ್ಲಿಯೇ ಎಚ್ಚತ್ತು ಕುಳಿತಿದ್ದರು ಆತನು ನಿನ್ನಿನಂತೆಯೇ ಬೆಳಗಾಗಲಿಕ್ಕೆ ಮುಂಚೆ 3-4 ಗಂಟೆಗಳ ಮಧ್ಯದಲ್ಲಿ ನನ್ನ ಬಳಿಗೆ ಬಂದು ರಾಮಮೋಹನನ ನಾಡಿಯು ಅಸ್ಪಷ್ಟಕ್ಕೆ ಬಲಹೀನವಾಗುತ್ತಲಿದೆಯೆಂತಲೂ, ರಾತ್ರಿಯೆಲ್ಲವೂ ನಿದ್ದೆಯಿಲ್ಲದೆ ತುಂಬ ಬಾಧೆಪಡುತ್ತಲಿದ್ದನೆಂತಲೂ ಚಿಂತೆಯಿಂದ ಹೇಳಿದನು. ಡಾಕ್ಟರ್ ಕೀತ್‌ಹ ಹನ್ನೊಂದು ಗಂಟೆಯ ವೇಳೆಗೆ ಬಂದನು. ಆಗ ಮಿಸ್ ಹೇರಳು ನನ್ನನ್ನು ಒಳಕ್ಕೆ ಕರೆದಳು. ನೋಡುವಲ್ಲಿ ರೋಗಿಗೆ ನಾಲಿಗೆ ಎಳೆದುಕೊಂಡುಹೋಗಿ ವಕ್ರವಾಗಿದ್ದಿತು. ಆಗ ತಲೆಯಮೇಲಣ ಕೂದಲುಗಳನ್ನೆಲ್ಲಾ ಕತ್ತರಿಸಿ ನೀರುಹಾಕಿಸಿದ್ದರಿಂದ ತಾಪವು ಶಾಂತವಾಯಿತು. ಈ ರಾತ್ರಿಗೆ ಬರ್ನಾರ್ಡ್‌ಹ ಎಂಬ ವೈದ್ಯನನ್ನು ನೋಡಬೇಕೆಂದು ನಿಶ್ಚಯಿಸಿದೆವು. ಮಧ್ಯಾಹ್ನದ ಮೇಲೆ ಆತನ ಮೈಯಲ್ಲಿ ಉಷ್ಣವು ತುಂಬ ಹೆಚ್ಚಿ ನಾಡಿಯು ಬಹುವೇಗವಾಗಿ ಓಡುತ್ತಲಿದ್ದಿತು. ಸಾಯಂಕಾಲವಾದ ಕೂಡಲೇ ಮರಳಿ ತಾಪವೂ ದಾಹವೂ ಆರಂಭಿಸಿದವು. ಇಷ್ಟರಮೇಲೆ ತುಂಬ ಕಷ್ಟದಿಂದ ಸ್ವಲ್ಪ ಆಹಾರವನ್ನು ಆತನ ಗಂಟಲಲ್ಲಿ ಹೊಯ್ದೆವು. ಉದಯದಲ್ಲಿ ನನ್ನನ್ನು ನೋಡಿ ಕಣ್ಣುಗಳಿಂದ ತನ್ನ ಕೃತಜ್ಞತೆಯನ್ನು ತೋರ್ಪಡಿಸಿದನು. ತರುವಾಯ ಆತನಿಗೆ ಜ್ಞಾನವೇ ಇರಲಿಲ್ಲ. ಡಾಕ್ಟರ್ ಪ್ರೀಚರ್ಡ್, ಡಾಕ್ಟರ್ ಕೀತ್‌ಹ ಇವರು ರೋಗಿಯನ್ನು ಅಂತ್ಯಾವಸ್ಥೆಯಲ್ಲಿಯೇ ಬಿಟ್ಟು ಹೊರಟು ಹೋದರು. ಇದರಿಂದಲೇ ಬರ್ನಾರ್ಡ್‌ನು ಕೂಡ ಬಾರದೆಹೋದನು. ಹನ್ನೆರಡುಗಂಟೆಯ ರಾತ್ರಿಯತನಕ ನಾವು ಯಾರೂ ನಿದ್ದೆಮಾಡಲೇ ಇಲ್ಲ. ಮಿಸ್ ಕೇಸಲ್ಲಳು ಬಹಳ ಹೊತ್ತಿನವರೆಗೆ ಅಲ್ಲಿಯೇ ಕಾದುಕೊಂಡಿದ್ದಳು. ಮಿಸ್ ಕ್ಯಾಸಲ್ ಸುದಾ ಆಗಾಗ್ಗೆ ಹೋಗಿ ನೋಡಿ ಬರುತ್ತಲಿದ್ದಳು. ಮಿಸ್ ಹೇರ್, ಮಿಸ್ ಜಾರ್ಜ ಹೇರ್, ರಾಜಾರಾಂ-ಇವರು ರೋಗಿಯ ಕೋಣೆಯಿಂದ ಹೊರಕ್ಕೆ ಬಾರದೆ ಅಲ್ಲಿಯೇ ಇದ್ದರು. ನಮ್ಮ ತಾಯಿಯು ಸುದಾ ಹಲವು ಬಾರಿ ರೋಗಿಯನ್ನು ನೋಡಿ ಬರುತ್ತಲಿದ್ದಳು.

ಸೆಪ್ಟಂಬರ್ 27ನೆ ಶುಕ್ರವಾರ--ರಾಮಮೋಹನನ ಸ್ಥಿತಿಯು ಪ್ರತಿನಿಮಿಷದಲ್ಲಿಯೂ ಕೆಡುತ್ತಲೇ ಇದ್ದಿತು. ಆತನ ಉಸಿರು ಒಂದುಸಾರಿ ತ್ವರಿತವಾಗಿಯೂ, ಮತ್ತೊಂದುಸಾರಿ ಸಾಧಾರಣವಾಗಿಯೂ ಆಡುತ್ತಲಿದ್ದಿತು. ಸತ್ತುಹೋಗುವುದಕ್ಕೆ ಕೆಲವು ಗಂಟೆಗಳ ಮುಂಚೆ ಬಲಗೈಯನ್ನು ಹೆಚ್ಚಾಗಿಯೂ, ಎಡಗೈಯನ್ನು ಕಡಿಮೆಯಾಗಿಯೂ ಅಲ್ಲಾಡಿಸುತ್ತಿದ್ದನು. ಆಗ ಬೆಳದಿಂಗಳು ಮನೋಹರವಾಗಿ ಹೊಳೆಯುತ್ತಿದ್ದಿತು. ಮಿಸ್ ಹೇರ್, ಮಿಸ್ ಕೇಡಲ್ ಮತ್ತು ನಾನು ಕಿಟಕಿಯ ಮೂಲಕ ಹೊರಗಡೆ ನೋಡುವಲ್ಲಿ ಅರ್ಧರಾತ್ರಿಯಾಗಿ ನಿಶ್ಶಬ್ದವಾಗಿದ್ದಿತು. ಇತ್ತಕಡೆ ಈ ಅಸಾಧಾರಣ ಪುರುಷನು ಮರಣಾವಸ್ಥೆಯಲ್ಲಿ ವೇದನೆ ಹೊಂದುತ್ತಲಿದ್ದನು. ಆಗಿನ ಸ್ಥಿತಿಯನ್ನು ನಾನು ಎಂದಿಗೂ ಮರೆಯಲಾರೆನು. ಮಿಸ್ ಹೇರಳು ಆಗ

ನಿರಾಶೆ ಹೊಂದಿ ಧೈರ್ಯದಿಂದ ರಾಮಮೋಹನನಿಗೆ ಪರಿಚಾರ್ಯಮಾಡುತ್ತಲೇ ಇದ್ದಳು. ಬಾಲನಾದ ರಾಜಾರಾಮನು ರಾಮಮೋಹನನ ಕೈಯನ್ನು ಹಿಡಿದುಕೊಂಡನು. ನೆನ್ನೆಯ ಉದಯದಿಂದಲೂ ಆತನಿಗೆ ಈ ಲೋಕದ ಸ್ಮರಣೆಯೇ ಇಲ್ಲವೆಂದು ತಿಳಿಯುವೆನು. ರಾತ್ರಿ ಒಂದೂವರೆಗಂಟೆಗೆ ಆ ಮಹನೀಯನ ಪ್ರಾಣಗಳು ಹೊರಡುವುದಕ್ಕಾರಂಭಿಸಿದುವು ಆಗ ಮಿಸ್ಟರ್ ಹೇರರು ನನ್ನ ಸಂಗಡ ಇನ್ನು ಅಂತ್ಯವು ಎಂದು ಹೇಳಿದರು. ಆ ವೇಳೆಯಲ್ಲಿ ಮಿಸ್ಟರ್ ಹೇರ್, ರಾಜಾರಾಂ, ಮಿಸ್ ಕೇಡಲ್, ಮಿಸ್ ಹೇರ್, ನನ್ನತಾಯಿ, ಮಿಸ್ ಕೇಸಲ್, ರಾಂಹರಿ, ರಾಂರತ್ನ; ನಾನು, ಇನ್ನಿಬ್ಬರು ಸೇವಕರು ಅಲ್ಲಿ ಇದ್ದೆವು. ತರುವಾಯ 2 ಗಂಟೆ 25 ನಿಮಿಷಗಳಿಗೆ ಆತನ ಪವಿತ್ರಾತ್ಮವು ಹೊರಟುಹೋಯಿತು ಪ್ರಾಣಗಳು ಹೋಗುವುದಕ್ಕೆ ಸ್ವಲ್ಪ ಹೊತ್ತಿನಮುಂಚೆ ಹೇರರವರು ಬ್ರಾಹ್ಮಣನಾದ ರಾಮರತ್ನನ ಸಂಗಡ ಬ್ರಾಹ್ಮಣರಲ್ಲಿ ಮರಣಕಾಲದಲ್ಲಿ ಆಚರಿಸತಕ್ಕ ಕೃತ್ಯಗಳು ಯಾವುನಾದರೂ ಇದ್ದಲ್ಲಿ ಅವುಗಳನ್ನು ಮಾಡತಕ್ಕದ್ದು, ಎಂದು ಹೇಳಿದರು. ಆತನು ಹಿಂದೂದೇಶಭಾಷೆಯಲ್ಲಿ ಯಾವುದನ್ನೋ ಪ್ರಾರ್ಥನೆ ಮಾಡಿದನು. ಸ್ತ್ರೀಯರೆಲ್ಲರೂ ತುಂಬ ಚಿಂತೆಯಿಂದ ಹೊರಕ್ಕೆ ಹೊರಟುಹೋದ ಮೇಲೆ ನಾವೆಲ್ಲರೂ ಅಲ್ಲಿಯೇ ಇದ್ದೆವು. ಆದರೆ ದುಃಖದಿಂದ ಒಬ್ಬರಿಗೂ ನಿದ್ರೆಹತ್ತಲಿಲ್ಲ. ಮರುದಿನ ಇಟಲಿದೇಶದವನಾದ ಒಬ್ಬ ಚಿತ್ರಗಾರನಿಂದ ಆತನ ಪ್ರತಿಬಿಂಬವನ್ನು ತೆಗೆಸಿದರು. ಹೇರರವರು ಬ್ರಿಸ್ಟಲ್ಲಿಗೆ ಹೋಗಿ ರಾಮಮೋಹನನ ದೇಹವನ್ನು ನಾಳೆದಿನ ಪರೀಕ್ಷಿಸಬೇಕೆಂದು ಏರ್ಪಾಡುಮಾಡಿಕೊಂಡರು. ಬೆಳಗಾಗುವುದಕ್ಕೆ ಮುಂಚೆಯೇ ಡಾಕ್ಟರ್ ಕಾರ್ಪೆಂಟರು ನಮ್ಮ ಬಳಿಗೆ ಬಂದರು. ನಾವೆಲ್ಲರೂ ಆ ದಿನ ಬಹಳ ಹೊತ್ತಿನ ತನಕ ಶವದ ಬಳಿಯಲ್ಲಿಯೇ ಕುಳಿತುಕೊಂಡು ಮಾತನಾಡುತ್ತಲಿದ್ದೆವು.

ಈ ವಿಧವಾಗಿ ಈ ಮಹಾತ್ಮನ ಪವಿತ್ರ ಜೀವಿತವು ಸಮಾಪ್ತವಾಯಿತು. “ ಅಗತ್ಯವಾದ ಕಾಲದಲ್ಲಿ ಜನ್ಮಿಸಿ, ಅಗತ್ಯವಾದ ಕಾಲದಲ್ಲಿಯೇ ಈ ಲೋಕದಿಂದ ದಾಟಿ ಹೋದವನೇ ಮಹಾತ್ಮನು ” ಎಂದು ಗೋಮೇಥೀ ಎಂಬ ಮಹಾಕವಿಯು ಹೇಳಿದಂತೆ, ರಾಮಮೋಹನನು ಕೂಡ ಹಾಗೆಯೇ ತನ್ನ ಜೀವಿತಕ್ಕಾಗಿ ಏರ್ಪಟ್ಟಿದ್ದ ಕಾರ್ಯಗಳನ್ನು ತಾನು ತೋರಿದ ರೀತಿಯಲ್ಲಿ ನೆರವೇರಿಸಿ ಯುಕ್ತವಾದ ಕಾಲದಲ್ಲಿ ಹೊರಟುಹೋದನು. ಆತನು ಅಸ್ವಸ್ಥನಾಗಿದ್ದಾಗ ಯಾರ ಸಂಗಡಲಾಗಲಿ ವಿಶೇಷವಾಗಿ ಮಾತನಾಡದೆ ಹೋದರೂ ತನ್ನಲ್ಲಿ ತಾನೇ ಯಾವುದನ್ನೋ ಪ್ರಾರ್ಥನೆ ಮಾಡುತ್ತಲಿದ್ದಂತೆ ನಿಶ್ಚಯವಾಗಿ ಕಾಣಬರುತ್ತಲಿದ್ದನು. ಒಂದು ಸಾರಿ ಆತನು ರಾಜಾರಾಮ ಮತ್ತು ಸುತ್ತಲೂ ಇದ್ದವರ ಸಂಗಡ “ನನ್ನ ಕೆಲಸ ಮುಗಿಯಿತು. ಇನ್ನು ನಾನು ಜೀವಿಸೆನು ” ಎಂದು ಹೇಳಿದನು. ಮತ್ತೊಂದು ವೇಳೆ ಹೇರರವರನ್ನು ನೋಡಿ ನನಗೆ ಯಾವ ವಿಧವಾದ ಕೊರತೆಯೂ ಉಂಟಾಗದಂತೆ ನಡೆಯಿಸಿದ ನಿಮ್ಮ ಕುಟುಂಬಕ್ಕೆ ಸ್ವಲ್ಪಮಟ್ಟಿಗೆ ತೊಂದರೆಯುಂಟಾಗಿರಬಹುದು, ಆದರೂ ನನಗೆ ಅನೇಕ ವಿಧವಾಗಿ ಸಹಾಯಮಾಡಿದ ನಿಮಗೂ, ನನಗಾಗಿ ಔಷಧವಿಷಯದಲ್ಲಿ ಶ್ರಮೆತೆಗೆದುಕೊಂಡ ದೊಡ್ಡಮನುಷ್ಯರಿಗೂ, ಇಲ್ಲಿ ನನಗೆ ಹಲವು ಬಗೆಯಿಂದ ಸಹಾಯಮಾಡಿದ ಕಾರ್ಪೆಂ

ಟರ್, ಕೇಸಲ್, ಕೇಡಲ್ ಮೊದಲಾದವರಿಗೂ ಕೃತಜ್ಞತಾಸೂಚಕವಾದ ವಂದನೆಗಳನ್ನರ್ಪಿ ಸುವೆನು ಎಂದು ಹೇಳಿದನು.

ಶನಿವಾರದ ದಿನ ಶವಪರೀಕ್ಷೆ ನಡೆಯಿತು. ಮೆದುಳಿನಲ್ಲಿ ಸಣ್ಣಬೊಕ್ಕೆಗಳಿದ್ದು ಅವುಗಳೊಳಗಿನಿಂದ ಕೀವಿನಂತಹ ಪದಾರ್ಥವೊಂದು ಹುಟ್ಟಿ, ಅದರಿಂದ ಅಲ್ಲಿಯ ಸಣ್ಣ ಪೊರೆಯೊಂದು ಕಪಾಲವನ್ನು ಅಂಟಿಕೊಂಡಿತ್ತು. ಹಾಗೆ ಆಗುವುದಕ್ಕೆ ಯಾವುದಾದರೂ ಪೂರ್ವದ ರೋಗವು ಕಾರಣವಿರಬಹುದೆಂದು ನಿಶ್ಚಯಿಸಿದರು. ಎದೆಯಲ್ಲಿಯೂ, ಶ್ವಾಸಕೋಶಗಳಲ್ಲಿಯೂ, ಜಠರದಲ್ಲಿಯೂ ಯಾವ ವ್ಯಾಧಿಯೂ ಇರಲಿಲ್ಲ.

ರಾಮಮೋಹನನು ಮತಾಚಾರ ನಿರ್ಬಂಧಗಳಿಗೆ ಒಳಪಟ್ಟು ನಡೆಯತಕ್ಕವನಲ್ಲವೆಂದು ನಮ್ಮ ವಾಚಕರು ಇದುವರೆಗೆ ತಿಳಿದುಕೊಂಡೇ ಇರುವರು. ಆದರೆ ತಾನು ಮತವನ್ನು ಪೂರ್ಣವಾಗಿ ಪರಿತ್ಯಜಿಸಿದರೆ ತನ್ನ ಅನುಚರರು ಸುದಾ ಹಾಗೆಯೇ ಮಾಡುವರೆಂತಲೂ, ಆ ಪದ್ಧತಿಯು ಅವರಿಗೆ ಲಾಭಕರವಾಗಿ ಇರಲಾರದೆಂತಲೂ, ತನ್ನ ಸಂತತಿಯವರಿಗೆ ಪೂರ್ವಾರ್ಜಿತವಾದ ಅಧಿಕಾರಗಳು ನಶಿಸುವುವೆಂತಲೂ ತಿಳಿದು, ಈತನು ಸಾಧ್ಯವಾದಮಟ್ಟಿಗೆ ವ್ಯವಹಾರಗಳಲ್ಲಿ ತನ್ನ ಮತವನ್ನು ಕಾಪಾಡಿಕೊಳ್ಳುತ್ತಲೇ ಬಂದನು. ಮರಣಾನಂತರದಲ್ಲಿ ಈತನ ಮೈಮೇಲಣ ವಸ್ತ್ರಗಳನ್ನು ತೆಗೆದುಹಾಕಿದಾಗ ಸುವಾ ಜನಿವಾರಗಳು ಇದ್ದುವು. ಇಂಗ್ಲೆಂಡಿಗೆ ಈತನು ಬಂದಾಗ ಸಂಗಡ ಬಂದವರಿಬ್ಬರಲ್ಲಿ ಒಬ್ಬನು ಬ್ರಾಹ್ಮಣನು ; ಸ್ವಲ್ಪ ಕಾಲಕ್ಕೆ ಮುಂಚೆ ಹೇರ್ ಮೊದಲಾದ ಸ್ನೇಹಿತರ ಸಂಗಡ ಆತನು ' ನಾನು ಇಂಗ್ಲೆಂಡಿನಲ್ಲಿಯೇ ಮೃತಿಹೊಂದಿದರೆ ನನ್ನ ಶವವನ್ನು ಸಾಧಾರಣಸ್ಥಳದಲ್ಲಿಡದೆ ಕ್ರಿಸ್ತಿಯರ ಮತಾಚಾರಪದ್ಧತಿಗಳನ್ನವಲಂಬಿಸದೆ, ಎಲ್ಲಿಯಾದರೂ ಪ್ರತ್ಯೇಕವಾದ ಸ್ಥಳದಲ್ಲಿ ಸ್ವಲ್ಪ ಭೂಮಿಯನ್ನು ಕೊಂಡುಕೊಂಡು, ಅಲ್ಲಿ ಸಮಾಧಿಮಾಡಿ, ಅದರಮೇಲೆ ಒಂದು ಸಣ್ಣ ಮಂದಿರವನ್ನು ಕಟ್ಟಿಸಿ, ಅದರಲ್ಲಿ ಮರ್ಯಾದೆಯುಳ್ಳ ಬಡವನೊಬ್ಬನನ್ನು ಇರಿಸಿ, ಆ ಸಮಾಧಿಯನ್ನು ಕಾಪಾಡುತ್ತ ಬರುವಂತೆ ಮಾಡಿರಿ ' ಎಂದುಹೇಳಿದ್ದನು. ಆದುದರಿಂದ ಆತನ ಸ್ನೇಹಿತರೆಲ್ಲರೂ ಅದೇ ಅಭಿಪ್ರಾಯವನ್ನನುಸರಿಸಿ ಪ್ರವರ್ತಿಸುವುದಕ್ಕೆ ನಿಶ್ಚಯಿಸಿಕೊಂಡು ಪ್ರತ್ಯೇಕ ಸ್ಥಳಕ್ಕಾಗಿ ಪ್ರಯತ್ನಮಾಡುತ್ತಲಿದ್ದರು. ಅಷ್ಟರಲ್ಲಿ ಮಿಸ್ ಕ್ಯಾಸಲ್ ಎಂಬಾಕೆಯು ಸ್ಥಳದ ನಿಮಿತ್ತವಾಗಿ ಅವರು ಶ್ರಮಪಡಬೇಕಾದ ಆಗತ್ಯವಿಲ್ಲದಂತೆ ತನ್ನ ಭವನದ ಹಿಂದೆ ಇರುವ ತೋಟದಲ್ಲಿ ಕೆಲವು ವೃಕ್ಷಗಳ ಕೆಳಗೆ ಇದ್ದ ಒಂದು ಉತ್ತಮಪ್ರದೇಶವನ್ನು ಕೊಟ್ಟಳು. ಅದಕ್ಕಾಗಿ ಆತನಸ್ನೇಹಿತರೆಲ್ಲರೂ ತುಂಬ ಸಂತೋಷಿಸಿ ಅಕ್ಟೋಬರ್ 18 ನೆಯ ದಿನ ಹಗಲು ಎರಡುಗಂಟೆಯವೇಳೆಯಲ್ಲಿ ಆ ಮಹಾತ್ಮನ ಭೌತಿಕ ಶರೀರವನ್ನು ಇವರ ಮತಾಚಾರ ಪದ್ಧತಿಗಳುಯಾವುವನ್ನೂ ಅವಲಂಬಿಸದೆಯೇ ಹೂತಿಟ್ಟರು. ಆ ಸಮಾಚಾರವನ್ನು ವಿಶದವಾಗಿ ತಿಳಿದುಕೊಳ್ಳುವುದಕ್ಕೆ ಮರಳಿ ಒಂದುಸಾರಿ ಈಸ್ಟ್ಲಿನ್ಯವರ ದಿನಚರ್ಯೆಯ ಪುಸ್ತಕವನ್ನುನಾವು ನೋಡೋಣ.

1833ನೆ ವರುಷದ ಅಕ್ಟೋಬರ್ 18ನೇ ತಾರೀಖು ಶುಕ್ರವಾರ ಸ್ಟೇಪಲ್ಟನ್‌ಗ್ರೋ

ಏನಲ್ಲಿ ಬಾಲಕನಾದ ರಾಜಾರಾಂ, ಮಿಸ' ಹೇರ', ಮಿಸ್ ಕೇಡಲ', ಮಿಸ್ಟರ' ಜೋಸ'ಹೇರ' ಮಿಸ್ಟರ' ಜಾರ್ಜ ಹೇರ, ಮಿಸ್ಸ್ ಕಾರ್ಪೆಂಟರ', ನನ್ನ ತಾಯಿ, ನಾನು, ಹಂಟರ್ ಸಕೇಲ' ಮಿಸೆಸ' ಲೀಲೀಸ್ಮಿತ', ನನ್ನ ಭಾರ್ಯೆ, ಮಿಸ' ಈಡಾಸ', ಮಿಸ' ಫಾಸ್ಟರ', ಡಾಕ್ಟರ' ಜೇರಾಡ್, ಮಿಸ್ಟರ' ಹೇರ'ಸ್, ಮಿಸ್ಟರ' ಫಾಸ್ಟರ', ಮಿಸ್ಟರ' ಕೇಡಲ', ಮಿಸ್ಟರ' ಬೇಸಾಡ್ ಕ್ರಿಸ', ರಾಂರತ್ನ, ರಾಂಹರಿ ಮೊದಲಾದವರೆಲ್ಲರೂ ಸೇರಿದೆವು. ಸುಮಾರು ಒಂದೂವರೆ ಗಂಟೆಗೆ ದ್ರಾವಕಗಳಿಂದ ಕೆಡದಂತೆ ಕಾಪಾಡಿದ್ದ ರಾಮಮೋಹನನ ಕಳೇಬರವನ್ನಿಟ್ಟಿದ್ದ ಪೆಟ್ಟಿಗೆಯನ್ನು ಹೊರಕ್ಕೆ ತಂದಿಟ್ಟರು. ಹಿಂದೆ ಬರುತ್ತಲಿದ್ದವರೆಲ್ಲರೂ ದುಃಖ ಸೂಚಕಗಳಾದ ವಸ್ತ್ರಗಳನ್ನು ಧರಿಸಿದ್ದರು. ಆ ಪೆಟ್ಟಿಗೆಯನ್ನು ಹೂಳಿಡುವುದಕ್ಕೆ ನಿಯಮಿಸಲ್ಪಟ್ಟ ಸ್ಥಾನಕ್ಕೆ ತೆಗೆದೊಯ್ದು, ಅಲ್ಲಿ ಇಟ್ಟಿಗೆಗಳಿಂದ ಕಟ್ಟಿಸಿದ ಸಮಾಧಿಯಲ್ಲಿ ಅದನ್ನು ಇಳಿಸಿದರು. ಹಿಂದೆ ಇದ್ದ ಜನರ ರೋದನಗಳು ಹೊರತಾಗಿ ಕ್ರೈಸ್ತಮತಾಚಾರದ ಪದ್ಧತಿಗಳು ಯಾವುವೂ ಅಲ್ಲಿ ಜರುಗಿಸಲ್ಪಡಲಿಲ್ಲ. ಮುಖ್ಯವಾಗಿ ರಾಮಹರಿ ಎಂಬವನ ದುಃಖವು ಅನಿವಾರ್ಯವಾಗಿದ್ದಿತು. ಆಗಿನ ವೃತ್ತಾಂತಗಳು ತುಂಬ ಪರಿತಾಪಕರಗಳಾಗಿದ್ದುವು. ಡಾಕ್ಟರ' ಕಾರ್ಪೆಂಟರು ಅಲ್ಲಿದ್ದವರ ಮುಖಗಳನ್ನು ನೋಡಿ, ನನ್ನ ಸ್ನೇಹಿತನು ಅಪೇಕ್ಷಿಸಿದ್ದಂತೆಯೇ ನಡೆಸಿರಿ ಎಂದು ಹೇಳಿ ಆ ವಿಷಯವಾಗಿ ಅದುವರೆಗೆ ರಚಿಸಿ ತಂದಿದ್ದ ಕೆಲವು ಪದ್ಯಗಳನ್ನು ಅಲ್ಲಿ ಓದಿದನು. ಅನುತಾಪಕರಗಳಾದ ಈ ಪದ್ಯಗಳು ಮಿಸ' ಕಾರ್ಪೆಂಟರು ಬರೆದಿರುವ ಗ್ರಂಥದಲ್ಲಿವೆ. ಆ ತರುವಾಯ ಮಿಸ್ಟರ' ಜಾರ್ಜ ಹೇರನು ರಾಮರತ್ನನ ಸಂಗಡ ನೀನು ಹಿಂದೂದೇಶಕ್ಕೆ ಹೋದಮೇಲೆ ನಮ್ಮ ರಾಜಾರಾಮಮೋಹನನ ಮಿತ್ರರ ಸಂಗಡಲೂ, ಕುಟುಂಬದವರ ಸಂಗಡಲೂ ಆತನು ಪ್ರತ್ಯೇಕವಾಗಿ ಒಂದು ಪ್ರದೇಶದಲ್ಲಿ ಸಮಾಧಿಮಾಡಲ್ಪಟ್ಟಿರುವನೆಂತಲೂ ಸಮಾಧಿಮಾಡುವ ಕಾಲದಲ್ಲಿ ಇತರ ಮತಪ್ರಚಾರಗಳು ಯಾವುವೂ ಜರುಗಲಿಲ್ಲವೆಂತಲೂ ಹೇಳು ಎಂದನು. ಸಮಾಧಿಯನ್ನು ಮುಚ್ಚಿದಮೇಲೆ ನಾವೆಲ್ಲರೂ ನಮ್ಮ ಮನೆಗಳಿಗೆ ಮರಳಿ ಬಂದೆವು.

ಇಂಗ್ಲೆಂಡಿನಲ್ಲಿ ರಾಮಮೋಹನನಿಗೆ ಪರಿಚಿತರಾದ ಸ್ತ್ರೀಪುರುಷರಲ್ಲಿಯೂ ಆತನ ಅಭಿಪ್ರಾಯಗಳು, ಆತನ ಜೀವಿತದ ಪರಮಾರ್ಥಗಳು, ಮಿಸ' ಮೇರಿ ಕಾರ್ಪೆಂಟರ ವಿಷಯವಾಗಿ ತುಂಬ ಫಲಕಾರಿಗಳಾದುವು. ಆ ಸಾಧ್ವೀಮಣಿಯು ತನ್ನ ಜೀವಿತಕಾಲವನ್ನೆಲ್ಲ ಪುಣ್ಯಕಾರ್ಯಗಳನ್ನು ಮಾಡುವುದರಲ್ಲಿಯೇ ಕಳೆದಳು. ಬಡವರ ಹುಡುಗರನ್ನೂ, ಅನಾಥ ಶಿಶುಗಳನ್ನೂ, ಕರೆತಂದು ಕಾಪಾಡುತ್ತಲಿದ್ದುದೇ ಈಕೆಯು ತನ್ನ ಜೀವಿತದಲ್ಲಿ ಮಾಡಿದ ಮುಖ್ಯಕಾರ್ಯವು. ಈ ವಿಷಯದಲ್ಲಿ ಈಕೆಯು ಮಾಡಿದಷ್ಟು ಮಹೋಪಕಾರವನ್ನು ಇದುವರೆಗೆ ಯಾರೂ ಮಾಡಲಿಲ್ಲ. ದಯಾಶಾಲಿನಿಯಾದ ಈ ಅಬಲಾರತ್ನವು ರಾಮಮೋಹನನ ಸ್ತ್ರೀಜಾತ್ಯಭಿಮಾನವನ್ನು ನೋಡಿ, ಆತನು ಹಿಂದೂದೇಶದಲ್ಲಿ ಸ್ತ್ರೀಯರಿಗಾಗಿ ಮಾಡಿದ ಮಹೋಪಕಾರಗಳನ್ನು ಕೇಳಿ, ತನಗೆ ಕೂಡ ಹಿಂದೂಸ್ತ್ರೀಯರಮೇಲೆ ಅಭಿಮಾನ ಹುಟ್ಟಿದ್ದರಿಂದ ಎರಡುಸಾರಿ ಇಂಡಿಯಾದೇಶಕ್ಕೆ ಬಂದು ಇವರ ದುರವಸ್ಥೆಗಳನ್ನು ತೊಲಗಿ

ಸುವುದಕ್ಕೂ ಇವರನ್ನು ಉನ್ನತಸ್ಥಿತಿಗೆ ತರುವುದಕ್ಕೂ ತುಂಬ ಪ್ರಯತ್ನಪಟ್ಟಳು. ಈ ವಿಷಯವು ಈಕೆಯಿಂದ ರಚಿಸಲ್ಪಟ್ಟ 'ಸಿಕ್ಸ್ ಮಂತ್ಸ್ ಇನ್ ಇಂಡಿಯಾ' ಎಂಬ ಗ್ರಂಥ ದಿಂದ ವಿಶದವಾಗಿ ತಿಳಿಯಬಹುದು. 'ಲಾಸ್ಟ್ ಡೇಸ್. ಆಫ್ ರಾಜಾರಾಮಮೋಹನ ರಾಯ್ ಇನ್ ಇಂಗ್ಲೆಂಡ್',' ಎಂಬ ಗ್ರಂಥವನ್ನು ಬರೆದು ಆ ಮಹಾತ್ಮನಲ್ಲಿ ಕೃತಜ್ಞರಾಗಿ ಇರಿರೆಂದು ನಮ್ಮದೇಶೀಯರಿಗೆ ಮೊದಲಲ್ಲಿ ಬೋಧಿಸಿದವಳು ಈ ವಿದ್ಯಾವತಿಯೇ. ಈಕೆ ೧೮೦೭ ರಲ್ಲಿ ಜನ್ಮಿಸಿದಳು. ರಾಮಮೋಹನನು ಸ್ವರ್ಗಸ್ಥನಾಗುವಾಗ್ಗೆ ಈಕೆಗೆ ಇಪ್ಪತ್ತು ವರುಷಗಳ ವಯಸ್ಸಾಗಿದ್ದಿತು. ಈಕೆಯು ೧೮೭೭ ನೇ ಇಸವಿ ಜೂನ್ ತಿಂಗಳಲ್ಲಿ ತೀರಿಹೋದಳು.

ರಾಜಾರಾಮಮೋಹನನನ್ನು ನಿಶ್ಶಬ್ದವಾಗಿಯೇ ಸಮಾಧಿಯಲ್ಲಿ ಮುಗಿಸಿದರು. ಆತನ ಮರಣದ ಸುದ್ದಿಯು ಯೂರೋಪ್ ಖಂಡವನ್ನೆಲ್ಲಾ ದುಃಖದಲ್ಲಿ ಮುಳುಗಿಸಿಬಿಟ್ಟಿತು ದೈನಂದಿನಪತ್ರಗಳು, ವಾರಪತ್ರಿಕೆಗಳು. ಮಾಸಿಕವಹಿಗಳು, ವಿಮರ್ಶನಾಪತ್ರಿಕೆಗಳು ಮುಂತಾ ದುವುಗಳಲ್ಲಿ ಯಾವುದನ್ನು ನೋಡಿದರೂ, ಆದಿನಗಳಲ್ಲಿ ಈ ಮಹಾತ್ಮನನ್ನು ಕುರಿತ ವ್ಯಾಸ ಗಳೇ ಕಾಣಬಂದುವು. ಯೂನಿಟೇರಿಯನ್ ಮಂದಿರಗಳಲ್ಲೆಲ್ಲಾ ಈತನ ಮರಣವನ್ನು ಕುರಿತ ದುಃಖೋದ್ಗಾರಗಳು ಹೊರಪಟ್ಟವು. ಐರ್ಲೆಂಡಿನ ಮುಖ್ಯಸ್ಥಾನವಾದ ಡಬ್ಲಿನ್ ನಗರದಲ್ಲಿ ರೆವರೆಂಡ್ ವಿಲ್ಲಿಯಂ ಹ್ಯಾಮಿಲ್ಟನ್ ವೆಡ್‌ಮೊಂಡ್ ಎಂಬಾತನು ೧೮೩೩ ನೆ ಇಸವಿಯ ಅ ಕ್ಟೋಬರ್ ೨೭ ನೆಯ ದಿನದಲ್ಲಿ ತನ್ನ ದುಃಖವನ್ನು ಹೊರಪಡಿಸಲಿಕ್ಕೆ ಕೂಡಿಸಿದ ಸಭೆಯಲ್ಲಿ ಹೀಗೆ ಹೇಳಿದನು ; ' ರಾಜಾ ಬಿರುದಾಂಕಿತನಾದ ರಾಮಮೋಹನರಾಯನಿಗೆ ಐರ್ಲೆಂಡಿನ ಪ್ರಜೆಗಳ ಪಕ್ಷವಾಗೆಯೂ, ಅಧಿಕವಾಗಿ ಬೆಲ್‌ಫಾಸ್ಟ್ ಕೂರ್‌ರವರ ಪಕ್ಷವಾಗಿಯೂ, ಅನೇಕವಾಗಿ ಆಮಂತ್ರಣಗಳನ್ನು ಕಳುಹಿಸಿದ್ದೆವು. ಐರಿಷ್ ಯೂನಿಟೇರಿಯನ್ ಚರ್ಚಿನ ವರ ಪಕ್ಷವಾಗಿ ಆತನನ್ನು ಕರೆದು ತರಲಿಕ್ಕಾಗಿ ಒಬ್ಬ ಪ್ರಮುಖನನ್ನು ಸುದಾ ನಿಯಮಿಸಿ ದೆವು. ಇತರ ತೊಂದರೆಗಳದೆಸೆಯಿಂದ ಸ್ವಲ್ಪ ಆಲಸ್ಯವಾದರೂ ತಪ್ಪದೆ ಬರುವೆನೆಂದು ಆತನು ವಾಗ್ದಾನಮಾಡಿದ್ದನು ಆದರೆ ನಮ್ಮ ದುರದೃಷ್ಟವಶದಿಂದ ಆ ಪುಣ್ಯವು ಲಭಿ ಸದೆ ಹೋಯಿತು.''

ಲಂಡನಿನಲ್ಲಿ ರೆವರೆಂಡ್ ಫಾಕ್ಸನು ಹೀಗೆ ನುಡಿದನು ; "ಇನ್ನು ಮುಂದೆ ಆ ಸುಂದರ ಮುಖಾರವಿಂದವನ್ನು ನೋಡಲಾರೆವು. ಆ ಅಂದವಾದ ಸ್ವರೂಪವು ನಮ್ಮ ಕಣ್ಣೆದುರಿಗೆ ತಿರು ಗುತ್ತಿರುವಂತೆ ಇದೆ. ಆ ಮಹಾತ್ಮನ ಭೌತಿಕದೇಹವು ನಾಶವಾದರೂ ಆತನ ಕೀರ್ತಿಯು ಆಚಂದ್ರಾರ್ಕವಾಗಿ ಬೆಳಗುವಷ್ಟು ಪರಿಶುದ್ಧವಾಗಿದೆ. ಆತನ ವಾಕ್ಸುಧಾ ಪ್ರವಾಹವು ಗ್ರಂಥರೂಪವಾಗಿ ಈಗಲೂ ತರಂಗಗಳಿಂದ ಉದ್ಘೋಷಿಸುತ್ತಲಿದೆ. ಆ ಶಬ್ದವು ಎಷ್ಟೋ ಯೂರೋಪ್ ಖಂಡಗಳಲ್ಲೆಲ್ಲ ಪ್ರತಿಧ್ವನಿ ಕೊಡುತ್ತಲಿದೆ.' ಲಂಡನ್ ಪಟ್ಟಣದಲ್ಲಿ ಕೆಲಸ ಮಾಡುತಲಿದ್ದ ಅಮೇರಿಕಾದ ನಿವಾಸಿಯಾದ ಡಾಕ್ಟರ್ ಬೂಟ್ ಎಂಬ ವೈದ್ಯನು ಬ್ರಿಸ್ಟಲಿ ನಲ್ಲಿರುವ ಈಸ್ಟಲ್ ಎಂಬ ವೈದ್ಯನಿಗೆ ಹೀಗೆ ಬರೆದಿರುವನು ; 'ನನಗೆ ಈ ಸುದ್ದಿಯನ್ನು

ಕೇಳಿದಕೂಡಲೇ ಉಂಟಾದ ದುಃಖವು ಇದುವರೆಗೆ ಎಂದೂ ಉಂಟಾಗಿರಲಿಲ್ಲ. ಗ್ರಂಥ ರೂಪದಲ್ಲಿರುವ ಆತನ ಮಾತುಗಳನ್ನೋದುವಾಗ ಉಕ್ಕಿ ಉಕ್ಕಿ ಬರುತ್ತಿರುವ ದುಃಖಸಮುದ್ರವನ್ನು ತಡೆಯಲಾರದೆ ಇದ್ದೇನೆ. ನನ್ನ ಪ್ರಾಣಮಿತ್ರನೊಬ್ಬನನ್ನು ಕಳೆದುಕೊಂಡೆ. ಹಿಂದಿನಕಾಲದಲ್ಲಿಯಾಗಲಿ, ಈಗಲಾಗಲಿ ಆತನೊಂದಿಗೆ ಹೋಲಿಸಲ್ಪಡತಕ್ಕ ಮಹನೀಯನೊಬ್ಬನೂ ಇಲ್ಲವೆಂದು ನಾನು ನಂಬುತ್ತೇನೆ.'

ಆದರೆ ವಿದೇಶೀಯರು ಇಷ್ಟು ವಿಷಾದವನ್ನು ತೋರಪಡಿಸಿದರೂ ತನ್ನ ಘನಜೀವಿತವನ್ನೆಲ್ಲ ಯಾವದೇಶಕ್ಕಾಗಿ ಧಾರೆಯನ್ನೆರೆದನೋ ಆ ದೇಶಕ್ಕೆ ಆಗ ಇರುವೇ ಕಡಿದಷ್ಟು ಮಾತ್ರವಾದರೂ ಚಿಂತೆಯುಂಟಾಗದೆ ಹೋಯಿತು. ವಿದೇಶೀಯರಾದ ಪ್ರಜೆಗಳು ರಾಮಮೋಹನನನ್ನಗಲದುದಕ್ಕೆ ತಮ್ಮ ಆಪ್ತಬಂಧುವನ್ನು ಕಳೆದುಕೊಂಡಹಾಗೆ ದುಃಖಿಸಿದರು. ಆದರೆ ಸ್ವದೇಶದಲ್ಲಿ ಒಬ್ಬನಾದರೂ ಕಣ್ಣಿನಲ್ಲಿ ಒಂದು ತೊಟ್ಟು ನೀರನ್ನೂ ಸುರಿಸಲಿಲ್ಲ, ಹತ್ತು ವರುಷಗಳತನಕ ರಾಮಮೋಹನನ ಭೌತಿಕ ಶರೀರವು ನಿರ್ಮಾನುಷವಾದ ಆ ಸ್ಥಳದಲ್ಲಿಯೇ ಇದ್ದಿತು. ಆದರೆ 1843 ನೆಯ ಸಂವತ್ಸರದಲ್ಲಿ ಬಾಬೂ ದ್ವಾರಕಾನಾಥ ಠಾಕೂರರವರು ಇಂಗ್ಲೆಂಡಿಗೆ ಹೋಗಿದ್ದಾಗ ತನ್ನ ಪ್ರಾಣಮಿತ್ರನು ಎಲ್ಲಿಯೋ ಒಂದು ಮೂಲೆಯಲ್ಲಿ ಅಡಗಿರಲು ಇಷ್ಟಪಡದೆ, ಆತನ ದೇಹವನ್ನಿಟ್ಟಿದ್ದ ಪೆಟ್ಟಿಗೆಯನ್ನು ತೆಗೆಸಿಕೊಂಡು ಬಂದು, ಬ್ರಿಸ್ಟಲ್‌ಪಟ್ಟಣದ ಹತ್ತಿರ 'ಆರ್‌ನೂಜ್‌ವೆಲ್'' ಎಂಬ ಹೆಸರುಳ್ಳ ಸುಂದರಪುಷ್ಪಲತಾಸಮನ್ವಿತವಾದ ಉದ್ಯಾನವಾಟಿಕೆಯಲ್ಲಿ ಒಂದು ಸಮಾಧಿಯನ್ನು ಕಟ್ಟಿಸಿ, ಅದರಲ್ಲಿ ಆ ಪೆಟ್ಟಿಗೆಯನ್ನು ಭದ್ರಪಡಿಸಿ ಅದರಮೇಲೆ ಹಿಂದೂದೇಶಪದ್ಧತಿಯನ್ನನುಸರಿಸಿ ಒಂದು ಚಿಕ್ಕ ಭವನವನ್ನು ಕಟ್ಟಿಸಿದನು. 1872 ನೆಯ ಸಂವತ್ಸರದಲ್ಲಿ ಆತನ ಮಾತೃದೇಶಭಕ್ತಿಯನ್ನು ತಿಳಿದುಕೊಂಡ ಕೆಲವರು ಹಿಂದೂ ದೇಶೀಯರು ಅಲ್ಲಿಗೆ ಹೋಗಿದ್ದಾಗ ಅಲ್ಲಿ ಸ್ವಲ್ಪ ಶಿಥಿಲವಾಗಿದ್ದ ಆ ಭವನವನ್ನು ಅತಿ ದೃಢವಾಗಿರುವಂತೆ ಮಾಡಿಸಿ, ಅದರಮೇಲೆ ಒಂದು ಗೋಪುರವನ್ನು ಕಟ್ಟಿಸಿ ಆ ಸಮಾಧಿಯಮೇಲೆ ಇದರಡಿ ಬರದಿರುವಂತೆ ಒಂದು ಶಾಸನವನ್ನು ಕೆತ್ತಿಸಿ ಇಟ್ಟರು.

''ಈ ಕಲ್ಲಿನ ಕೆಳಗೆ ಅದ್ವಿತೀಯನಾದ ಈಶ್ವರನಲ್ಲಿ ನಿಶ್ಚಲಚಿತ್ತವನ್ನೂ, ಸತ್ಯಭಾವವನ್ನೂ ಪಡೆದುಕೊಂಡಿದ್ದ ರಾಜಾ ರಾಮಮೋಹನರಾಯ ಬಹದ್ದೂರನು ಸಮಾಧಿ ಮಾಡಲ್ಪಟ್ಟಿರುವನು.''

ಈತನು ತನ್ನ ಜೀವಿತವನ್ನೆಲ್ಲ ಪರಿಶುದ್ಧವಾದ ಪ್ರೇಮದಿಂದ ಭಗವಂತನ ಭಕ್ತಿಗಾಗಿಯೇ ಅರ್ಪಿಸಿದನು. ಮತ್ತು ಸ್ವಾಭಾವಿಕವಾದ ಅದ್ಭುತ ಗ್ರಹಣಶಕ್ತಿಯಿಂದ ಅನೇಕ ಭಾಷೆಗಳಲ್ಲಿ ಸಂಪೂರ್ಣವಾದ ಪ್ರಜ್ಞೆಯನ್ನು ಸಂಪಾದಿಸಿ, ತನ್ನ ಬಾಲ್ಯದಲ್ಲಿಯೇ ತನ್ನಕಾಲದವರಲ್ಲೆಲ್ಲ ಒಬ್ಬ ಪಂಡಿತಶ್ರೇಷ್ಠನೆಂದು ಪ್ರಖ್ಯಾತಿಯನ್ನು ಪಡೆದನು.

ಹಿಂದೂದೇಶದ ಸಾಂಘಿಕ ವಿಷಯಗಳನ್ನು ಸಂಸ್ಕರಿಸುವಿಕೆ, ಆ ದೇಶೀಯರ ಪಕ್ಷವಾಗಿ ಪ್ರತಿನಿಧಿಯಾಗಿ ನಿಂತುಕೊಂಡು ಕೆಲಸಮಾಡುವಿಕೆ, ವಿಗ್ರಹಾರಾಧನೆ, ಸಹಗಮನ

ಮುಂತಾದವುಗಳನ್ನು ನಿಲ್ಲಿಸಿಬಿಡುವುದು ಮೊದಲಾದ ದೈವಿಕಶಕ್ತಿಯನ್ನೂ ಮನುಷ್ಯನಸ್ವಾತಂತ್ರ್ಯವನ್ನೂ ತೋರಪಡಿಸುವ ಅನೇಕ ಶ್ರೇಷ್ಠಕಾರ್ಯಗಳನ್ನೂ ಆತನ ಸ್ವದೇಶ್ಯರು ತುಂಬ ಕೃತಜ್ಞತೆಯಿಂದ ಸ್ಮರಿಸುತ್ತಿರುವರು. ಈ ಗೋಪುರವು ಆತನ ಸಂತತಿಯ ಜತೆಯಲ್ಲಿ ಆ ಮಹಾತ್ಮನನ್ನು ಕುರಿತ ಘನತೆಗೆ ಜ್ಞಾಪಕಚಿಹ್ನೆಯಾಗಿ ಕಟ್ಟಲ್ಪಟ್ಟಿರುವುದು.

ಈತನು ಬಂಗಾಳಾದೇಶದ ರಾಧಾ ನಗರದಲ್ಲಿ 1774 ನೆಯ ಸಂವತ್ಸರದಲ್ಲಿ ಹುಟ್ಟಿ 1833 ನೆಯ ಸೆಪ್ಟಂಬರು 27 ನೆಯ ದಿನ ಬ್ರಿಸ್ಟಲ್ ನಗರದಲ್ಲಿ ಮೃತಿಹೊಂದಿದನು.

ವಚನರಚನಾ ಕೌಶಲ್ಯವುಳ್ಳ ಬಾಬೂ ಅಕ್ಷಯಕುಮಾರದತ್ತನಿಂದ ಬರೆಯಲ್ಪಟ್ಟ ವ್ಯಾಸದಲ್ಲಿನ ಕೆಲವು ವಾಕ್ಯಗಳನ್ನು ಪಾಠಕರಿಗೆ ನಿವೇದಿಸಿ ಈ ಪ್ರಕರಣವನ್ನು ಮುಗಿಸುವೆನು.

'ಹಾ ! ರಾಜಾರಾಮಮೋಹನರಾಯ ! ಆಗ ನಿನ್ನ ಸುಜ್ಞಾನಸೂರ್ಯನ ಪ್ರಭಾವಿಭವವು ದೇಶವನ್ನು ಆವರಿಸಿದ್ದ ಅಜ್ಞಾನಮೇಘವೆಂಬ ಕತ್ತಲೆಯನ್ನು ದಿಕ್ಕುಪಾಲಾಗಿ ಓಡಿಸಿ ದಿವ್ಯವಾದ ತೇಜಃಪುಂಜವನ್ನು ಪ್ರಸಾದಿಸಿತು. ಅದರ ಸಹಾಯದಿಂದ ಈ ದೇಶದಲ್ಲಿ ಅಕಾಲದಲ್ಲಿ ಪ್ರಬಲಗೊಂಡಿದ್ದ ದುರಾಚಾರಗಳನ್ನೆಲ್ಲ ಸುಡುಕಿ ಹುಡುಕಿ ರೂಪವನ್ನಡಗಿಸಿತು.

ಧರ್ಮಸಮನ್ವಿತವಾದ ನಿನ್ನ ಮೇಧೆಯೆಂಬ ನಿರ್ಮಲಪ್ರಭಾಕರ ಬಿಂಬದ ದೆಸೆಯಿಂದ ಮೂರ್ಖಾರಣ್ಯಮಯವಾಗಿದ್ದ ಈ ಭೂಭಾಗಕ್ಕೆ ಸ್ವಚ್ಛಜ್ಞಾನರೂಪವಾದ ಕಾಂತಿಕಿರಣಪುಂಜಗಳು ಹೊರಟುಬಂದು ಜಾಜ್ವಲ್ಯಮಾನಗಳಾಗಿ ಪ್ರಕಾಶಿಸಿದುವು. ಪ್ರಕೃತಿತತ್ವವನ್ನು ಪರೀಕ್ಷಿಸಿ ನಿನ್ನಿಂದ ಮೊಳಗಿಸಲ್ಪಟ್ಟ ಭೇರಿನಿನಾದವು ಈಗಲೂ ನಮ್ಮೆಲ್ಲರ ಕರ್ಣಪುಟಗಳ ಹತ್ತಿರ ಮೊರೆಯುತ್ತಲಿದೆ. ಆ ಮಹತ್ತರವಾದ ಶಬ್ದವು ಪ್ರತಿಧ್ವನಿಕೊಡುತ್ತಾ ಈ ದೇಶದಲ್ಲಿ ನಿರಂತರವೂ ಜಯವನ್ನು ಹೊಂದುತ್ತಾ ಬರುತ್ತಲಿದೆ. ಸ್ವದೇಶವಿದೇಶಗಳಲ್ಲಿಯ ಮೂರ್ಖಾಚಾರಗಳೆಂಬ ಶತ್ರುಸಮೂಹಗಳನ್ನು ನಿನ್ನ ಸುಜ್ಞಾನವೆಂಬ ಆಯುಧವು ತುಂಡುತುಂಡಾಗಿ ಕತ್ತರಿಸಿ ಹಾಕಿತು. ನಿನಗೆ 'ರಾಜಾ' ಎಂಬ ಬಿರುದು ಇರುವುದು. ಆದರೆ ಈ ನಶ್ವರ ಪ್ರಪಂಚಕ್ಕೆ ನೀನು ರಾಜನಲ್ಲವಾದರೂ ಪ್ರತಿಯೊಬ್ಬ ಜ್ಞಾನಶೀಲನ ಹೃದಯದಲ್ಲಿಯೂ, ನಿನ್ನ ಸಂಬಂಧವಾದ ಉತ್ಕೃಷ್ಟಪ್ರಭುತ್ವವು ಸ್ಥಾಪಿತವಾಗಿರುವುದರಿಂದಲೂ, ಈಚೀಚೆಗೆ ಬುದ್ಧಿವಂತರಾದ ವಿದ್ಯಾಧಿಕರೆಲ್ಲರೂ ನಿನ್ನ ತಲೆಯಮೇಲೆ ರಾಜಕಿರೀಟವನ್ನು ಇಟ್ಟು ನಿನ್ನ ಜಯಧ್ವನಿಗಳನ್ನು ಕೋಲಾಹಲವಾಗಿ ಪ್ರಕಟಿಸುತ್ತಲಿರುವುದರಿಂದಲೂ, ಬಹುಕಾಲದಿಂದ ಹಿಂದೂಜನರ ಹೃದಯಸೀಮೆಗಳಲ್ಲಿ ರಾಜ್ಯವನ್ನಾಳುತ್ತಿರುವವರು ನಿನ್ನಿಂದ ಪರಾಜಿತರಾಗಿರುವುದರಿಂದಲೂ, ನೀನು ರಾಜಾಧಿರಾಜನಾಗಿದ್ದೀಯೆ, ನಿನ್ನ ವಿಜಯಧ್ವಜಪತಾಕೆಗಳು ಅವರ ರಾಜ್ಯಗಳಲ್ಲಿಯೇ ಪ್ರಕಾಶಿಸುತ್ತಲಿದ್ದರೂ ಪರಿಪೂರ್ಣ ವಿಜೃಂಭಣೆಗೆ ಇನ್ನೂ ಅವಕಾಶ ಸಾಲದೆ ಇದೆ. ಯಾವ ಹಿಂದೂ ಜನರು ಮೊಟ್ಟಮೊದಲು ನಿನ್ನನ್ನು ವಿರೋಧಿಯೆಂದು ತಿಳಿದಿದ್ದರೋ ಅಂಥವರ ಸಂತತಿಯವರೇ ನೀನು ದೇಶಕ್ಕೆಲ್ಲ ಸ್ನೇಹಿತನೆಂದು ಭಾವಿಸುತ್ತಲಿರು

ವರು. ನೀನು ಈ ಹಿಂದೂದೇಶವೊಂದಕ್ಕೆ ಮಾತ್ರವಲ್ಲ; ಈ ಪ್ರಪಂಚಕ್ಕೆಲ್ಲ ಪ್ರಾಣ ಮಿತ್ರನಾಗಿದ್ದೀಯೇ.'

'ಒಂದು ಕಡೆ ಸದ್ವಿದ್ಯಾ ವ್ರತಗಳೆಂಬ ಭೂಷಣಗಳಿಂದ ದೇಶಮಾತೆಯನ್ನು ಅಲಂಕರಿಸಿ, ಮತ್ತೊಂದುಕಡೆ ಹಲವು ಕಷ್ಟಗಳನ್ನು ಸಹಿಸಿ ಅಪಾರವಾದ ಸಮುದ್ರವನ್ನು ದಾಟಿ ಇಂಗ್ಲೀಯ ಪ್ರಭುತ್ವದ ಮೂಲಸ್ಥಾನಕ್ಕೆ ಹೋಗಿ, ವಿವಿಧಗಳಾದ ರಾಜ್ಯಾಂಗ ಸಂಸ್ಕರಣಗಳಲ್ಲಿ ಅಲ್ಲಿನ ವಿದ್ಯಾವಂತರೆಲ್ಲರಿಗೂ ಆಶ್ಚರ್ಯಜನಕವಾದ ವಿದ್ಯಾಚಾತುರ್ಯವನ್ನು ತೋರಪಡಿಸಿ ಅವರಿಗೆ ನ್ಯೂಟನ್, ಸಾಕ್ರೆಟೀಸ್, ಪ್ಲೇಟೊ ಎಂಬ ಮಹಾತ್ಮರು ಮರಳಿ ಭೂಮಿಯಲ್ಲಿ ಅವತರಿಸಿರಬಹುದೆಂಬ ಭ್ರಾಂತಿಯುಂಟಾಗುವಂತೆ ಮಾಡಿದ ನಿನ್ನ ಪವಿತ್ರಸ್ವರೂಪವು ಆಕಾಲಕ್ಕೆ ಒಂದು ಅಪರೂಪಪದಾರ್ಥವಾಗಿದ್ದಿತು. ಆಕಾಲಕ್ಕೆ ಮಾತ್ರವಲ್ಲ. ಈಗಲೂ ಈ ದೇಶದಲ್ಲಿ ನಿನ್ನಂತಹ ಮಹಾಶಕ್ತಿವಂತನನ್ನು ಕಾಣುವುದು ದುರ್ಲಭವಾಗಿದೆ.'

'ಸಹಗಮನ ನಿಷೇಧ, ಬ್ರಹ್ಮಧರ್ಮಪ್ರಚಾರ, ಸ್ವದೇಶೀಯರಿಗೆ ದೊಡ್ಡ ಅಧಿಕಾರಗಳನ್ನು ಕೊಡುವುವಕ್ಕೆ ಪ್ರಯತ್ನ ಮುಂತಾದ ಅನೇಕ ಕಾರ್ಯಗಳು ನಿನ್ನನ್ನು ಶಾಶ್ವತವಾಗಿ ಸ್ಮರಿಸುವಂತೆ ಮಾಡುತ್ತಲಿವೆ. ಈ ಪೂರ್ವಾರ್ಧಗೋಳಕ್ಕೆ ನೀನು ಇಷ್ಟರ ಉಪಕಾರವನ್ನು ಮಾಡಿದ್ದನ್ನು ನೋಡಿಯೇ ಪಶ್ಚಿಮಾರ್ಧಗೋಳದವರೆಲ್ಲರೂ ನಿನ್ನ ಗೌರವವನ್ನು ಶಿರಸಾವಹಿಸುತಲಿದ್ದರು. ನಿನ್ನ ಪವಿತ್ರ ಹೃದಯವು ಇನ್ನೆಷ್ಟು ಮಹೋಪಕಾರಗಳನ್ನು ಮಾಡಬೇಕೆಂದು ಆಲೋಚಿಸಿದ್ದಿತೋ! ಆದರೆ ನಮ್ಮ ದುರದೃಷ್ಟವಶದಿಂದ ಅವುಗಳೆಲ್ಲವೂ ವ್ಯರ್ಥವಾಗಿ ಹೋದವು. ಬ್ರಿಸ್ಟಲ್ ನಗರವೇ! ನೀನು ಎಷ್ಟರ ಘೋರಕಾರ್ಯವನ್ನು ಮಾಡಿದೆ! ಅಮೃತ ತುಲ್ಯವಾದ ಫಲಗಳನ್ನು ಕೊಡುತ್ತಿರುವ ನಮ್ಮ ಪಾಲಿನ ಕಲ್ಪವೃಕ್ಷವನ್ನು ಬುಡಸಹಿತವಾಗಿ ಕಡಿದುಹಾಕಿದೆಯಲ್ಲವೆ!'

'ಅಕ್ಕಟಾ! 1833 ನೆಯ ಸಂವತ್ಸರದ ಸೆಪ್ಟಂಬರ್ 27 ನೆಯ ದಿನವು ಎಂತಹ ದುರ್ದಿನವೋ! ತನ್ನ ಜೀವಿತವನ್ನೆಲ್ಲ ದೇಶೋದ್ಧರಣಕ್ಕಾಗಿ ಧಾರೆಯನ್ನೆರದ ಮಹಾತ್ಮನನ್ನು ಕೊಂಡುಹೋದ ಆ ದಿನವು ದೇಶಕ್ಕೆಲ್ಲವೂ ದುರ್ದಿನವೆನಿಸದೆ ಇರುವುದೆ? ಸಿಕ್ ಜನರಿಗೆ ಮಹಾರಾಜಾ ರಣಜಿತಸಿಂಗನು ಮರಣಹೊಂದಿದಾಗ ಉಂಟಾದ ದುಃಖವೇ ನಮಗೆ ಈದಿನದಲ್ಲಿ ಉಂಟಾಯಿತು. ಎಲೈ ಬೇಸಾಯಗಾರರಿರ! ಯಾವನು ನಿಮಗೋಸ್ಕರ ಪರದೇಶಗಳಿಗೆ ನೀವು ಹೇಳಿಕೊಳ್ಳದಿದ್ದರೂ ಹೋಗಿ, ನಿಮ್ಮ ಯೋಗಕ್ಷೇಮಗಳನ್ನು ಕುರಿತು ಪ್ರಯತ್ನಪಟ್ಟನೋ ಅಂತಹ ಮಹಾತ್ಮನಾದ ರಾಜಾರಾಮಮೋಹನರಾಯನನ್ನು ಈ ದಿನದಲ್ಲಿಯೇ ಕ್ರೂರ ಮೃತ್ಯುವು ತನ್ನ ಬಾಯಲ್ಲಿ ಹಾಕಿಕೊಂಡಿತಲ್ಲವೆ! ಎಲೌ ಅನಾಥ ಯುವತಿಯರಿರ! ದುರಂತಗಳಾದ ನಿಮ್ಮ ಕಷ್ಟಗಳನ್ನು ತೊಲಗಿಸಿ ನಿಮ್ಮ ಜಾತಿಯನ್ನೆಲ್ಲ ಅಭಿವೃದ್ಧಿಗೆ ತರಬೇಕೆಂಬ ಬಯಕೆಯು ಯಾವನ ಹೃದಯದಲ್ಲಿ ಪುಂಖಾನುಪುಂಖವಾಗಿ ಉದ್ಭವಿಸುತ್ತಲಿದ್ದಿತೋ, ಕೇಳಿದಕೂಡಲೇ ಎದೆಯ ಗುಂಡಿಗೆಯನ್ನು ನಡುಗಿಸುವ ಸಹಗಮನ ಘೋರದುರಾಚಾರ ಮೃತ್ಯುಕರಾಳಾಸ್ಯಗಹ್ವರದಲ್ಲಿ ಪ್ರವೇಶಿಸದಂತೆ ನಿಮ್ಮನ್ನು ಯಾವನು ಕಾಪಾಡಿದನೋ

ಅಂತಹ ಲೋಕಬಾಂಧವನು ಈ ದಿನದಲ್ಲಿಯೇ ಅಸ್ತಮಿಸಿದನು. ಅಕ್ಕಟಾ! ದುರ್ದಶೆಯನ್ನು ಹೊಂದಿರುವ ಓ ಹಿಂದೂ ಮಾತೆಯೇ! ನಿನ್ನ ಪ್ರಜೆಗಳ ಸೌಖ್ಯಕ್ಕೆ ಆಧಾರವಾದ ಮರವು ಈ ದಿನದಲ್ಲಿಯೇ ಮುರಿದುಬಿದ್ದುಹೋಯಿತಲ್ಲವೆ? ಕ್ರೂರವಾದ ದೈವದ ಕೃತ್ಯವೇನೆಂದು ಹೇಳಬಹುದು? ದುಃಖಿಸುವುದರಿಂದ ಯಾವ ಲಾಭವೂ ಇಲ್ಲ ಪ್ರಕೃತಿಸಂಬಂಧದ ದೆಸೆಯಿಂದ ನಾವು ವಿಚಾರಪಟ್ಟರೂ ನಮ್ಮ ಕಥಾನಾಯಕನ ನಿರ್ಮಲಕೀರ್ತಿದ್ಯುತಿಯು ಒಂದುವೇಳೆಯಾದರೂ ಮರೆಯಾಗತಕ್ಕದ್ದಲ್ಲ. ಆತನ ಭೌತಿಕ ದೇಹವು ನಶಿಸಿದರೂ. ದೇಶಕ್ಷೇಮವನ್ನು ಕುರಿತು ಆತನ ಹೃದಯದಲ್ಲಿ ಯಾವಾಗಲೂ ನೆಲೆಗೊಂಡಿದ್ದ ಅಭಿಪ್ರಾಯಗಳನ್ನು ತಿಳಿಸುವ ದಿವ್ಯವಾಕ್ಯಗಳು ನಶಿಸದೆ ಇಂದಿಗೂ ಗ್ರಂಥರೂಪವಾಗಿ ಉದ್ಘೋಷಿಸುತ್ತ ಆತನನ್ನು ನಮ್ಮ ಹೃದಯಪೀಠದಲ್ಲಿ ಅಧಿವಸಿಸುತ್ತಿರುವಂತೆ ಮಾಡಿ ನಮಗೆ ಘನವಾದ ಸನ್ಮಾರ್ಗಗಳನ್ನೂ ನೀತಿವರ್ತನವನ್ನೂ ಮನುಷ್ಯ ಸ್ವಾತಂತ್ರ್ಯವನ್ನೂ ಬೋಧಿಸುತ್ತಾ ಆಚಂದ್ರಾರ್ಕವಾಗಿ ಸುಸ್ಥಿರಗಳಾಗಿವೆ.'

ರಾಮಮೋಹನರಾಯನು ತನ್ನ ಜೀವಿತಕಾಲದಲ್ಲಿ ನಡೆಸಿದ ಕಾರ್ಯಗಳಿಗಾಗಿ ಮುಂದಿನ ತಲಾಂತರದ ಜನಗಳು ಬಹಳವಾಗಿ ಸಂತೋಷಿಸಿ ತನಗೆ ಕೃತಜ್ಞರಾಗಿ ಇರುವರೆಂದು ನಂಬಿದ್ದನು. ಆದರೆ ಈಗಿನತನಕ ನಮ್ಮಗಳಿಂದ ಅಂತಹ ಪ್ರತ್ಯಕ್ಷನಿದರ್ಶನವಾವುದೂ ತೋರದೆ ಹೋಗಿದೆ. ಅದೃಷ್ಟವಶದಿಂದ ದ್ವಾರಕಾನಾಥಠಾಕೂರವರು ಇಂಗ್ಲೆಂಡಿಗೆ ಹೋಗಿ ಆತನ ಸಮಾಧಿಯನ್ನು ಮಾತ್ರ ನೆಟ್ಟಗೆ ಮಾಡಿಸಿಬಂದರು.

ಆದರೂ ಎಲೈ ಹಿಂದೂ ಸಹೋದರರೇ! ಹಿತಚಿಂತಕರ ಜ್ಞಾಪಕಾರ್ಥವಾಗಿ ಅವರವರ ಸ್ವರೂಪವಿಗ್ರಹಗಳನ್ನು ಸ್ಥಾಪಿಸುವುದೇ ಮೊದಲಾದ ಕಾರ್ಯಗಳಿಗೆ ಮುಂದಾಳುಗಳಾಗಿ ನಿಲ್ಲತಕ್ಕ ನೀವು ರಾಜಾರಾಮಮೋಹನರಾಯನ ಪ್ರತಿಮೆಯೊಂದನ್ನು ಮಾಡಿಸಿ ಲಾರ್ಡ್ ವಿಲ್ಲಿಯಂ ಬೆಂಟಿಂಕ್‌ರವರ ಪ್ರತಿಮೆಗೆ ಬಲಗಡೆಯಲ್ಲಿ ಪ್ರತಿಷ್ಠಿಸಲಾರಿರಾ?

ದೇಶವಾಸಿಗಳಾದ ಮಹಾ ಕವಿಗಳಿರಾ! ಪ್ರವಾಹಗಳಂತೆ ಹರಿದು ಬರುತ್ತಿರುವ ನಿಮ್ಮ ವಾಗಮೃತಧಾರಾ ನಿಷೇವಣದಿಂದ ದೇಶಾಭಿಮಾನಿಗಳ ಹೃದಯಗಳು ಸದಯದಿಂದ ಕರಗುವಂತೆ ನಿಮ್ಮಗಳ ಕವಿತಾನೈಪುಣ್ಯವನ್ನು ಹೊರಪಡಿಸಿ, ನಮಗೆ ಮಹೋಪಕಾರಗಳನ್ನು ಮಾಡಿ ನಮ್ಮನ್ನು ಋಣಗಳನ್ನಾಗಿ ಮಾಡಿ ಗತಿಸಿದ ರಾಮಮೋಹನನ ಪವಿತ್ರವಾದ ಜೀವನ ಚರಿತ್ರೆಯನ್ನು ನಿಮ್ಮ ದೇಶಭಾಷೆಗಳಲ್ಲಿ ಬರೆದು ಸ್ವಲ್ಪಮಟ್ಟಿಗಾದರೂ ಋಣಭಾಗವನ್ನು ತೀರಿಸಿಕೊಳ್ಳಲಾರಿರಾ?

ಮಿತ್ರರತ್ನಗಳೆನಿಸಿದ ವಾಚಕಮಹಾಶಯರೇ! ಯಾವನು ಹಿಂದೂದೇಶದವರ ದುಸ್ಥಿತಿಗಳನ್ನು ಕ್ರಮಪಡಿಸುವುದಕ್ಕೆ ತನ್ನ ಶರೀರವನ್ನೂ, ಬುದ್ಧಿಯನ್ನೂ, ಧನವನ್ನೂ, ಅರ್ಪಿಸಿದನೋ, ಯಾವನು ಮನುಷ್ಯಾಭಿವೃದ್ಧಿಗೆ ಯುಕ್ತವಾದ ಸೇವೆಯೇ ಈಶ್ವರಭಕ್ತಿಗೆ ನಿದರ್ಶನವೆಂಬ ನೀತಿಯನ್ನನುಸರಿಸಿ, ಘನತೆಯುಳ್ಳವರಲ್ಲಿ ಘನಮಹಿಮನೆನಿಸಿಕೊಂಡು, ಮಹಾಕಾರ್ಯಗಳನ್ನೆಲ್ಲ ತಲೆಯಮೇಲೆ ಹಾಕಿಕೊಂಡು ನಿರ್ವಹಿಸಿದನೋ, ಯಾವನ ವಾಕ್ಯಗಳನ್ನು ಅಮೆ

ರಿಕಾ, ಇಂಗ್ಲೆಂಡ್ ದೇಶಗಳವರು ದೇವತಾಬೋಧನೆಗಳಂತೆ ಅಂಗೀಕರಿಸಿ ಕೃತಜ್ಞತೆಯುಳ್ಳವರಾಗಿದ್ದರೋ, ಯಾರನ್ನು ಒಂದುಸಾರಿನೋಡಿ ಆತನ ಮೃದು ಮಧುರ ವಾಗ್ಬೋಧನಾಮೃತವನ್ನು ಆಸ್ವಾದಿಸಲಪೇಕ್ಷಿಸಿ ಅನ್ಯದೇಶೀಯರು ಕೂಡ ತಮ್ಮ ಪಟ್ಟಣಗಳಿಗೆ ಬರಹೇಳಿ, ಆತನಿಗೆ ಆಮಂತ್ರಣಕೊಟ್ಟು ಆತನು ಗತಿಸಿದ್ದನ್ನು ಕೇಳಿ ದುಃಖಿಸಿದರೋ ಅಂತಹ ಮಹಾತ್ಮನ ಸ್ವದೇಶವಾಸಿಗಳಾದ ನಾವು ಆತನನ್ನು ಗೌರವಿಸದೆ ಇರುವುದು ಎಷ್ಟು ಅಧರ್ಮವೋ ನೀವೇ ಆಲೋಚಿಸಿರಿ.

ರಾಮಮೋಹನನ ಜ್ಞಾಪಕಚಿಹ್ನವನ್ನುಕುರಿತು ಯಾರಾದರೂ ಒಬ್ಬ ದೊಡ್ಡ ಅಧಿಕಾರಿ ಪ್ರಯತ್ನ ಪಟ್ಟಿದ್ದಲ್ಲಿ ಇದುವರೆಗೆ ಯಾವಾಗಲೋ ಅದು ಪೂರ್ತಿಯಾಗಿಯೇ ಇರುತ್ತಲಿತ್ತು. ಆಹಾ ! ಎಷ್ಟು ವಿಚಾರಕರವಾದುದು ! ಈ ಯೋಗ್ಯತೆಗೆ ನಾವು ಲಜ್ಜಿಸಬೇಕಾಗಿದೆ. ಸ್ವಯಂಸಹಾಯದ ಘನತೆಯನ್ನು ಮನಸ್ಸಿನಲ್ಲಿ ಎಣಿಸದೆ ಪರಭೃತವೃತ್ತಿಯಲ್ಲಿ ವರ್ತಿಸುತ್ತಾ ನಮಗೆ ಯಾವುದು ಬೇಕಾದರೂ 'ಭಿಕ್ಷಾಂ ದೇಹಿ' ಎನ್ನುತ್ತ ಅತಿ ದೈನ್ಯದಿಂದ ನಡೆಯುತ್ತಿರುವ ನಮಗೆ ಮಹನೀಯ, ದೇಶಾಭಿಮಾನಿ, ಮಾನನೀಯನಾದ ಮಹಾಪುರುಷನಲ್ಲಿ ನಾವು ತೋರಿಸಬೇಕಾದ ಕೃತಜ್ಞತೆಯನ್ನು ಸೂಚಿಸುವ ಸತ್ಕಾರ್ಯ ನಿರ್ವಹಣಾರ್ಥವಾಗಿ ಸ್ವದೇಶಸ್ಥರ ದ್ರವ್ಯಸಹಾಯವನ್ನು ಬೇಡುವುದು ಅಗೌರವವೆನಿಸುವುದೇ ? ಮಧುರ ಮಧುಭರಿತವಾದ ಕಮಲದ ರಸಾಸ್ವಾದನದ ಸವಿಯು ಮಧುಪಗಳಿಗೆ ಹೊರತಾಗಿ ಭೇಕಗಳಿಗೆ ತಿಳಿಯಲಹುದೆ ? ನಾವು ಇಂತಹ ಬುದ್ಧಿವಂತ-ನಿಸಿಕೊಂಡಿರುವುದರಿಂದಲೇ ನಮ್ಮ ಸ್ಥಿತಿಗತಿಗಳು ಅಷ್ಟುಮಾತ್ರದಲ್ಲಿಯೇ ಇವೆ. ನಾವು ಎಷ್ಟೆಷ್ಟೋ ಗಿಡಗಳನ್ನೂ ಹುತ್ತಗಳನ್ನೂ ಪೂಜೆಮಾಡಲಿಕ್ಕೆ ಸಿದ್ಧರಾಗಿರತಕ್ಕವರೇಹೊರತು ಪೌರುಷಶಾಲಿಗಳಾದ ಬುದ್ಧಿವಂತರ ಹೆಸರುಗಳನ್ನು ಸದಾ ಸ್ಮರಿಸತಕ್ಕವರಲ್ಲ. ತಾಳೇಗರಿಯ ಉರಿಯಂತೆ ತಟ್ಟನೆ ತಣ್ಣಗಾಗುವ ಕ್ರಿಯಾಶೂನ್ಯಗಳಾದ ಬಾಯಹರಟೆಗಳನ್ನೊದರುವ ನಾವು ಮನಸ್ಸಿಟ್ಟು ಯಾವ ಸತ್ಕಾರ್ಯವನ್ನು ತಾನೇ ನೆರವೇರಿಸಬಲ್ಲೆವು ? ಅಕ್ಕಟಕ್ಕಟಾ ! ಎಲೈ ಭಾರತವರ್ಷವೇ ! ನಿರ್ಮಲಜ್ಞಾನ ಶೋಭಿತರಿಗೂ ಅಪ್ರತಿವಿಕ್ರಮಧರರಿಗೂ ನೆಲೆವನೆಯೆನಿಸಿದ್ದ ನಿನಗೆ ಎಂತಹ ಗತಿ ಬಂದಿತು ?

ಎಲೆ ಯೂರೋಪ್ ಖಂಡವೇ ! ಎಲೆ ಅಮೇರಿಕಾ ಖಂಡವೇ ! ನಿಮ್ಮ ದೇಶಗಳಲ್ಲಿ ಅನುಪಮಾನಯಶೋನಿಧಾನನಾಗಿ ನೆಗಳ್ತೆವಡೆದ ರಾಜಾರಾಮಮೋಹನರಾಯನ ಸ್ವದೇಶವು ಹೇಗೆ ಇದೆಯೋ ಅದನ್ನು ನೋಡಲಪೇಕ್ಷಿಸುವಿರಾದರೆ ಒಂದು ಸಾರಿ ನಮ್ಮ ಕಡೆಗೆ ತಿರುಗಿ ನೋಡಿರಿ. ಪರ್ವತವು ಹೇಗೆ ಮರಳಿನ ರಾಶಿಯಾಗಿ ಮಾರ್ಪಡುವುದೋ, ವಜ್ರವು ಹೇಗೆ ಗಾಜಿನ ತುಂಡಾಗುವುದೋ, ಅಗ್ನಿಕಣಗಳು ಹೇಗೆ ಇದ್ದಲಿನ ತುಂಡುಗಳಾಗುವುವೋ, ಇವುಗಳನ್ನು ನೋಡಲೆಳಸಿದರೆ ನಮ್ಮವರಮೇಲೆ ಒಂದುಸಾರಿ ದೃಷ್ಟಿಯನ್ನು ಪ್ರಸರಿಸಿರಿ.

ಅವಂ ಪರಹಿತಕಾಗಿಯೆ । ನೋವುಗಳಂ ಗಣಿಸದೆಯ್ದಿ ಪರಮಂಡಲದೊಳ್ ॥
ತೀವಿದಜನದಿಂ ಪ್ರಕೃತಿ । ಗೈವುತ್ತಂ ತನುವನುಳಿದನವನೇ ಮಾನ್ಯಂ ॥

# ಏಳನೆಯ ಪ್ರಕರಣ.

---

## ರಾಜಾ ರಾಮಮೋಹನರಾಯರ ಯೋಗ್ಯತೆಗಳು.

### ದೇಹಬಲವೂ ಆರೋಗ್ಯವೂ.

ರಾಮಮೋಹನನ ದೇಹ, ಜ್ಞಾನ, ಮನಸ್ಸು, ಮತಾಭಿಪ್ರಾಯಗಳು, ಬುದ್ಧಿಬಲ ಇವುಗಳನ್ನೆಲ್ಲ ಯೋಚಿಸಿನೋಡಿದರೆ ಆತನು ಅಸಾಧಾರಣನೆಂದು ಹೇಳಬಹುದು. ಆತನು ಆರು ಅಡಿಗಳ ಎತ್ತರವುಳ್ಳವನಾಗಿದ್ದನು. ಅವನ ಸ್ವರೂಪವು ಮನೋಹರವಾದುದು, ಶರೀರದಲ್ಲಿ ವಿಕಾರವಿಲ್ಲ, ಆತನು ತುಂಬಾ ಬಲಶಾಲಿ ; ದೇಹಬಲಕ್ಕೂ ಬುದ್ಧಿಬಲಕ್ಕೂ ಅನೇಕ ವಿಧಗಳಿಂದ ಸಂಬಂಧವು ಉಂಟೆಂದು ಪ್ರಾಚೀನಾರ್ಯರಿಗೆ ಚೆನ್ನಾಗಿ ಗೊತ್ತುಂಟು. ಮೊಳಕಾಲಿನವರೆಗೆ ಉದ್ದವಾದ ಕೈಗಳಿರುವಿಕೆಯು (ಆಜಾನುಬಾಹುವು) ಘನತೆಯುಳ್ಳವರಿಗೆ ಲಕ್ಷಣವೆಂದು ಅವರು ಅದುವರಿಗೇನೆ ಕಂಡುಹಿಡಿದಿದ್ದರು. ಈಗಿನ ಅಮೆರಿಕಾ, ಯೂರೋಪ್ ಖಂಡಗಳಲ್ಲಿನ ವಿದ್ವಾಂಸರು ಸುದಾ ದೇಹಬಲಕ್ಕೂ, ಬುದ್ಧಿಬಲಕ್ಕೂ, ಸಮೀಪಸಂಬಂಧ ವಿರುವುದೆಂದು ತಿಳಿದುಕೊಂಡಿರುವರು. ಶಾರೀರಶಾಸ್ತ್ರವೇತ್ತರಲ್ಲಿ ಪ್ರಸಿದ್ಧಿಯನ್ನು ಹೊಂದಿದ "ಸ್ಪರ್ಜಂ" ಎಂಬ ಪಂಡಿತನಿಗೆ ಇಂಗ್ಲೆಂಡಿನಲ್ಲಿ ರಾಮಮೋಹನನು ಪರಿಚಿತನಾದಾಗ ಈತನ ಹಣೆಯ ಆಕಾರವನ್ನು ನೋಡಿ, ಈತನು ಸಾಮಾನ್ಯಪುರುಷನಲ್ಲವೆಂದು ತಿಳಿದುಕೊಂಡನು. ಮತ್ತು ಆ ದೇಶದ ಶಾರೀರಶಾಸ್ತ್ರಪಂಡಿತರೆಲ್ಲರೂ ರಾಮಮೋಹನನ ತಲೆಗೆ ಸರಿಯಾಗಿರುವಂತೆ ಒಂದು ಕಲ್ಪಿತಶಿರಸ್ಸನ್ನು ಮಾಡಿಕೊಂಡರು. ಆತನ ಮೆದುಳು ಮಹಾಬುದ್ಧಿಶಾಲಿಗಳ ಮೆದುಳುಗಳಿಗಿಂತ ದೊಡ್ಡದಾಗಿತ್ತು. ಬ್ರಿಸ್ಟಲ್‌ನಗರದ ವೈದ್ಯರು ಈತನ ಶಿರೋವೇಷ್ಟನ (ರುಮಾಲೆ) ವನ್ನು ಅರುವತ್ತು ವರುಷಗಳ ತನಕ ತಮ್ಮಲ್ಲಿ ಮರೆಮಾಡಿಟ್ಟಿದ್ದರು. ಪಂಡಿತ ಶಿವರಾಮಶಾಸ್ತ್ರಿ ಎಂಬ ನಮ್ಮ ದೇಶೀಯನು ಅಲ್ಲಿಗೆ ಹೋದಾಗ ಅದನ್ನು ಮರಳಿ ನಮ್ಮ ದೇಶಕ್ಕೆ ತಂದನು ಅದು ದೊಡ್ಡದೊಡ್ಡ ತಲೆಗಳಿಗೆ ಸುದಾ ಸಡಿಲವಾಗಿದ್ದಿತು. ಆತನು ಅಂದವಾದ ಸ್ವರೂಪವುಳ್ಳವನೆಂತಲೂ, ಇಂಗ್ಲೆಂಡಿನವರೆಲ್ಲರೂ ಈತನ ರೂಪವನ್ನು ನೋಡಿ ಸಂತೋಷಿಸಿ, ವರ್ಣಿಸುತ್ತಿದ್ದರೆಂತಲೂ, ಮಿಸ್ ಕಾರ್ಪೆಂಟರ್ ಬರೆದಿರುವಳು.

ಆತನ ದೇಹಾರೋಗ್ಯವು ಸುದಾ ಚೆನ್ನಾಗಿಯೇ ಇದ್ದಿತು. ಆತನು ಉಣ್ಣುವ ಭೋಜನವನ್ನು ನೋಡಿ, ಆಗಿನಕಾಲದವರಲ್ಲಿ ಅನೇಕರು ಆಶ್ಚರ್ಯ ಹೊಂದಿರುವರು. ಆತನು ದಿನಂಪ್ರತಿ ಹನ್ನೆರಡು ಸೇರುಗಳ ಹಾಲನ್ನು ಕುಡಿಯುತ್ತಿದ್ದನಂತೆ ! ಒಂದುದಿನ ಪಂಡಿತ ಶಿವರಾಮಶಾಸ್ತ್ರಿಯ ಸಂಗಡ, "ಈದಿನ ಐವತ್ತು ಮಾವಿನಹಣ್ಣುಗಳನ್ನು ತಿಂದೆನು" ಎಂದು ಹೇಳಿದನೆಂತ ಆತನು ಬರೆದಿರುವನು. ಕೃಷ್ಣನಗರವಾಸಿಯಾದ ಗುರುದಾಸಬಿಶ್ವ ಎಂಬಾತನು ಹುಗ್ಲಿಯಲ್ಲಿ ಉದ್ಯೋಗದಲ್ಲಿದ್ದಾಗ ರಾಮಮೋಹನನನ್ನು ಗೌರವಾರ್ಥವಾಗಿ ಒಂದುದಿನ ತನ್ನ ಮನೆಗೆ ಔತನಕ್ಕಾಗಿ ಕರೆದುಕೊಂಡು ಹೋಗಿ, ಭೋಜನಾದಿಗಳಾದಮೇಲೆ ಸ್ವಲ್ಪಹೊ

ತ್ತಿಗೆ ಒಂದು ತೆಂಗಿನಗೊನೆಯನ್ನು ತರಿಸಿ ಕೊಟ್ಟನೆಂತಲೂ, ಆ ಗುತ್ತಿಯೊಳಗಣ ಕಾಯಿಗಳನ್ನೆಲ್ಲ ಆತನು ಆಗಲೇ ಅಲ್ಲಿಯೇ ತಿಂದುಬಿಟ್ಟನೆಂತಲೂ, ಹೇಳುವರು. ಆತನಿಗೆ ಶರೀರಾರೋಗ್ಯವೂ, ದೇಹಬಲವೂ, ನೆಟ್ಟಗೆ ಇಲ್ಲದಿದ್ದರೆ ಹದಿನಾರುವರ್ಷಗಳ ವಯಸ್ಸಿನಲ್ಲಿಯೇ ಕ್ರೂರಸತ್ವಶರಣ್ಯಗಳಾದ ಅರಣ್ಯಗಳಲ್ಲಿ ಸ್ವಲ್ಪವೂ ಹೆದರದೆ, ಟಿಬೆಟ್‌ದೇಶಕ್ಕೆ ಹೇಗೆ ಹೋಗಿರಬಲ್ಲನು ? ಮತ್ತು ಆತನ ದೇಹಬಲವು ಅಮೇಯವಾಗಿಯೂ, ಅನುಪಮಾನವಾಗಿಯೂ ಇರದಿದ್ದರೆ ಅಷ್ಟೊಂದು ಘನಕಾರ್ಯಗಳನ್ನು ಹೇಗೆ ನಿರ್ವಹಿಸಲಿಕ್ಕೆ ಸಮರ್ಥನಾಗಿದ್ದಾನು ? ದೇಹಾರೋಗ್ಯವೂ, ಬಲವೂ, ಇಲ್ಲದ್ದರ ದೆಸೆಯಿಂದಲೇ ನಮ್ಮ ಜನಾಂಗದ ಸ್ಥಿತಿಯು ದಿನದಿನಕ್ಕೂ ಕ್ಷೀಣವಾಗುತ್ತ ಬರುತ್ತಲಿದೆ. ದೊಡ್ಡ ದೊಡ್ಡ ಸಕಲ ಕಲಾನಿಲಯಗಳಲ್ಲಿಯ ವಿದ್ಯಾರ್ಥಿಗಳು ದೇಹಾರೋಗ್ಯಬಲಾಭಿವೃದ್ಧಿಗಳಲ್ಲಿ ಶ್ರದ್ಧೆಯನ್ನು ತೆಗೆದುಕೊಳ್ಳದೆ ಇರುವುದರಿಂದ ಅವರು ಒಂದೇಸಾರಿಗೆ B. A. ಪರೀಕ್ಷೆಯಲ್ಲಿಯಾಗಲೀ M. A. ಪರೀಕ್ಷೆಯಲ್ಲಿಯಾಗಲೀ ಉತ್ತೀರ್ಣರಾಗುವುದು ದುರ್ಘಟಕಾರ್ಯವೆಂದು ಭಾವಿಸುತ್ತಿರುವರು. ಮುಂದೆ ಆ ಮೆಟ್ಟಿಲನ್ನು ದಾಟುವ ವೇಳೆಗೆ ಅವರು ಶಲ್ಯಾವಶೇಷರಾಗಿ ತೂರಾಡಿಕೊಂಡು ಈಚೆಗೆ ಬರುವರು. ಇಂತಹರು ತಮಗಾಗಲಿ ತಮ್ಮ ದೇಶಕ್ಕಾಗಲಿ ಯಾವ ಉಪಕಾರಗಳನ್ನು ಮಾಡಬಲ್ಲರು ?

ರಾಮಮೋಹನನ ವಿಜಯಕ್ಕೆ ಆತನ ದೇಹದಾರ್ಢ್ಯವೇ ಮುಖ್ಯಕಾರಣ. ಕಲ್ಕತ್ತೆಯಲ್ಲಿ ವಿಗ್ರಹಾರಾಧನೆಯ ನಿರ್ಮೂಲನದ ನಿಮಿತ್ತವಾಗಿ ಆತನು ವಾಗ್ರಣದುಂದುಭಿಯನ್ನು ಮೊಳಗಿಸುತ್ತಿರುವಾಗ, ಕೆಲವರು ದೊಡ್ಡಮನುಷ್ಯರು ಬಂದು ಸಾಕಾರಪೂಜೆಯನ್ನು ಎತ್ತಿಹಾಕಿ ನಿರಾಕಾರೋಪಾಸನೆಯನ್ನು ಕುರಿತು ಪ್ರಜೆಗಳಿಗೆ ಬೋಧಿಸುವುದರಿಂದ ವಿಗ್ರಹಾರಾಧಕ ಪಕ್ಷದವರು ಅಸೂಯಾಗ್ರಸ್ತರಾಗಿ ನಿಮ್ಮನ್ನು ಹೊಡೆಯಲಿಕ್ಕೆ ಯತ್ನಿಸುತ್ತಿದ್ದಾರೆಂದು ಹೇಳಿದರು. ಅದಕ್ಕಾತನು ನಕ್ಕು, "ಏನದು ? ನನ್ನನ್ನು ಹೊಡೆಯುವರೆ ? ಅವರೇನು ಭೋಜನಮಾಡುವರು ?" ಎಂದು ಪ್ರತ್ಯುತ್ತರವಿತ್ತನಂತೆ !

## ವಿದ್ಯೆ, ಜ್ಞಾನ.

ನಮ್ಮ ವಾಚಕರು ರಾಮಮೋಹನನ ವಿದ್ಯಾವಿಶಾರದತ್ವವನ್ನೂ, ಪ್ರತಿಭಾ ಸಂಪನ್ನತೆಯನ್ನೂ ಅಖಂಡಜ್ಞಾನಸಂಪೂರ್ಣತೆಯನ್ನೂ ಕುರಿತು ಇದುವರೆಗೆ ಬಹುಮಟ್ಟಿಗೆ ತಿಳಿದುಕೊಂಡೇ ಇರುವರು. ಆದರೂ ಇಲ್ಲಿ ಕೂಡ ಸ್ವಲ್ಪ ವಿವರಿಸಿರುವೆವು.

ಪಂಡಿತ ವಿದ್ಯಾಸಾಗರನು ವಂಗದೇಶದ ಇತಿಹಾಸದಲ್ಲಿ ಹೀಗೆಂದು ಬರೆದಿರುವನು : "ರಾಮಮೋಹನನು ಸಂಸ್ಕೃತ, ಅರಬ್ಬಿ, ಫಾರಸೀ, ಉರ್ದು, ಬಂಗಾಳೀ, ಇಂಗ್ಲಿಷ್, ಗ್ರೀಕ್, ಲ್ಯಾಟಿನ್, ಫ್ರೆಂಚ್, ಹೀಬ್ರೂ, ಎಂಬೀ ಹತ್ತು ಭಾಷೆಗಳಲ್ಲಿ ಚೆನ್ನಾಗಿ ಬರೆಯಲಿಕ್ಕೂ ಓದಲಿಕ್ಕೂ, ಬಲ್ಲವನಾಗಿದ್ದನು. ಈ ಭಾಷೆಗಳಲ್ಲಿ ಪುರಾತನ ನೂತನ ಗ್ರಂಥ ವಿಷಯವಿಶೇಷಗಳನ್ನೆಲ್ಲಾ ಆತನು ತಿಳಿದುಕೊಂಡಿದ್ದನು. ಸೀಮೆಯಲ್ಲಿನ ಪ್ರಮುಖರು ಪ್ರಕೃತಿ ಶಾಸ್ತ್ರಜ್ಞಾನದಲ್ಲಿಯೂ, ನಾನಾ ವಿದ್ಯೆಗಳಲ್ಲಿಯೂ, ವಾಚಕನೈಪುಣ್ಯ

ದಲ್ಲಿಯೂ, ವಿನಯಾದಿಯೋಗ್ಯತೆಗಳಲ್ಲಿಯೂ, ಈ ಮಹಾತ್ಮನು ಪಡೆದಿದ್ದ ಅದ್ಭುತಸಾಮರ್ಥ್ಯಗಳೆಲ್ಲವೂ ಹೀಗೆ ಒಬ್ಬ ಮನುಷ್ಯನಲ್ಲಿಯೇ ಇರುವುದನ್ನು ನಾವೆಲ್ಲಿಯೂ ನೋಡಿದ್ದಿಲ್ಲವೆಂದು ರಾಮಮೋಹನನನ್ನು ಶ್ಲಾಘಿಸಿ ಬರೆದರು ಇಲ್ಲಿ ಪಂಡಿತರೊಡನೆ ವಾದವು ಜರುಗುತ್ತಿದ್ದಾಗ ಆತನ ಜ್ಞಾನವನ್ನು ನೋಡಿ ಅವರೆಲ್ಲರೂ ಆಶ್ಚರ್ಯಮಗ್ನಮಾನಸರಾಗುತ್ತಿದ್ದರು. ವೇದವೇದಾಂತ ಚರ್ಚೆಗಳಲ್ಲಿ ಆತನ ವಾಕ್ಪ್ರವಾಹಕ್ಕೆ ಅಡ್ಡಿ ನಿಲ್ಲಲಾರದೆ, ವ್ಯಾಕರಣ ನ್ಯಾಯ ಶಾಸ್ತ್ರವೇತ್ತರು, ಶ್ರುತಿಸ್ಮೃತಿ ವಿಶಾರದರು, ಕ್ರಿಸ್ತರ ಮತಚರ್ಚೆಗಳಲ್ಲಿ ಮಾರಿಷೀಮ್ಯಾನ್ ಮೊದಲಾದವರೆಲ್ಲರೂ ತುಟಿಮಿಟಿಕಿಸದೆ ಇರುವಂತೆ ಆದಿಯಲ್ಲಿ ತನ್ಮತಪ್ರಮಾಣಗ್ರಂಥಗಳು ಬರೆಯಲ್ಪಟ್ಟ ಭಾಷೆಗಳಲ್ಲಿರುವ ಮುಖ್ಯವಾಕ್ಯಗಳನ್ನು ಉದಾಹರಿಸಿ, ಚರ್ಚಿಸುತ್ತಿದ್ದುದನ್ನು ಕುರಿತು ಇದುವರಗೇನೆ ತಿಳಿಸಲ್ಪಟ್ಟಿದೆಯಷ್ಟೆ. ಈ ಮತದ ಪೂರ್ವೋತ್ತರವಿಷಯಗಳೆಲ್ಲವೂ ಹೇಗೆ ಕರತಲಾಮಲಕಗಳಾಗಿದ್ದವೋ ಹಾಗೆಯೇ ಹಿಂದುಗಳ ಮತ್ತು ಮಹಮ್ಮದೀಯರ ಪವಿತ್ರಗ್ರಂಥಗಳೆಲ್ಲವೂ ಆತನಿಗೆ ಹೃದಯಸ್ಥಗಳಾಗಿದ್ದುವು. ರಾಮಮೋಹನರಾಯನನ್ನು ಪಂಡಿತರು ಘನಪಂಡಿತನೆಂತಲೂ ಶಾಸ್ತ್ರಿಗಳೆಲ್ಲರೂ ದೊಡ್ಡ ಶಾಸ್ತ್ರಿಯೆಂತಲೂ, ಮಿಷನೇರಿಗಳು ಪರಮಾರ್ಥವನ್ನು ತಿಳಿದ ಸುಜ್ಞಾನಿಯೆಂತಲೂ, ಮಹಮ್ಮದೀಯ ಪಂಡಿತರೆಲ್ಲರೂ ಮೌಲ್ವಿಎಂತಲೂ ಸಂಭಾವಿಸುತ್ತ ಆತನನ್ನು ಕುರಿತು ಹಾಗೆಯೇ ಸಂಬೋಧಿಸುತ್ತಿದ್ದರು.

ಇಷ್ಟು ಮಾತ್ರವೇ ಅಲ್ಲ; ಆತನು ಸುಪ್ರಸಿದ್ಧರಾದ ವಾಚಾಲಕರನ್ನು ಮೀರಿದ ವಕ್ತೃವೆಂತಲೂ, ಭಾಷಾವಿಧಿಗಳನ್ನು ಪ್ರಬೋಧಿಸಬಲ್ಲ ಭಾಷಾನಿಧಿಯೆಂತಲೂ, ರಾಜ್ಯಾಂಗ ನೀತಿವಿದರಿಗೆ ದೊಡ್ಡ ರಾಜತಂತ್ರಗಳನ್ನು ಕಲಿಸಬಲ್ಲ ರಾಜಕೀಯಾರ್ಥವಿಶಾರದನೆಂತಲೂ ಈತನನ್ನು ವಿದ್ವಾಂಸರೆಲ್ಲರೂ ಹೊಗಳುತ್ತಿದ್ದರು.

ಆತನ ಬುದ್ಧಿಯು ಕುಶಾಗ್ರಬುದ್ಧಿಯೆನಿಸಿದ್ದಿತು. ದಕ್ಷಿಣದೇಶದವನೊಬ್ಬನು ಆತನಿಗೆ ತಿಳಿಯದ ಭಾಷೆಯಲ್ಲಿ ಒಂದು ಪತ್ರವನ್ನು ಬರೆದು ಕಳುಹಿಸಿದನು ಆ ಭಾಷೆಯನ್ನು ಬಲ್ಲವರಿಂದ ಆ ಪತ್ರವನ್ನು ಓದಿಸಿ ತಿಳಿದುಕೊಂಡು, ಮೂರುತಿಂಗಳ ಕಾಲ ಶ್ರದ್ಧೆಯಿಂದ ಓದಿ ಆ ಭಾಷೆಯನ್ನು ಕಲಿತು, ಮರಳಿ ಅದೇ ಭಾಷೆಯಲ್ಲಿಯೇ ರಾಮಮೋಹನನು ಪ್ರತ್ಯುತ್ತರವನ್ನು ತಾನೇ ಬರೆದು ಕಳುಹಿಸಿದನು. ಇನ್ನು ಇಂಗ್ಲೀಯಭಾಷೆಯಲ್ಲಿ ಈತನು ಪಡೆದಿದ್ದ ಪಾಂಡಿತ್ಯವನ್ನು ಇಂಗ್ಲಿಷರೇ ಅಧಿಕ ಕುತೂಹಲದಿಂದ ಹೊಗಳುತ್ತಿದ್ದರು. ಈತನು ಯಾವಾಗ ಏನು ಬರೆದರೂ ಒಂದಕ್ಷರವನ್ನಾದರೂ ತಪ್ಪುಮಾಡದೆ ಬರೆಯುತ್ತಿದ್ದನೆಂದು ಮಿಸ್ ಕಾರ್ಪೆಂಟರ್ ಬರೆದಿರುವ ಗ್ರಂಥದಿಂದ ವಿಶದವಾಗುವುದು. ರಾಮಮೋಹನನು ತತ್ವಶಾಸ್ತ್ರದಲ್ಲಿ ಅಪರಿಮಿತ ಪ್ರಜ್ಞಾವಂತನು. ಆತನು ಯೂರೋಪಿಯನರ ತತ್ವಶಾಸ್ತ್ರವು ಚೆನ್ನಾಗಿಲ್ಲವೆಂತಲೂ, ಪ್ರಾಚೀನ ಹಿಂದುಗಳು ತತ್ವಶಾಸ್ತ್ರದಲ್ಲಿ ಎಲ್ಲರನ್ನೂ ಮೀರಿದ್ದರೆಂತಲೂ ಹಲವುಕಾರಣಗಳನ್ನು ತೋರಿಸಿ ಇಂಗ್ಲೆಂಡಿನ ವಿದ್ವಾಂಸರನ್ನೆಲ್ಲ ಒಪ್ಪುವಂತೆ ಮಾಡಿದನು.

ಈತನಿಗೆ ಸರಕಾರದವರ ಕಾನೂನುಗಳೆಲ್ಲವೂ ನ್ಯಾಯವಾದಿ (ಬ್ಯಾರಿಷ್ಟರ್) ಗಳಿಗಿಂತ ಚೆನ್ನಾಗಿ ತಿಳಿದಿತ್ತು. ರಾಮಮೋಹನನ ಬಳಿಯಲ್ಲಿ ಆ ಕಾಲದಲ್ಲಿ ಪ್ರಚಾರದಲ್ಲಿದ್ದ ಶಾಸನ

ಗಳೆಲ್ಲವೂ ಇದ್ದುವಂತೆ. ಈ ವಿಷಯದಲ್ಲಿ ಈತನಿಗೆ ಉಂಟಾಗಿದ್ದ ಅನುಭವವು ಅಸದೃಶವಾಗಿತ್ತೆಂದು ಆನರಬಲ್ ಗುರುದಾಸ ಬಾನರ್ಜೀಯವರು ಶ್ಲಾಘಿಸಿರುವರು.

ವ್ಯಾಪಾರದ ವಿಷಯಗಳಲ್ಲಿ ಈತನು ಅಧಿಕಪ್ರಜ್ಞೆಯುಳ್ಳವನಾಗಿದ್ದನು. ದ್ವಾರಕಾನಾಥ ಠಾಕೂರನಂತಹ ವಿದ್ಯಾವಂತನು ಸುದಾ ತನ್ನ ವ್ಯವಹಾರಗಳನ್ನು ಕುರಿತು ಈತನ ಸಂಗಡ ಆಲೋಚಿಸುತ್ತ ಬಂದನು. ದೊಡ್ಡ ದೊಡ್ಡ ಜಮೀನ್ದಾರರಿಗೆ ಏನಾದರೂ ತೊಡಕಾಗಿರುವ ವ್ಯವಹಾರಗಳು ಸಂಭವಿಸಿದಾಗ ಈತನ ಬಳಿಗೆ ಬಂದು, ತಮಗೆ ಉಪಯುಕ್ತವಾದ ಸಲಹೆಗಳನ್ನು ಪಡೆದು ತಮ್ಮ ಕೃತಜ್ಞತಾರೂಪವಾಗಿ ಸಮಾಜಕ್ಕೆ ಸ್ವಲ್ಪ ದ್ರವ್ಯವನ್ನು ಸಹಾಯಮಾಡಿ ಹೋಗುತ್ತಲಿದ್ದರು. ಮತದಿಂದಲಾಗಲಿ ಬ್ರಹ್ಮಜ್ಞಾನ ಪ್ರಚಾರದಿಂದಲಾಗಲಿ ಸಂಬಂಧವಿಲ್ಲದವರಾದರೂ ಈ ಮೂಲಕವಾಗಿ ರಾಮಮೋಹನನಿಗೆ ಅನೇಕರು ಮುಖ್ಯ ಸ್ನೇಹಿತರಾಗಿದ್ದರು.

ರಾಮಮೋಹನನು ರಾಜ್ಯತಂತ್ರನಿಪುಣನೆಂಬುದಕ್ಕೆ ಇದರಡಿ ತಿಳಿಸುವ ಅಂಶಗಳು ನಿದರ್ಶನಗಳಾಗಿರುವುವು. ಪ್ರಜೆಗಳ ಜ್ಞಾನಾಭಿವೃದ್ಧಿಯನ್ನು ಕುರಿತು ಪತ್ರಿಕೆಗಳನ್ನು ಸ್ಥಾಪಿಸುದುದು, ವಾರಸುದಾರರ ನಿರ್ಣಯದ ವಿಷಯದಲ್ಲಿ ಚೀಫ್ ಜಸ್ಟಿಸನ ಅಭಿಪ್ರಾಯವು ತಪ್ಪೆಂದು ಸ್ಪಷ್ಟವಾಗಿ ವಾದಿಸಿದ್ದು, ಹಿಂದೂ ಪ್ರಜೆಗಳಿಗೆ ಹಿಂದೂರಾಜ್ಯದಲ್ಲಿ ಉನ್ನತಾಧಿಕಾರಗಳನ್ನೂ ಕೊಡುವುದಕ್ಕಾಗಿ ಸರಕಾರದವರೊಡನೆ ವಾದಿಸಿದ್ದು, ಸ್ತ್ರೀಸ್ವಾತಂತ್ರ್ಯವಿಚಾರವನ್ನು ಕುರಿತು ಗ್ರಂಥಗಳನ್ನು ಬರೆದುದು, ಬಂಗಾಳ, ಬಿಹಾರ, ಒರಿಸ್ಸಾ, ಮೊದಲಾದ ಮಂಡಲಗಳವರ ಬಂಜರುಭೂಮಿಗಳ ವಿಷಯದಲ್ಲಿ ಗದ್ದಲಹತ್ತಿಸಿದ್ದು, ಪತ್ರಿಕಾಸ್ವಾತಂತ್ರ್ಯ ವಿಚಾರವಾಗಿ ರಾಜಪ್ರತಿನಿಧಿಗೆ ವಿಜ್ಞಪ್ತಿ ಪತ್ರವನ್ನು ಕಳುಹಿಸಿದ್ದು, ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟ್ ಸಭೆಯ ಇದುರಿಗೆ ಹಿಂದೂದೇಶದವರ ಪ್ರಯೋಜನಕ್ಕಾಗಿ ಸಾಕ್ಷ್ಯಗಳನ್ನು ಕೊಟ್ಟು ಒಂದು ಗ್ರಂಥವನ್ನು ಬರೆದುದು, ಈ ವಿಷಯಗಳನ್ನೆಲ್ಲ ಪಾಠಕರು ಸಂಕ್ಷೇಪವಾಗಿ ಇದುವರೆಗೆ ಓದಿಯೇ ಇರುವರು. ವಿದ್ಯಾವ್ಯಾಪಕದವಿಷಯದಲ್ಲಿ ಈತನಿಗೆ ಪ್ರೀತಿ ಹೆಚ್ಚಾಗಿದ್ದಿತು. ಸ್ವದೇಶೀಯರು ಪಾಶ್ಚಾತ್ಯವಿದ್ಯೆಗಳನ್ನು ಕಲಿತು ನಾಗರಿಕತೆಯನ್ನು ಹೊಂದಬೇಕೆಂದು ಈತನು ತುಂಬ ಕೃಷಿಮಾಡಿದನು. ಈ ವಿಷಯದಲ್ಲಿ ರಾಜಪ್ರತಿನಿಧಿಗೆ ಈತನು ಒಂದು ಪತ್ರವನ್ನು ಬರೆದನು. ಹಿಂದೂ ಕಾಲೇಜನ್ನು ಸ್ಥಾಪಿಸುವುದಕ್ಕೆ ಮುಖ್ಯವಾಗಿ ನಿಂತನು. ಮಿಸ್ಟರ್ ದತ್ತರವರಿಗೆ ಸಹಾಯಮಾಡಿದನು. ತನ್ನ ಸ್ವಂತವೆಚ್ಚದಿಂದ ಒಂದು ಇಂಗ್ಲೀಷ್ ಪಾಠಶಾಲೆಯನ್ನು ಸ್ಥಾಪಿಸಿದನು.

## ಹೃದಯ ಮತ್ತು ಧರ್ಮಾಭಿಲಾಷೆ.

ರಾಮಮೋಹನನು ತನ್ನ ಸ್ನೇಹಿತರಲ್ಲಿ ತೋರಿಸುತಿದ್ದ ಆದರಣೆಯು ಬಹು ಘನವಾದುದು. ಅದುವರೆಗೆ ಬ್ರಹ್ಮಮಂದಿರವೆಂಬುದು ಭಗವಂತನ ದರ್ಬಾರಾಗಿರುವುದರಿಂದ ಅಲ್ಲಿಗೆ ಪ್ರಾರ್ಥನಾದಿಗಳನ್ನು ನಡಿಸಲಿಕ್ಕೆ ಬರುವ ಭಕ್ತರೆಲ್ಲರೂ ಉತ್ತಮವಾದ ವಸ್ತ್ರಗಳನ್ನೂ, ಅಂಗಿವಾಗುಗಳನ್ನೂ ಧರಿಸಿಕೊಂಡು ಬರಬೇಕೆಂದು ನಿರ್ಣಯವಾಗಿದ್ದಿತು. ಒಂದುದಿನ

ದ್ವಾರಕಾನಾಥ ಠಾಕೂರ್‌ರವರು ಮೈಮೇಲೆ ಒಂದು ಅಂಗವಸ್ತ್ರವನ್ನು ಹಾಕಿಕೊಂಡಿದ್ದು ಹಾಗೆಯೇ ಮಂದಿರಕ್ಕೆ ಬಂದರು. ಇದನ್ನು ನೋಡಿ, ತಾನೇ ಈ ವಿಷಯವನ್ನಾತನೊಂದಿಗೆ ಹೇಳಿದರೆ ಆಕ್ಷೇಪವಾಗಿ ತೋರುವುದೆಂದು ಯೋಚಿಸಿ, ತನ್ನ ಅಭಿಪ್ರಾಯವನ್ನು ಆನಂದಪ್ರಸಾದಬಾನರ್ಜೀಯಿಂದ ಹೇಳಿಸಿದನು. ಶಿಷ್ಯರಾಗಿದ್ದವರ ವಿಷಯದಲ್ಲಿ ಸುದಾ ರಾಮಮೋಹನನು ಹಾಗೆಯೇ ವರ್ತಿಸಿದನು. ಅವರನ್ನು “ಸಹೋದರರಾ!” ಎಂದು ಕರೆಯುತ್ತಿದ್ದನು. ಆ ಕಾಲದ ಪದ್ಧತಿಯನ್ನನುಸರಿಸಿ ರಾಮಮೋಹನನಿಗೆ ದೊಡ್ಡ ಜುಟ್ಟೂ, ಉಭಯಪಾರ್ಶ್ವಗಳಲ್ಲಿ ಕುಚ್ಚುಗಳಂತೆ ಜುಲ್ಫಾಗಳೂ ಇದ್ದುವು. ಅವುಗಳನ್ನು ತುಂಬ ಅಕ್ಕರೆಯಿಂದ ಕಾಪಾಡುತ್ತಲಿದ್ದನು. ಪ್ರತಿದಿನವೂ ಸ್ನಾನವಾದಮೇಲೆ ಬಹಳ ಹೊತ್ತಿನ ತನಕ ಅವುಗಳ ಸಿಕ್ಕನ್ನು ಬಿಡಿಸಬೇಕಾಗಿ ಬರುತ್ತಲಿತ್ತಂತೆ! ಒಂದಾನೊಂದು ದಿನ ಕೂದಲುಗಳನ್ನಾರಿಸಿಕೊಳ್ಳುತ್ತಿದ್ದಾಗ ತಾರಾಚಂದ್ರಚಕ್ರವರ್ತಿಯು ಆತನನ್ನು ನೋಡಿ “ಅಯ್ಯಾ! ‘ಕತ ಆರಸುಮೇ ಮುಖದೇ ಪಿಜೇ ದರ್ಪಣೇ,’ ಎಂದು ನೀವು ರಚಿಸಿದ ಗೀತೆಗಳು ಇತರರಿಗೋಸ್ಕರವಾಗಿಯೇ ಮಾಡಲ್ಪಟ್ಟಿರುವವೋ?” ಎಂದು ನಗಿಸಿದನು.

ಬಾಲಕರಲ್ಲಿಯೂ, ಬಾಲೆಯರಲ್ಲಿಯೂ ಆತನಿಗೆ ತುಂಬ ಪ್ರೇಮವಿದ್ದಿತು. ಮಹರ್ಷಿ ದೇವೇಂದ್ರನಾಥಠಾಕೂರರವರು ಹೀಗೆ ಹೇಳಿರುವರು. “ನಾವು ಬಾಲ್ಯದಲ್ಲಿ ಆಗಾಗ್ಗೆ ಜತೆಯ ಹುಡುಗರೊಂದಿಗೆ ಕೂಡಿ ಆತನ ಮನೆಗೆ ಹೋಗುತ್ತಲಿದ್ದೆವು. ರಾಮಮೋಹನರಾಯ್ ನಮ್ಮನ್ನು ನೋಡಿ ತುಂಬ ಸಂತೋಷಪಡುತ್ತಲಿದ್ದನು. ತನ್ನ ಮನೆಯಲ್ಲಿ ಮಕ್ಕಳು ಆಡಿಕೊಳ್ಳಲಿಕ್ಕೆ ಒಂದು ಉಯ್ಯಾಲೆಯನ್ನು ಕಟ್ಟಿಸಿದ್ದನು. ಆ ಹುಡುಗರೆಲ್ಲರೂ ಅದನ್ನು ಹತ್ತಿ ತೂಗುತ್ತಿದ್ದರು. ಒಂದಾನೊಂದುಸಾರಿ ತಾನು ಕೂಡ ಉಯ್ಯಾಲೆಯನ್ನು ತೂಗಿ, ಇನ್ನು ನನ್ನ ಸರದಿ ಬಂತು; ನೀವೆಲ್ಲರೂ ನನ್ನನ್ನು ತೂಗಿರೆಂದು ಉಯ್ಯಾಲೆಯಲ್ಲಿ ಕುಳಿತುಕೊಳ್ಳುತ್ತಿದ್ದನು. ನಾವೆಲ್ಲರೂ ತುಂಬ ಉಲ್ಲಾಸದಿಂದ ನಗುತ್ತಾ ಆ ಮಹಾತ್ಮನನ್ನು ತೂಗುತ್ತಲಿದ್ದೆವು. ಒಂದಾನೊಂದುದಿನ ಆತನು ಉಯ್ಯಾಲೆಯಲ್ಲಿ ಕುಳಿತು ನಮ್ಮಿಂದ ತೂಗಿಸಿಕೊಳ್ಳುತ್ತಲಿದ್ದಾಗ ಒಬ್ಬ ಪ್ರಸಿದ್ಧಪಂಡಿತನು ಅಲ್ಲಿಗೆ ಬಂದು ನೋಡಿ, ‘ಇಷ್ಟು ದೊಡ್ಡ ಉಯ್ಯಾಲೆಯನ್ನು ಮಕ್ಕಳಿಂದ ತೂಗಿಸಿಕೊಳ್ಳುತ್ತಿದ್ದೀರಲ್ಲಾ! ಇದೇನು?’ ಎಂದು ಕೇಳಿದನು. ಅದಕ್ಕೆ ಆತನು ನಕ್ಕು ನನಗೆ ಮುಂದೆ ಮುಂದೆ ಒಳ್ಳೇದಾಗುವುದು. ನಾನು ಸಮುದ್ರಪ್ರಯಾಣ ಮಾಡುವಾಗ ಅಲ್ಲಿನ ಹಡಗು ಆ ನೀರಿನಲ್ಲಿ ಉಯ್ಯಾಲೆಯಂತೆಯೇ ತೂಗಿ ಪ್ರಯಾಣಿಕರಿಗೆ ಅನೇಕ ವಿಧವಾದ ತೊಂದರೆಗಳುಂಟಾಗುವುವು. ಆದುದರಿಂದ ಅಂತಹ ಕಷ್ಟಗಳು ಸಂಭವಿಸದೆ ಇರಲು ಈಗಿನಿಂದಲೂ ತೂಗಾಡುವ ಅಭ್ಯಾಸವನ್ನು ಮಾಡುತ್ತಲಿದ್ದೇನೆಂದು ಛಲೋಕ್ತಿಯಾಗಿ ಹೇಳಿದನು. ಘನವಿದ್ಯಾವಿವೇಕಸಂಪನ್ನನಾದ ಆತನಿಗೆ ಈ ಬಾಲಕರಲ್ಲಿ ಇದ್ದ ವಾತ್ಸಲ್ಯವು ಹಲವು ವಿಧಗಳಿಂದಲೂ ಕೊಂಡಾಡಲ್ಪಡತಕ್ಕದ್ದಾಗಿದ್ದಿತು.”

ಸ್ತ್ರೀಜಾತಿಯಲ್ಲಿ ಆತನಿಗೆ ತುಂಬ ಮರ್ಯಾದೆ ಇತ್ತು. ತಾನು ಕುಳಿತಿದ್ದಾಗ ಯಾವ ಸ್ತ್ರೀಯಾದರೂ ನಿಂತುಕೊಂಡು ಮಾತನಾಡುವುದು ಆತನಿಗೆ ಸಮ್ಮತವಾಗಿರಲಿಲ್ಲವಾದುದರಿಂದ

ಅವರನ್ನು ಕುಳ್ಳಿರಿಸಿಕೊಂಡಾಗಲಿ, ಅಥವಾ ತಾನೇ ನಿಂತುಕೊಂಡಾಗಲಿ ಮಾತನಾಡಿ ಕಳು ಹುತ್ತಿದ್ದನು. ಟಿಬೆಟ್ಟಿನಲ್ಲಿಯ ಸ್ತ್ರೀಯರು ತನ್ನ ಪ್ರಾಣಗಳನ್ನು ಕಾಪಾಡಿದಂದಿನಿಂದಲೇ ಈತನ ಹೃದಯದಲ್ಲಿ ಈ ಅಭಿಪ್ರಾಯವು ಅಂಕುರಿಸಿತು. ಟಿಬೆಟ್, ಇಂಡಿಯಾ, ಇಂಗ್ಲೆಂಡ್, ದೇಶಗಳಲ್ಲೆಲ್ಲ ಈತನು ತನ್ನ ಬಾಲ್ಯ, ಯೌವನ, ವಾರ್ಧಕ್ಯಗಳಲ್ಲಿ ಯಾವಾಗಲೂ ಸ್ತ್ರೀ ಪಕ್ಷಾವಲಂಬಿಯಾಗಿಯೇ ಇದ್ದನು. ಸಹಗಮನವನ್ನು ಅಡ್ಡಿಮಾಡುವುದಕ್ಕೆ ಆತನು ಎಷ್ಟೆ ಷ್ಟೋ ಪ್ರಯತ್ನಗಳನ್ನು ಮಾಡಿದನು. ದೊಡ್ಡದೊಡ್ಡ ಗ್ರಂಥಗಳನ್ನು ಬರೆದುದು ಮಾತ್ರ ವಲ್ಲದೆ ಗಂಗಾತೀರಕ್ಕೆ ಹೋಗಿ, ಇತರರ ಬೈಗುಳುಗಳಿಗೂ ಗುರಿಯಾಗುತ್ತಿದ್ದನು. ತನ್ನ ಭೃತ್ಯರು ಕೋಪಿಸಿಕೊಳ್ಳುತ್ತಿದ್ದರೂ ತಾನು ಶಾಂತಿಯುಳ್ಳವನಾಗಿ ಸಮಾಧಾನ ಹೇಳುತ್ತಿ ದ್ದನು. ಒಬ್ಬ ಪುರುಷನು ಹಲವು ಸ್ತ್ರೀಯರನ್ನು ಮದುವೆಮಾಡಿಕೊಳ್ಳುವ ದುರಾಚಾರ ನಿವಾರಣೆಯ ವಿಷಯದಲ್ಲಿಯೂ, ಸ್ತ್ರೀಯರುಗಳಲ್ಲಿ ಆರೋಪಿಸುವ ದೋಷನಿವಾರಣೆಯ ವಿಷ ಯದಲ್ಲಿಯೂ ಆತನು ಬರೆದಿರುವ ವ್ಯಾಸಗಳು ಅನುಪಮಾನಗಳಾಗಿವೆ.

ಯಾರಿಗಾದರೂ ಕಷ್ಟವುಂಟಾದರೆ ಅವರಲ್ಲಿ ಈತನಿಗೆ ತುಂಬ ಮರುಕ ಉಂಟಾಗು ತ್ತಿದ್ದಿತು. ಅಂತವರ ವಿಷಯದಲ್ಲಿ ಯಾರಾದರೂ ಕ್ರೂರವಾಗಿ ನಡೆದುಕೊಂಡರೆ ಈತನು ಸ್ವಲ್ಪವೂ ಸೈರಿಸುತ್ತಿರಲಿಲ್ಲ. ಬಾಬೂ ಅಕ್ಷಯಕುಮಾರದತ್ತರು ಹೀಗೆ ಬರೆದಿರುವರು. ರಾಮಮೋಹನನಿದ್ದ ಊರಿನಲ್ಲಿ ಒಂದು ಸಂತೆ ಕೂಡುತ್ತಲಿದ್ದಿತು ಆ ಸಂತೆಗೆ ಸುತ್ತಮುತ್ತಲ ಗ್ರಾಮಗಳ ವರ್ತಕರು ಸರಕುಗಳನ್ನು ತಂದು ಮಾರುತ್ತಿದ್ದರು ರಾಮಮೋಹನನ ಹಿರಿಯ ಮಗನಾದ ರಾಧಾಪ್ರಸಾದನು ಅವರ ಕಡೆಯಿಂದ ಸುಂಕವನ್ನು ತೆಗೆದುಕೊಳ್ಳುತ್ತಿದ್ದನು. ಈ ವಾಡಿಕೆಯು ಎಲ್ಲಾ ಕಡೆಯಲ್ಲಿಯೂ ಇದ್ದುದರಿಂದ ಇದು ಒಂದು ಬಾಧಕವಾಗಿ ಎಣಿಸ ಲ್ಪಡುತ್ತಿರಲಿಲ್ಲ. ಆದರೂ ಅಲ್ಲಿಯ ವರ್ತಕರೆಲ್ಲರಿಗೂ, ಇದು ಹಿತವಾಗಿರಲಿಲ್ಲವಾದುದರಿಂದ ಅವರು ಈ ವಿಚಾರವನ್ನು ರಾಮಮೋಹನನಲ್ಲಿ ಹೇಳಿಕೊಂಡರು. ರಾಮಮೋಹನನು ಇದ ನ್ನೆಲ್ಲಾ ಕೇಳಿ ತನ್ನಮಗನಾದ ರಾಧಾಪ್ರಸಾದನನ್ನು ಕರೆದು 'ಅಲ್ಪಸ್ವಲ್ಪ ಸರಕುಗಳನ್ನು ಮಾರಿಕೊಂಡು ಒಂದೊಂದು ದುಡ್ಡು ಸಂಪಾದಿಸಿ ಹೊಟ್ಟೆ ಹೊರೆದುಕೊಳ್ಳತಕ್ಕ ಈ ಬಡ ಜನರ ಮೇಲೆ ನಿನ್ನ ಕಾರ್ಪಣ್ಯವನ್ನು ತೋರಿಸದೆ ಪರಮೇಶ್ವರನಕಡೆ ನೋಡಿ ಜ್ಞಾನವನ್ನು ತಂದುಕೋ' ಎಂದು ಮೃದುವಾಗಿಯೇ ಮೂದಲಿಸಿದನು. ಅಂದಿನಿಂದ ಆ ಸುಂಕವನ್ನು ವಸೂಲ್ಮಾಡುವುದು ನಿಂತುಹೋಯಿತು.

ಒಂದಾನೊಂದುದಿನ ಶುಭ್ರವಾದ ಉಡುಪುಗಳನ್ನು ಧರಿಸಿ ಬೀದಿಯಲ್ಲಿ ಹೋಗುತ್ತಿ ರುವಾಗ ಅಲ್ಲಿ ಒಬ್ಬ ಬಡಮನುಷ್ಯನು ಭಾರವನ್ನೆತ್ತಿಕೊಳ್ಳಲಾರದೆ ಕಷ್ಟಪಡುತ್ತಾ ಆದಾರಿ ಯಲ್ಲಿ ಬಂದು ಹೋಗುವವರ ಮುಖನೋಡುತ್ತ ನಿಂತಿದ್ದನು. ಪರೋಪಕಾರ ಪರಾಯಣ ನಾದ ರಾಮಮೋಹನನು ಅವನ ಮುಖದ ಕಳೆಯನ್ನು ಹಿಡಿದು ಆ ವಿವರವನ್ನು ತಿಳಿದು ಆ ಹೊರೆಯನ್ನೆತ್ತಿ ಅವನ ತಲೆಯ ಮೇಲಿಟ್ಟನು.

ಹರಿನಾಭಿಯೆಂಬ ಗ್ರಾಮವಾಸಿಯಾದ ಆನಂದ ಚಂದ್ರನು ರಾಮಮೋಹನನು ಹಲ

ವುಸಾರಿ ಪಟ್ಟಣಗಳಲ್ಲಿಯು ಕೂಲಿಯವರ ಕಷ್ಟಸುಖಗಳನ್ನು ತಿಳಿದುಕೊಳ್ಳುವುದಕ್ಕಾಗಿ ಅವರ ಮನೆಗಳಿಗೆ ಹೋಗಿ ವಿಚಾರಮಾಡುತಿದ್ದುದನ್ನು ತಾನು ನಿಶ್ಚಯವಾಗಿ ನೋಡಿದಂತೆ ಒಂದು ಕಡೆ ಬರೆದಿರುವನು.

ಈತನಿಗೆ ಹಿಂಸೆಯೆಂದರೆ ತುಂಬಾ ಅಸಮಾಧಾನ. ಒಂದು ದಿನ ರಾಮಸುಂದರನೆಂಬ ಭೃತ್ಯನು ಎಲ್ಲಿಯೊ ಒಂದು ಮೇಕೆಯನ್ನು ಕೊಯ್ಯುತ್ತಿದ್ದನು. ಈ ವಾರ್ತೆಯನ್ನು ರಾಮ ಮೋಹನನು ಹೇಗೋ ತಿಳಿದುಕೊಂಡು ಅಲ್ಲಿಗೆ ತತ್ಕ್ಷಣವೇ ಹೋಗಿ ಪ್ರಾಣಿಹಿಂಸೆ ಮಾಡು ವುದು ತುಂಬ ಕ್ರೂರಕಾರ್ಯವೆಂದು ಅವನನ್ನು ನಿಂದಿಸಿ ಅವನಿಗೆ ಐದು ರೂಪಾಯಿಗಳ ದಂಡವನ್ನು ವಿಧಿಸಿದನು.

ಈ ಕಾಲದಲ್ಲಿ ಒಂದು ಎಕರೆ ನೆಲವನ್ನುಳ್ಳವನು ಸುದಾ ತನ್ನನ್ನು ಜಮೀನ್ದಾರನೆಂ ತಲೂ, ಲ್ಯಾಂಡ್ ಲಾರ್ಡ್ ಎಂತಲೂ ಸಂಬೋಧಿಸಿಕೊಳ್ಳುತ್ತಿರುವುದನ್ನೂ, ರೈತರನ್ನು ಅನೇಕವಿಧವಾಗಿ ಹಿಂಸಿಸುತ್ತಿರುವುದನ್ನೂ ನಾವು ನೋಡುತ್ತಲೇ ಇರುವೆವು ಆದರೆ ರಾಮ ಮೋಹನನು ತಾನು ಒಬ್ಬ ದೊಡ್ಡ ಜಮೀನ್ದಾರನ ಮಗನಾಗಿಯೂ ಸ್ವತಃ ದೊಡ್ಡ ಜ ಮೀನ್ದಾರನಾಗಿಯೂ ದ್ವಾರಕಾನಾಥ್, ಕಾಳಿನಾಥ್, ಆನಂದಪ್ರಸಾದ್ ಮೊದಲಾದ ದೊಡ್ಡ ಪ್ರಭುಸ್ವಾಮಿಗಳ ಬಂಧುವಾಗಿಯೂ ಇದ್ದರೂ ಯಾವಾಗಲೂ ಹಿಂದೂ ದೇಶದಲ್ಲಿ ಯೂ, ಇಂಗ್ಲೆಂಡಿನಲ್ಲಿಯೂ, ಬಡವರಾದ ಬೇಸಾಯಗಾರರ ಕ್ಷೇಮವನ್ನೇ ಬಯಸಿ ಅವರ ಪಕ್ಷವನ್ನೇ ಅವಲಂಬಿಸಿ ರಾಜಸಾನ್ನಿಧ್ಯದಲ್ಲಿ ಸುದಾ ಅವರಿಗಾಗಿಯೇ ತುಂಬ ಪ್ರಯತ್ನ ಪಟ್ಟು ಉಪಕಾರಮಾಡಿದನು.

ಈತನ ಹೃದಯವು ಹಳ್ಳಿ ಮತ್ತು ಪಟ್ಟಣಗಳ ಕ್ಷೇಮಾಭಿಲಾಷೆಯಲ್ಲಿ ಮಾತ್ರವಲ್ಲದೆ ಸರ್ವಪ್ರಪಂಚದ ಅಭಿವೃದ್ಧಿಯಲ್ಲಿ ಕೂಡ ಲಗ್ನವಾಗಿದ್ದಿತು. ಎಲ್ಲಿಯೋ ಒಂದುಮೂಲೆ ಯಲ್ಲಿದ್ದ ಸ್ಪೇನಿನವರಿಗೆ ಪ್ರಜಾಪ್ರತಿನಿಧಿಸಭೆ ಏರ್ಪಟ್ಟಾಗ ಸಂತೋಷಪಟ್ಟು ಆ ಸಂತೋಷ ಸೂಚಕವಾಗಿ ಕಲ್ಕತ್ತೆಯ ಪತ್ತನಭವನ (Town Hall) ನಲ್ಲಿ ಒಂದು ಭಾರೀ ಔತನಮಾಡಿ ಸಿದ್ದು, ನೇಪಲ್ಸಿನಲ್ಲಿ ಸ್ವಾತಂತ್ರ್ಯ ಪಕ್ಷದವರಿಗೆ ಅಪಜಯವಾದ ದುರ್ವಾರ್ತೆಯನ್ನು ಕೇಳಿ ದಾಗ ತನ್ನ ಸ್ನೇಹಿತರೊಂದಿಗೆ ಸಂಭಾಷಿಸುವುದಕ್ಕೆ ಕೂಡ ಇಷ್ಟವಿಲ್ಲದೆ ವಿಚಾರಗ್ರಸ್ತನಾಗಿ ದ್ದುದು, ಗ್ರೀಸ್ ದೇಶಕ್ಕೂ ತುರ್ಕಿ ದೇಶಕ್ಕೂ ಯುದ್ಧ ಒದಗಿದಾಗ ಗ್ರೀಕರ ಜಯವನ್ನು ಬಯಸುತ್ತಿದ್ದುದು, ಇಂಗ್ಲೆಂಡಿಗೆ ಪ್ರಯಾಣಮಾಡಿ ಹೊರಟಾಗ ಸಮುದ್ರಮಧ್ಯದಲ್ಲಿ ಕಾಣ ಬಂದ ಫ್ರಾನ್ಸಿನವರ ಹಡಗಿನಮೇಲಣ ಸ್ವಾತಂತ್ರ್ಯ ಸೂಚಕ ಧ್ವಜವನ್ನು ನೋಡಿ, ಅವರನ್ನು ಅಭಿನಂದಿಸಲಿಕ್ಕೆ ಹೋದುದು, ಈ ಮೊದಲಾದ ಕಾರ್ಯಗಳೆಲ್ಲವೂ ಪೂರ್ವೋಕ್ತವಿಷಯಗ ಳಿಗೆ ಪ್ರಬಲದೃಷ್ಟಾಂತಗಳಾಗಿವೆ.

ಪ್ರಾಕೃತಿಕ ವಿಷಯಗಳಲ್ಲೆಲ್ಲಾ ರಾಮಮೋಹನನು ಎಂತಹ ಮಹೋನ್ನತಿಯನ್ನು ಹೊಂದಿದ್ದನೋ ಹಾಗೆಯೇ ಭಗವದ್ಭಕ್ತಿವಿಷಯದಲ್ಲಿಯೂ ಕೂಡ ಅಗ್ರಗಣ್ಯನಾಗಿದ್ದನು. ಒಂದೊಂದುವೇಳೆ ಭಗವಂತನ ಸ್ವಭಾವಸಿದ್ಧಗಳಾದ ವರ್ಣನೆಗಳೊಂದಿಗೆ ಕೂಡಿದ ಹಾಡುಗ

ಳನ್ನು ಯಾರಾದರೂ ಪ್ರಾರ್ಥನಾಮಂದಿರದಲ್ಲಿ ಕರ್ಣಾನಂದ ಉಂಟಾಗುವಂತೆ ರಾಗಲಯ ಸಹಿತವಾಗಿ ಹಾಡಿದರೆ ಅದಕ್ಕೆ ತುಂಬಾ ಸಂತೋಷಿಸಿ ಪರವಶನಾಗಿ ಆ ಹಾಡುಗಾರನನ್ನು ಅಪ್ಪಿಕೊಳ್ಳುತ್ತಲಿದ್ದನು.

ನಂಬುಗೆಯೆಂಬುದು ದೊಡ್ಡ ಪದಾರ್ಥವು. ಹದಿನಾಲ್ಕು ವರುಷದ ಪ್ರಾಯದ ಮೊದಲುಗೊಂಡು ಐವತ್ತೊಂಬತ್ತನೆಯ ವರುಷ ವಯಸ್ಸಿನವರೆಗೆ ಈತನು ಎಷ್ಟು ಕಷ್ಟಗಳನ್ನು ಅನುಭವಿಸಿದರೂ, ಎಂತಹ ತೊಂದರೆಗಳಿಗೆ ಸಿಲುಕಿದರೂ, ಅವುಗಳಿಗೆ ಸ್ವಲ್ಪವೂ ಹೆದರದೆ ಕಾರ್ಯಾಚರಣೆಯಲ್ಲಿ ತುಂಬ ದೃಢಸಂಕಲ್ಪನಾಗಿದ್ದನು. ಅದ್ವಿತೀಯನಾದ ಪರಮೇಶ್ವರನಲ್ಲಿ ಆತನಿಗಿರುವ ದೃಢವಾದ ನಂಬಿಕೆಯೇ ಇದಕ್ಕೆ ಕಾರಣವು. ಬಾಲ್ಯದಿಂದ ಮರಣಕಾಲದ ತನಕ ತನ್ನ ಕಷ್ಟಗಳಲ್ಲಿಯೂ ಸುಖಗಳಲ್ಲಿಯೂ ಆಪತ್ತುಗಳಲ್ಲಿಯೂ ರೋಗಾದಿಗಳಿಂದ ಪೀಡಿಸಲ್ಪಟ್ಟಿರುವಾಗಲೂ, ಆರೋಗ್ಯದಲ್ಲಿದ್ದಾಗಲೂ, ಸರ್ವಕಾಲಗಳಲ್ಲಿಯೂ ಅನಿಷ್ಕಳಂಕಪರಬ್ರಹ್ಮವನ್ನು ಮರೆಯದೆ, ಧ್ಯಾನಿಸುತ್ತಿದ್ದನು. ಈ ನಂಬಿಕೆಯೆಂಬುದು ಸ್ವದೇಶದಲ್ಲಿದ್ದಾಗಲೂ, ಪರದೇಶದಲ್ಲಿದ್ದಾಗಲೂ, ಸಮಾನವಾಗಿಯೇ ಇತ್ತು. ರಾಮಮೋಹನನು ಪಾಷಂಡಿಗಳನ್ನೂ ನಾಸ್ತಿಕರನ್ನೂ ನೋಡಿ ತುಂಬಾ ವಿಚಾರಪಡುತ್ತಿದ್ದನು. ಆ ಕಾಲದಲ್ಲಿ ಕಲ್ಕತ್ತಾಪಟ್ಟಣದಲ್ಲಿ ಈ ತೆರದವರು ಅನೇಕರಿದ್ದರು. ಆದುದರಿಂದ ಅವರನ್ನು ನೋಡಿದಾಗಲೆಲ್ಲಾ ಧರ್ಮಸಹಾಯವಿಲ್ಲದಿದ್ದರೆ ಒಂದು ನಿಮಿಷಕಾಲವಾದರೂ ಸಾರ್ಥಕವಾಗಲರಿಯದ ಮನುಷ್ಯಜೀವಕ್ಕೆ ಈ ದುರ್ಮಾರ್ಗದ ಸಹವಾಸವು ಪರಮಾರ್ಥವಿಘಾತಹೇತುವೆಂದು ಭಯಪಡುತಿದ್ದನು. ಒಂದಾವೃತ್ತಿ ಈತನ ಶಿಷ್ಯರಲ್ಲಿ ಒಬ್ಬನು ಒಬ್ಬನಾಸ್ತಿಕನ ವಿಷಯವಾದ ಸಂಭಾಷಣದಲ್ಲಿ ಇಂಗ್ಲೀಯಭಾಷೆಯಲ್ಲಿ ಹೇಳುತ್ತ 'ಮೊದಲಲ್ಲಿ ಈತನು (ತೀಸ್ಟ) ಆಸ್ತಿಕನಾಗಿದ್ದನು. ಆದರೂ ಈಗ (ಏತೀಸ್ಟ) ನಾಸ್ತಿಕನಾಗಿರುವನು' ಎಂದನು. ಈ ಮಾತಿಗೆ ರಾಮಮೋಹನನು ಕಿಲುನಗೆ ನಕ್ಕು ಇನ್ನೂ ಕೆಲವು ದಿನಗಳಿಗೆ ಆತನು (ಬೀಸ್ಟ್) ಪಶುವಾಗಿ ಮಾರ್ಪಡುವನೆಂದು ಶಬ್ದಾಲಂಕಾರ ಒದಗುವಹಾಗೆ ಪ್ರತ್ಯುತ್ತರವಿತ್ತನು.

ಆ ಕಾಲದಲ್ಲಿ ರಾಮಮೋಹನನಿಗೆ ಠಾಕೂರ್ ಪ್ರಸನ್ನಕುಮಾರ, ಎಂಬ ಸ್ನೇಹಿತನಿದ್ದನು. ಆತನು ಕಲ್ಕತ್ತಾಪಟ್ಟಣದ ಹತ್ತಿರ ಇರುವ ಒಂದು ಹಳ್ಳಿಯ ನಿವಾಸಿ. ಅವನು ಆಗಾಗ ರಾಮಮೋಹನನೊಡನೆ ಧರ್ಮವನ್ನು ಕುರಿತು ಹಲವು ಬಗೆಗಳಲ್ಲಿ ಪ್ರಶ್ನೆಗಳನ್ನು ಮಾಡಿ ತೃಪ್ತಿಕರವಾದ ಉತ್ತರಗಳನ್ನು ಪಡೆಯುತ್ತಿದ್ದನು. ಆತನ ಸ್ವಾಭಾವಿಕವಾದ ಪಾಂಡಿತ್ಯಕ್ಕೂ ಧರ್ಮಸಂದೇಹಗಳನ್ನು ತಿಳಿದುಕೊಳ್ಳುವುದರಲ್ಲಿ ಇರುವ ಆಸಕ್ತಿಗೂ ರಾಮಮೋಹನನು ಸಂತೋಷಿಸಿ, ಆತನನ್ನು 'ಹಳ್ಳಿಯ ತತ್ವಜ್ಞಾನಿ' ಎಂಬ ಹೆಸರಿನಿಂದ ಕರೆಯುತ್ತಾಬಂದನು.

ಮರ್ಯಾದೆಯ ಕುಟುಂಬಕ್ಕೆ ಸೇರಿದ ಬಡಬ್ರಾಹ್ಮಣನೊಬ್ಬನು ಪ್ರತಿದಿನವೂ ಪ್ರಾರ್ಥನೆಯಕಾಲಕ್ಕೆ ಸರಿಯಾಗಿ, ಮಂದಿರಕ್ಕೆ ಬಂದು ಅಲ್ಲಿ ಬೋಧಿಸಲ್ಪಡುವ ಉಪದೇಶಗಳನ್ನು ಕೇಳುತ್ತಲಿದ್ದನು. ಒಂದುವೇಳೆ ಇವನು ತನಗೆ ಧರಿಸಲು ಒಳ್ಳೆಯ ಉಡುಪುಗಳಿಲ್ಲವೆಂದು ಕೆಲವುದಿನಗಳ ತನಕ ಮಂದಿರಕ್ಕೆ ಬರಲಿಲ್ಲ. ರಾಮಮೋಹನನು ಈ ವಿಷಯವನ್ನು

ಕೇಳಿ, ರಾಮಮೋಹನನು ಆ ಬ್ರಾಹ್ಮಣನ ಸಂಗಡ ''ನಾವು ಒಳ್ಳೇ ವಸ್ತ್ರಗಳು ಮೈಮೇಲೆ ಇಲ್ಲದ ಮಾತ್ರದಿಂದ ಯೋಗ್ಯನಾದವನನ್ನು ಗುರುತು ಹಿಡಿಯಲಾರೆವೆಂದು ಮಂದಿರಕ್ಕೆ ಬಾರದೆ ಉಳಿದುಕೊಂಡಿರೇನು ?'' ಎಂದು ಕೇಳಿದನು.

ಒಂದು ಕಡೆಯಲ್ಲಿ ಪ್ರತಿಪಕ್ಷದವರಿಂದ ಉಂಟಾಗುತಿದ್ದ ಕಷ್ಟಗಳನ್ನೂ ಒಂದೊಂದು ವೇಳೆ, ಹಣವಿಲ್ಲದುದರ ದೆಸೆಯಿಂದ ಉಂಟಾಗುತಿದ್ದ ತೊಂದರೆಗಳನ್ನೂ ಒಂದೊಂದುವೇಳೆ, ರಾಮಮೋಹನನು ಅನುಭವಿಸಬೇಕಾಗಿ ಬರುತ್ತಲಿತ್ತು. ಕಲ್ಕತ್ತೆಗೆ ಬಂದಮೇಲೆ ಬ್ರಹ್ಮ ಜ್ಞಾನ ಪ್ರಚಾರಕ್ಕೆ ಸ್ವಂತವಾಗಿ ಸ್ಥಾಪಿಸಿದ ಇಂಗ್ಲೀಷ್ ಪಾಠಶಾಲೆಗೂ, ವಿವಿಧ ಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ಬರೆದು ಮುದ್ರಿಸುವುದಕ್ಕೂ ಬಹುದ್ರವ್ಯ ವೆಚ್ಚವಾಯಿತು. ವಿದ್ಯೆ ಯಾದರೂ, ನಾಗರಿಕತೆಯಾದರೂ ಲೇಶವೂ ಇಲ್ಲದ ಆ ದಿನಗಳಲ್ಲಿ ಈತನ ಗ್ರಂಥಗಳಿಗೆ ಬೆಲೆ ಕೊಟ್ಟು ಕೊಳ್ಳತಕ್ಕವರು ಯಾರಿದ್ದರು ?

ಇದರಿಂದ ತನ್ನ ಉಪದೇಶಗಳನ್ನೂ, ತನ್ನ ಅಭಿಪ್ರಾಯಗಳನ್ನೂ ಜನಗಳಲ್ಲಿ ವ್ಯಾಪನೆ ಗೊಳಿಸುವುದೇ ಮುಖ್ಯೋದ್ದೇಶವಾಗಿ ಉಳ್ಳ, ರಾಮಮೋಹನನು ವೆಚ್ಚದ ವಿಷಯವನ್ನು ಕುರಿತು ಸ್ವಲ್ಪ ಮಾತ್ರವೂ ಆಲೋಚಿಸದೆ, ಸಹಗಮನ ನಿಷೇಧನೇ ಮೊದಲಾದ ಸರ್ವಜನೋ ಪಯೋಗಕರಗಳಾದ ಕಾರ್ಯಗಳನ್ನು ಕುರಿತು ಪ್ರಜೆಗಳೆಲ್ಲರಿಗೂ ತಿಳಿಯಬೇಕಾದ ಮುಖ್ಯ ಗ್ರಂಥಗಳನ್ನೂ ಸಾವಿರಗಟ್ಟಳೆಯಾಗಿ ಅಚ್ಚು ಹಾಕಿಸಿ, ಅವುಗಳನ್ನು ಉಚಿತವಾಗಿ ಜನರಲ್ಲಿ ಹಂಚಿದನು. ಒಂದೊಂದು ಪುಸ್ತಕವನ್ನು ಒಂದೊಂದು ಸಾರಿ ಮಾತ್ರವಲ್ಲದೆ ಎರಡು ಮೂರು ಸಾರಿ ಕೂಡ ಮುದ್ರಿಸಿ ಬೆಲೆಯಿಲ್ಲದೆ ಕೊಟ್ಟು ಬಿಡುತ್ತಿದ್ದನು. ಇಷ್ಟುಮಾತ್ರವ ಲ್ಲದೆ ತನ್ನ ಉಪದೇಶದಿಂದ ಯೂನಿಟೇರಿಯನ್ ಮತದಲ್ಲಿ ಸೇರಿ ಮೊದಲಿನ ಉದ್ಯೋಗವನ್ನು ಪರಿತ್ಯಜಿಸಿದ ಆಡಂ ದೊರೆಯ ಜೀವನಕ್ಕೋಸ್ಕರ ಹಲವು ಸಾರಿ ದ್ರವ್ಯಸಹಾಯ ಮಾಡು ತ್ತಾ ಬಂದನು. ಇದಲ್ಲದೆ ಬಡಬಗ್ಗರಿಗೆ ಉಪಕರಿಸಿದ ಧರ್ಮಗಳು ಲೆಕ್ಕವಿಲ್ಲದೆ ಇದ್ದುವು. ಈ ವಿಷಯದಲ್ಲಿ ಬಾಬೂದೇವೇಂದ್ರನಾಥಠಾಕೂರವರು ಹೀಗೆ ಬರೆದಿರುವರು. ಬ್ರಾಹ್ಮ ಧರ್ಮಪ್ರಚಾರಕ್ಕೆ ಆತನು ಮಾಡಿದ ವಿಶ್ವಪ್ರಯತ್ನಗಳ ಮೂಲಕ ಆತನ ಭಾಗ್ಯವೆಲ್ಲ ನಶಿಸಿತು. ವೃತ್ತಿಯು ಕೆಟ್ಟುಹೋಯಿತು. ಕೊನೆಗೆ ಡೆಹಲಿಯ ರಾಜನಿಗೆ ಅಧೀನನಾಗಿ ಆತನು ಕೊಟ್ಟ ವೇತನದಿಂದ ಜೀವನ ಮಾಡಬೇಕಾಗಿ ಬಂದಿತು. ಸಹಗಮನನಿಷೇಧಸಿದ್ಧಾಂತಸುಸ್ಥಿರತ್ವ ಕ್ಕಾಗಿಯೂ, ಹಿಂದೂದೇಶೀಯರ ಕ್ಷೇಮಾಭಿವೃದ್ಧಿಗಾಗಿಯೂ, ಪಾಶ್ಚಾತ್ಯದೇಶಕ್ಕೆ ಹೋಗಿ ಅಲ್ಲಿ ತುಂಬ ಕಷ್ಟಪಟ್ಟು ಬೇಸರಗೊಳ್ಳದೆ ರಾತ್ರಿಯೂ ಹಗಲೂ ಕೆಲಸಮಾಡಿ ತನ್ನ ದೇಹಾ ರೋಗ್ಯವನ್ನು ಕೆಡಿಸಿಕೊಂಡು ವ್ಯಾಧಿಗ್ರಸ್ತನಾದನು. ಅಲ್ಲಿಗೆ ಡೆಹಲಿಯ ರಾಜನಿಂದ ಸಹಾಯಸಿಕ್ಕದೆ ಹೋಯಿತು. ಅಗತ್ಯವಾದ ವೆಚ್ಚಗಳಿಗೆ ಸಾಕಾದಷ್ಟು ಹಣವಿಲ್ಲದೆ ಹೋದು ದು ಸಹ ಆತನ ದೇಹವನ್ನು ವ್ಯಾಧಿಪೀಡಿತನಾಗಿ ಮಾಡಲಿಕ್ಕೆ ಒಂದು ಕಾರಣವಾಗಿತ್ತು. ಆ ಮಹಾತ್ಮನು ಈ ಕಷ್ಟಗಳನ್ನೆಲ್ಲಾ ನಮ್ಮ ಭವಿಷ್ಯತ್ಸುಖಕ್ಕೋಸ್ಕರವೇ ಅನುಭವಿಸಿದನೆಂದು

ತಿಳಿದು ಆತನ ವಿಷಯದಲ್ಲಿ ಕೃತಜ್ಞನಾಗಿರತಕ್ಕದ್ದು ಹಿಂದೂದೇಶಸ್ಥನಾದ ಪ್ರತಿಯೊಬ್ಬ ಮನುಷ್ಯನಿಗೂ ಕರ್ತವ್ಯವಾಗಿರುವುದು.

ಧೈರ್ಯವೆಂದರೆ ಈತನದೇ ಮಹಾಧೈರ್ಯವು. ಇಂಗ್ಲೆಂಡಿಗೆ ಹೊರಡುವುದಕ್ಕಾಗಿ ಪ್ರಯಾಣಮಾಡುವಾಗ ತನ್ನ ಕಿರಿಯಮಗನಾದ ರಾಮಪ್ರಸಾದನೆಂಬ ಬಾಲಕನು ಅಪ್ಪಾ ! ನಮ್ಮನ್ನು ಬಿಟ್ಟು ಎಲ್ಲಿಗೆ ಹೊರಡುವೆ ? ಎಂದು ಕನಿಕರವುಂಟಾಗುವಂತೆ ಅಳತೊಡಗಿದನು. ಇದರಿಂದ ಅವನ ಮನಸ್ಸು ಸ್ವಲ್ಪವಾದರೂ ಚಲಿಸಲಿಲ್ಲ. ತುಂಬಾ ಧೈರ್ಯದಿಂದ ಸಾಕು ಸಾಕು ! ಗಂಡಸಾಗಿ ಹುಟ್ಟಿ ಅಳುವೆಯಾ ? ಎಂದು ರಾಮಮೋಹನನು ಆ ಬಾಲಕನನ್ನು ಸಂತೈಸಿದನು.

ಈತನು ಸ್ವಾತಂತ್ರ್ಯವನ್ನು ಬಹಳವಾಗಿ ಪ್ರೀತಿಸುತ್ತಾ ಅಲ್ಪವಿಷಯಗಳನ್ನು ತಿರಸ್ಕರಿಸುವ ಸ್ವಭಾವವುಳ್ಳವನಾಗಿದ್ದನು. ಕಲ್ಕತ್ತಾಪಟ್ಟಣದಲ್ಲಿರುವ ಕ್ರೈಸ್ತಮತಬೋಧಕರಿಗೆಲ್ಲಾ ಮುಖ್ಯಸ್ಥನಾಗಿದ್ದ ಒಬ್ಬ ಆಂಗ್ಲೇಯನು ಕ್ರಮಕ್ರಮವಾಗಿ ರಾಮಮೋಹನನ ಸ್ನೇಹವನ್ನು ಸಂಪಾದಿಸಿ ಆತನಿಗೆ ಘನತೆಯನ್ನಿತ್ತು ತನ್ನ ಮತಕ್ಕೆ ಸೇರಿಸಿಕೊಳ್ಳಬೇಕೆಂದು ಪ್ರಯತ್ನಿಸಿದನು. ರಾಮಮೋಹನನು ಈ ವಿಷಯವನ್ನು ತಿಳಿದು ಆತನ ಅಯೋಗ್ಯತೆಗೆ ಅಸಹ್ಯವನ್ನು ತೋರ್ಪಡಿಸುತ್ತಾ ತದನಂತರ ಯಾವಾಗಲೂ ಅವನ ದರ್ಶನವನ್ನು ಅಪೇಕ್ಷಿಸದೆ ತಿರಸ್ಕರಿಸಿದನು. ಈತನ ಹೃದಯವು ಸ್ವಭಾವವಾಗಿ ತುಂಬಾ ಧೈರ್ಯವಾಗಿಯೂ ಸ್ಥೈರಣೆಯುಳ್ಳದ್ದಾಗಿಯೂ ಇತ್ತು. ಒಂದುಸಾರಿ ಕಲ್ಕತ್ತೆಯಲ್ಲಿರುವ ಭವಾನೀಚರಣ, ನೀಲಮುನಿ ಎಂಬಿಬ್ಬರು ಬುದ್ಧಿಹೀನರು ರಾಮಮೋಹನನಿಗೆ 'ಸುಖವೂ ಕಷ್ಟವೂ ಪ್ರಾಪ್ತವಾದಾಗ ಆತನಿಗೆ ಸಂತೋಷವಿಷಾದಗಳುಂಟಾಗುವವೊ ? ಇಲ್ಲವೊ ? ಆತನ ಬ್ರಹ್ಮಜ್ಞಾನವನ್ನು ಪರೀಕ್ಷಿಸೋಣ' ಎಂದು ಆಲೋಚಿಸಿ ಕೃಷ್ಣನಗರದಲ್ಲಿ ಉದ್ಯೋಗದಲ್ಲಿದ್ದ ನಿನ್ನ ಮಗನು ಮೃತಿಹೊಂದಿದನೆಂದು ಒಂದು ಪತ್ರವನ್ನು ಬರೆದು ಅದನ್ನು ರಾಮಮೋಹನನ ಕೈಗೆ ಕೊಡಬೇಕೆಂದು ಒಬ್ಬ ಆಳನ್ನು ನೇಮಿಸಿ, ಆ ಮನುಷ್ಯನು ಈತನ ಹತ್ತಿರಕ್ಕೆ ಬರುವುದಕ್ಕೆ ಮುಂಚೆಯೇ ತಾವು ಈತನ ಬಳಿಯಲ್ಲಿ ಹೋಗಿ ಕುಳಿತಿದ್ದರು. ತರುವಾಯ ಆ ಆಳು ತಾನು ಕೃಷ್ಣನಗರದಿಂದ ಬಂದೆನೆಂದು ಹೇಳಿ ಆ ಪತ್ರವನ್ನು ತಂದುಕೊಟ್ಟನು. ಆ ಪತ್ರವನ್ನೋದಿಕೊಂಡು ತನ್ನಲ್ಲಿ ತಾನು ಏನು ಯೋಚಿಸಿದನೋ ತಿಳಿಯದು. ಆಮೇಲೆ ಐದು ನಿಮಿಷಗಳ ತನಕ ಆಕಾಶದಕಡೆ ನೋಡುತ್ತಿದ್ದು ಮರಳಿ ಎಂದಿನಂತೆ ತಾನು ಅದುವರೆಗೆ ಮಾಡುತ್ತಿದ್ದ ಕೆಲಸವನ್ನೇ ಮಾಡುತ್ತಾ ಕುಳಿತುಕೊಂಡನು. ಈ ಅಸಮಾನ್ಯಸ್ಥಿತಿಯನ್ನು ಕಣ್ಣಾರೆ ಕಂಡ ಆ ಪರೀಕ್ಷಕರಿಬ್ಬರೂ ಈತನು ಸಾಧಾರಣ ಪುರುಷನಲ್ಲವೆಂದು ತಿಳಿದು ಆತನ ಪಾದಗಳಮೇಲೆ ಬಿದ್ದು ತಮ್ಮ ತಪ್ಪುಗಳನ್ನು ಬಿನ್ನವಿಸಿ ಕ್ಷಮೆ ಬೇಡಿಕೊಂಡರು.

ಸಂಘಸಂಸ್ಕರಣವಿಷಯದಲ್ಲಿ ಈತನ ಮನಸ್ಸಿನಲ್ಲಿ ದೃಢಸಂಕಲ್ಪವೇ ಇರುತ್ತಿದ್ದಿತು. ಈತನು ಮನೋವಾಕ್ಕಾಯಕರ್ಮಗಳಲ್ಲಿಯೂ ಏಕರೀತಿಯಾಗಿಯೇ ಇದ್ದನು. ವಿಗ್ರಹಾರಾಧನೆಯು ತನಗೆ ಸಮ್ಮತವಲ್ಲವಾದುದರಿಂದ ಎಂತಹ ಸ್ನೇಹಿತರಮನೆಗಳಲ್ಲಿಯೂ ಉತ್ಸವಾದಿ

ಗಳೇನು ನಡೆದರೂ ತಾನು ಅದರಲ್ಲಿ ಸೇರದೆ ಇದ್ದನು. ಮಹರ್ಷಿದೇವೇಂದ್ರಠಾಕೂರರು "ನಮ್ಮ ಚಿಕ್ಕಂದಿನಲ್ಲಿ ನಮ್ಮ ಮನೆಯಲ್ಲಿಯಾಗಲಿ ಯಾವುದೋ ಒಂದು ವ್ರತವನ್ನು ಮಾಡುತ್ತಿದ್ದುದರಿಂದ ನಮ್ಮ ತಂದೆಯ ಅಪ್ಪಣೆಯಂತೆ ನಾನು ಆತನನ್ನು ಕರೆಯಲಿಕ್ಕೆ ಹೋದೆನು. ಆ ಮಹಾತ್ಮನು ನನ್ನ ಆಮಂತ್ರಣವನ್ನು ಅಂಗೀಕರಿಸಲಿಲ್ಲ" ಎಂದು ಹೇಳಿರುವರು.

ಈತನ ವಾದಗಳು ಅತ್ಯದ್ಭುತವಾದವುಗಳು. ದೊಡ್ಡದೊಡ್ಡ ಆಂಗ್ಲೇಯ ವಿದ್ವಾಂಸರು ಸುದಾ ವಿವಾದಗಳಲ್ಲಿ ನಿರುತ್ತರರಾಗಿ 'ಸರಿ ಸರಿ, ಒಳ್ಳೇದು, ಈ ವಿಷಯವನ್ನು ಕುರಿತು ನಾವು ಸಾವಕಾಶವಾಗಿ ಆಲೋಚನೆಮಾಡಿಹೇಳುವೆವು' ಎಂದು ತತ್ಕಾಲೋಚಿತವಾಗಿ ಮಾತನಾಡಿ ತಪ್ಪಿಸಿಕೊಂಡು ಹೋಗುತ್ತಿದ್ದರು.

ರಾಮಮೋಹನನು ಯಾವಜಾತಿಯಲ್ಲಿ ಯಾವವಸ್ತುವು ಉತ್ತಮವಾಗಿರುವುದೋ ಅದನ್ನು ಸ್ವೀಕರಿಸುತ್ತಿದ್ದನು. ಮಹಮ್ಮದೀಯರ ವಸ್ತ್ರಾದ್ಯಲಂಕಾರಗಳಲ್ಲೆಲ್ಲಾ ಪಗಡಿಯೂ, ತಲೆಯಪಾಗೂ, ಅಂಗರೇಖೆಯೆಂಬ ಜೋಗೆಯೂ, ಆಂಗ್ಲೇಯ ಪದ್ಧತಿಗಳಲ್ಲಿ ಗೃಹಾಲಂಕಾರವೂ ಇವುಗಳನ್ನು ಅಂಗೀಕರಿಸಿ ಪೂರ್ವಪದ್ಧತಿಯಾದ ಬಂಗಾಳಿ ಆಚಾರಗಳಲ್ಲಿ ಇವೆರಡನ್ನೂ ಬೆರಸಿ, ತನ್ನ ಜೀವಿತಾಂತದವರೆಗೂ ಅವುಗಳನ್ನೇ ಅವಲಂಬಿಸುತ್ತಿದ್ದನು.

ತನುವಿಂದಾರೋಗ್ಯದಿನಾ |
ಘನವಿದ್ಯೆಯನುತ್ತಮೋತ್ತಮಜ್ಞಾನದೆ ತಾ ||
ನನುಪಮನೆನಿಸಿಯೆ ಧರ್ಮದ |
ನನುಗೊಳಿಸಿದಮಹಿಮನವನೊಳಿಲ್ಲಂ ಲೋಕಂ ||

# ಎಂಟನೆಯ ಪ್ರಕರಣ.

## ರಾಜಾರಾಮಮೋಹನರಾಯರ ಮತ.

ರಾಜಾರಾಮಮೋಹನರಾಯರ ಮರಣಾನಂತರ ಆತನನ್ನು ಕುರಿತು ಹಿಂದುಗಳಲ್ಲಿ ವೇದಾಂತಿಗಳು ವೇದಾಂತಿಯೆಂತಲೂ, ಕ್ರಿಸ್ತಿಯರು ಕ್ರೈಸ್ತವನೆಂತಲೂ, ಮುಸಲ್ಮಾನರು ಮಹಮ್ಮದೀಯನೆಂತಲೂ ಹೇಳುತ್ತಿದ್ದರು. ಈ ಚರ್ಚೆಯೆಂಬುದು ಕೆಲವು ಮತಗಳವರಲ್ಲಿ ಈಗಲೂ ಜೀವಿಸುತ್ತಲೇ ಇರುವುದು. ಆದರೆ ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶೆಮಾಡಿ ನೋಡಿದರೆ ನಾವು ಸುಲಭವಾಗಿ ಆತನ ಹೃದಯದಲ್ಲಿದ್ದ ಅಭಿಪ್ರಾಯಗಳಿಗೆ ಸಂಬಂಧಿಸಿದ ನಿಶ್ಚಯಮತವಾವುದೋ ಅದನ್ನು ತಿಳಿದುಕೊಳ್ಳಬಹುದು. ಆದುದರಿಂದ ಇಲ್ಲಿ ಆ ವಿಷಯವಾಗಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ.

೧. ಈತನು ಈ ವೇದಾಂತಸಿದ್ಧಾಂತಗಳನ್ನು ಅಂಗೀಕರಿಸುವ ವೇದಾಂತಿಯಲ್ಲವೆಂದು ಸುಲಭವಾಗಿ ಧೃಢಪಡಿಸಬಹುದು. ಈ ದೇಶದಲ್ಲಿ ಇಂಗ್ಲೀಷು ಸ್ಕೂಲುಗಳನ್ನೇರ್ಪಡಿಸುವುದಕ್ಕೆ ರಾಜಪ್ರತಿನಿಧಿಯಾದ ಅಂಹರಸ್ಟಿಗೆ ಈತನು ಬರೆದ ವಿಜ್ಞಾಪನಾಪತ್ರದಿಂದ ಈತನು ವೇದಾಂತಾದಿ ಶಾಸ್ತ್ರಗಳನ್ನು ಸತ್ಯವೆಂದು ನಂಬತಕ್ಕವನಲ್ಲನೆಂದು ಸ್ಪಷ್ಟವಾಗಿ ತಿಳಿಯಬರುವುದು. ಮತ್ತು ಈ ವಿಜ್ಞಾಪನವನ್ನು ನೋಡಿದ ತರುವಾಯ ಯಾರಾಗಲಿ ರಾಮಮೋಹನನು ವೇದಾಂತವೇ ಮೊದಲಾದ ಶಾಸ್ತ್ರಗಳೆಲ್ಲವೂ ಈಶ್ವರನಿರ್ಮಿತಗಳೆಂದು ಒಪ್ಪಿಕೊಂಡಿದ್ದನೆಂದು ಹೇಳಲಾರರು.

ಮೇಲೆ ಹೇಳಿದ ವಿಜ್ಞಾಪನೆಯಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಈ ಕೆಳಗಿನ ವಾಕ್ಯಗಳು ಬರೆಯಲ್ಪಟ್ಟಿವೆ. "ನ್ಯಾಯ, ಮೀಮಾಂಸಾ, ವೇದಾಂತಶಾಸ್ತ್ರಗಳು ವಿವಿಧ ಮನೋವಿಕಲ್ಪಗಳನ್ನುಂಟುಮಾಡುವ ಅಭಿಪ್ರಾಯಗಳಿಂದ ತುಂಬಿವೆ. ಇದರ ದೆಸೆಯಿಂದ ಆ ಗ್ರಂಥಗಳನ್ನೇ ಪ್ರತ್ಯೇಕವಾಗಿ ಓದಿದರೆ ಮನುಷ್ಯನಿಗೆ ನಿಜವಾದ ಲಾಭವುಂಟಾಗಲಾರದೆಂಬುದು ನಿಶ್ಚಯ. ಅವುಗಳಲ್ಲಿ ವಿಶೇಷವಾಗಿ ಪರಮಾತ್ಮನೊಂದಿಗೆ ಜೀವಾತ್ಮನಿಗೆ ಇರುವ ಸಂಬಂಧವೆಂಥದು ? ಜೀವಾತ್ಮನು ಪರಮಾತ್ಮನಲ್ಲಿ ಹೇಗೆ ಐಕ್ಯವಾಗುವನು ? ವೇದಮಂತ್ರಗಳ ಸ್ವರೂಪವು ಯಾವುದು ? ಅವುಗಳ ಬಲವೆಂತಹದು ? ಮತ್ತು ವೇದಮಂತ್ರಗಳಿಂದ ಪಶುವಿಶಸನವನ್ನು ಮಾಡುವ ಪಾಪವು ಹೇಗೆ ಹೋಗಬಲ್ಲದು ? ಇಂತಹ ವಾಕ್ಯಗಳೇ ಬರೆಯಲ್ಪಟ್ಟಿರುವವು. ಆದಕಾರಣ ಇವುಗಳನ್ನೋದುವುದರಿಂದ ಮನುಷ್ಯನ ಸ್ವಭಾವಸಿದ್ಧವಾದ ಜ್ಞಾನಕ್ಕೆ ಸ್ವಲ್ಪವೂ ಅಭಿವೃದ್ಧಿಯುಂಟಾಗಲಾರದು. ನಿನ್ನ ಕಣ್ಣೆದುರಿಗೆ ಕಾಣಬರುತ್ತಿರುವ ಸೃಷ್ಟಿವೈಚಿತ್ರ್ಯಗಳೆಲ್ಲವೂ ಅಸತ್ಯವಾದದು. ನೀನು ಸತ್ಯವೆಂದು ಭಾವಿಸತಕ್ಕವುಗಳೆಲ್ಲವೂ ನಿಶ್ಚಯವಾಗಿಯೂ ಅಸತ್ಯವಾದುವು. ತಾಯಿ, ತಂದೆ, ಗುರುವು, ಬಂಧುಗಳು, ಸಹೋದರರು ಮೊದಲಾದ ದೇಹಸಂಬಂಧಿಗಳಲ್ಲಿನ ಮಮತ್ವವು ಭ್ರಮೆಯಿಂದ ಉಂಟಾಗಿದೆ. ಇವರೆಲ್ಲರೂ ನಿಜವಾಗಿಯೂ ಪ್ರೀತಿಸಲ್ಪಡತಕ್ಕವರಲ್ಲವು. ಆದುದರಿಂದ ಸಾಧ್ಯವಾದಷ್ಟು ತ್ವರೆಯಲ್ಲಿ ಇವರಲ್ಲಿನ ಮಮತೆಯನ್ನೆಲ್ಲ ಬಿಟ್ಟುಬಿಟ್ಟು, ಗೃಹಸ್ಥಮಾರ್ಗವನ್ನು ತೊರೆದು, ಪ್ರಪಂಚ ಸೌಖ್ಯಗಳನ್ನು ಸಂನ್ಯಸಿಸುವುದೇ ಮನುಷ್ಯನಿಗೆ ಕ್ಷೇಮಕರವಾದುದು" ಎಂದು ಬರೆಯಲ್ಪಟ್ಟಿರುವ ಗ್ರಂಥಗಳನ್ನೋದುವ ಬಾಲಕರು ತಮ್ಮ ಭಾವಿಜೀವಿತವು ಸಾರ್ಥಕವಾಗುವ ಹಾಗೆ ಗೃಹಸ್ಥಧರ್ಮಗಳನ್ನು ಹೇಗೆ ನಿರ್ವಹಿಸಲಾಪರು ? ಈ ಶಾಸ್ತ್ರಗಳು ತುಂಬ ಸತ್ಫಲಪ್ರದಾಯಕಗಳೆಂತಲೂ, ದೈವಕಲ್ಪಿತಗಳೆಂತಲೂ ರಾಮಮೋಹನನು ನಂಬಿದ್ದವನಾದರೆ ಆತನ ಮನಸ್ಸಿನಿಂದ ಇಂತಹ ವಾಕ್ಯಗಳು ಹೇಗೆ ಹೊರಡುತ್ತಿದ್ದವು ? ಈತನು ವೇದಾಂತಿಯೇ ಎಂದು ವಾದಿಸುವವರು ವಿಗ್ರಹಾರಾಧಕರ ಸಂಗಡ ಆ ಪದ್ಧತಿಯು ಗರ್ಹ್ಯವೆಂದು ವೇದಾಂತಗ್ರಂಥವಾಕ್ಯಗಳನ್ನು ತೋರಿಸಿ ವಾದಿಸುತ್ತಿದ್ದುದರಿಂದಲೇ ವೇದಾಂತಶಾಸ್ತ್ರಗಳನ್ನು ಅಂಗೀಕರಿಸಿದ್ದನೆಂಬುದಕ್ಕೆ ಪ್ರಬಲಸಾಕ್ಷ್ಯವೆಂದು ಹೇಳುವರು. ಆದರೆ ಕೇವಲ ಇದೊಂದು ಕಾರಣದಿಂದಲೇ ಆತನನ್ನು ವೇದಾಂತಿಯೆಂದು ಭಾವಿಸುವವರು ಈ ವಿಷಯದಲ್ಲಿ ತಪ್ಪಿಹೋಗುವರು. ಆತನು ಇತರ ಮತಗಳವರೊಂದಿಗೆ

ಚರ್ಚಿಸುವಾಗ ಅವಲಂಬಿಸುತ್ತಿದ್ದ ಮಾರ್ಗವನ್ನು ಅಂತವರು ತಿಳಿಸುಕೊಂಡಿರಲಾರರು. ಇತರ ಮತಗಳವರೊಂದಿಗೆ ಚರ್ಚಿಸತಕ್ಕವರಿಗೆ ಸಂಸ್ಕರಣ ಕ್ರಮವನ್ನು ತಿಳಿಸುವಾಗಲೆಲ್ಲ ರಾಮಮೋಹನನು ಅವರವರ ಪವಿತ್ರಗ್ರಂಥಗಳಿಂದಲೇ ಉಪಯುಕ್ತಗಳಾದ ವಾಕ್ಯಗಳನ್ನು ತೆಗೆದು ತೋರಿಸುತ್ತಿದ್ದನು ಹಿಂದುಗಳಿಗೆ ವೇದ ಮೊದಲಾದವುಗಳಿಂದಲೂ, ಕ್ರಿಸ್ತಿಯರಿಗೆ ಬೈಬಿಲಿನಿಂದಲೂ, ಮಹಮ್ಮದೀಯರಿಗೆ ಖುರಾನಿನಿಂದಲೂ, ವಾಕ್ಯಗಳನ್ನು ಆಧಾರವಾಗಿ ತೋರಿಸಿ ಒಪ್ಪಿಸುತ್ತಲಿದ್ದನು ಆದರೂ ಆತನು ಯಾವಾಗಲೂ ಯಾವ ಮತದವರೊಡನೆ ಯಾಗಲಿ ನಿಮ್ಮ ಮತಗ್ರಂಥವು ಅಸತ್ಯವೆಂದು ಹೇಳಿದುದೇ ಇಲ್ಲವು. ಈತನು ಹಿಂದುಗಳಿಗೆಲ್ಲಾ ತನ್ನ ಕುಶಾಗ್ರಬುದ್ಧಿಯಿಂದ ಸ್ಮೃತಿಗಳು, ತಂತ್ರಶಾಸ್ತ್ರಗಳು, ವೇದಗಳು, ಇವೆಲ್ಲವೂ ಒಬ್ಬ ದೇವನನ್ನೇ ಆರಾಧಿಸಬೇಕೆಂದು ಹೇಳುತ್ತಿರುವುದಾಗಿ ದೃಢಪಡಿಸಿದನು. ಹೀಗೆಯೇ ಕ್ರಿಸ್ತಿಯರ ಸಂಗಡ ಸುದಾ ಬೈಬಿಲ್ಲು ಅಸತ್ಯಗ್ರಂಥನೆಂದು ಹೇಳದೆ ಆ ಗ್ರಂಥಗಳಿಂದಲೇ ಪ್ರಮಾಣಗಳನ್ನು ತೆಗೆದುಕೊಂಡು ಮಾರ್ಷ್‌ಮನ್ನ್ ಮೊದಲಾದವರೊಂದಿಗೆ ಜೀಸಸ್ಸು ದೇವರಲ್ಲವೆಂತಲೂ, ಆತನ ರಕ್ತದಿಂದ ಪ್ರಜೆಗಳು ಮುಕ್ತಿಯನ್ನು ಪಡೆಯುವರೆಂಬ ಮಾತು ಅಸತ್ಯವೆಂತಲೂ, ಈ ವಾಕ್ಯಗಳು ಬೈಬಿಲಿನಲ್ಲಿ ಎಲ್ಲಿಯೂ ಇಲ್ಲವೆಂತಲೂ ಸಿದ್ಧಾಂತಪಡಿಸಿದನು. ಆದುದರಿಂದ ವಿಗ್ರಹಾರಾಧನೆಯೇ ಮೊದಲಾದ ಕಾರ್ಯಗಳನ್ನು ನಿರಸನಮಾಡುವುದಕ್ಕೆ ತೋರಿಸಿದ ವೇದಾಂತಾದಿ ಗ್ರಂಥಗಳಲ್ಲಿನ ದೃಷ್ಟಾಂತಗಳನ್ನೇ ಹಿಡಿದು ಆತನು ವೇದಾಂತಿಯೇ ಎಂದು ಹೇಳಲು ಸಾಹಸಗೊಂಡರೆ ಬೈಬಲಿನ ದೃಷ್ಟಾಂತಗಳನ್ನು ತೋರಿಸಿ ಚರ್ಚಿಸಿದುದಕ್ಕೆ ಆತನನ್ನು ಯೂನಿಟೇರಿಯನ್ ಮತದವನೆಂದು ಸುದಾ ಹೇಳಬೇಕಾಗಿ ಬರುವುದು. ಹಿಂದುಗಳು ಯಾವ ಹೇತುವನ್ನಾಧಾರಪಡಿಸಿಕೊಂಡು ಆತನನ್ನು ವೇದಾಂತಿಯೆಂದು ಹೇಳುತ್ತಿರುವರೋ ಆ ಹೇತ್ವಗಳೇ ಕ್ರಿಸ್ತಿಯರಿಗೆ ಸುದಾ ಈತನು ಕ್ರಿಸ್ತಿಯನೆಂದು ಹೇಳುವುದಕ್ಕೆ ಅವಕಾಶ ಕೊಡುತ್ತಿರುವವು. ಆದುದರಿಂದ ಮೇಲಿನ ವಿಷಯಗಳನ್ನು ತಿಳಿಯಲಪೇಕ್ಷಿಸುವವರು ಇವೆರಡೂ ಆತನ ಮತಗಳಲ್ಲವೆಂದು ಒಪ್ಪಿಕೊಳ್ಳದೇ ತೀರದು.

೨. ಕೆಲವರು ಬುದ್ಧಿಶಾಲಿಗಳು ಈತನು ತನ್ನ ಜೀವಿತಕಾಲದಲ್ಲಿ ಮೊದಲು ಕೆಲ ದಿನಗಳತನಕ ವೇದಾಂತಿಯಾಗಿದ್ದು ತರುವಾಯ ಕ್ರಿಸ್ತಿಯರ ಮತಗ್ರಂಥಗಳನ್ನೋದಿ ಕ್ರೈಸ್ತನಾದನೆಂದು ಹೇಳುವರು. ಆದರೆ ಈತನು ಹಿಂದೂಮತಧರ್ಮಗಳನ್ನೂ ಕ್ರಿಸ್ತಿಯರ ಮತಧರ್ಮಗಳನ್ನೂ ವಿಮರ್ಶಿಸಿ ಬರೆದ ಗ್ರಂಥಗಳು ತನ್ನ ಯೂನಿಟೇರಿಯನ್ ಮುದ್ರಾಕ್ಷರ ಶಾಲೆಯಿಂದ ಏಕಕಾಲದಲ್ಲಿಯೇ ಮುದ್ರಿಸಲ್ಪಟ್ಟು ಹೊರಡುತಿದ್ದುದರಿಂದ ಅಂತಹ ಊಹೆಗಳು ಸತ್ಯಗಳಾಗಲಾರವು. ಮಿಸ್ ಕಾರ್ಪೆಂಟರ್ ಎಂಬಾಕೆಯು ಬರೆದ ರಾಮಮೋಹನ ಚರಿತ್ರೆಯಲ್ಲಿ ಈತನು ಯೂನಿಟೇರಿಯನ್ ಮತವನ್ನು ಅಂಗೀಕರಿಸಲು ಕ್ರಿಸ್ತಿಯನೆಂದು ದೃಢಪಡಿಸುವುದಕ್ಕೆ ಕೆಲವು ದೃಷ್ಟಾಂತಗಳನ್ನು ಕೊಟ್ಟಿರುವಳು. ಆ ದೃಷ್ಟಾಂತಗಳೆಲ್ಲವೂ ರಾಮಮೋಹನನ ಪರಿಚಯವನ್ನುಳ್ಳ ಆಂಗ್ಲೇಯ ಮತಬೋಧಕರಿಂದಲೂ ಇಂಗ್ಲೀಷ್ ಅಧಿಕಾರಿಗಳಿಂದಲೂ ಬರೆಯಲ್ಪಟ್ಟವುಗಳಾಗಿಯೂ ಪ್ರಚುರಿಸಲ್ಪಟ್ಟವುಗಳಾಗಿಯೂ ಇರುವ ಉತ್ತರ

ಗಳು ವ್ಯಾಸಗಳೇ ಹೊರತು ರಾಮಮೋಹನನ ವಾಕ್ಯಗಳಲ್ಲವು. ಅವುಗಳನ್ನೆಲ್ಲ ಓದಿ ನೋಡಿದರೆ ಎಲ್ಲಿಯಾಗಲಿ ಈತನು ಯೂನಿಟೇರಿಯನ್ ಕ್ರಿಸ್ತಿಯನೆಂದು ಹೇಳಲಿಕ್ಕೆ ಆಧಾರಗಳು ಸಿಕ್ಕವು. ಜೀಸಸ್ ದೇವರ ಕುಮಾರನೆಂದು ರಾಮಮೋಹನನು ನಂಬಲಿಲ್ಲವೆಂತಲೂ ಜೀಸಸನು ದೇವರ ಮಹಾತ್ಮ್ಯವನ್ನು ಪ್ರಕಟಿಸಿ ಪಾಮರರನ್ನು ಭಕ್ತಿ ಪರವಶರನ್ನಾಗಿ ಮಾಡಿದಂತೆ ಮಾತ್ರವೇ ಒಪ್ಪಿಕೊಂಡಿರುವನೆಂತಲೂ ಪೂರ್ವೋಕ್ತಗಳಾದ ಉತ್ತರಗಳಿಂದಲೂ, ವ್ಯಾಸಗಳಿಂದಲೂ, ಕಾಣಬರುವುದು. ಆದರೆ ಇಷ್ಟು ಮಾತ್ರದಿಂದಲೇ ಆ ಮತಸ್ಥನಾದನೆಂದು ಹೇಳುವುದು ನ್ಯಾಯವಲ್ಲ. ಜೀಸಸನು ಮಹಾತ್ಮನೆಂದು ಒಪ್ಪಿಕೊಳ್ಳತಕ್ಕವರನೇಕರು ಈಗಲೂಕೂಡ ಬ್ರಹ್ಮಸಮಾಜದಲ್ಲಿದ್ದೇ ಇರುವರು. ಆದರೆ ಅವರಲ್ಲಿ ಒಬ್ಬರಾದರೂ ಕ್ರಿಸ್ತಿಯರಾಗಿಲ್ಲ. ರಾಮಮೋಹನನು ಎಲ್ಲಿಯಾದರೂ ತಾನು ಬೈಬಲ್ಲನ್ನು ದೇವರ ಸತ್ಯಗ್ರಂಥವೆಂದು ನಂಬಿರುವನೆಂದು ಹೇಳಿಲ್ಲ. ಮತ್ತು ಆತನಿಂದ ರಚಿಸಲ್ಪಟ್ಟ ಕ್ರಿಸ್ತಿಯರ ಮತವಿಷಯವಾದ ಗ್ರಂಥಗಳಲ್ಲಿಯಾದರೂ ತನ್ನ ಅಂತರಾತ್ಮಕ್ಕೆ ಇದು ಸತ್ಯಗ್ರಂಥವೆಂದು ತೋರುವುದಾಗಿ ಆತನು ಒಪ್ಪಿಕೊಂಡಂತೆ ಕಾಣಬರುವುದಿಲ್ಲ. ಮಿಸ್ ಕಾರ್ಪೆಂಟರು ತೋರಿಸಿರುವ ಉತ್ತರಗಳಿಂದಾಗಲಿ, ವ್ಯಾಸಗಳಿಂದಾಗಲಿ ಈ ವಿಷಯವು ದೃಢಪಡಿಸಲ್ಪಟ್ಟಿಲ್ಲ. ಇಂಗ್ಲೆಂಡಿನಲ್ಲಿ ಇದ್ದಾಗಲಾದರೂ ಅವರ ಮಾತನ್ನು ಕುರಿತು ತಾನು ಇಂಡಿಯಾದಲ್ಲಿದ್ದಾಗ ಹೇಳಿದ್ದಕ್ಕಿಂತ ಹೆಚ್ಚಾಗಿಯಾಗಲಿ ವಿರೋಧವಾಗಿಯಾಗಲಿ ಯಾವುದನ್ನೂ ಹೇಳಿದಂತೆ ಕಾಣಬಂದಿಲ್ಲ. ಆದುದರಿಂದ ಈತನು ಕ್ರೈಸ್ತಮತವನ್ನೇ ಸರ್ವೋತ್ಕೃಷ್ಟವಾದುದನ್ನಾಗಿ ಭಾವಿಸಿದ್ದನೆಂದು ಹೇಳಲಿಕ್ಕೆ ಅವಕಾಶವಿಲ್ಲ. ಮಿಸ್ ಕಾರ್ಪೆಂಟರು ಕೊಟ್ಟಿರುವ ಉದಾಹರಣೆಗಳು ಒಂದರಲ್ಲಿ ರಾಮಮೋಹನನು ಜೀಸಸು ಮಾಡಿದ ಅಮಾನುಷಚರ್ಯಗಳನ್ನೂ ಆತನು ಸತ್ತುಹೋದ ಮೂರನೇದಿನ ಮರಳಿ ಎದ್ದು ಬಂದುದನ್ನೂ ಒಪ್ಪಿಕೊಂಡಿರುವನೆಂದು ಬರೆದಿರುವಳು. ಆದರೆ ಈಕೆಯು ರಾಮಮೋಹನನ ಭಾವವನ್ನು ತಪ್ಪಾಗಿಗ್ರಹಿಸಿರಬೇಕೆಂದು ನಾವು ಯೋಚಿಸಿರುವೆವು.

ಸರ್ವಸಾಧಾರಣವಾಗಿ ಒಬ್ಬ ಮನುಷ್ಯನು ಒಂದುಸಾರಿ ಇತರರು ಏನು ಹೇಳಿದರೂ ಅದನ್ನು ತನ್ನ ಅಭಿಪ್ರಾಯವನ್ನನುಸರಿಸಿಯೇ ಹೇಳಿದನೆಂದು ಭ್ರಮಿಸುವುದು ಸ್ವಭಾವವು. ಆದುದರಿಂದ ರಾಮಮೋಹನನು ಯಾವಾಗಲಾದರೂ ಜೀಸಸನು ಹೇಳಿದ ನೀತಿಗಳನ್ನು ಉಪನ್ಯಾಸಮಾಡುತ್ತಾ ಆತನಲ್ಲಿ ಕ್ರಿಸ್ತಿಯರಿಗೆ ಉಂಟಾಗಿರುವ ನಂಬಿಕೆಗಳನ್ನೂ ಕುರಿತು ಹೇಳಿದಾಗ ಆ ವಾಕ್ಯಗಳು ಆತನ ನಂಬಿಕೆಯನ್ನು ಸೂಚಿಸತಕ್ಕವುಗಳೇ ಎಂದು ಈ ವಿದ್ಯಾವತಿಯು ಗ್ರಹಿಸಿರಬಹುದೆಂಬುದೇ ನಮ್ಮ ಅಭಿಪ್ರಾಯವು.

ಪ್ರಜೆಗಳೆಲ್ಲರೂ ತಮ್ಮತಮ್ಮ ಮತಗಳಲ್ಲಿನ ಮೂಢವಿಶ್ವಾಸಗಳಿಗೆ ಒಳಗಾಗಿ ಕೆಟ್ಟುಹೋಗುತ್ತಿರುವುದನ್ನು ಆ ದುರಾಚಾರಗಳನ್ನು ಸಂಸ್ಕರಿಸಿ ಅವರಿಗೆ ಒಳ್ಳೆಯ ಮಾರ್ಗಗಳನ್ನು ತೋರಿಸಲಿಕ್ಕೆ ಯತ್ನಿಸಿದ ರಾಮಮೋಹನನು ಆಯಾ ಜಾತಿಗಳವರಿಗೆ ಅವರವರ ಮತಗ್ರಂಥಗಳಿಂದಲೇ ಪ್ರಮಾಣಗಳನ್ನು ತೆಗೆದು ತೋರಿಸುತ್ತಲಿದ್ದುದು ಅವರಿಗೆ ನಂಬಿಕೆಯುಂಟಾಗುವುದಕ್ಕೇನೇ ಹೊರತು ತನ್ನ ಮತಕ್ಕೆ ಈ ಗ್ರಂಥಗಳು ಪ್ರಮಾಣವೆಂದು ತಿಳಿಸುವುದಕ್ಕಲ್ಲವು.

ಮತ್ತು ಇತರ ವಸ್ತುಗಳನ್ನು ಪೂಜಿಸದೆ ಪರಮೇಶ್ವರನನ್ನು ಮಾನಸಿಕವಾಗಿಯೇ ಧ್ಯಾನಿಬೇಕೆಂಬ ತನ್ನ ಅಭಿಪ್ರಾಯಗಳನ್ನು ಕೇವಲ ಮಾತುಗಳಿಂದಾಗಲಿ, ಇತರ ಮತಗ್ರಂಥಗಳಿಂದ ಎತ್ತಿ ತೆಗೆದ ಉದಾಹರಣೆಗಳನ್ನು ತೋರಿಸಿಯಾಗಲಿ ಹೇಳಿದರೆ ಪಾಮರರು ಅಂಗೀಕರಿಸಲಾರರೆಂದು ತಿಳಿದು ದೇವತೆಗಳ ಹೆಸರನ್ನಿಟ್ಟು ಬೊಂಬೆಗಳನ್ನು ಪೂಜಿಸವುದರಿಂದ ಮುಕ್ತಿಯು ಸಿಕ್ಕಲಾರದೆಂಬು ವೇದವೇದಾಂತಗಳೇ ಯಾವ ನಿರಾಕಾರಪರಬ್ರಹ್ಮವನ್ನು ಬೋಧಿಸುತ್ತದೆಯೋ ಅದೇ ಉಪಾಸನೆಗೆ ಯೋಗ್ಯವಾದುದೆಂತಲೂ, ಜೀವನಿಗೆ ಮುಕ್ತಿಯನ್ನು ಕೊಡತಕ್ಕದೆಂತಲೂ, ಹಿಂದೂ ಶಾಸ್ತ್ರಾಧಾರಗಳಿಂದ ಹಿಂದುಗಳಿಗೂ, ಹೀಗೆಯೇ ಜೇಸಸ್ ದೇವರ ಮಗನೆಂದೂ, ಪ್ರಜೆಗಳ ಪಾಪಕ್ಕಾಗಿ ಆತನು ಮೃತಿಹೊಂದಿದನೆಂದೂ ಬೈಬಲಿನಲ್ಲಿ ಎಲ್ಲಿಯೂ ಹೇಳಲ್ಪಟ್ಟಿಲ್ಲವೆಂತಲೂ, ದೇವ ಪ್ರಾರ್ಥನೆಯೇ ಮನುಷ್ಯನಿಗೆ ಪವಿತ್ರಸ್ಥಾನವನ್ನು ಸೇರಿಸುವ ಮಾರ್ಗವೆಂತಲೂ, ಬೈಬಲನ್ನು ತೆಗೆದು ತೋರಿಸಿ ಕ್ರಿಸ್ತಿಯರಿಗೂ ಬೋಧಿಸಿದನು. ಇಷ್ಟು ಮಾತ್ರದಿಂದಲೇ ರಾಮಮೋಹನನನ್ನು ಒಹುಮತಾವಲಂಬಿಯಾಗಿದ್ದನೆಂದು ಭಾವಿಸುವುದು ಯೋಗ್ಯವಲ್ಲ.

೩. ಗ್ರಂಥಗಳನ್ನುಳಿದು ಆತನ ನಡವಳಿಕೆಗಳನ್ನು ಕುರಿತು ಆಲೋಚಿಸೋಣ. ಆತನು ಯಾವಾಗಲೂ ಯಾವ ಮತಗ್ರಂಥವನ್ನಾಗಲಿ ಈಶ್ವರದತ್ತವೆಂದು ನಂಬಲಿಲ್ಲ. ಪ್ರಾರ್ಥನಾ ಮಂದಿರದಲ್ಲಿ ಒಂದು ಕಡೆ ವೇದವೇದಾಂತಗಳ ವ್ಯಾಖ್ಯಾನಗಳನ್ನು ತುಂಬಾ ಪ್ರೇಮದಿಂದ ಕೇಳುತ್ತಲೂ ಮತ್ತೊಂದುಕಡೆ ಕ್ರಿಸ್ತಯರ ಬಾಲಕರನ್ನು ಕರೆತಂದು ಕುಳ್ಳಿರಿಸಿ ಅವರಿಂದ ದಾವೂದನಿಂದ ರಚಿಸಲ್ಪಟ್ಟ ಭಗವದ್ಭಕ್ತಿಪರಗಳಾಗಿಯೂ ಮನೋಹರಗಳಾಗಿಯೂ ಇರುವ ಆಂಗ್ಲೇಯ ಭಾಷೆಯಲ್ಲಿನ ಗೀತಗಳನ್ನು ಕೇಳಿ ಆನಂದಿಸುತ್ತಲೂ ಇದ್ದನು. ಒಂದೊಂದುವೇಳೆ ಯೇಸುಕ್ರಿಸ್ತನು ಬೋಧಿಸಿದ ನೀತಿಗಳನ್ನು ಉಪದೇಶಿಸಿದರೂ ತಾನು ಹಿಂದುವಾಗಿದ್ದಂತೆಯೇ ಹೇಳುತ್ತಿದ್ದನು. ಪಿತ್ರಾರ್ಜಿತವನ್ನು ಕುರಿತು ನ್ಯಾಯಸ್ಥಾನಗಳಲ್ಲಿ ತಾನು ಹಿಂದುವೆಂದು ವಾದಿಸುತಿದ್ದುದರಿಂದಲೂ ಇಂಗ್ಲೆಂಡಿಗೆ ಹೋದಮೇಲೆ ಅಲ್ಲಿಯೂ ಹಿಂದುಗಳ ಆಚರಣೆಗಳನ್ನು ಬಿಡದೆ ನಡೆಸುತ್ತಿದ್ದುದರಿಂದಲೂ ಸತ್ತು ಹೋಗಲಿಕ್ಕೆ ಮುಂಚೆ ಕ್ರಿಸ್ತಿಯರ ಮತಾಚರಣೆಗಳನ್ನನುಸರಿಸಿ ತನ್ನ ಸಮಾಧಿ ಮಾಡಕೂಡದೆಂದು ಹೇಳಿದ್ದುದರಿಂದಲೂ, ಮರಣಾನಂತರ ಆತನ ದೇಹದಲ್ಲಿ ಯಜ್ಞೋಪವೀತಗಳು ಪ್ರತ್ಯಕ್ಷವಾಗಿ ಎಲ್ಲರಿಗೂ ಕಾಣಬರುವಂತೆ ಇದ್ದದರಿಂದಲೂ ಈತನು ಹಿಂದುವೇ ಎಂದು ಹೇಳಲು ಸಂಶಯವಿಲ್ಲ.

೪. ಈತನು ಎಲ್ಲಾ ಮತಗಳಲ್ಲಿಯೂ ಇರುವ ಯೋಗ್ಯವಿಧಿಗಳನ್ನೆಲ್ಲ ಅಂಗೀಕರಿಸುತ್ತ ಏಕದೇವಾರಾಧಕನಾಗಿದ್ದನೆಂದು ಹೇಳುವುದಕ್ಕೆ ಆತನಿಂದ ಸ್ಥಾಪಿಸಲ್ಪಟ್ಟ ಬ್ರಹ್ಮಸಮಾಜವನ್ನು ಕುರಿತು ಬರೆಯಲ್ಪಟ್ಟ ನಿರ್ಣಯಪತ್ರವೇ (ಟ್ರಸ್ಟ್‌ಡೀಡ್) ಸಂಪೂರ್ಣಸಾಕ್ಷ್ಯವಾಗಿದೆ. ಇದರಲ್ಲಿ ಯಾವ ಯಾವ ಮಾತುಗಳು ಪರಸ್ಪರ ವಿರುದ್ಧಗಳಾಗಿರುವುವೋ ಅವುಗಳನ್ನು ಅನುಸಂಧಿಸದೆ ಸರ್ವಮತಸಮ್ಮತಗಳಾಗಿರುವ ವಿಷಯಗಳನ್ನೇ ಸ್ವೀಕರಿಸಿ ಪರಮೇಶ್ವರನನ್ನು ಉಪಾಸನೆ ಮಾಡಬೇಕೆಂದು ಬರೆದಿಟ್ಟನು. ಯಾವುವಾದರೂ ಒಂದು ಪ್ರತ್ಯೇಕ

ಗ್ರಂಥವನ್ನು ದೇವರಿಂದ ಅನುಗ್ರಹಿಸಲ್ಪಟ್ಟಿದೆಂತಲಾಗಲಿ ಪ್ರತ್ಯೇಕವಾಗಿ ಒಬ್ಬ ಮನುಷ್ಯನನ್ನು ದೇವರ ಕುಮಾರನೆಂತಲಾಗಲಿ ನಂಬುವ ಮನುಷ್ಯನು ಈ ವಿಧವಾದ ಬೋಧನೆಗಳುಳ್ಳ ಸಮಾಜವನ್ನು ಸ್ಥಾಪಿಸಲಾರನು.

೫. ಫಾರಸಿಯಲ್ಲಿ ಒಂದು ಗ್ರಂಥವನ್ನು ಬರೆದನೆಂತಲೂ ಅದಕ್ಕೆ ಇಂಗ್ಲೀಷ್ ಭಾಷಾಂತರೀಕರಣ ಕೂಡಾ ಉಂಟೆಂತಲೂ ಇವು ನಮಗೆ ದೊರೆತಿಲ್ಲನೆಂತಲೂ ಹಿಂದಿನ ಪ್ರಕರಣಗಳಲ್ಲಿ ಬರೆದಿರುವೆವು. ಆದರೂ ಅವುಗಳಲ್ಲಿನ ವಾಕ್ಯಗಳನ್ನು ರಾಮಮೋಹನನ ಚರಿತ್ರೆಯನ್ನು ಬಂಗಾಳಿ ಭಾಷೆಯಲ್ಲಿ ಬರೆದ ಗ್ರಂಥಕರ್ತನು ತನ್ನ ಗ್ರಂಥದಲ್ಲಿ ಬರೆದಿರುವುದರಿಂದಲೂ, ಅವು ಪುಸ್ತುಕಪ್ರಶಂಸೆಗೆ ಸಂಬಂಧಪಟ್ಟಿರುವುದರಿಂದಲೂ ಅವುಗಳನ್ನಿಲ್ಲಿ ಉದಾಹರಿಸುವೆವು. "ನಾಲ್ಕು ಕಡೆಗಳಲ್ಲಿರುವ ದೇಶಗಳನ್ನೂ, ತಮ್ಮ ದೇಶದಲ್ಲಿನ ಹಲವುಬಗೆಯ ಸ್ಥಿತಿಗಳನ್ನೂ ತಿಳಿದುಕೊಳ್ಳಲಾರದ ಕೆಲವರು ಬುದ್ಧಿವಂತರು ಬೇರೆಬೇರೆ ವೇಳೆಗಳಲ್ಲಿ ಪ್ರತ್ಯೇಕ ದೇಶಭಾಗಗಳಲ್ಲಿ ಕೆಲವು ಪ್ರತ್ಯೇಕ ಗ್ರಂಥಗಳನ್ನು ರಚಿಸಿ ಅವುಗಳಲ್ಲಿ ತಮ್ಮ ಅಭೀಷ್ಟವನ್ನು ನೆರವೇರಿಸಿಕೊಳ್ಳುವುದಕ್ಕೂ, ತಮ್ಮ ಮತಗಳನ್ನು ವ್ಯಾಪಕಗೊಳಿಸುವುದಕ್ಕೂ ದೇವತೆಗಳೆಂತಲೂ, ಇತರ ಗಣಗಳೆಂತಲೂ, ಕಲ್ಪಿತ ಕಥೆಗಳನ್ನು ಸೇರಿಸಿ, ಮನುಷ್ಯನ ಜ್ಞಾನದಮೇಲೆ ಆಲೋಚಿಸಿ ನೋಡಿದರೆ ನಂಬುವುದಕ್ಕೆ ಅವಕಾಶವಿಲ್ಲದ ಸಂದರ್ಭಗಳಲ್ಲಿ ಅವು ಮಾನವಬುದ್ಧಿಗೆ ಹಿಡಿಯಲಾರದ ಅಗಾಧವಿಷಯಗಳೆಂದು ಹೇಳಿ ಜನರನ್ನು ಮೋಸಗೊಳಿಸುವರು. ಇಂತಹವರೆಲ್ಲರೂ ಪಾಮರರಾದವರಿಗೆ ಮುಖ್ಯವಾಗಿ ತಿಳಿಯಬೇಕಾದುದು ಯಾವುದೋ ಅದನ್ನು ಹೊರಪಡಿಸದೆ, ಅಜ್ಞಾನಕರೂಪಕದಲ್ಲಿ ಬಿದ್ದಿರುವವರನ್ನು ಇನ್ನೂ ಆಳಕ್ಕೆ ತಳ್ಳಿಬಿಡತಕ್ಕವರಾಗಿರುವರು. ಈ ವಾಕ್ಯಗಳು ಪರಸ್ಪರ ದ್ವೇಷಪ್ರಧಾನರಾದ ಮತಕರ್ತರಲ್ಲಿ ಅತನಿಗೆ ಇಷ್ಟವಿಲ್ಲದುದನ್ನು ಸೂಚಿಸುತ್ತವೆ," ಇಂತಹ ಅಭಿಪ್ರಾಯಗಳುಳ್ಳ ರಾಮಮೋಹನನು ಒಬ್ಬರಮತವನ್ನು ನಂಬುತ್ತಿದ್ದನೆಂಬುದಕ್ಕೆ ಆಸ್ಪದವಿಲ್ಲವು.

೬. ಆತನ ಶಿಷ್ಯರು ಬರೆದುಹಿಡ ಲೇಖನಗಳಿಂದ ಕೂಡಾ ಮೇಲಿನ ವಾಕ್ಯಗಳಿಗೆ ಸ್ವಲ್ಪ ಉಪಬಲ ಉಂಟಾಗುತ್ತಿದೆ. ಬಂಗಾಳೀ ಭಾಷೆಯಲ್ಲಿ ರಾಮಮೋಹನನ ಜೀವಿತಚರಿತ್ರೆಯನ್ನು ಬರೆದ ರಾಜಾ ನಾರಾಯಣಬೋಸ್ ಎಂಬವನ ತಂದೆ ನಂದಕಿಶೋರಬೋಸ್ ಎಂಬಾತನು ರಾಮಮೋಹನನ ಶಿಷ್ಯನು. ಆತನು ತನ್ನ ಸಂಗಡ ರಾಮಮೋಹನನು ತನ್ನ ಮಿತ್ರರನ್ನು ಕುರಿತು ಒಂದುಸಾರಿ ಹೀಗೆ ಹೇಳಿದನೆಂದು ತನ್ನ ಗ್ರಂಥದಲ್ಲಿ ಬರೆದಿರುವನು. ತನ್ನ ಮತವು ಲೋಕದಲ್ಲಿರುವ ಎಲ್ಲಾ ಮತಗಳವರಿಗೂ ಸಂಬಂಧಿಸಿರುವುದು. ನಾನು ಮೃತನಾದಮೇಲೆ ವಿವಿಧಮತಗಳವರು ನನ್ನನ್ನು ಪ್ರತ್ಯೇಕವಾಗಿ ತಮ್ಮ ಮತದವನೇ ಎಂದು ಹೇಳಬಹುದು. ಆದರೂ ನಿಜವನ್ನು ವಿಚಾರಮಾಡಿದಲ್ಲಿ ನಾನು ಯಾವ ಮತಗಳಿಗೂ ಸೇರಿದವನಲ್ಲ."

ರಾಮಮೋಹನನ ಶಿಷ್ಯರಲ್ಲಿ ಒಬ್ಬನಾದ ಚಂದ್ರಶೇಖರದೇವ್ ಎಂಬಾತನು ತನ್ನಿಂದ ಪ್ರಚುರಿಸಲ್ಪಡುತ್ತಿದ್ದ ತತ್ವಬೋಧಿನಿ ಎಂಬ ಪತ್ರಿಕೆಯಲ್ಲಿ ಹೀಗೆ ಬರೆದಿರುವನು. "ರಾಮ್

ಮೋಹನನು ಒಂದು ಮತದ ನಿರ್ಣಯಗಳಿಗೂ ಒಳಪಟ್ಟವನಲ್ಲ ; ಆತನು ಶಾಸ್ತ್ರಗಳಲ್ಲಿನ ನಿರ್ಬಂದಗಳಿಗೆ ಒಳಪಡುವದು ಅನಾವಶ್ಯಕವೆಂದು ಹೇಳತಕ್ಕವನಾಗಿಯೂ, ಪ್ರಪಂಚದಲ್ಲಿನ ಎಲ್ಲಾ ಮತಸಿದ್ಧಾಂತಗಳಲ್ಲಿನ ಮುಖ್ಯಾಂಶಗಳನ್ನು ಗ್ರಹಿಸತಕ್ಕವನಾಗಿಯೂ, ಇರುವ ಒಬ್ಬ ಬ್ರಹ್ಮೋಪಾಸಕನು. ಆತನು ಉಪನಿಷತ್ತುಗಳನ್ನು ಶಾಂತವಾಗಿ ನೋಡಿ ಪಾಶ್ಚಾತ್ಯರಿಗಿಂತಲೂ ಪುರಾತನ ಹಿಂದುಗಳೇ ಭಗವಂತನನ್ನು ಚೆನ್ನಾಗಿ ತಿಳಿದುಕೊಂಡಿದ್ದರೆಂದು ಒಂದುಸಾರಿಯೂ ಜೀಸಸ್ ಕ್ರೈಸ್ತನು ಹೇಳಿದ ನೀತಿಗಳು ಅಮೋಘವಾದವುಗಳೆಂದು ಮತ್ತೊಂದುಸಾರಿಯೂ ಹೇಳುತ್ತಲಿದ್ದನು. ಆತನ ವಾಕ್ಪ್ರವಾಹವು ತುಂಬ ಅದ್ಭುತವಾದುದು. ಹಿಂದೂ, ಮಹಮ್ಮದೀಯ, ಕ್ರಿಸ್ತೀಯ ಮತಗಳವರು ತಮ್ಮತಮ್ಮ ಗ್ರಂಥಗಳನ್ನು ದೇವರು ಅನುಗ್ರಹಿಸಿರುವನೆಂದು ಹೇಳುವ ವಾಕ್ಯಗಳು ಎಷ್ಟರಮಟ್ಟಿಗೆ ನಂಬಿಕೆಗೆ ಅರ್ಹಗಳೆಂಬ ವಿಷಯವನ್ನು ಕುರಿತು ಉಪನ್ಯಾಸಿಸುವುದಕ್ಕೆ ಕೂಡಿಸಿದ ಮಹಾಸಭೆಯಲ್ಲಿ ಸ್ವಮತಾಭಿಮಾನದಿಂದ ನಮ್ಮ ಮತಗ್ರಂಥವೊಂದೇ ದೇವರು ಅನುಗ್ರಹಿಸಿದ್ದೆಂತಲೂ, ಉಳಿದುವುಗಳೆಲ್ಲ ಕಲ್ಪಿತಗಳೆಂತಲೂ, ಯಾರು ಎಷ್ಟು ಹೇಳಿದರೂ ನಿಷ್ಪಕ್ಷಪಾತ ಬುದ್ಧಿಯಿಂದ ವಿಚಾರಮಾಡಿ ನೋಡಲು ಅವುಗಳೆಲ್ಲವೂ ಯಥಾರ್ಥವಾದವುಗಳಲ್ಲವೆಂತಲೂ, ದೇವರು ಒಬ್ಬಾನೊಬ್ಬ ಮನುಷ್ಯನ ಹೃದಯದಲ್ಲಿ ಅಂದವಾದ ಜ್ಞಾನಚಕ್ಷುಸ್ಸನ್ನು ಅನುಗ್ರಹಿಸಿ, ಅವುಗಳನ್ನೂ ಇತರರಿಗೆ ಯೋಗ್ಯಗಳಾದ ಪದ್ಧತಿಗಳನ್ನೂ ಬೋಧಿಸುವ ಸಾಮರ್ಥ್ಯವುಳ್ಳವನನ್ನಾಗಿ ಮಾಡುತ್ತಿರುವನೆಂಬುದೇ ನಂಬಿಕೆಗೆ ಅರ್ಹವಾದುದೆಂತಲೂ, ಯೋಗ್ಯಾಯೋಗ್ಯ ವಿಷಯ ವಿಚಾರಗಳಿಗೂ ಯುಕ್ತಾಯುಕ್ತ ಪರಿಜ್ಞಾನಕ್ಕೂ ಆಧಾರವಾದ ಮನಸ್ಸೇಭಗವಂತನಿಂದ ಅನುಗ್ರಹಿಸಲ್ಪಟ್ಟ ಗ್ರಂಥವೆಂತಲೂ, ಹೇಳಿದ ಈ ಮುಖ್ಯವಾಕ್ಯಗಳು ಉಪದೇಶರೂಪವಾಗಿ ನನ್ನಅಂತರಾತ್ಮದಲ್ಲಿ ಇದುವರೆಗೂ ಕೆತ್ತಲ್ಪಟ್ಟಿರುವವು " ಎಂದು ಬರೆದಿರುವನು.

ಮೇಲೆ ಹೇಳಿದ ಆರು ಹೇತುಗಳಿಂದ ಮಹಾತ್ಮನಾಗಿ ಹುಟ್ಟಿದ ರಾಜಾರಾಮಮೋಹನರಾಯನು ಪೂರ್ವಮತನಿರ್ಣಯಗಳಿಗೆ ಒಳಪಟ್ಟವನು ಅಲ್ಲವೆಂತಲೂ, ಆತನ ಮತವು ಪ್ರಪಂಚದಲ್ಲಿನ ಆಸ್ತಿಕ ಮತಗಳಿಗೆಲ್ಲಕ್ಕೂ ಸಂಬಂಧಿಸಿ ಇರುವುದೆಂತಲೂ, ಆತನು ಶಾಸ್ತ್ರನಿರ್ಬಂಧಗಳು ಅನಾವಶ್ಯಕಗಳೆಂತಲೂ, ಅವುಗಳಲ್ಲಿನ ಯೋಗ್ಯವಾದ ಅಂಶಗಳನ್ನು ಗ್ರಹಿಸಬೇಕೆಂತಲೂ ಬೋಧಿಸುತ್ತಾ ಎಲ್ಲಾ ಶಾಸ್ತ್ರಗಳಿಂದಲೂ ಒಬ್ಬ ಪರಮೇಶ್ವರನ ಉಪಾಸನೆಯೇ ಮುಖ್ಯವೆಂಬ ಸಾರಾಂಶವನ್ನು ತೆಗೆದುಕೊಂಡು " ಏಕಮೇವಾದ್ವಿತೀಯಂ, ಸತ್ಯಂಶಾಸ್ತ್ರಮನಶ್ವರಂ " ಎಂಬ ಈ ಮಹಾವಾಕ್ಯಾರ್ಥಗಳನ್ನೇ ಮನೋವಾಕ್ಕಾಯ ಕರ್ಮಗಳಿಂದ ಅನುಸಂಧಿಸಿದ ಸತ್ಯವಾದಿ ಬ್ರಾಹ್ಮಣನೆಂತಲೂ ಸಿದ್ಧಾಂತವಾಗುವುದು.

ಓಂತತ್ಸತ್

ಕಂ|| ಪಲದೈವಂಗಳ ಭಜಿಸುತೆ | ನೆಲೆಯಿಲ್ಲದ ನೀಚಕೃತ್ಯಗಳನೆಸಗುತ್ತಂ ||
ತೊಳಲದೆ ನಿಶ್ಚಲಚಿತ್ತದೆ | ಸಲೆ ಪೂಜಿಪುದೆಂಬುದೀಸಮಾಜದ ಮೂಲಂ ||